ಹುಬ್ಬಳ್ಳಿ
ಸೋಮವಾರ, 15 ಜೂನ್ 2026
ಸಂಪುಟ 16, ಸಂಚಿಕೆ 82, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ




ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ | ೦೭
ಕೊಲ್ಲೂರಿಗೆ ಅನಂತ್ ಅಂಬಾನಿ ಭೇಟಿ | ೦೪
ಮಹಿಳಾ ವಿಶ್ವಕಪ್: ಪಾಕಿಸ್ತಾನ ಸದೆಬಡಿದ ಭಾರತ |೧೦

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ತಿಥಿ: ಅಮಾವಾಸ್ಯೆ ಉಪರಿ ಪಾಡ್ಯ, ನಕ್ಷತ್ರ: ಮೃಗಶಿರ

## ದಿನದ ಮಾತು

ಸುಗಂಧಿತ ಹೂಗಳನ್ನು ಹೊಂದಿರುವ ಒಂದು ಮರ ಇಡೀ ಕಾಡಿಗೆ ಕಂಪನ್ನು ಹರಡುತ್ತದೆ. ಗುಣವಂತನಾದ ಪುತ್ರನು ಇಡೀ ವಂಶಕ್ಕೆ ಕೀರ್ತಿಯನ್ನು ಹರಡುತ್ತಾನೆ.
▲ಚಾಣಕ್ಯ ನೀತಿ

### ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

ನೇರ ನೋಟ
• ದು.ಗು.ಲಕ್ಷ್ಮಣ
• ಪುಟ ೬

## ಕಿರುಸುದ್ದಿ

### ಒಮಾನ್: ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ
• ಪುಟ ೭

### ಕೇರಳದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಇಂದಿನಿಂದ
• ಪುಟ ೭

ಭಾರತ ಈಗ ಕೇವಲ ಗ್ರಾಹಕನಲ್ಲ, ವಿಶ್ವಕ್ಕೆ ಪರಿಹಾರ ಹೇಳುವ ರಾಷ್ಟ್ರ
ಫ್ರಾನ್ಸ್‌ನಲ್ಲಿ ಭಾರತ್ ಇನ್ನೋವೇಟ್ಸ್ ಉದ್ಘಾಟಿಸಿ ಮೋದಿ ಮಾತು

# ಜಾಗತಿಕ ಕೊಡುಗೆದಾರ


• **ನೈಸ್ (ಫ್ರಾನ್ಸ್):** ಭಾರತವು ಇನ್ನು ಕೇವಲ ಜಾಗತಿಕ ಪರಿಹಾರಗಳ ಗ್ರಾಹಕನಾಗಿಯಷ್ಟೇ ಉಳಿಯದು, ಬದಲಿಗೆ ಅವುಗಳಿಗೆ ಮಹತ್ವದ ಕೊಡುಗೆ ನೀಡುವ ದೇಶವಾಗಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. ಈ ಮೂಲಕ ನಾವೀನ್ಯತೆ-ಆವಿಷ್ಕಾರ, ತಂತ್ರಜ್ಞಾನದ ಮೂಲಕ ವಿಶ್ವಕ್ಕೆ ಸುಸ್ಥಿರ ಭವಿಷ್ಯವೊಂದನ್ನು ಕಲ್ಪಿಸುವ ಭಾರತದ ದೃಷ್ಟಿಕೋನವನ್ನು ಮೋದಿ ವಿಶ್ವದ ಮುಂದಿಟ್ಟಿದ್ದಾರೆ.

ತಮ್ಮ ಫ್ರಾನ್ಸ್ ಭೇಟಿ ಸಂದರ್ಭದಲ್ಲಿ, ಈ ಮೆಡಿಟರೇನಿಯನ್ ಫ್ರೆಂಚ್ ನಗರದಲ್ಲಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರಾನ್ ಉಪಸ್ಥಿತಿಯಲ್ಲಿ ಮಹತ್ವದ 'ಭಾರತ್ ಇನ್ನೋವೇಟ್ಸ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೋದಿ, ಭಾರತ್ ಇನ್ನೋವೇಟ್ಸ್ ಭಾರತ, ಫ್ರಾನ್ಸ್ ಮತ್ತು ಇತರ ಕೆಲವು ದೇಶಗಳ ಉನ್ನತ ಮಟ್ಟದ ಇನ್ನೋವೇಶನ್ ಸ್ಟಾರ್ಟ್‌ಅಪ್‌ಗಳನ್ನು ಜೊತೆಗೂಡಿಸುತ್ತಿರುವುದು ಮಹತ್ವದ್ದಾಗಿದೆ ಎಂದರು.

ಭಾರತ್ ಇನ್ನೋವೇಟ್ಸ್, ಜಾಗತಿಕ ಇನ್ನೋವೇಶನ್‌ನ ಮುಂದಿನ ಚಾಪ್ಟರಿನ ಸಹಸೃಷ್ಟಿಗಾಗಿ ವಿಶ್ವಕ್ಕೆ ನೀಡಿದ ಆಹ್ವಾನವಾಗಿದೆ ಎಂದು ಬಣ್ಣಿಸಿದರು. ➡ಪುಟ ೪

### ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಕೇವಲ ಒಂದು ದಶಕದ ಹಿಂದೆ ಭಾರತ ತಂತ್ರಜ್ಞಾನ ಪಡೆಯುವ ದೇಶವಾಗಿದ್ದರೆ ಇಂದು ಭಾರತವು ತಂತ್ರಜ್ಞಾನ ಒದಗಿಸುವ ದೇಶವಾಗಿ ಮೂಡಿಬರುತ್ತಿರುವುದನ್ನು ಜಗತ್ತು ವೀಕ್ಷಿಸುತ್ತಿದೆ. ಭಾರತದ ಆವಿಷ್ಕಾರ ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಇರುವಂಥದ್ದು. ಭಾರತದ ಯುವ ಅನ್ವೇಷಕರು ಕಂಡುಕೊಂಡಿರುವ ಪರಿಹಾರಗಳು ಇಡಿ ವಿಶ್ವದ ಮನುಕುಲಕ್ಕೇ ಲಾಭ ತಂದುಕೊಡಲಿದೆ ಎಂದು ಮೋದಿ ಹೇಳಿದರು. ➡ಪುಟ ೪




### ಭಾರತ ನಾವೀನ್ಯತಾ ದೇಶ: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್

ಫ್ರಾನ್ಸ್‌ನ ಅಧ್ಯಕ್ಷ ಮ್ಯಾಕ್ರಾನ್ ಮಾತನಾಡಿ, ಫ್ರಾನ್ಸ್ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ಗೌರವಿಸುತ್ತದೆ. ಭಾರತದ ವೈವಿಧ್ಯಮಯ ಕ್ಷೇತ್ರಗಳಲ್ಲಿ ಫ್ರಾನ್ಸ್ ಭಾಗವಾಗಿರುತ್ತದೆ. ಭಾರತ ಒಂದು ನಾವೀನ್ಯತಾ ದೇಶವಾಗಿದ್ದು, ಎಐ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರಗಳಲ್ಲಿ ಭಾರತ-ಫ್ರಾನ್ಸ್‌ನದ್ದು 'ನಿಜವಾದ ಪಾಲುದಾರಿಕೆ'ಯಾಗಿದೆ. ಈ ದ್ವಿಪಕ್ಷೀಯ ಸಹಕಾರವು ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಸೇರಿದಂತಹ ನಾಗರಿಕ ಪರಮಾಣು ಇಂಧನ ಕ್ಷೇತ್ರಕ್ಕೂ ವಿಸ್ತರಿಸುವ ಆಶಯವಿದೆ ಎಂದರು.

- ಭಾರತ್ ಇನ್ನೋವೇಟ್ಸ್ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಷಣ
- ಭಾರತವು ಈಗ ಜಾಗತಿಕ ಪರಿಹಾರಗಳ ಗ್ರಾಹಕ ರಾಷ್ಟ್ರವಲ್ಲ, ಪರಿಹಾರಗಳನ್ನು ನೀಡುವ ದೇಶ
- ಆವಿಷ್ಕಾರ ಮತ್ತು ಒಳಗೊಳ್ಳುವಿಕೆ ಪರಸ್ಪರ ಪೂರಕ
- ವಿಶ್ವಾಸಾರ್ಹ, ಸಮಗ್ರ ಮತ್ತು ಮಾನವಕೇಂದ್ರಿತ ತಂತ್ರಜ್ಞಾನಗಳತ್ತ ಮುಖ ಮಾಡುತ್ತಿರುವ ವಿಶ್ವ
- ಮಾನವತೆಗೆ ತಂತ್ರಜ್ಞಾನ ಎಂಬುದಕ್ಕೆ ಭಾರತದ ಆದ್ಯತೆ
- ಹೈಟೆಕ್, ಅಣುಶಕ್ತಿ, ರಕ್ಷಣಾ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಸುಧಾರಣೆ ಮುಂದುವರಿಕೆ
- ಭಾರತದಲ್ಲಿ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಹಲವು ಪಟ್ಟು ಹೆಚ್ಚಳ ವಿಶ್ವಾಸ
- ಭವಿಷ್ಯ ರೂಪಿಸಲಿವೆ ಎಐ, ಕ್ವಾಂಟಂ ಕಂಪ್ಯೂಟಿಂಗ್, ಜೈವಿಕ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ತಂತ್ರಜ್ಞಾನ

ಕರ್ನಾಟಕಕ್ಕೆ ಯುಪಿಎ ಅವಧಿಗಿಂತ 5 ಪಟ್ಟು ಹೆಚ್ಚು ಹಣ: ವಿತ್ತ ಸಚಿವೆ ನಿರ್ಮಲಾ ಮಾಹಿತಿ

# ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ



• **ಬೆಂಗಳೂರು:** ಕರ್ನಾಟಕವು ಕೇಂದ್ರದ ಅನುದಾನ ಹಂಚಿಕೆಯಿಂದ ವಂಚಿತವಾಗಿದೆ ಎಂಬ ಕಾಂಗ್ರೆಸ್ ಆರೋಪವನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನಿರಾಕರಿಸಿದ್ದು, ಯುಪಿಎ ಅವಧಿಯಲ್ಲಿ ಹಂಚಿಕೆಯಾಗಿದ್ದಕ್ಕಿಂತ ಐದು ಪಟ್ಟು ಹೆಚ್ಚು ಕೇಂದ್ರ ತೆರಿಗೆ ಹಂಚಿಕೆಯನ್ನು ಕರ್ನಾಟಕ ಪಡೆದಿದೆ. ರಾಜ್ಯವು 4 ಲಕ್ಷ ಕೋಟಿ ರೂ. ತೆರಿಗೆ ಹಂಚಿಕೆ ಪಡೆದುಕೊಂಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ನಿರಂತರವಾಗಿ ಹೇಳಿಕೊಂಡು ಬರುತ್ತಿದೆ. ಆದರೆ, ಯುಪಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಸಿಗುತ್ತಿದ್ದ ಅನುದಾನಕ್ಕಿಂತ ಕೇವಲ ಒಂದು ವರ್ಷದಲ್ಲೇ ಕರ್ನಾಟಕಕ್ಕೆ ಶೇ.76ರಷ್ಟು ಹೆಚ್ಚು ಅನುದಾನ ಕರ್ನಾಟಕಕ್ಕೆ ದೊರೆಯುತ್ತಿದೆ ಎಂದರು. ➡ಪುಟ ೪

> ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡುತ್ತಿದ್ದೇವೆ. 18 ಸಾವಿರ ಕೋಟಿ ರೂ. ಗಿಂತಲೂ ಅಧಿಕ ಹಣವನ್ನು ಹಣಕಾಸು ಆಯೋಗದ ಶಿಫಾರಸು ಇಲ್ಲದಿದ್ದರೂ ರಾಜ್ಯಗಳಿಗೆ ನೀಡಿದ್ದೇವೆ. ಅದು ಕರ್ನಾಟಕಕ್ಕೂ ಸಿಕ್ಕಿದೆ.
> ■ ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

### ಕೊಪ್ಪಳ-ಗದಗ ಹಸಿರು ಇಂಧನ ಕೇಂದ್ರ
• ಪುಟ ೪




# ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

• **ಇಸ್ಲಾಮಾಬಾದ್:** ಇರಾನ್ ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಸಂಧಾನಕಾರ ಪಾಕಿಸ್ತಾನ ಘೋಷಿಸಿವೆ. ಆದರೆ, ಈ ಪ್ರಕ್ರಿಯೆಗೆ ಹೆಚ್ಚಿನ ಸಮಯ ಬೇಕಾಗಬಹುದು ಎಂದು ಇರಾನ್ ಸೂಚಿಸಿದೆ. ಮುಂದಿನ 24 ಗಂಟೆಗಳ ಒಳಗೆ ಎಲೆಕ್ಟ್ರಾನಿಕ್ ಸಹಿಗಳ ಮೂಲಕ ಒಪ್ಪಂದ ವಾಗುವ ನಿರೀಕ್ಷೆಯಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ತಿಳಿಸಿದ್ದಾರೆ. ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಭಾನುವಾರಕ್ಕೆ ಸಮಾರಂಭವನ್ನು ನಿಗದಿಪಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಲಾಗುವುದು ಮತ್ತು ನಂತರ ಹಾರ್ಮುಜ್ ಜಲಸಂಧಿಯನ್ನು ತಕ್ಷಣವೇ ತೆರೆಯಲಾಗುವುದು ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ➡ಪುಟ ೪

**24 ಗಂಟೆಯಲ್ಲಿ ಎಲೆಕ್ಟ್ರಾನಿಕ್ ಸಹಿ ಮೂಲಕ ಒಪ್ಪಂದ ನಿರೀಕ್ಷೆ**



### ಜು.4-9: ಖಮೇನಿ ಅಂತ್ಯಕ್ರಿಯೆ ಪ್ರಕ್ರಿಯೆ

ಇದರ ನಡುವೆ, ಯುದ್ಧದ ಆರಂಭದಲ್ಲಿ ಹತರಾದ ಮಾಜಿ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅಂತ್ಯಕ್ರಿಯೆಯ ವಿಧಿ-ವಿಧಾನಗಳು ಜುಲೈ 4ರಿಂದ 9ರವರೆಗೆ ನಡೆಯಲಿವೆ ಎಂದು ಇರಾನ್ ಘೋಷಿಸಿದೆ.

ಕೇರಳದ ಚಿಂತಕರು, ಗಣ್ಯರ ಸಭೆಯಲ್ಲಿ ಅಭಿಮತ

# ಸಮಾಜ ಸಂಘಟನೆ ಗುರಿ: ಭಾಗವತ್

• **ತ್ರಿಶೂರು:** ಭಾರತದ ಪುನರುತ್ಥಾನಕ್ಕಾಗಿ ಸಮಾಜ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲ ಗುರಿಯಾಗಿದೆ. ಭಾರತದ ಪುನರುತ್ಥಾನಕ್ಕೆ ಏನೆಲ್ಲ ಆಗಬೇಕಿದೆಯೋ ಅದೆಲ್ಲದಕ್ಕೂ ಕೊಡುಗೆ ನೀಡಿ ಅದನ್ನು ಪೂರ್ಣಗೊಳಿಸುವುದೇ ಸಂಘದ ಉದ್ದೇಶ ಎಂದು ಸಂಘದ ಸರಸಂಘಚಾಲಕ್ ಡಾ.ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಇಲ್ಲಿ ಸೇರಿದ್ದ ಕೇರಳದ ಚಿಂತಕರು ಮತ್ತು ಗಣ್ಯರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಸಂಘ ಎಂದೂ ರಾಜಕೀಯ ಅಧಿಕಾರ ಅಥವಾ ಜನಪ್ರಿಯತೆಗಾಗಿ ಸ್ಥಾಪನೆಯಾಗಿದ್ದಲ್ಲ, ಹಾಗೆಯೇ ಯಾವುದೇ ಸಮುದಾಯ ಅಥವಾ ಗುಂಪುಗಳನ್ನು ವಿರೋಧಿಸಲೂ ಆರಂಭವಾಗಿದ್ದಲ್ಲ, ಬದಲಿಗೆ ಇದು ವಿಶಾಲವಾದ ರಾಷ್ಟ್ರೀಯ ಉದ್ದೇಶವೊಂದನ್ನು ಪೂರ್ಣಗೊಳಿಸುವುದಕ್ಕಾಗಿ ಮತ್ತು ಭಾರತದ ಪುನರುತ್ಥಾನ ಮತ್ತು ಕಲ್ಯಾಣಕ್ಕಾಗಿ ಅಗತ್ಯವಿರುವ ಪ್ರತಿಯೊಂದಕ್ಕೂ ಕೊಡುಗೆ ನೀಡುವ ಉದ್ದೇಶದೊಂದಿಗೆ ಆರಂಭವಾಗಿದೆ ಎಂದರು.



**ಸಂಘಟಿತ-ಅನುಶಾಸನ ಬದ್ಧ ಸಮಾಜದಿಂದಲೇ ಸಂಪನ್ನ ಭಾರತ:** ಭಾರತವು ಪದೇಪದೆ ವಿದೇಶಿ ಶಕ್ತಿಗಳ ಕಪಿಮುಷ್ಟಿಗೆ ಸಿಲುಕುತ್ತಿರುವುದೇಕೆ? ನಮ್ಮ ದೌರ್ಬಲ್ಯಗಳೇನು? ➡ಪುಟ ೪




### ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ

• **ಬೆಂಗಳೂರು:** ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆ ಗಳ ಪರಿಷ್ಕರಣೆ ಕುರಿತಂತೆ ಮರು ಅರ್ಜಿ ಸಲ್ಲಿಸುವ ಕುರಿತಂತೆ ಸಾರ್ವಜನಿಕರಲ್ಲಿ ಉಂಟಾಗಿರುವ ಗೊಂದಲಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದು, ಕಾಂಗ್ರೆಸ್ ಸರ್ಕಾರದ ಹೆಮ್ಮೆಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ. ➡ಪುಟ ೪



### ನಾನು, ಡಿಕೆಶಿ ಒರಿಜಿನಲ್ ಜೋಡೆತ್ತು: ಡಾ.ಪರಮೇಶ್ವರ್
• ಪುಟ ३

### 3ನೇ ಸಿಎಂ ಬಂದರೂ ಅಚ್ಚರಿ ಇಲ್ಲ: ಬಿವೈವಿ
• ಪುಟ ३

### ಕೈದಿಗಳಿಂದ ವಾರ್ಡನ್‌ಗೆ ಹಲ್ಲೆ
• ಪುಟ ३



## ಕಿರುಸುದ್ದಿ

### ನಾಳೆ ಯಕ್ಷ ರಾಮಕಥಾ

**ಸಿದ್ದಾಪುರ:** ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಶಿರಸಿ ಜಿಲ್ಲೆ ಹಾಗೂ ಸಿದ್ದಾಪುರ ತಾಲೂಕಾ ಸಮಿತಿ ಇವುಗಳ ಆಶ್ರಯದಲ್ಲಿ ಪಟ್ಟಣದ ಸಿದ್ದಿವಿನಾಯಕ ಪ್ರೌಢಶಾಲಾ ಸಭಾಭವನದಲ್ಲಿ ಜೂ.16ರಂದು ಸಂಜೆ 5.30 ರಿಂದ ಶ್ರೀ ರಾಮಚಂದ್ರನ ಪಟ್ಟಾಭಿಷೇಕದಿಂದ ನಿರ್ಯಾಣದ ವರೆಗಿನ ವಿವಿಧ ಯಕ್ಷಗಾನ ಪ್ರಸಂಗಗಳಿಂದ ಆಯ್ದ ಪದ್ಯಗಳ ಹಾಡುಗಾರಿಕೆ ಹಾಗೂ ಅಭಿನಯವನ್ನೊಳಗೊಂಡ 'ಯಕ್ಷ ರಾಮಕಥಾ' ಪ್ರದರ್ಶನ ನಡೆಯಲಿದೆ. ರಾಜ್ಯ ಪ್ರಶಸ್ತಿ ಪುರಸ್ಕೃತ ಭಾಗವತ ಕೇಶವ ಹೆಗಡೆ ಕೊಳಗಿ ಭಾಗವತರಾಗಿ, ಶರತ್ ಜಾನಕೈ ಮದ್ದಳೆವಾದಕರಾಗಿ, ಭಾರ್ಗವ ಕೇಡಲಸರ ಚಂಡೆವಾದಕರಾಗಿ ಪಾಲ್ಗೊಳ್ಳಲಿದ್ದು ಹಿರಿಯ ಯಕ್ಷಗಾನ ಕಲಾವಿದ ವಿನಾಯಕ ಹೆಗಡೆ ಕಲಗದ್ದೆ ರಾಮನ ಪಾತ್ರವನ್ನು ನಿರ್ವಹಿಸಲಿದ್ದಾರೆ. ಯಕ್ಷಗಾನ ಕಲಾಸಕ್ತರು ಪಾಲ್ಗೊಳ್ಳುವಂತೆ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಶಿರಸಿ ಜಿಲ್ಲೆಯ ಅಧ್ಯಕ್ಷ ಗಂಗಾಧರ ಕೊಳಗಿ, ತಾಲೂಕಾ ಸಮಿತಿಯ ಅಧ್ಯಕ್ಷ ಆರ್.ಎನ್.ಹಳಕಾರ ಹಾಗೂ ಪದಾಧಿಕಾರಿಗಳು ಕೋರಿದ್ದಾರೆ.

### ಜೂ. 17ರಿಂದ ಯೋಗ ತರಬೇತಿ ಶಿಬಿರ

**ಸಿದ್ದಾಪುರ:** ಪತಂಜಲಿ ಯೋಗ ಪೀಠ ಟ್ರಸ್ಟ ಹರಿದ್ವಾರ, ಪತಂಜಲಿ ಯೋಗ ಸಮಿತಿ, ಮಹಿಳಾ ಪತಂಜಲಿ ಯೋಗ ಸಮಿತಿ ಸಿದ್ದಾಪುರ ಇವರುಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಯೋಗ ಗುರು ಭವರಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ ಅಡ್ವಾನ್ಸ ಯೋಗ ತರಬೇತಿ ಶಿಬಿರವನ್ನು ಪಟ್ಟಣದ ರಾಘವೇಂದ್ರ ಮಠದಲ್ಲಿ ಜೂನ್ 17ರಿಂದ ಜುಲೈ 14 ರ ವರೆಗೆ ಹಮ್ಮಿಕೊಳ್ಳಲಾಗಿದೆ. ಶಿಬಿರವು ಅಂದು ಪ್ರತಿದಿನ ಬೆಳಗ್ಗೆ 5.30 ರಿಂದ 7 ಗಂಟೆ ಸಂಜೆಯೂ 5.30 ರಿಂದ 7 ಗಂಟೆಯವರೆಗೆ ನಡೆಯಲಿದೆ ಎಂದು ಸಂಘಟನೆಯ ಪ್ರಕಟಣೆಯಲ್ಲಿ ತಿಳಿಸಿದೆ.

### ತಂಬಾಕು ವಿರೋಧಿ ದಿನಾಚರಣೆ



**ಕುಮಟಾ:** ತಂಬಾಕಿನಂತಹ ಮಾದಕ ವಸ್ತುಗಳ ವ್ಯಸನದಿಂದ ಅನೇಕ ಕುಟುಂಬಗಳು ಸಂಕಷ್ಟಕ್ಕೆ ಸಿಲುಕುತ್ತಿದ್ದು, ಅದರ ಚಟವು ಹೆಚ್ಚಾಗಿ ಪ್ರೌಢಾವಸ್ಥೆಯಲ್ಲಿಯೇ ಆರಂಭವಾಗುತ್ತದೆ. ವಿದ್ಯಾರ್ಥಿಗಳು ತಂಬಾಕು ಹಾಗೂ ಇತರೆ ಮಾದಕ ವಸ್ತುಗಳ ದುಷ್ಪರಿಣಾಮಗಳನ್ನು ಅರಿತು ಜಾಗೃತರಾಗಿರಬೇಕು ಎಂದು ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಹರೀಶ್ ಕುಮಾರ್ ಸಲಹೆ ನೀಡಿದರು.

ಅವರು ತಂಬಾಕು ವಿರೋಧಿ ದಿನಾಚರಣೆಯ ಅಂಗವಾಗಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಚಿತ್ರಗಿ ಮಹಾತ್ಮಾ ಗಾಂಧಿ ಪ್ರೌಢಶಾಲೆಯಲ್ಲಿ ಆಯೋಜಿಸಲಾದ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.ಪೊಲೀಸ್ ಇಲಾಖೆಯ ಸಂತೋಷ ಜಾಧವ್ ಕಾರ್ಯಕ್ರಮಉದ್ಘಾಟಿಸಿದರು. ಶಾಲೆಯ ಮುಖ್ಯ ಶಿಕ್ಷಕ ಪಾಂಡುರಂಗ ವಾಗ್ರೇಕರ್ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷೆ ಸುವರ್ಣಾ ಪಟಗಾರ ಹಾಗೂ ಸೇವಾ ಪ್ರತಿನಿಧಿ ರೂಪಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.ಶಾಲಾ ವಿದ್ಯಾರ್ಥಿನಿಯರ ಈಶಸ್ತವನದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಶಿಕ್ಷಕ ವಿಷ್ಣು ಭಟ್ ಅತಿಥಿಗಳನ್ನು ಸ್ವಾಗತಿಸಿದರು. ಮೇಲ್ವಿಚಾರಕ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿ, ತಂಬಾಕು ವಿರೋಧಿ ಜಾಗೃತಿ ಸಂದೇಶವನ್ನು ಸ್ವೀಕರಿಸಿದರು.

### ಮೃತದೇಹ ಪತ್ತೆ

**ಮುಂಡಗೋಡ:** ಪಟ್ಟಣದ ಹೆಸ್ಕಾಂ ಕಚೇರಿ ಎದುರಿನ ಕಡ್ಲಿಗಟ್ಟಿ ಕೆರೆ ಸನಿಹ ವ್ಯಕ್ತಿಯೊಬ್ಬನ ಮೃತದೇಹ ಕಂಡುಬಂದಿದೆ.ಬಾಗಲಕೋಟೆ ಜಿಲ್ಲೆಯ ರಬಕವಿ ತಾಲೂಕಿನ ಮಹಾಲಿಂಗಪುರದ ಸುನೀಲ ಲಕ್ಷ್ಮಣ ಮ್ಯಾಗಡಿ(40) ಮೃತ ವ್ಯಕ್ತಿ. ಸಾಗರ ತಾಲೂಕಿನ ಸಿಗಂದೂರು ಲಾಂಚ್‌ನಲ್ಲಿ ಟಿಕೆಟ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಈತನು ಸಾರಾಯಿ ಕುಡಿತದ ಚಟಕ್ಕೆ ಅಟ್ಟಿಕೊಂಡಿದ್ದನು. ಕುಟುಂಬದವರು ನಿನಗೆ ಆರೋಗ್ಯ ಸಮಸ್ಯೆ ಇದೆ ಕುಡಿಯ ಬೇಡ ಎಂದು ಹೇಳಿದ್ದರು ಯಾರು ಮಾತನ್ನು ಕೇಳದೆ ಶುಕ್ರವಾರ ಬೆಳಗ್ಗೆಯಿಂದ ಶನಿವಾರ ನಡುವಿನ ಅವಧಿಯಲ್ಲಿ ಕಡ್ಲಿಗಟ್ಟಿ ಕೆರೆ ಸನಿಹ ಮೃತದೇಹ ಪತ್ತೆಯಾಗಿದೆ. ಸಾವಿನಲ್ಲಿ ಯಾವುದೇ ಸಂಶಯವಿಲ್ಲವೆಂದು ಮೃತನ ಸಹೋದರ ಅನೀಲ ಎಂಬಾತರು ಇಲ್ಲಿನ ಪೊಲೀಸ ಠಾಣೆಯಲ್ಲಿ ನೀಡಿದ ದೂರಿನಲ್ಲಿ ತಿಳಿಸಿದ್ದಾನೆ. ಈ ಕುರಿತು ಇಲ್ಲಿನ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ದಾಂಡೇಲಿ: ನಗರದ ಟೌನಶಿಪ್ ನಲ್ಲಿರುವ ಶ್ರೀ ಶಂಕರ ಮಠದಲ್ಲಿ ಅಧಿಕ ಮಾಸದ ಮಂಗಳ ಕಾರ್ಯಕ್ರಮ ಶ್ರದ್ಧಾಭಕ್ತಿಯಿಂದ ಜರಗಿತು.ಈ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ಶಂಕರ ಮಠದ ಆಡಳಿತ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಾಜ ಬಾಂಧವರು ಭಾಗವಹಿಸಿದ್ದರು.

## ವಿದ್ಯಾರ್ಥಿಗಳಿಗೆ ಬ್ಯಾಗ್, ಕೊಡೆ ವಿತರಣೆ

**ಹೊನ್ನಾವರ:** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಭಾಸ್ಕೇರಿಯಲ್ಲಿ ಹೊನ್ನಾವರ ಲಯನ್ಸ್ ಕ್ಲಬ್‌ನವರಿಂದ ವಿದ್ಯಾರ್ಥಿಗಳಿಗೆ ಬ್ಯಾಗ ಮತ್ತು ಕೊಡೆಯ ವಿತರಣೆ ನಡೆಯಿತು. ಜೊತೆಯಲ್ಲಿ ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಉಚಿತ ದಂತ ತಪಾಸಣಾ ಶಿಬಿರವು ನಡೆಯಿತು. ಲಯನ್ ಉಪಾಧ್ಯಕ್ಷರಾದ ಎನ್. ಜಿ. ಭಟ್‌ರವರು ಮಾತನಾಡಿ, ಲಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು ಸೇವೆಯು ಅದರ ಮುಖ್ಯ ಉದ್ದೇಶ ಎಂದು ಹೇಳಿದರು. ರೀಜನಲ್ ಚೇರ್ ಪರ್ಸನ್ ಲಯನ್ ರಾಜೇಶ್ ಸಾಳೆಹಿತ್ತಲ್ ಲಯನ್ಸ್ ಕ್ಲಬ್‌ನ ಸಾಧನೆಗಳನ್ನು ತಿಳಿಸಿದರು. ಸೆಕ್ರೆಟರಿಯವರಾದ ಲಯನ್ ಶ್ರೀಕಾಂತ್ ಹೆಗಡೆಕರ್ ಸರ್ಕಾರಿ ಶಾಲೆಯಲ್ಲಿ ಕಲಿತ ಮಕ್ಕಳು ಸಾಕಷ್ಟು ಉನ್ನತ ಸ್ಥಾನಕ್ಕೆ ಏರಿದ್ದಾರೆ. ಲಯನ್ಸ್ ಕ್ಲಬ್ ಯಾವಾಗಲೂ ಸರಕಾರಿ ಶಾಲೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಸರ್ಕಾರಿ ಶಾಲೆಯ ಕುರಿತು ಅಭಿಮಾನದ ಮಾತುಗಳನ್ನಾಡಿದರು. ಕಾರ್ಯಕ್ರಮದ ಪ್ರಾಯೋಜಕರಲ್ಲಿ ಒಬ್ಬರಾದ ಲಯನ್ ಡಾ. ನಾಗರಾಜ್ ಬೋಸ್ಕಿ ಹಲ್ಲಿನ ಮಹತ್ವ ಮತ್ತು ರಕ್ಷಣೆಯ ಕುರಿತು ತಿಳಿಸಿದರು. ಸೆಕ್ರೆಟರಿ ಲಯನ್ ಶ್ರೀಕಾಂತ್ ಹೆಗಡೇಕರ್, ಲಯನ್ಸ್ ಎಮ್.ವಿ.ಹೆಗಡೆ,ಲಯನ್ ನರಸಿಂಹ ಪಂಡಿತ್, ಶಾಲೆಯ ಎಸ್. ಡಿ.ಎಂ.ಸಿ.ಅಧ್ಯಕ್ಷರು ಮತ್ತು ಸದಸ್ಯರು, ಪಾಲಕರು ಮತ್ತು ಶಿಕ್ಷಕರು ಉಪಸ್ಥಿತರಿದ್ದರು. ಡಾ. ನಾಗರಾಜ್ ಬೋಸ್ಕಿ ಮತ್ತು ಡಾ. ಸಹನ ದಂತ ತಪಾಸಣೆಯನ್ನು ನಡೆಸಿಕೊಟ್ಟರು. ಲಯನ್ ರಾಜೇಶ್ ಸಾಳೆ ಹಿತ್ತಲ್, ಲಯನ್ ಚಂದ್ರಕಾಂತ್ ನಾಯ್ಕ್, ಲಯನ್ ನಾಗರಾಜ ಬೊಸ್ಕಿ ಪ್ರಾಯೋಜಕತ್ವ ವಹಿಸಿದ್ದರು. ಮುಖ್ಯ ಶಿಕ್ಷಕಿ ಸರಸ್ವತಿ ಹೆಗಡೆ ಸರ್ವರನ್ನು ಸ್ವಾಗತಿಸಿದರು. ಸಹ ಶಿಕ್ಷಕಿ ಪ್ರತಿಮಾ ಹೆಗಡೆ ನಿರೂಪಿಸಿ ಅಭಿನಂದಿಸಿದರು.




ಹೊನ್ನಾವರ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಭಾಸ್ಕೇರಿಯಲ್ಲಿ ಹೊನ್ನಾವರ ಲಯನ್ಸ್ ಕ್ಲಬ್‌ನವರಿಂದ ವಿದ್ಯಾರ್ಥಿಗಳಿಗೆ ಬ್ಯಾಗ ಮತ್ತು ಕೊಡೆಯ ವಿತರಣೆ ನಡೆಯಿತು. ಜೊತೆಯಲ್ಲಿ ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಉಚಿತ ದಂತ ತಪಾಸಣಾ ಶಿಬಿರ ನಡೆಯಿತು.

### ಶಾಸನಗಳು, ಶಿಲ್ಪಕಲೆಗಳು ನಶಿಸುವ ಆತಂಕ

## ಸ್ಮಾರಕಗಳಿಗಿಲ್ಲ ನೂತನ ಸಂಗ್ರಹಾಲಯ

ಸುಧೀರ ನಾಯರ್

ದಿಗಂತ ವಿಶೇಷ

**ಬನವಾಸಿ:** ಶತಮಾನಗಳ ಇತಿಹಾಸವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡು, ಮುಂದಿನ ಪೀಳಿಗೆಗೆ ಚರಿತ್ರೆಯ ಪಾಠ ಹೇಳಬೇಕಾಗಿದ್ದ ಬನವಾಸಿಯ ಅಪರೂಪದ ಶಾಸನಗಳು, ಶಿಲ್ಪಕಲೆಗಳು ಮತ್ತು ವೀರಗಲ್ಲುಗಳು ಸೂಕ್ತ ಆಸರೆಯಿಲ್ಲದೆ ಜೀರ್ಣಾವಸ್ಥೆ ತಲುಪುತ್ತಿವೆ. ಬಹುತೇಕ ಶಿಲ್ಪಗಳು ಎಲ್ಲೆಂದರಲ್ಲಿ ಬಿದ್ದಿರುವುದರಿಂದ ಅವುಗಳ ಮೂಲ ಸ್ವರೂಪವೇ ನಶಿಸಿಹೋಗುವ ಆತಂಕ ಎದುರಾಗಿದೆ.

ಬನವಾಸಿಯಲ್ಲಿ ಕ್ರಿ.ಶ 2ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಶಾತವಾಹನರು, ಚುಟುಗಳು ಹಾಗೂ ಕದಂಬ ಮನೆತನಗಳ ಸುದೀರ್ಘ ಇತಿಹಾಸ ಸಾರುವ ಕುರುಹುಗಳು ಇಲ್ಲಿನ ಉತ್ಖನನದ ಸಂದರ್ಭದಲ್ಲಿ ಪತ್ತೆಯಾಗಿದ್ದವು. ಬ್ರಾಹ್ಮಿಲಿಪಿಯಲ್ಲಿರುವ, ಪ್ರಾಕೃತ ಭಾಷೆಯ ಕ್ರಿ.ಶ 2ನೇ ಶತಮಾನದ ಸಿವಸಿರಿ ಪುಳುಮಾವಿ ಶಾಸನಶಿಲೆ ಸೇರಿದಂತೆ ಗಣಪತಿ, ನರಸಿಂಹ ಮೂರ್ತಿಗಳು ಹಾಗೂ 12ನೇ ಶತಮಾನಕ್ಕೂ ಪೂರ್ವದ ಸುಮಾರು 180ಕ್ಕೂ ಹೆಚ್ಚು ಅತ್ಯಮೂಲ್ಯ ಸ್ಮಾರಕ ಶಿಲೆಗಳು ಪ್ರಸ್ತುತ ಮಧುಕೇಶ್ವರ ದೇವಾಲಯದ ಎದುರಿನ ಸಾಮಾನ್ಯ ಕೊಠಡಿಯೊಂದರಲ್ಲಿ ದೂಳು ತಿನ್ನುತ್ತಿವೆ. ಇವುಗಳಿಗೆ ಯಾವುದೇ ವಿಶೇಷ ರಕ್ಷಣೆ ಇಲ್ಲ.

ಅಪರೂಪದ ಶಿಲ್ಪಗಳ ದಾಖಲೀಕರಣ ಮತ್ತು ಅಧ್ಯಯನ ಕಾರ್ಯ ಮುಗಿದು ದಶಕವೇ ಕಳೆದಿದ್ದರೂ, ಇವುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವ ಮನಸ್ಸು ಮಾತ್ರ ಇಲಾಖೆಗೆ ಬಂದಿಲ್ಲ. ಬಹುತೇಕ ಸ್ಮಾರಕಗಳು ಮೂಲ ಸ್ವರೂಪ ಕಳೆದುಕೊಂಡು ಏನೆಂಬುದೇ ತಿಳಿಯದ ಸ್ಥಿತಿ ತಲುಪಿವೆ ಎಂಬುದು ಬನವಾಸಿಗರ ದೂರಾಗಿದೆ. ಸ್ಮಾರಕಗಳ ರಕ್ಷಣೆಗಾಗಿ ಸೌಲಭ್ಯವಿದ್ದರೂ ಇಲಾಖೆ ಮಾತ್ರ ಮೀನಮೇಷ ಎಣಿಸುತ್ತಿದೆ. ಅನುದಾನ ಮತ್ತು ಸಿಬ್ಬಂದಿಯ ಕೊರತೆಯ ನೆಪ ಒಡ್ಡಿ ಇತಿಹಾಸದ ಜೀವಂತ ಸಾಕ್ಷ್ಯಗಳನ್ನು ಹೀಗೆಯೇ ಮಣ್ಣುಪಾಲು ಮಾಡಲು ಬಿಟ್ಟರೆ, ಮುಂದಿನ ಪೀಳಿಗೆಗೆ ಬನವಾಸಿಯ ಇತಿಹಾಸ ಕೇವಲ ಪಠ್ಯಪುಸ್ತಕದ ಕಟ್ಟುಕತೆ ಆಗುವುದೆಂಬುದರಲ್ಲಿ ಸಂಶಯವಿಲ್ಲ. ಸರ್ಕಾರ ತಕ್ಷಣವೇ ಮಧ್ಯಪ್ರವೇಶಿಸಿ, ಕನ್ನಡದ ಅಸ್ಮಿತೆಯಂತಿರುವ ಈ ಸ್ಮಾರಕಗಳಿಗೆ ನೂತನ ಸಂಗ್ರಹಾಲಯದಲ್ಲಿ ಸೂಕ್ತ ನೆಲೆ ಕಲ್ಪಿಸಬೇಕಿದೆ ಎನ್ನುತ್ತಾರೆ ಬನವಾಸಿಯ ಸಾರ್ವಜನಿಕರು.



### ಅನುದಾನ, ಸಿಬ್ಬಂದಿ ಕೊರತೆ

ಸಂಗ್ರಹಾಲಯಕ್ಕಾಗಿ ಗುರುತಿಸಿರುವ ಕಟ್ಟಡದ ಆವರಣದಲ್ಲಿ ಉದ್ಯಾನ ಹಾಗೂ ಕೊಳವೆಬಾವಿ ನಿರ್ಮಿಸಲು ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನ ಬೇಕಾಗಿದೆ ಎಂದು ಪುರಾತತ್ವ ಇಲಾಖೆ ಅಧಿಕಾರಿಗಳು ಹೇಳುತ್ತಿದ್ದಾರೆ. ಇದರೊಂದಿಗೆ ಇಲಾಖೆಯಲ್ಲಿ ಹೊಸ ನೇಮಕಾತಿಗಳು ನಡೆಯದೆ ಸಿಬ್ಬಂದಿ ಕೊರತೆ ಇರುವುದರಿಂದ ಈ ಸ್ಥಳಾಂತರ ಕಾರ್ಯ ನನೆಗುದಿಗೆ ಬಿದ್ದಿದೆ ಎಂಬುದು ಸಿಬ್ಬಂದಿಯ ಆರೋಪವಾಗಿದೆ.

> ಬನವಾಸಿ ಹೊರವಲಯದಲ್ಲಿ ಪ್ರವಾಸೋದ್ಯಮ ಇಲಾಖೆಯು 1984ರಲ್ಲಿ 18 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ್ದ ಪ್ರವಾಸಿ ಮಂದಿರವು ಬಳಕೆಯಾಗದೆ ಖಾಲಿ ಬಿದ್ದಿತ್ತು. ಇದರ ಸದ್ಬಳಕೆಗಾಗಿ ಕಟ್ಟಡವನ್ನು ಪುರಾತತ್ವ ಇಲಾಖೆಗೆ ಹಸ್ತಾಂತರಿಸಲಾಯಿತು. ದೇವಾಲಯದ ಆವರಣದಲ್ಲಿರುವ ಸ್ಮಾರಕಗಳನ್ನು ಇಲ್ಲಿಗೆ ಸ್ಥಳಾಂತರಿಸಿ ಸುಸಜ್ಜಿತ ಪ್ರಾಚ್ಯವಸ್ತು ಸಂಗ್ರಹಾಲಯ ಮಾಡಲು ಪುರಾತತ್ವ ಇಲಾಖೆ ಯೋಜನೆ ರೂಪಿಸಿ, ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡದ ನವೀಕರಣ ಕಾಮಗಾರಿಯನ್ನೂ ಮುಗಿಸಿದೆ. ಆದರೆ, ಹಲವು ವರ್ಷಗಳು ಉರುಳಿದರೂ ಈ ಕಟ್ಟಡಕ್ಕೆ ಸ್ಮಾರಕಗಳನ್ನು ಸ್ಥಳಾಂತರಿಸುವ ಕಾರ್ಯಕ್ಕೆ ಮಾತ್ರ ಮುಹೂರ್ತ ಕೂಡಿಬಂದಿಲ್ಲ.
>
> ■ ಮಂಜುನಾಥ ಗೌಡ,ಸ್ಥಳೀಯರು

## ಸಮಯ ಪಾಲನೆಯಿಂದ ಜೀವನದಲ್ಲಿ ಯಶಸ್ಸು: ರಮಾನಂದ ನಾಯಕ

**ಅಂಕೋಲಾ:** ವಿದ್ಯಾರ್ಥಿಗಳು ಸಮಯದ ಮಹತ್ವವನ್ನು ಅರಿತರೆ ಜೀವನದಲ್ಲಿ ಯಶಸ್ಸನ್ನು ಕಾಣಬಹುದಾಗಿದ್ದು, ಅನಾವಶ್ಯಕವಾಗಿ ಸಮಯ ಕಳೆಯುವ ಬದಲು ಅದೇ ಸಮಯದ ಸದುಪಯೋಗ ಪಡೆಯಬೇಕು ಎಂದು ನಿವೃತ್ತ ಪ್ರಾಚಾರ್ಯ ರಮಾನಂದ ನಾಯಕ ಹೇಳಿದರು.

ತಾಲೂಕಿನ ಕೆಎಲ್ಇ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಮಯ ಪಾಲನೆ ಅತ್ಯಂತ ಮಹತ್ವದ್ದು ಎಂದರು.

ಕೆ.ಎಲ್.ಇ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ ಮಾತನಾಡಿ, ಉನ್ನತ ವ್ಯಾಸಂಗದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ವಿದ್ಯಾರ್ಥಿಗಳು ಗಮನ ನೀಡಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಅಶ್ವತನಾರಾಯಣ ಹೆಗಡೆ ಮಾತನಾಡಿ, ಕೌಶ್ಯಲ್ಯಾಧಾರಿತ ಶಿಕ್ಷಣ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಗತ್ಯವಿದ್ದು ಕೆ.ಎಲ್.ಇ ಸಂಸ್ಥೆಅದನ್ನು ಗಮನದಲ್ಲಿಟ್ಟು ಶಿಕ್ಷಣ ನೀಡುತ್ತಿರುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಉತ್ತಮವಾಗಿದೆ. ಸತತ ಅಧ್ಯಯನದಿಂದ ಯಶಸ್ಸು ಸಾಧ್ಯ ಎಂದರು.

ಆಡಳಿತ ಮಂಡಳಿಯ ಸದಸ್ಯೆ ಡಾ.ಮೀನಲ್ ನಾರ್ವೇಕರ್ ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟದ 20 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಕಾಲೇಜಿನ ವಿದ್ಯಾರ್ಥಿನಿ ಚಂದ್ರಿಕಾ ಗೌಡ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಉಪನ್ಯಾಸಕಿ ಜಯಾ ಗಾಂವಕರ ಸ್ವಾಗತಿಸಿದರು. ಕಾಂಚನಾ ನಾಯ್ಕ ಪರಿಚಯಿಸಿದರು. ಜ್ಞಾನೇಶ್ವರಿ ನಾಯ್ಕ ಕಾರ್ಯಕ್ರಮ ನಿರ್ವಹಿಸಿದರು.



## ಮೀನುಗಾರರ ಒಗ್ಗಟ್ಟಿಗೆ ಕ್ರಿಕೆಟ್ ಪಂದ್ಯಾವಳಿ ಸಹಕಾರಿ

**ಅಂಕೋಲಾ:** ಸದಾ ಸಮುದ್ರದಲ್ಲಿ ತಮ್ಮ ಕಸುಬಿನಲ್ಲಿ ನಿರತರಾಗಿ ಮೀನುಗಾರಿಕೆ ಬೋಟುಗಳಲ್ಲಿ ದುಡಿಯುವ ಮೀನುಗಾರರಿಗೆ ಮಳೆಗಾಲದ ಆರಂಭದ ಅವಧಿ ಬಿಡುವಿನ ದಿನಗಳಾಗಿದ್ದು ಕೇಣಿಯ ಹರಿಕಂತ್ರ ಸಮಾಜದ ಮೀನುಗಾರರ ಮನರಂಜನೆಯ ಉದ್ದೇಶದಿಂದ ನಡೆಸಲಾಗುತ್ತಿರುವ ಮಾನ್ಸೂನ್ ಹರಿಕಂತ್ರ ಕಫ್ ಕ್ರಿಕೆಟ್ ಪಂದ್ಯಾವಳಿ ಬಿಡುವಿನಲ್ಲಿರುವ ಮೀನುಗಾರರಲ್ಲಿ ಉತ್ಸಾಹ ತುಂಬುವ ಪ್ರಯತ್ನವಾಗಿದೆ ಎಂದು ಉಪನ್ಯಾಸಕ, ಪತ್ರಕರ್ತ ಮೋಹನ ದುರ್ಗೇಕರ ಹೇಳಿದರು.

ಪಂದ್ಯಾವಳಿಯ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಮೀನುಗಾರರ ಒಗ್ಗಟ್ಟು, ಭಾಂದವ್ಯಕ್ಕೆ ಕ್ರಿಕೆಟ್ ಪಂದ್ಯಾವಳಿ ಸಹಕಾರಿಯಾಗಿದ್ದು ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದ ಪಂದ್ಯಾವಳಿ ಆಯೋಜಿಸಲು ಪ್ರೇರಣೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೀನುಗಾರ ಮಹಾಜನ ಸಂಘದ ಕಾರ್ಯದರ್ಶಿ ಶ್ರೀಕಾಂತ ದುರ್ಗೇಕರ ಮಾತನಾಡಿ, ದ್ವೇಷ ವೈಮನಸ್ಸನ್ನು ದೂರವಾಗಿಸಿ ಭಾಂದವ್ಯ ಬೆಸೆಯಲು ಕ್ರೀಡೆಯಿಂದ ಸಾಧ್ಯವಿದ್ದು, ವರ್ಷದ ಬಹುತೇಕ ಸಮಯ ಸಮುದ್ರದಲ್ಲಿ ಕಳೆಯುವ ಮೀನುಗಾರ ಯುವಕರು ತಮ್ಮ ಕ್ರೀಡಾ ಸಾಮರ್ಥ್ಯವನ್ನು ಮೈದಾನದಲ್ಲಿ ತೋರಲು ಕ್ರಿಕೆಟ್ ಪಂದ್ಯಾವಳಿ ಅವಕಾಶ ಮಾಡಿಕೊಟ್ಟಿದೆ ಎಂದರು.

ಪಂದ್ಯಾವಳಿಯ ಪ್ರಾಯೋಜಕ ಮಧುರಾಜ ದುರ್ಗೇಕರ, ಚಂದ್ರು ದುರ್ಗೇಕರ, ಶೇಖರ ಬಲೆಗಾರ, ಸುರೇಶ ಹರಿಕಂತ್ರ, ಗಂಗಾಧರ ಹರಿಕಂತ್ರ ಉಪಸ್ಥಿತರಿದ್ದರು.

ಕೇಣಿಯ ಮೇಲುಬಾಗ ಹಾಗೂ ಬಾಳೆಕೊಪ್ಪದವರ ಆಶ್ರಯದಲ್ಲಿ ನಡೆದ 6ನೇ ವರ್ಷದ ಪಂದ್ಯಾವಳಿಯಲ್ಲಿ ದೇಶಿನಬಾಗದ ಪಿಶಿಕಿಂಗ್ ತಂಡ ಚಾಂಪಿಯನ್ ಮತ್ತು ಬಾಳೆಕೊಪ್ಪದ ನವಚಂಡಿಕ ತಂಡ ರನ್ನರ್ ಅಪ್ ಸ್ಥಾನ ಪಡೆದರು.

ಕೇಣಿಯ ಐದು ವಾರ್ಡುಗಳ ಹರಿಕಂತ್ರ ಸಮಾಜದ ತಂಡಗಳು ಪಾಲ್ಗೊಂಡಿದ್ದವು.



## ಯಕ್ಷಗಾನ ಪ್ರೋತ್ಸಾಹಿಸಿ: ಗಾಂವ್ಕರ

**ಯಲ್ಲಾಪುರ:** ಯಕ್ಷಗಾನ ಜಿಲ್ಲೆಯ ಶ್ರೇಷ್ಟ ಕಲೆಗಳಲ್ಲಿ ಒಂದು ಎಂದು ಶಕ್ತಿ ಗಣಪತಿ ದೇವಸ್ಥಾನದ ಅಧ್ಯಕ್ಷರಾದ ಅನಂತ ಗಾಂವ್ಕರ ಹೇಳಿದರು.

ಅವರು ಆನಗೋಡ ಗೋಪಾಲಕೃಷ್ಣ ದೇವಸ್ಥಾನದ ನಡೆದ ಯಕ್ಷಗಾನ ಹಾಗೂ ಕಲಾಮಿತ್ರ ಮಂಡಳಿ ಟ್ರಸ್ಟ ಇದರ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಮೊದಲು ಐದಾರು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಯಕ್ಷಗಾನ ಶಾಲೆ ಇವತ್ತು ಐವತ್ತಕ್ಕೂ ಹೆಚ್ಚು ಮಕ್ಕಳನ್ನು ಹೊಂದಿದೆ ಕೇವಲ ತಾಲೂಕಿನ ಮಕ್ಕಳೊಂದೆಯಲ್ಲದೆ ಅಂಕೋಲಾ ಗೋಕರ್ಣದಿಂದಲೂ ಇಲ್ಲಿಗೆ ಬಂದು ಯಕ್ಷಗಾನ ಕಲಿಯುತ್ತಿದ್ದರೆ ದೇವ ಕಲೆಯಾದ ಯಕ್ಷಗಾನ ಉಳಿಯಬೇಕಾದರೆ ಪ್ರೇಕ್ಷಕರು ಯಕ್ಷಾಭಿಮಾನಿಗಳು ಪ್ರೋತ್ಸಾಹಿಸಬೇಕು ಎಂದರು.

ಖ್ಯಾತ ಯಕ್ಷಗಾನ ಭಾಗವತ ಯಕ್ಷಗಾನ ಶಾಲೆಯ ಮುಖ್ಯ ಶಿಕ್ಷಕ ಅನಂತ ಹೆಗಡೆ ದಂತಳಗಿ ಮಾತನಾಡಿ, ನಮ್ಮ ಶಾಲೆಯಿಂದ ಅನೇಕ ವಿದ್ಯಾರ್ಥಿಗಳು ಯಕ್ಷಗಾನ ಕಲಿತು ಕಲಾವಿದರಾಗಿದ್ದಾರೆ ಒಂದು ಶಾಲೆ ಸಂಸ್ಥೆ ಬೆಳೆಯಬೇಕಾದರೆ ಕಲಾಪೋಶಕರ ಸಹಕಾರವು ಅಗತ್ಯ ಕಲಿತ ಮಕ್ಕಳು ಅವರ ಪಾಲಕರು ಕಲಿತ ಶಾಲೆಯನ್ನು ವಿದ್ಯೆಯನ್ನು ಶಿಕ್ಷಕರನ್ನೂ ಮರೆಯಬಾರದು. ಸಾರ್ವಜನಿಕರ ದಾನಿಗಳ ಪ್ರೋತ್ಸಾಹ ಅತ್ಯಗತ್ಯ ಎಂದರು.ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎನ್ ಕೆ.ಭಟ್ಟ ಅಗ್ಗಾಸಿ, ಗೋಪಾಲಕೃಷ್ಣ ದೇವಸ್ಥಾನದ ಮುಕ್ತೇಶರ ಗಣಪತಿ ಮಾನಿಗದ್ದೆ, ಸಭಾಧ್ಯಕ್ಷತೆ ವಹಿಸಿದ್ದ ಸುಬ್ರಾಯ ಹೆಗಡೆ ಮಳಗಿ ಮಾತನಾಡಿದರು.

ವೇದಿಕೆಯಲ್ಲಿ ತಾಳಮದ್ದಳೆ ಅರ್ಥದಾರಿ ಡಿ ಕೆ.ಗಾಂವ್ಕರ, ಮೃದಂಗವಾದಕ ನರಸಿಂಹ ಭಟ್ಟ ಹಂಡ್ರಮನೆ, ಚಂಡೆವಾದಕ ಪ್ರಮೋದ ಹೆಗಡೆ ಕಬ್ಬಿನಗದ್ದೆ ಉಪಸ್ಥಿತರಿದ್ದರು. ಶತೀಶ ಹೆಗಡೆ ಸ್ವಾಗತಿಸಿ ವಂದಿಸಿದರು. ಶ್ರೀದರ ಹೆಗಡೆ ನಿರ್ವಹಿಸಿದರು.ಸಭಾಕಾರ್ಯಕ್ರಮದ ನಂತರ ಯಕ್ಷಗಾನ ತರಬೇತಿ ವರ್ಗದ ವಿದ್ಯಾರ್ಥಿಗಳಿಂದ ಪೂರ್ವಾಂಗ ಪ್ರದರ್ಶನ ಮತ್ತು ಮತ್ತು ಧರ್ಮಾಂಗದ ದಿಗ್ವಿಜಯ ಪ್ರದರ್ಶನ ನಡೆಯಿತು.



## ನಿರ್ವಾಹಕ, ಪ್ರಯಾಣಿಕನ ನಡುವೆ ಜಗಳ

**ದಾಂಡೇಲಿ:** ಚಿಲ್ಲರೆಗಾಗಿ ಸಾರಿಗೆ ಬಸ್ ನಿರ್ವಾಹಕ ಮತ್ತು ಪ್ರಯಾಣಿಕನ ನಡುವೆ ಮಾತಿನ ಚಕಮಕಿ ನಡೆದು, ಸುಮಾರು ಅರ್ಧ ಗಂಟೆಗಳವರೆಗೆ ಬಸ್ ನಿಲ್ಲಿಸಿ ಪ್ರಯಾಣಿಕರಿಗೆ ತೊಂದರೆಯಾದ ಘಟನೆ ಭಾನುವಾರ ಮಧ್ಯಾನ ನಗರದ ಕೆ.ಸಿ.ವೃತ್ತದ ಹತ್ತಿರ ನಡೆದಿದೆ.

ದಾಂಡೇಲಿಯ ಮಾರುತಿ ನಗರದ ನಿವಾಸಿ ಬೆಳಗಾವಿಯ ಯೂಟ್ಯೂಬ್ ಒಂದರ ದಾಂಡೇಲಿ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಫರಾಜ್ ಶೇಖ ಎಂಬವರು ನಗರದ ಬಸ್ ನಿಲ್ದಾಣದಿಂದ ಹಳಿಯಾಳಕ್ಕೆ ಹೋಗಲೆಂದು ದಾಂಡೇಲಿ-ಧಾರವಾಡ ಬಸ್ ಹತ್ತಿದ್ದಾರೆ. ಬಸ್ ನಿಲ್ದಾಣದಿಂದ ಬಸ್ ಹೊರಡುತ್ತಿದ್ದಂತೆಯೇ ಟಿಕೆಟ್ ತೆಗೆಯಲು ಬಂದ ನಿರ್ವಾಹಕರಿಗೆ ಸರ್ಫರಾಜ್ ಶೇಖ 100/- ರೂ ನೋಟನ್ನು ನೀಡಿದ್ದಾರೆ. ಆದರೆ ನಿರ್ವಾಹಕ ಚಿಲ್ಲರೆ ಕೊಡಿ, ನನ್ನಲ್ಲಿ ಚಿಲ್ಲರೆ ಇಲ್ಲ, ಚಿಲ್ಲರೆ ಇಲ್ಲದಿದ್ದರೇ ಬಸ್ಸಿನಿಂದ ಕೆಳಗಿಳಿಯಿರಿ ಎಂದಿದ್ದಾರೆ. ಆಗ ಸರ್ಫರಾಜ್ ಶೇಖ ಅವರು ಟಿಕೆಟ್ ಹಿಂಬದಿಯಲ್ಲಿ ಉಳಿಕೆ ಮೊತ್ತವನ್ನು ಬರೆದು ಕೊಡಿ ಹಳಿಯಾಳ ಬಂದ ನಂತರ ತೆಗೆದುಕೊಳ್ಳುತ್ತೇನೆ ಎಂದಾಗ ಅದಕ್ಕೂ ಆಗುವುದಿಲ್ಲ ಎಂದ ನಿರ್ವಾಹಕ ಕೆ.ಸಿ.ವೃತ್ತದ ಹತ್ತಿರ ಬಸ್ ಬರುತ್ತಿದ್ದಂತೆಯೇ 112ಗೆ ಕರೆ ಮಾಡಿದ್ದಾರೆ. ಇನ್ನೂ ಯೂಟೂಬ್ ಒಂದರ ಪ್ರತಿನಿಧಿಯಾಗಿರುವ ಸರ್ಫರಾಜ್ ಶೇಖ ಅವರು ತಾನು ಪತ್ರಕರ್ತ ಎಂದು ಹೆದರಿಸಿದ್ದಾರೆ ಎಂಬ ವಾದ ನಿರ್ವಹಕರಾದ್ದಾಗಿತ್ತು. ಸ್ವಲ್ಪ ಹೊತ್ತಿನ ಬಳಿಕ ಸ್ಥಳಕ್ಕೆ ಪೊಲೀಸ್ ಸಿಬ್ಬಂದಿ ದೌಡಾಯಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿ ಪ್ರಕರಣವನ್ನು ಸುಖಾಂತ್ಯಗೊಳಿಸಿದರು. ಕೊನೆಗೆ ಅದೇ ಬಸ್‌ನಲ್ಲಿ ಸರ್ಫರಾಜ ಶೇಖ ಹಳಿಯಾಳಕ್ಕೆ ಪ್ರಯಾಣಿಸಿದರು.



## ಶಿಸ್ತು, ಸಮಯಪ್ರಜ್ಞೆ, ಪರಿಶ್ರಮದಿಂದ ಯಶಸ್ಸು ಸಾಧ್ಯ

**ಹಳಿಯಾಳ:** ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಹಳಿಯಾಳ ಹಾಗೂ ಪೊಲೀಸ್ ಇಲಾಖೆ ಹಳಿಯಾಳ ಇವರ ಸಂಯುಕ್ತ ಆಶ್ರಯದಲ್ಲಿ ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ಆಕಾಂಕ್ಷಿಗಳಿಗಾಗಿ ಮಾಹಿತಿ ಕಾರ್ಯಾಗಾರವನ್ನು ಸಿಬಿಡಿ ಆರ್‌ಸೆಟಿ ಸಭಾಭವನದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಳಿಯಾಳ ಪೊಲೀಸ್ ಠಾಣೆಯ ಸಿಪಿಐ ಜೈಪಾಲ ಪಾಟೀಲ ಅವರು ಮಾತನಾಡಿ, ಇಂದಿನ ಯುವಜನತೆ ಸರ್ಕಾರಿ ಸೇವೆಯತ್ತ ಹೆಚ್ಚಿನ ಆಸಕ್ತಿ ತೋರಿಸುತ್ತಿರುವುದು ಸಂತಸದ ಸಂಗತಿ. ಪೊಲೀಸ್ ಇಲಾಖೆಯು ಕೇವಲ ಉದ್ಯೋಗವಲ್ಲ, ಸಮಾಜ ಸೇವೆಗೆ ದೊರೆಯುವ ಒಂದು ಮಹತ್ತರ ಅವಕಾಶವಾಗಿದೆ. ಅಭ್ಯರ್ಥಿಗಳು ಶಿಸ್ತು, ಸಮಯಪ್ರಜ್ಞೆ ಹಾಗೂ ನಿರಂತರ ಪರಿಶ್ರಮದ ಮೂಲಕ ತಮ್ಮ ಗುರಿಯನ್ನು ಸಾಧಿಸಬೇಕು ಎಂದು ಸಲಹೆ ನೀಡಿದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವಾಗ ಸಮಯ ನಿರ್ವಹಣೆ, ಮಾನಸಿಕ ದೃಢತೆ ಹಾಗೂ ದೈಹಿಕ ಆರೋಗ್ಯಕ್ಕೆ ಸಮಾನ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿ ಹಾಗೂ ಉಪನ್ಯಾಸಕರಾಗಿ ಹಳಿಯಾಳ ಪೊಲೀಸ್ ಠಾಣೆಯ ಪಿಎಸ್ಐ ಬಸವರಾಜ ಮಬನೂರ ಅವರು ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ನೇಮಕಾತಿಯ ಸಂಪೂರ್ಣ ಪ್ರಕ್ರಿಯೆ, ಲಿಖಿತ ಪರೀಕ್ಷೆ, ದೈಹಿಕ ಸಾಮರ್ಥ್ಯ ಪರೀಕ್ಷೆ ಹಾಗೂ ಆಯ್ಕೆ ವಿಧಾನಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು.

ವಿ.ಆರ್.ಡಿ.ಎಮ್ ಟ್ರಸ್ಟ್ ಹಳಿಯಾಳದ ಆಡಳಿತಾಧಿಕಾರಿ ಪ್ರಕಾಶ ಪ್ರಭು ಧ್ಯಕ್ಷತೆವಹಿಸಿ ಮಾತನಾಡಿದರು. ಆರಂಭದಲ್ಲಿ ಹಳಿಯಾಳದ ಸಿಬಿಡಿ ಆರ್‌ಸೆಟಿಯ ಯೋಜನಾ ಸಂಯೋಜಕ ವಿನಾಯಕ ಅ. ಚವ್ಹಾಣ ಅವರು ಅತಿಥಿಗಳನ್ನು ಸ್ವಾಗತಿಸಿ, ಸಂಸ್ಥೆಯ ವಿವಿಧ ತರಬೇತಿ ಹಾಗೂ ಉದ್ಯೋಗೋದ್ಯಮ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಹಳಿಯಾಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಆಗಮಿಸಿದ್ದ 100 ಕ್ಕೂ ಹೆಚ್ಚು ಪೊಲೀಸ್ ಹುದ್ದೆಗಳ ಆಕಾಂಕ್ಷಿಗಳು ಭಾಗವಹಿಸಿ ಕಾರ್ಯಕ್ರಮದ ಸಂಪೂರ್ಣ ಪ್ರಯೋಜನ ಪಡೆದುಕೊಂಡರು. ಅಭ್ಯರ್ಥಿಗಳು ಉಪನ್ಯಾಸಕರೊಂದಿಗೆ ಸಂವಾದ ನಡೆಸಿ ತಮ್ಮ ಸಂದೇಹಗಳಿಗೆ ಪರಿಹಾರ ಕಂಡುಕೊಂಡರು. ಸಂಸ್ಥೆಯ ಉಪನ್ಯಾಸಕರಾದ ವಿರೇಶ ತಾಳಿಕೋಟಿ ಅವರು ನಿರೂಪಿಸಿ ವಂದಿಸಿದರು.

ಸಂಸ್ಥೆಯ ಸಿಬ್ಬಂದಿಗಳಾದ ಬಾಹುಬಲಿ ಚೆನ್ನಗಿ, ವಿನೋದ್ ಅಗಸರ, ಉಳವಯ್ಯ ಬೆಂಡಿಗೇರಿ, ಮಂಜುನಾಥ್ ನಿಲ್ಕರ್ ಮತ್ತು ಪೊಲೀಸ್ ಸಿಬ್ಬಂದಿಗಳು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ವಿಯಾಗಿ ನಡೆಯಲು ಸಹಕರಿಸಿದರು.




## ನೀರಿನ ವ್ಯವಸ್ಥೆ ಕಲ್ಪಿಸಲು ಸಾರ್ವಜನಿಕರ ಒತ್ತಾಯ

**ಭಟ್ಕಳ:** ಪಟ್ಟಣದ ರಘುನಾಥ ರಸ್ತೆ ಸನಿಹದ ಮಣ್ಕುಳಿ ಪುಷ್ಪಾಂಜಲಿ ಟಾಕೀಸ್ ವ್ಯಾಪ್ತಿಯ ವಾರ್ಡ್ 15 ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಯುಜಿಡಿ ಮೇನ್ ಹೋಲ್ ಸೋರಿಕೆಯಿಂದ 50ಕ್ಕೂ ಹೆಚ್ಚು ಬಾವಿಗಳ ನೀರು ಕಲುಷಿತಗೊಂಡಿದ್ದು, ಸಮಸ್ಯೆಯನ್ನು ತಕ್ಷಣವೇ ಬಗೆಹರಿಸುವಂತೆ ಸ್ಥಳೀಯ ಸಾರ್ವಜನಿಕರು ಒತ್ತಾಯಿಸಿದ್ದು, ಇಲ್ಲದಿದ್ದರೆ ಜೂನ್ 15ರಂದು ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ರಾಘವೇಂದ್ರ ಮಠದ ಸಮೀಪ ಯುಜಿಡಿ ಮೇನ್ ಹೋಲ್ ಬ್ಲಾಕ್ ಆಗಿದ್ದರಿಂದ ಮಲಿನ ನೀರು ಹೊರಗೆ ಹರಿದು ಸುತ್ತಮುತ್ತಲಿನ ಬಾವಿಗಳಿಗೆ ಸೇರಿ ಕುಡಿಯುವ ನೀರು ಕಲುಷಿತಗೊಂಡಿದೆ. ಕಳೆದ ಒಂದು ತಿಂಗಳಿನಿಂದ ಒಳಚರಂಡಿ ನೀರು ರಸ್ತೆಯ ಗಟಾರಿನಲ್ಲಿ ಹರಿಯುತ್ತಿದ್ದು, ದುರ್ವಾಸನೆ ಉಂಟಾಗಿ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

ಈ ಕುರಿತು ನಗರಸಭೆಗೆ ದೂರು ನೀಡಿದರೆ, ಇದು ನಮ್ಮ ವ್ಯಾಪ್ತಿಗೆ ಸಂಬಂಧಿಸಿದ ವಿಷಯವಲ್ಲ, ಐಆರ್‌ಬಿಯನ್ನು ಸಂಪರ್ಕಿಸಿ ಎಂದು ಹೇಳುತ್ತಾರೆ. ಮತ್ತೊಂದೆಡೆ, ಐಆರ್‌ಬಿ ಅಧಿಕಾರಿಗಳು, ನಮ್ಮ ಹೊಸ ಲೈನ್‌ಗೆ ಸಂಪರ್ಕ ಕಲ್ಪಿಸುವ ಮೊದಲು ನಗರಸಭೆಯವರು ಹಳೆಯ ಯುಜಿಡಿ ಸಂಪರ್ಕವನ್ನು ಸಂಪೂರ್ಣವಾಗಿ ಬಂದ್ ಮಾಡಿರುವುದರಿಂದ ಸಮಸ್ಯೆ ಉಂಟಾಗಿದೆ ಎಂದು ಹೇಳುತ್ತಿದ್ದಾರೆ. ಹೀಗಾಗಿ ನಗರಸಭೆ- ಐಆರ್ ಬಿ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡುತ್ತಿದ್ದು, ಸಮಸ್ಯೆ ಮಾತ್ರ ಬಗೆಹರಿಯದೆ ಉಳಿದಿದೆ ಎಂದು ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮಳೆಗಾಲದ ಹಿನ್ನೆಲೆಯಲ್ಲಿ ಬಾವಿಗಳನ್ನು ಖಾಲಿ ಮಾಡಿ ಸ್ವಚ್ಛಗೊಳಿಸುವುದು ಕಷ್ಟಕರವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ತ್ಷಣ ಸ್ಥಳ ಪರಿಶೀಲನೆ ನಡೆಸಿ ಯುಜಿಡಿ ಮೇನ್ ಹೋಲ್ ಸೋರಿಕೆ ದುರಸ್ತಿಪಡಿಸಬೇಕು. ಗಟಾರಿನಲ್ಲಿ ಮಲಿನ ನೀರು ಹರಿಯದಂತೆ ಕ್ರಮ ಕೈಗೊಳ್ಳಬೇಕು ಹಾಗೂ ಕಲುಷಿತಗೊಂಡಿರುವ ಬಾವಿಗಳನ್ನು ಸ್ವಚ್ಛಗೊಳಿಸಿ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರತಿಭಟನೆಯ ಸಂದರ್ಭದಲ್ಲಿ ಯಾವುದೇ ಅನಾಹುತ ಸಂಭವಿಸಿದರೆ ಅದರ ಸಂಪೂರ್ಣ ಹೊಣೆ ನಗರಸಭೆಯದ್ದೇ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಪ್ರಮುಖರಾದ ಪರಮೇಶ್ವರ ನಾಯ್ಕ, ಸುರೇಶ ನಾಯ್ಕ, ಸುಧಾಕರ ನಾಯ್ಕ, ದಿನೇಶ ನಾಯ್ಕ, ನಾಗರಾಜ ನಾಯ್ಕ, ಅನಂತ ದೇವಾಡಿಗ, ಶೇಖರ ನಾಯ್ಕ, ರಮೇಶ ನಾಯ್ಕ, ಈಶ್ವರ ನಾಯ್ಕ, ಕಿಶೋರ ನಾಯ್ಕ, ಮನೋಜ ನಾಯ್ಕ, ಮಾದೇವ ನಾಯ್ಕ ಇದ್ದರು.



ಯಲ್ಲಾಪುರ: ಆನಗೋಡ ಗೋಪಾಲಕೃಷ್ಣ ದೇವಸ್ಥಾನದ ನಡೆದ ಯಕ್ಷಗಾನ ಹಾಗೂ ಕಲಾಮಿತ್ರ ಮಂಡಳಿ ಟ್ರಸ್ಟ ಇದರ ವಾರ್ಷಿಕೋತ್ಸವದಲ್ಲಿ ಯಕ್ಷಗಾನ ತರಬೇತಿ ವರ್ಗದ ವಿದ್ಯಾರ್ಥಿಗಳಿಂದ ಪೂರ್ವಾಂಗ ಪ್ರದರ್ಶನ ಮತ್ತು ಮತ್ತು ಧರ್ಮಾಂಗದ ದಿಗ್ವಿಜಯ ಪ್ರದರ್ಶನ ನಡೆಯಿತು.

## ಭಕ್ತಿ ಮೂಲಕ ಯುವಜನರನ್ನು ಸೆಳೆಯುತ್ತಿದೆ ಇಸ್ಕಾನ್: ಸ್ವಾಮೀಜಿ

**ಬೆಂಗಳೂರು:** ಇಸ್ಕಾನ್ ಸಂಸ್ಥೆಯು ಭಕ್ತಿಯ ಮೂಲಕ ಯುವಜನರನ್ನು ಸೆಳೆಯುತ್ತಿದೆ. ಆ ಮೂಲಕ ಯುವಕರು ಮೋಜು-ಮಸ್ತಿ, ವ್ಯಸನಗಳಿಗೆ ದಾಸರಾಗುವುದನ್ನು ತಡೆಯುತ್ತಿದೆ ಎಂದು ಉಡುಪಿ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜಾಜಿನಗರದ ಇಸ್ಕಾನ್ ವತಿಯಿಂದ ಭಾನುವಾರ ಆಯೋಜಿಸಿದ್ದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ವಿರಚಿತ ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರ ಸಮಗ್ರ ಜೀವನ ಚರಿತ್ರೆಯನ್ನು ಒಳಗೊಂಡ ಶ್ರೀಲ ಪ್ರಭುಪಾದ ಚರಿತಾಮೃತಮ್ ಕನ್ನಡ ಮಹಾಕಾವ್ಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಕ್ತಿಯ ಮೂಲಕ ಅಸಂಖ್ಯ ಯುವಜನರನ್ನು ಇಸ್ಕಾನ್ ಸೆಳೆಯುತ್ತಿದೆ. ಅವರ ಸಾಧನೆಗಳಿಗೆ ಇಸ್ಕಾನ್ ಸ್ಫೂರ್ತಿಯಾಗುತ್ತಿದೆ. ಯುವಜನರು ಮೋಜಿ-ಮಸ್ತಿ ಮಾಡುತ್ತಾ ವ್ಯಸನಗಳಿಗೆ ದಾಸರಾಗದಂತೆ ತಡೆಯುತ್ತಿದೆ. ಆ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡುತ್ತಿದೆ. ಪ್ರತಿಯೊಬ್ಬರಿಗೂ ದೇವರು ವಿಶೇಷ ಶಕ್ತಿ ನೀಡಿದ್ದು ಅದನ್ನು ಬಳಸಿಕೊಂಡು ಸಾಧನೆ ಮಾಡಬೇಕು ಎಂದು ಕರೆ ನೀಡಿದರು. ಶ್ರೀಲ ಪ್ರಭುಪಾದರ ಅಸಾಧಾರಣ ಸಾಧನೆ ಇಂದಿಗೂ ಜನಮಾನಸದಲ್ಲಿ ಪ್ರೇರಣೆಯನ್ನು ಹುರಿದುಂಬಿಸುವ ಶಕ್ತಿಯಾಗಿದೆ. ಇಸ್ಕಾನ್ ಬೆಂಗಳೂರು ಸಂಸ್ಥೆಯು ಅವರ ಹಾದಿಯನ್ನೇ ಅನುಸರಿಸಿ ಹರಿನಾಮ ಸಂಕೀರ್ತನೆ, ಪುಸ್ತಕ ವಿತರಣೆ ಮತ್ತು ಅನ್ನದಾನದಂತಹ ಕಾರ್ಯಕ್ರಮಗಳ ಮೂಲಕ ವಿಶ್ವಮಟ್ಟದಲ್ಲಿ ಗಮನ ಸೆಳೆದಿದೆ. ಮುಂದಿನ ದಿನಗಳಲ್ಲಿ ಇಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತಷ್ಟು ವಿಸ್ತಾರಗೊಳ್ಳಲಿ ಎಂದು ಶುಭ ಹಾರೈಸಿದರು.

ಇಸ್ಕಾನ್ ಬೆಂಗಳೂರು ಸಂಸ್ಥೆಯ ಅಧ್ಯಕ್ಷ ಮಧು ಪಂಡಿತದಾಸ, ಖ್ಯಾತ ಶಿಕ್ಷಣತಜ್ಞ ಡಾ.ಗುರುರಾಜ ಕರ್ಜಗಿ, ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತಿತರರು ಉಪಸ್ಥಿತರಿದ್ದರು.

ಸ್ವಚ್ಛ ಭಾರತ



ನಗರದ ಮೈಸೂರು ಬ್ಯಾಂಕ್ ವೃತ್ತದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಭಾನುವಾರ ಬಿಜೆಪಿ ವತಿಯಿಂದ ಸ್ವಚ್ಛ ಭಾರತ ಕಾರ್ಯಕ್ರಮ ನಡೆಸಲಾಯಿತು. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಮುಖಂಡರು, ಕಾರ್ಯಕರ್ತರು ಸ್ವಚ್ಛತಾ ಕಾರ್ಯದಲ್ಲಿ ಇದ್ದರು.

## ನಾನು, ಶಿವಕುಮಾರ್ ಒರಿಜಿನಲ್ ಜೋಡೆತ್ತುಗಳು: ಡಾ.ಪರಮೇಶ್ವರ್

**ಕೊರಟಗೆರೆ:** ನಾನು ಮತ್ತು ಡಿಕೆ ಶಿವಕುಮಾರ್ ಮೂಲ ಕಾಂಗ್ರೆಸ್‌ನ ಒರಿಜಿನಲ್ ಜೋಡೆತ್ತುಗಳು ಅವರು ಸಿಎಂ ನಾನು ಡಿಸಿಎಂ ನಾವು ರಾಜ್ಯದಲ್ಲಿ ಬದಲಾವಣೆ ಮಾಡುತ್ತೇವೆ. ಪಕ್ಷ ಮತ್ತು ರಾಜ್ಯ ಹಿತವನ್ನು ನಾವು ಎಂದೂ ಮರೆಯುವುದಿಲ್ಲ ಎಂದು ಡಿಸಿಎಂ ಡಾ.ಜಿ ಪರಮೇಶ್ವರ್ ತಿಳಿಸಿದರು. ಕೊರಟಗೆರೆ ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಅಭಿನಂದನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಸಿಎಂ ಓರ್ವ ಸಾಮಾನ್ಯ ಕಾರ್ಯಕರ್ತ, ಅದೇ ರೀತಿ ಬಿ.ಕೆ ಹರಿಪ್ರಸಾದ್ ಮತ್ತು ನಾನೂ ಸಹ ಸಾಮಾನ್ಯ ಕಾರ್ಯಕರ್ತರೇ ನಾವು ಕಟ್ಟಾ ಕಾಂಗ್ರೆಸಿಗರು ನಮ್ಮನ್ನು ನಮ್ಮ ಪಕ್ಷ ಗುರುತಿಸಿ ಮೂವರಿಗೂ ಗುರುತ್ತರ ಜವಾಬ್ದಾರಿ ನೀಡಿದೆ. ನಮ್ಮದು ಮುಂದುರಿದ ಸರ್ಕಾರ ನಿರ್ಗಮಿತ ಸಿಎಂ ಸಿದ್ದರಾಮಯ್ಯ,



3 ವರ್ಷ ಉತ್ತಮ ಆಡಳಿತವನ್ನು ನೀಡಿ ಕಾಂಗ್ರೆಸ್ ಸಿದ್ದಾಂತಕ್ಕೆ, ಹೈ ಕಮಾಂಡ್ ತೀರ್ಮಾನಕ್ಕೆ ರಾಜಿನಾಮೆ ನೀಡಿದ್ದಾರೆ. ಅವರನ್ನು ಗೌರವಿಸುತ್ತೇನೆ.

ಈ ಹಿಂದೆ ಸರ್ಕಾರದ ಎಲ್ಲಾ ಹಳೆ ಯೋಜನೆಗಳನ್ನು ಮುಂದುವರಿಸುತ್ತಾ ಹಲವು ಹೊಸ ಜನಪರ ಯೋಜನೆಗಳನ್ನು ರೂಪಿಸುತ್ತೇವೆ ಎಂದರು. ನಾನು ಮತ್ತು ಸಿಎಂ ಇಬ್ಬರೂ ಸೇರಿಯೇ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಜೋಡೆತ್ತುಗಳಾಗಿ ನಾವು ರಾಜ್ಯವನ್ನು ಮುನ್ನಡೆಸುತ್ತೇವೆ. ಶಿವಕುಮಾರ್ ಅವರಿಗೂ ಅಪಾರ ಅನುಭವಿದೆ. ಈಗಾಗಲೇ ಅಧಿಕಾರಿಗಳಿಗೆ ಶಿಸ್ತಿನ ಪಾಠವನ್ನು ತಿಳಿಸಿದ್ದಾರೆ. ಸರ್ಕಾರಿ ನೌಕರರಾಗಿ ಜನಪರ ಕೆಲಸವನ್ನು ಮಾಡುವಂತೆ ತಾಕೀತು ಮಾಡಿದ್ದಾರೆ. ಜನರ ಸಂಪರ್ಕಕ್ಕೆ ಬರದ ಅಧಿಕಾರಿಗಳಿಗೆ ಗೇಟ್ ಪಾಸ್ ನೀಡುವ ಎಚ್ಚರಿಗೆ ನೀಡಿದ್ದು ಆಡಳಿತದಲ್ಲಿ ಇದೊಂದು ದೊಡ್ಡ ಸಂಚಲವನ್ನು ಸೃಷ್ಟಿಸಲಿದೆ ಎಂದು ಹೇಳಿದರು.

### ಕಿರುಸುದ್ದಿ

## ಕಲುಷಿತ ಆಹಾರ: 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

**ಬೆಳಗಾವಿ:** ಬೆಳಗಾವಿಯ ಮಚ್ಚೆ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ-6ರಲ್ಲಿ ಕಲುಷಿತ ಆಹಾರ ಸೇವಿಸಿದ ಪರಿಣಾಮ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ಬೆಳಕಿಗೆ ಬಂದಿದೆ. ಘಟನೆಯ ಬಳಿಕ ವಾರ್ಡನ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ವಿದ್ಯಾರ್ಥಿಗಳು ಶನಿವಾರ ತಡರಾತ್ರಿ ವಸತಿ ನಿಲಯದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು. ಶನಿವಾರ ರಾತ್ರಿ ಹಾಸ್ಟೆಲ್‌ನಲ್ಲಿ ನೀಡಲಾದ ಆಹಾರ ಸೇವಿಸಿದ ಕೆಲವೇ ಸಮಯದಲ್ಲಿ ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತೀವ್ರ ಹೊಟ್ಟೆನೋವು, ವಾಂತಿ ಹಾಗೂ ಅಸ್ವಸ್ಥತೆ ಕಾಣಿಸಿಕೊಂಡಿದೆ. ವಿದ್ಯಾರ್ಥಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿ ವೈದ್ಯಕೀಯ ನೆರವು ಪಡೆದಿದ್ದಾರೆ. ಆದರೆ, ಇಷ್ಟೊಂದು ಗಂಭೀರ ಘಟನೆ ನಡೆದಿದ್ದರೂ ಹಾಸ್ಟೆಲ್ ವಾರ್ಡನ್ ಅಥವಾ ಸಮಾಜ ಕಲ್ಯಾಣ ಇಲಾಖೆಯ ಯಾವುದೇ ಹಿರಿಯ ಅಧಿಕಾರಿಗಳು ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಲು ಸ್ಥಳಕ್ಕೆ ಆಗಮಿಸಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉಡಾಫೆಯ ಧೋರಣೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಹಾಸ್ಟೆಲ್ ಆವರಣದಲ್ಲೇ ಧರಣಿ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

## ಲೈಂಗಿಕ ಕಿರುಕುಳ: ವ್ಯಕ್ತಿ ಕೊಲೆ

**ಬಳ್ಳಾರಿ:** ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿದ ಘಟನೆ ಸಮೀಪದ ಮೋಕ ಗ್ರಾಮದ ಕಾಲುವೆ ಬಳಿ ನಡೆದಿದೆ. ನೆರೆಯ ಆಂಧ್ರಪ್ರದೇಶದ ಬಲಗುಡ್ಡ ಗ್ರಾಮದ ಬಸವನಗೌಡ ಪಾಟೀಲ್(27) ಕೊಲೆಯಾದ ಯುವಕ. ನಗರದ ಖಾಸಗಿ ಲ್ಯಾಬ್‌ನಲ್ಲಿ ಬಸವನಗೌಡ ಪಾಟೀಲ್ ಕೆಲಸ ನಿರ್ವಹಿಸುತ್ತಿದ್ದ, ತಾಲೂಕಿನ ಎಂ.ಗೋನಾಳ ಗ್ರಾಮದ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ. ಬೇಸತ್ತ ಮಹಿಳೆ ತಮ್ಮ ಸಹೋದರ, ಸಂಬಂಧಿಕರಿಗೆ ಮಾಹಿತಿ ಕೊಲೆ ಮಾಡಿದ್ದಾಳೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಮೋಕ ಪೊಲೀಸ್ ಠಾಣೆ ಅಧಿಕಾರಿಗಳು ತನಿಖೆ ನಡೆಸಿದ್ದು, ವೈ.ದೊಡ್ಡ ಬಸವನಗೌಡ, ಶ್ವೇತಾ, ವಿಜಯ್ ಎನ್ನುವ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

## ಮಗನನ್ನೇ ಕದ್ದೊಯ್ದ ತಂದೆ: ತಾಯಿಯಿಂದ ದೂರು

**ಮಡಿಕೇರಿ:** ತಂದೆಯೇ ತನ್ನ ಮಗುವನ್ನು ಅಪಹರಿಸಿರುವ ಆರೋಪ ಕೇಳಿ ಬಂದಿದೆ. ಮೂರ್ನಾಡಿನಲ್ಲಿ ಜೂ.10ರಂದು ಈ ಘಟನೆ ನಡೆದಿದ್ದು, ಜಗಳವಾಡಿಕೊಂಡು ಗಂಡನ ಮನೆ ಬಿಟ್ಟು ತಾಯಿ ಮನೆಯಲ್ಲಿದ್ದ ಭವ್ಯಾ ಎಂಬವರ ಐದು ವರ್ಷದ ಮಗುವನ್ನು ಆಕೆಯ ಗಂಡ ತಿಮ್ಮಯ್ಯ ಕಾರಿನಲ್ಲಿ ಅಪಹರಿಸಿರುವುದಾಗಿ ಹೇಳಲಾಗಿದೆ. ಈ ಸಂಬಂಧ ಭವ್ಯಾ ಮೂರ್ನಾಡು ಉಪ ಠಾಣೆಗೆ ದೂರು ನೀಡಿದ್ದಾರೆ. ಮಡಿಕೇರಿ ತಾಲೂಕಿನ ಕಟ್ಟೆಮಾಡು ಗ್ರಾಮದ ತಿಮ್ಮಯ್ಯ ಎಂಬವರೊಂದಿಗೆ 6 ವರ್ಷಗಳ ಹಿಂದೆ ಕಾಂತೂರಿನ ಭವ್ಯಾ ಅವರ ವಿವಾಹವಾಗಿತ್ತು. ಗಂಡು ಮಗುವೂ ಜನಿಸಿತ್ತು. ಅದಾದ ಬಳಿಕ ಕ್ರಮೇಣ ಇವರ ಸಂಸಾರದಲ್ಲಿ ಬಿರುಕು ಮೂಡಿದ್ದು, ಯಾವಾಗಲೂ ಮದ್ಯಪಾನ ಮಾಡಿ ಮನೆಯಲ್ಲೇ ಇರುತ್ತಿದ್ದ ತಿಮ್ಮಯ್ಯನಿಗೆ ತಾನು ದುಡಿದು ತಂದ ಸಂಬಳವನ್ನೆಲ್ಲಾ ನೀಡಬೇಕಾಗಿತ್ತು. ಅಲ್ಲದೆ, ಮಗುವಿನ ಬಗ್ಗೆಯೂ ಆತ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಹಲ್ಲೆ ಮಾಡುತ್ತಿದ್ದ ಮತ್ತು ಮಗುವಿಗೂ ಜೀವ ಬೆದರಿಕೆ ಹಾಕುತ್ತಿದ್ದ ಎಂದು ಭವ್ಯಾ ಅವರ ಆರೋಪವಾಗಿದೆ.

### ರೈಸ್ ಕಾನ್‌ಕ್ಲೇವ್ ಸಮಾರೋಪದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

# ನಾವೀನ್ಯತೆಗೆ ಉತ್ತೇಜನ

**ಬೆಂಗಳೂರು:** ನಾವೀನ್ಯತೆ-ಚಾಲಿತ ಉತ್ಪಾದನೆ, ಸ್ಥಳೀಯ ತಂತ್ರಜ್ಞಾನಗಳು ಮತ್ತು ಉದ್ಯಮಶೀಲತೆಯ ಮೂಲಕ ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಬೇಕೆಂದು ನಾವೀನ್ಯಕಾರರು, ಉದ್ಯಮಿಗಳು ಮತ್ತು ಸಂಶೋಧಕರಿಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕರೆ ನೀಡಿದರು.

ರಾಷ್ಟ್ರೀಯ ಪ್ರಾದೇಶಿಕ ವಿಜ್ಞಾನ ಪ್ರಯೋಗಾಲಯ, ಸಿಎಸ್‌ಐಆರ್-ಫೋರ್ತ್ ಪ್ಯಾರಾಡೈಮ್ ಇನ್ ಸ್ಟಿಟ್ಯೂಟ್ ಮತ್ತು ಸಿಎಸ್‌ಐಆರ್-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಸಂಯುಕ್ತ ಆಶ್ರಯದಲ್ಲಿ ಶನಿವಾರ ವಿ.ಎ. ಘಾಟಗೆ ಕನ್ವೆಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡ ರೈಸ್ ಕಾನ್‌ಕ್ಲೇವ್ 2026 ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತವು ವೈಜ್ಞಾನಿಕ ಪ್ರಗತಿ, ತಾಂತ್ರಿಕ ನಾವೀನ್ಯತೆ ಮತ್ತು ಯುವ ಜನತೆಯ ಆಕಾಂಕ್ಷೆಗಳಿಂದ ಚಾಲಿತವಾಗಿರುವ ಪರಿವರ್ತನಾತ್ಮಕ ಹಂತಕ್ಕೆ ಸಾಕ್ಷಿಯಾಗುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವ, ಉತ್ಪಾದನಾ ಸಾಮರ್ಥ್ಯಗಳನ್ನು ವಿಸ್ತರಿಸುವ ಮತ್ತು ನಾವೀನ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವ ಅಗತ್ಯವಾಗಿದೆ.

ರಾಷ್ಟ್ರೀಯ ಆದ್ಯತೆಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಭಾರತದೊಳಗೆ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ಪರಿಹಾರಗಳ ಅಗತ್ಯವಿದೆ ಎಂದರು. ಭಾರತವನ್ನು ಜಾಗತಿಕ ನಾವೀನ್ಯತೆಯ ಕೇಂದ್ರವನ್ನಾಗಿ ಮಾಡಲು ಸಂಶೋಧನೆ ಮತ್ತು ಉದ್ಯಮ ಒಟ್ಟಾಗಿ ಕೆಲಸ ಮಾಡುವ ಅಗತ್ಯವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.



**ವಿಕಸಿತ ಭಾರತಕ್ಕೆ ನಾವೀನ್ಯತೆ ಪಾತ್ರ ಅನನ್ಯ**

**ವಿಕಸಿತ ಭಾರತ 2047ರ ಗುರಿ ತಲುಪಲು ಕೃಷಿ ಆಹಾರ ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಪಾತ್ರ ಅತಿ ದೊಡ್ಡದಾಗಿದೆ. ತಂತ್ರಜ್ಞಾನಗಳು ಮಾರುಕಟ್ಟೆಯನ್ನು ತಲುಪಿ ಸಾಮಾನ್ಯ ಜನರ ಜೀವನವನ್ನು ಸುಗಮಗೊಳಿಸಬೇಕು. ಈ ನಿಟ್ಟಿನಲ್ಲಿ ಸಿಎಸ್‌ಐಆರ್ ಸಂಸ್ಥೆಗಳ ಕೊಡುಗೆ ಅತ್ಯಂತ ಶ್ಲಾಘನೀಯ.**

> **ವೈಜ್ಞಾನಿಕ ಆವಿಷ್ಕಾರಗಳನ್ನು ತಂತ್ರಜ್ಞಾನಗಳು, ಉದ್ಯಮಗಳು ಮತ್ತು ಸಾಮಾಜಿಕ ಪ್ರಯೋಜನಗಳಾಗಿ ಪರಿವರ್ತಿಸಲು ಅನುಕೂಲವಾಗುವಂತಹ ಪೂರಕ ಪರಿಸರ ವ್ಯವಸ್ಥೆಯ ಅಗತ್ಯವಾಗಿದೆ ಎಂದು ಹೇಳಿದರು.**
> ■ **ಡಾ.ಗಿರಿಧರ್ ಪರ್ವತಮ್, ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ನಿರ್ದೇಶಕ**

ಶನಿವಾರ ಹಾಗೂ ಭಾನುವಾರ ನಡೆದ ರೈಸ್ ಕಾನ್‌ಕ್ಲೇವ್‌ನಲ್ಲಿ 60ಕ್ಕೂ ಹೆಚ್ಚಿನ ನವೋದ್ಯಮವಿತ್ತು. ಅದರಲ್ಲಿ ಪ್ರಮುಖವಾಗಿ ವಾಣಿಜ್ಯ ಪೈಲಟ್ ಪರವಾನಗಿಗಾಗಿ ದೇಶಿಯವಾಗಿ ವಿನ್ಯಾಸಗೊಳಿಸಲಾದ ತರಬೇತಿ ವಿಮಾನ ಹಂಸ-3, ಹೈ ಆಲ್ಟಿಟ್ಯೂಡ್ ಪ್ಲಾಟ್‌ಫಾರ್ಮ್ ಎಂಬ ನಿರಂತರ ಕಣ್ಗಾವಲು ನಡೆಸಲು ಸೌರಶಕ್ತಿಯಿಂದ ಚಲಿಸುವ ಡ್ರೋನ್ ತಂತ್ರಜ್ಞಾನ, ಚಂದ್ರಯಾನ -4 ಮಾದರಿ, ಅಗ್ನಿಶಾಮಕ ಡ್ರೋನ್ ಮುಂತಾದವುಗಳ ಗಮನ ಸೆಳೆಯಿತು.

ಇಸ್ರೋ ಅಧ್ಯಕ್ಷ ಡಾ.ನಾರಾಯಣನ್, ಸಿಎಸ್‌ಐಆರ್ - ಎನ್‌ಎಎಲ್ ನಿರ್ದೇಶಕರಾದ ಅಭಯ್ ಪಾಸ್ಲೇಕರ್, ಸಿಎಸ್‌ಐಆರ್ - ಎಚ್‌ಪಿಐ ನಿರ್ದೇಶಕರಾದ ಡಾ ಗೋಪಾಲಕೃಷ್ಣ ಪತ್ರ ಮುಂತಾದವರಿದ್ದರು.

## ವಿಕಸಿತ ಭಾರತಕ್ಕೆ ಎಲ್ಲರ ಕನಸು ಸಹಭಾಗಿತ್ವ ಅಗತ್ಯ

**ಬೆಂಗಳೂರು:** ವಿಕಸಿತ ಭಾರತದ ಕನಸು ಸಾಕಾರಗೊಳ್ಳಲು ಸರ್ಕಾರದ ಜತೆಗೆ ಸಮಾಜದ ಎಲ್ಲ ವಲಯಗಳ ಸಹಭಾಗಿತ್ವ ಅಗತ್ಯ ಎಂದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, 2047ರ ಅಭಿವೃದ್ಧಿ ಗುರಿ ಸಾಧನೆಗೆ ನಾವೀನ್ಯತೆ ಮತ್ತು ಸಾಮೂಹಿಕ ಪ್ರಯತ್ನ ಅಗತ್ಯ ಎಂದರು.

ಪಶ್ಚಿಮ ಏಷ್ಯಾದ ಉದ್ವಿಗ್ನತೆ, ಜಾಗತಿಕ ಒತ್ತಡ, ಕಚ್ಚಾ ತೈಲ ಬೆಲೆ ಏರಿಳಿತ ಮತ್ತು ಸಾಗಣೆ ವೆಚ್ಚ ಹೆಚ್ಚಳದಂತಹ ಸಮಸ್ಯೆಗಳ ನಡುವೆಯೂ ದೇಶದ ಪೂರೈಕೆ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿರತೆ ಕಾಪಾಡಲಾಗಿದೆ. ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ, ವರ್ಷದಿಂದ ವರ್ಷಕ್ಕೆ ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಕಳೆದ ಹಣಕಾಸು ವರ್ಷದಲ್ಲಿ (2025-26) ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಪ್ರಗತಿ ದರವು ಶೇ. 7.7ಕ್ಕೆ ಏರಿಕೆಯಾಗಿದೆ. ಇದು ಅದರ ಹಿಂದಿನ ವರ್ಷ ದಾಖಲಾಗಿದ್ದ ಶೇ. 7.1ಕ್ಕಿಂತ ಗಣನೀಯ ಪ್ರಮಾಣದ ಪ್ರಗತಿ ತೋರಿಸುತ್ತದೆ. ಪ್ರಸಕ್ತ ಸಾಲಿನ ಜನವರಿ-ಮಾರ್ಚ್ ಅವಧಿಯ ನಾಲ್ಕನೇ ತ್ರೈಮಾಸಿಕದಲ್ಲಿ ಆರ್ಥಿಕತೆಯು ಶೇ. 7.8ರಷ್ಟು ಪ್ರಗತಿ ಸಾಧಿಸಿದೆ.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಪೋಲಿಯೊ: ಜೂ.25ರಂದು ಜಾಥಾ

**ಬೆಂಗಳೂರು:** ರಾಜ್ಯದಲ್ಲಿ ಜೂ.28ರಂದು ನಡೆಯಲಿರುವ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲ ಶಾಲೆಗಳಲ್ಲಿ ಜೂ. 25 ರಂದು ಪಲ್ಸ್ ಪೋಲಿಯೋ ಕುರಿತು ಜಾಗೃತಿ ಜಾಥಾ ಆಯೋಜಿಸುವಂತೆ ಹಾಗೂ ಜೂ. 28 ರಂದು ನಡೆಯಲಿರುವ ಲಸಿಕಾ ಕಾರ್ಯಕ್ರಮಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ. ಜೂ. 28ರಂದು ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಲಾಗಿದೆ. ಅಲ್ಲದೇ, ಪಾಲಕರು ತಮ್ಮ ಮೊದಲ ಕಾರ್ಯವಾಗಿ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ಇಲಾಖೆ ಮನವಿ ಮಾಡಿದೆ.

## ಕೈದಿಗಳಿಂದ ವಾರ್ಡನ್ ಮೇಲೆ ಹಲ್ಲೆ

**ಧಾರವಾಡ:** ಒಂದಿಲ್ಲೊಂದು ವಿವಾದಗಳಿಂದ ಸುದ್ದಿಯಲ್ಲಿರುವ ಧಾರವಾಡದ ಕೇಂದ್ರ ಕಾರಾಗೃಹದಲ್ಲಿ ಇದೀಗ ಮತ್ತೊಂದು ಘಟನೆ ನಡೆದಿದೆ. ಜೈಲಿನ ವಾರ್ಡರ್ ಮೇಲೆ ವಿಚಾರಣಾಧೀನ ಕೈದಿಗಳು ಗುಂಪಾಗಿಯೇ ಹಲ್ಲೆ ನಡೆಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಿರಣ ಘೋರ್ಪಡೆ ಎಂಬುವರೇ ಹಲ್ಲೆಗೆ ಒಳಗಾದ ಕೇಂದ್ರ ಕಾರಾಗೃಹದ ವಾರ್ಡನ್.



ಹಲ್ಲೆಯಿಂದಾಗಿ ಕಿರಣ ಅವರ ಮುಖ, ತಲೆ ಭಾಗಕ್ಕೆ ತೀವ್ರ ಪೆಟ್ಟಾಗಿದೆ.

**ಘಟನೆ ಹಿನ್ನೆಲೆ?:** ಶಿವಮೊಗ್ಗದ ಬಜರಂಗದಳದ ಕಾರ್ಯಕರ್ತರ ಹರ್ಷ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಕಾರಾಗೃಹ ಸೇರಿದ ರಿಹಾನ್, ಕಾಶಿಫ್ ಮತ್ತು ಉಡುಪಿ ಡ್ರಗ್ಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ಫೈಜಲ್ ಎಂಬ ಮೂವರು ಸೇರಿಯೇ ವಾರ್ಡನ್ ಕಿರಣ ಮೇಲೆ ಹಲ್ಲೆ ಮಾಡಿದ್ದಾರೆ.

» ವಿಚಾರಣಾಧೀನ ಕೈದಿಗಳ ಉದ್ಧಟತನ
» ವಾರ್ಡನ್ ಸ್ಥಿತಿ ಗಂಭೀರ

ವಿಚಾರಣಾಧೀನ ಕೈದಿಗಳ ದುರ್ನಡತೆ ಹಿನ್ನೆಲೆ ಅವರನ್ನು ಬಿಗಿ ಭದ್ರತಾ ಸೆಲ್‌ನಲ್ಲಿ ಇರಿಸಿತ್ತು. ಹೊರಗಡೆ ಬಿಡುವಂತೆ ಸಿಬ್ಬಂದಿಗೆ ಪೀಡಿಸುತ್ತಿದ್ದು, ಜೂ.11ಕ್ಕೆ ತಮ್ಮನ್ನು ಹೊರಗಡೆ ಬಿಡುವಂತೆ ಒತ್ತಾಯಿಸಿದಾಗ ವಾರ್ಡರ್ ಕಿರಣ ಘೋರ್ಪಡೆ ನಿರಾಕರಣೆ ಮಾಡಿದ್ದಾರೆ. ಕುಪಿತಗೊಂಡ ಕೈದಿಗಳು ಸೆಲ್ ಗೋಡೆ ಜಿಗಿದು ಬಂದು ವಾರ್ಡನ್ ಮೇಲೆ ಲಾಠಿ ಮೂಲಕ ಮನಸೋ ಇಚ್ಛೆ ಹಲ್ಲೆ ಮಾಡಿದ್ದು, ಹಲ್ಲೆ ಮಾಡಿದ ಮೂವರು ಆರೋಪಿಗಳ ವಿರುದ್ಧವೂ ಧಾರವಾಡ ಉಪನಗರ ಠಾಣೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ದೂರು ದಾಖಲಾಗಿದೆ.

## 3ನೇ ಸಿಎಂ ಬಂದರೂ ಅಚ್ಚರಿಯಿಲ್ಲ: ಬಿವೈವಿ

**ಮಡಿಕೇರಿ:** ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಯಾವುದೇ ಸಂದರ್ಭ ಉರುಳುವ ಸಾಧ್ಯತೆ ಇದ್ದು, ಮೂರನೇ ಮುಖ್ಯಮಂತ್ರಿ ಅಧಿಕಾರಕ್ಕೇರಿದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದರು. ಶನಿವಾರಸಂತೆ ಸಮೀಪದ ಖಾಸಗಿ ರೆಸಾರ್ಟ್ ಒಂದರಲ್ಲಿ ನಡೆದ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಕಾಂಗ್ರೆಸ್ ಸರಕಾರದಲ್ಲಿ ಸಚಿವ ಸ್ಥಾನ ಪಡೆಯಲು ಪೇಮೆಂಟ್ ಮತ್ತು ಮ್ಯಾನೇಜ್‌ಮೆಂಟ್ ಕೋಟಾ ಎಂದು ಕಾಂಗ್ರೆಸ್ ವಿಂಗಡಣೆ ಮಾಡಿದೆ. ಅದರಂತೆ ಈಗಾಗಲೇ ಅನೇಕ ಶಾಸಕರು ದೆಹಲಿಯಲ್ಲಿ ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ. ಈ ಎರಡು ಕೋಟಾದಡಿ ಯಾವ ಶಾಸಕರು ಬೇಕಾದರೂ ಸಚಿವರಾಗಬಹುದು ಎಂದು ಅವರು ಟೀಕಿಸಿದರು. ಡಿ.ಕೆ.ಶಿವಕುಮಾರ್ ಅವರ ಬಾಯಿಯಲ್ಲಿ ರೌಡಿಗಳನ್ನು ಮಟ್ಟ ಹಾಕುವ ಹೇಳಿಕೆ ಬಂದಿರುವುದು ಅಚ್ಚರಿ ಮೂಡಿಸಿದೆ ಎಂದರು. ರಾಜ್ಯದ ಬೊಕ್ಕಸ ಬರಿದಾಗಿದ್ದು, ಈ ಸರಕಾರದಿಂದ ರಾಜ್ಯದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂದು ನುಡಿದರು.

## ಟೌನ್‌ಶಿಪ್ ಹೆಸರಲ್ಲಿ ಹಣ ಲೂಟಿ ಹುನ್ನಾರ: ಎಚ್‌ಡಿಕೆ

**ಮಂಡ್ಯ:** ಬಿಡದಿ ಟೌನ್‌ಶಿಪ್ ಯೋಜನೆ ಸರ್ಕಾರಿ ರಿಯಲ್ ಎಸ್ಟೇಟ್ ಯೋಜನೆಯಾಗಿದೆ. ಇದು ಸಂಪೂರ್ಣವಾಗಿ ಹಣ ಲೂಟಿ ಮಾಡುವ ಯೋಚನೆಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ನಾಡಿನ ಹಿತಾಸಕ್ತಿ ಅಡಗಿಲ್ಲ. ಭೂ ಮಾಫಿಯ ಹಾಗೂ ಭೂ ಲೂಟಿಕೋರರಿಗೆ ಲಾಭ ಮಾಡಿಕೊಡಲು ಇದನ್ನು ರೂಪಿಸಲಾಗಿದೆ.

ಹೀಗಾಗಿ ಇದನ್ನು ನಾನು ಸರಕಾರಿ ರಿಯಲ್ ಎಸ್ಟೇಟ್ ದಂಧೆ ಎಂದು ಕರೆಯುತ್ತೇನೆ ಎಂದು ಹೇಳಿದರು. ರಸ್ತೆಗಳಲ್ಲಿ ಮೊಣಕಾಲುದ್ದ ಗುಂಡಿಗಳು ಬಿದ್ದು ವಾಹನ ಸಂಚಾರ ದೊಡ್ಡ ಪ್ರಯಾಸವಾಗಿದೆ. ಅದೇನೋ ಬ್ರ್ಯಾಂಡ್ ಬೆಂಗಳೂರು ಎಂದು ಹೇಳುತ್ತಿದ್ದರಲ್ಲ, ಅದನ್ನು ಮಾಡುವುದು ಬಿಟ್ಟು ಬಿಡದಿ ರೈತರ ಬದುಕಿಗೆ ಬೆಂಕಿ ಹಾಕಲು ಹೊರಟಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದರು.

ಬೆಂಗಳೂರು ಅಭಿವೃದ್ಧಿಗೆ ಎಳ್ಳಷ್ಟು ಉಪಯೋಗ ಆಗದ ಈ ಯೋಜನೆಯನ್ನು ತಮ್ಮ ಸ್ವಾರ್ಥಕ್ಕಾಗಿ, ರಿಯಲ್ ಎಸ್ಟೇಟ್ ಮಾಫಿಯಾ ದೊಂದಿಗೆ ಕೈಜೋಡಿಸಿ ರೈತರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದ್ದಾರೆ. ಈ ಹಿನ್ನೆಯಲ್ಲಿ ನಮ್ಮ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ. ಅವರ ಜತೆ ನಿಂತು ಕಾನೂನು ಹೋರಾಟ ನಡೆಸುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.



> **ನಾನು ಚಿಂತನೆ ಮಾಡಿದ್ದು 2006ರಲ್ಲಿ, ಈಗ ನಾವು ಇರುವುದು 2026. 20 ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿದೆ, ಎಷ್ಟೊಂದು ಅಭಿವೃದ್ಧಿಯಾಗಿದೆ. ಇಷ್ಟು ವರ್ಷಗಳಲ್ಲಿ ಏನೆಲ್ಲಾ ಆಯಿತು ಎನ್ನುವುದನ್ನು ಈ ಸರ್ಕಾರ ಅರ್ಥ ಮಾಡಿಕೊಳ್ಳಬೇಕು.**
> ■ **ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

# ಯುವ ಸಂಕಲ್ಪದ ಅನುಪಮ ಉದಾಹರಣೆ-ಆನಂದಪುರ ಭಾಲಿ

▸ ಸುಬ್ರಾಯ ನಂದೋಡಿ

ಹರಿಯಾಣದ ರೋಹ್ತಕ್ ಜಿಲ್ಲೆಯ ಈ ಗ್ರಾಮವು ಒಂದು ಕಾಲದಲ್ಲಿ ರಾಜಕೀಯ ದ್ವೇಷದ ನೆಲೆಯಾಗಿತ್ತು. ಪರಿಸ್ಥಿತಿ ಹೇಗಿತ್ತು ಎಂದರೆ ಗ್ರಾಮದ ಹೆಚ್ಚಿನ ಯುವಕರಿಗೆ ಜೈಲು ಮತ್ತು ಪೊಲೀಸ್ ಠಾಣೆಗಳ ಪರಿಚಯ ಚೆನ್ನಾಗಿತ್ತು. ಬಸ್ ಕಂಡಕ್ಟರ್ ಇವರನ್ನು ಬಸ್ಸಿನಲ್ಲಿ ಕೂರಿಸಿಕೊಳ್ಳುತ್ತಿರಲಿಲ್ಲ, ಅವರು ಕುಳಿತರೂ ಟಿಕೆಟ್ ಹಣ ಕೇಳಲು ಹೆದರುತ್ತಿದ್ದರು.

ಆದರೆ ಇಂದು ಇಲ್ಲಿನ ಕೆಲವು ಯುವಕರ ಸಾರ್ಥಕ ಪ್ರಯತ್ನದ ಫಲವಾಗಿ ಹಳ್ಳಿಯ ಚಿತ್ರಣವೇ ಬದಲಾಗಿದೆ. ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾದ ಮೂರು ಅಂತಸ್ತಿನ ಕೇಶವ ಭವನ ಮತ್ತು ಅದರಲ್ಲಿ ನಡೆಯುತ್ತಿರುವ ತಕ್ಷಶಿಲಾ ವಿದ್ಯಾ ಮಂದಿರ, ಆರ್ಯಭಟ್ಟ ಅಧ್ಯಯನ ಕೇಂದ್ರ, ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ಅಥವಾ ಹುತಾತ್ಮ ಪೈಲಟ್ ಸಂದೀಪ್ ಪಲಡವಾಲ್ ಗ್ರಂಥಾಲಯ ಇವು ಗ್ರಾಮದಲ್ಲಿನ ಬದಲಾವಣೆಯ ಕಥೆ ಹೇಳುತ್ತಿವೆ. ಭಾಲಿ ಆನಂದಪುರದ ಈ ಹೊಸ ರೂಪದ ಯಶಸ್ಸು ಹರಿಯಾಣ ಪ್ರಾಂತದ, ಪ್ರಾಂತ ಸಹಗ್ರಾಮ ವಿಕಾಸ ಪ್ರಮುಖ್ ಅನೂಪ್ ಸಿಂಗ್ ಮತ್ತು ಅವರ ಸಹಕಾರಿಗಳಿಗೆ ಸಲ್ಲುತ್ತದೆ. ಈ ಯುವಕರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಮತ್ತು ಸೇವಾಭಾರತಿಯಿಂದ ಪ್ರೇರಣೆ ದೊರೆತಾಗ ಬದಲಾವಣೆಯ ತಂಗಾಳಿ ಬೀಸಲಾರಂಭಿಸಿತು. ಹಳ್ಳಿಯ ಬಯಲುಗಳಲ್ಲಿ ಹಿರಿಯರಿಗೆ ಪತ್ರಿಕೆ ಹಂಚುವ ಮೂಲಕ ಪ್ರಾರಂಭಿಸಿದ ಸೇವಾ ಪ್ರಯಾಣಕ್ಕೆ ಹೊಸ ಆಯಾಮಗಳು ಸೇರುತ್ತಾ ಹೋಯಿತು ಮತ್ತು ಹುತಾತ್ಮ ಚಂದ್ರಶೇಖರ್ ಆಜಾದ್ ಸೇವಾ ಸಮಿತಿ ಜನ್ಮ ತಾಳಿತು.



ತಕ್ಷಶಿಲಾ ಅಧ್ಯಯನ ಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದ ಗ್ರಾಮದ 48 ಯುವಕರು ಇಂದು ಸರ್ಕಾರಿ ಕೆಲಸಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಸೇವಾ ಭಾರತಿಗೆ ಸಂಬಂಧಿಸಿದ ಈ ಸಂಸ್ಥೆಯ ಯಶಸ್ಸನ್ನು ನಾವು ಇದರಿಂದಲೇ ತಿಳಿಯಬಹುದು. ಹರಿಯಾಣದ ಹೆಣ್ಣುಮಕ್ಕಳು, ಕುಸ್ತಿಯಿಂದ ಹಿಡಿದು ಅಥ್ಲೆಟಿಕ್ಸ್‌ವರೆಗೆ ತಮ್ಮ ವಿಜಯ ಪತಾಕೆಯನ್ನು ದೇಶದೆಲ್ಲೆಡೆ ಹಾರಿಸಿದ್ದಾರೆ.

ಆದ್ದರಿಂದ ಭಾಲಿ ಆನಂದಪುರದ ಹೆಣ್ಣುಮಕ್ಕಳು ದುರ್ಗಾ ಕ್ರೀಡಾ ಕೇಂದ್ರದಲ್ಲಿ ತರಬೇತುದಾರರ ಮೇಲ್ವಿಚಾರಣೆಯಲ್ಲಿ ಫುಟ್ಬಾಲ್ ಮತ್ತು ಇತರ ಕ್ರೀಡೆಗಳನ್ನು ನಿಯಮಿತವಾಗಿ ಆಡುತ್ತಾರೆ. ಇದರ ಪರಿಣಾಮವಾಗಿ, ನಿಶು, ಮಂಜು ಮತ್ತು ಕಾಜಲ್ ಸೇರಿದಂತೆ 5 ಬಾಲಕಿಯರು ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದಾರೆ.

ಸೇವಾಗಾಥ
ಕಥೆ-9

ಅಲ್ಲಿನ ಪ್ರಾಂತ ಸೇವಾ ಪ್ರಮುಖರಾದ ಕೃಷ್ಣಕುಮಾರ್ ಗ್ರಾಮದ ಅಗತ್ಯತೆಗೆ ತಕ್ಕಂತೆ ಸೇವೆಯ ಹೊಸ ಆಯಾಮಗಳನ್ನು ಜೋಡಿಸುತ್ತಾ ಹೋದರು. 3ನೇ ತರಗತಿಯಿಂದ ಹನ್ನೆರಡನೇ ತರಗತಿಯ ಮಕ್ಕಳಿಗಾಗಿ, ವಿವೇಕಾನಂದ ಸಂಸ್ಕಾರ ಕೇಂದ್ರವನ್ನು 6 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿತ್ತು. ನಂತರ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಅಧ್ಯಯನ ಮಾಡಲು ಹವಾನಿಯಂತ್ರಿತ ಸಭಾಂಗಣವನ್ನು ನಿರ್ಮಿಸಲಾಯಿತು.

ಅಲ್ಲಿಗೆ ಹತ್ತಿರದ ಗ್ರಾಮಗಳಾದ ಗಡ್ಡಿ, ಖೇಡಿ, ಬನಿಯಾನಿ ಮತ್ತು ದೋಬ್‌ನಿಂದ ಯುವಕರು ಬಂದು ಓದುತ್ತಿದ್ದಾರೆ. ಹುತಾತ್ಮ ಪೈಲಟ್ ಸಂದೀಪ ಪಲಡವಾಲ್ ಗ್ರಂಥಾಲಯದಲ್ಲಿ 5000 ಪುಸ್ತಕಗಳ ಭಂಡಾರ ಗ್ರಾಮದ ವಿದ್ಯಾರ್ಥಿಗಳಿಗೆ ಪುಸ್ತಕ-ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ. ಗ್ರಂಥಾಲಯವು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಗಾಗಿ ಎಲ್ಲಾ ಪ್ರಮುಖ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಸಹ ಹೊಂದಿದೆ. ಬರೇಲಿಯ, ಸ್ಟೇಷನ್ ಮಾಸ್ಟರ್ ಮೋನು ರೋಸ್ ಅಥವಾ ಸಿಐಎಫ್‌ನ ಸಬ್ ಇನ್ಸ್‌ಪೆಕ್ಟರ್ ಸುಮಿತ್ ರೋಸ್‌ರಲ್ಲಿ ಈ ಪುಸ್ತಕಗಳು ಮತ್ತು ತಕ್ಷಶಿಲಾ ಅಧ್ಯಯನಕೇಂದ್ರವು ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಯುವಕರು, ವಯಸ್ಕರು ಮತ್ತು ಮಹಿಳೆಯರಿಗಾಗಿ ಹಲವಾರು ವರ್ಷಗಳಿಂದ ನಡೆಯುತ್ತಿರುವ ಸಂಘ ಮತ್ತು ಸಮಿತಿಯ ಶಾಖೆಯು ಗ್ರಾಮದಲ್ಲಿ ಸಾಮರಸ್ಯ ಮತ್ತು ಅಭಿವೃದ್ಧಿಯ ಹೊಸ ಕಥೆಯನ್ನು ಬರೆದಿದೆ. ಜನವರಿ 2013ರಂದು ಹುತಾತ್ಮ ಸಬ್ ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ನ್ನು ಪ್ರಾರಂಭಿಸಿದಾಗ, ಕೆಲವು ಕಂಪ್ಯೂಟರ್‌ಗಳನ್ನು ಸೇವಾಭಾರತಿಯಿಂದ ಮತ್ತು ಕೆಲವು ಗ್ರಾಮದ ಜನರೇ ನೀಡಿದರು. ಕೇಶವ ಭವನಕ್ಕೆ ಭೂಮಿಯನ್ನು ಸಹ ಪಂಚಾಯತಿಯೆ ಸಮಿತಿಗೆ ನೀಡಿತು. ಸಾವಯವ ಕೃಷಿಯನ್ನು ಉತ್ತೇಜಿಸಲು, ಬಲರಾಮ್ ಕಿಸಾನ್ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದರ ಮೂಲಕ ಮನೆಮನೆಗಳಲ್ಲಿ ಸಾವಯವ ಗೊಬ್ಬರ ತಯಾರಿಸಲು ಗ್ರಾಮದಲ್ಲಿ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಿಗಾಗಿ ನಡೆಯುತ್ತಿವ ರಾಣಿ ಲಕ್ಷ್ಮೀಬಾಯಿ ಹೊಲಿಗೆ ಕೇಂದ್ರದ ವಿಶೇಷತೆಯೆಂದರೆ, ಒಂದು ಬ್ಯಾಚ್ ಪೂರ್ಣಗೊಂಡ ನಂತರ ಅದು ಹಳ್ಳಿಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತದೆ. ಇದರಿಂದಾಗಿ ಅಲ್ಲಿನ ಎಲ್ಲಾ ಮಹಿಳೆಯರು ಸುಲಭವಾಗಿ ಹೊಲಿಗೆ ಕಲಿಯಬಹುದಾಗಿದೆ.

ಸೇವೆ ಪಡೆದವರಲ್ಲಿ ಸೇವಾ ಭಾವದ ಜಾಗೃತಿ ಮಾಡುವುದು ಸಂಘದ ಮೂಲ ಮಂತ್ರ. ಅದನ್ನು ನಾವು ಭಾಲಿ ಆನಂದಪುರದಲ್ಲಿ ನೋಡಬಹುದು. ರೈಲ್ವೆಯಲ್ಲಿ ನೌಕರಿ ಮಾಡುತ್ತಿರುವ ಸಮುಂದರ್ ಗಿಲೌಡ್ ಆಗಿರಲಿ ಅಥವಾ ಬಾಲಕಿಯರ ಕೋಚ್ ನರೇಂದ್ರ ಪಲಡ್ವಾಲ್ ಆಗಿರಲಿ, ಎಲ್ಲಾ ಯುವಕರೂ ಸಹ ಗ್ರಾಮದಲ್ಲಿ ನಡೆಯುತ್ತಿರುವ ಈ ಸೇವಾ ಕಾರ್ಯಗಳಿಗೆ ಸಮಯವನ್ನು ನೀಡುತ್ತಾರೆ. ಜಲ ಸಂರಕ್ಷಣೆಯಿಂದ ಹಿಡಿದು ವೃಕ್ಷಾರೋಪಣದವರೆಗೆ ಪ್ರತಿಯೊಂದು ಚಟುವಟಿಕೆಯಲ್ಲೂ ಗ್ರಾಮಸ್ಥರ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂದು ಈ ಸೇವಾಕಾರ್ಯಗಳ ಸೂತ್ರಧಾರ ಅನೂಪ್ ಹೇಳುತ್ತಾರೆ. ಕಳೆದ 5ವರ್ಷಗಳಿಂದ ನಡೆಯುತ್ತಿರುವ ಗ್ರಾಮೋತ್ಸವವು ವಿವಿಧ ಬಣಗಳಾಗಿ ವಿಭಜನೆಯಾಗಿದ್ದ ಭಾಲಿ ಆನಂದಪುರವನ್ನು ಒಂದುಗೂಡಿಸಿದೆ ಎಂದು ಅವರು ಹೇಳುತ್ತಾರೆ.

**ಸಂಪರ್ಕ-ಅನೂಪ್ ಸಿಂಗ್, 9034729351**

# ರಜೆ ಹಿನ್ನೆಲೆ ಮಂತ್ರಾಲಯಕ್ಕೆ ಬಂದ ಭಕ್ತರ ಮಹಾಪೂರ


**• ರಾಯಚೂರು:** ಇತ್ತೀಚೆಗೆ ಪ್ರತಿ ಎರಡನೇ ಹಾಗೂ ನಾಲ್ಕನೇ ಶನಿವಾರ, ಭಾನುವಾರಗಳಂತೆ ಈ ಎರಡನೇ ಶನಿವಾರವೂ ರಾಯರ ದರ್ಶನಕ್ಕೆಂದು ಮಂತ್ರಾಲಯಕ್ಕೆ ಭಕ್ತ ಸಾಗರ ಹರಿದು ಬಂದಿತು.



ಶನಿವಾರ ಮತ್ತು ಭಾನುವಾರ ಎರಡು ದಿನ ರಜೆ ಇರುವ ಹಿನ್ನೆಲೆ ಉತ್ತರ ಕರ್ನಾಟಕದ ಕೆಲ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಭಕ್ತರು ಆಗಮಿಸಿದ್ದು ಕಂಡುಬಂದಿದೆ. ಅತ್ಯಧಿಕ ಭಕ್ತರು ಆಗಮಿಸಿದ್ದರಿಂದ ಮಠದ ವಸತಿ ನಿಲಯಗಳು ಖಾಲಿ ಇಲ್ಲದ ಕಾರಣಕ್ಕೆ ಹಾಗೂ ಖಾಸಗಿ ವಸತಿ ನಿಲಯಗಳಲ್ಲಿ ಹೆಚ್ಚಿನ ಬಾಡಿಗೆ ಹೇಳುತ್ತಿರುವ ಕಾರಣಕ್ಕೆ ಭಕ್ತರು ಶ್ರೀಮಠದ ಮುಂದಿನ ಪ್ರಾಂಗಣ ಹಾಗೂ ಕಲ್ಯಾಣ ಮಂಟಪದಲ್ಲಿ ತಂಗುವ ಮೂಲಕ ರಾತ್ರಿ ಸಮಯ ಕಳೆದಿದ್ದಾರೆ. ಸಾಮಾನ್ಯವಾಗಿ ಗುರುವಾರ ಹೆಚ್ಚಿನ ಸಂಖ್ಯೆಯಲ್ಲಿ ರಾಯರ ದರ್ಶನಕ್ಕೆ ಭಕ್ತರು ಆಗಮಿಸುತ್ತಿದ್ದರು. ಆದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ಮಂತ್ರಾಲಯಕ್ಕೆ ಭಕ್ತರ ಸಂಖ್ಯೆ ಗಮಾರ್ಹವಾಗಿ ಏರಿಕೆ ಆಗಿದೆ.

ಶನಿವಾರ ಮಧ್ಯ ರಾತ್ರಿ ಹಾಗೂ ಬೆಳಗಿನ ಜಾವ ಮಳೆ ಆಗಿದ್ದರಿಂದ ಮಠದ ಪ್ರಾಂಗಣದಲ್ಲಿ ಮಲಗಿಕೊಂಡಿದ್ದ ಭಕ್ತರ ನಿದ್ದೆಗೆಡಿಸಿತು. ಈ ಸಮಯದಲ್ಲಿ ಭಕ್ತರು ಮಠದಲ್ಲಿನ ಕಟ್ಟಡಗಳಲ್ಲಿ ಆಶ್ರಯವನ್ನು ಪಡೆದುಕೊಂಡಿದ್ದು ಕಂಡುಬಂದಿತು. ಶ್ರೀಮಠದಲ್ಲಿ ಬೇರೆ ಧಾರ್ಮಿಕ ಸ್ಥಳಗಳಲ್ಲಿ ಒಂದೊಂದು ರೂಮಿನಲ್ಲಿ 50-100 ಜನ ತಂಗುವಂತಹ ವ್ಯವಸ್ಥೆಯನ್ನು ಶ್ರೀಮಠ ಮಾಡಬೇಕೆಂದು ಭಕ್ತರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದು ಕಂಡುಬಂದಿತು.

ರಾಮ ಬಾಣ




# ಕೊಲ್ಲೂರು ದೇವಿ ದರ್ಶನ ಪಡೆದ ಅನಂತ್ ಅಂಬಾನಿ

**• ಬೈಂದೂರು:** ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಭೇಟಿ ನೀಡಿದ್ದಾರೆ. ಹಲವು ದೇವಸ್ಥಾನಗಳಿಗೆ ಭೇಟಿ ನೀಡುತ್ತಿರುವ ಅನಂತ್ ಅಂಬಾನಿ ಇದೀಗ ಕೊಲ್ಲೂರಿನಲ್ಲಿ ದೇವಿ ದರ್ಶನ ಪಡೆದಿದ್ದಾರೆ.



ಇತ್ತೀಚೆಗೆ ತಮಿಳುನಾಡು ಮುಖ್ಯಮಂತ್ರಿ ಜೊಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದು ಮರಳಿದ್ದರು. ಇದರ ಬೆನ್ನಲ್ಲೇ ಇದೀಗ ರಿಲಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಭೇಟಿ ನೀಡಿದ್ದಾರೆ. ಮೂಕಾಂಬಿಕೆ ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಅಂಬಾನಿ ಕುಟುಂಬದ ಗುರೂಜಿಯ ಜೊತೆ ಆಗಮಿಸಿ ದರ್ಶನ ಅಂಬಾನಿ ಕುಟುಂಬದ ಗುರೂಜಿ ಜೊತೆ ಕೊಲ್ಲೂರು ಮೂಕಾಂಬಿಕೆ ದೇವಿ ದರ್ಶನಕ್ಕೆ ಆಗಮಿಸಿದ್ದರು.

ಜೂ. 13ರಂದು ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದರ್ಶನಕ್ಕೆ ದಿನಾಂಕ ನಿಗದಿಯಾಗಿತ್ತು. ಆದರೆ ಮುಂಬೈನಲ್ಲಿ ಭಾರೀ ಮಳೆ ಕಾರಣದಿಂದ ಪ್ರವಾಸ ಮುಂದೂಡಲಾಗಿತ್ತು. ಹಲವು ದೇವಸ್ಥಾನ ದರ್ಶನ ಮಾಡುತ್ತಿರುವ ಅನಂತ್ ಅಂಬಾನಿಗೆ ದೇವರ ಮೇಲೆ ಅಪಾರ ನಂಬಿಕೆ ಹಾಗೂ ಭಕ್ತಿ ಇದೆ. ಅನಂತ್ ಅಂಬಾನಿ ಸತತವಾಗಿ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಇತ್ತೀಚೆಗಷ್ಟೇ ಕೇರಳಕ್ಕೆ ತೆರಳಿ ಹಲವು ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಇನ್ನು ತಿರುಪತಿಗೆ ಕುಟುಂಬ ಸಮೇತ ತೆರಳಿ ಪೂಜೆ ಸಲ್ಲಿಸಿದ್ದರು. ಇದೀಗ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದಿದ್ದಾರೆ.

## ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಧರ್ಮ ಎಂದರೆ ಪೂಜಾ ಪದ್ಧತಿಯಲ್ಲ, ಅದು ಜೀವನ ಪದ್ಧತಿ.ಜಗತ್ತಿನ ಎಲ್ಲ ಜನಗಳಿಗೆ ಮಾರ್ಗದರ್ಶನ ಮಾಡುವ ವಿಚಾರಗಳು ಭಾರತದಲ್ಲಿವೆ, ಅದುವೇ ಧರ್ಮ -ಪಿ.ಎಸ್.ಪ್ರಕಾಶ್

**- ಪೂಜೆಯೇ ಧರ್ಮವಾಗಿದ್ದಲ್ಲಿ ಭಾರತದಲ್ಲಿ ರಾಮಾಯಣದ ಬದಲು ರಾವಣಾಯಣವನ್ನು ಓದಬೇಕಿತ್ತು, ಏಕೆಂದರೆ ರಾವಣ ಪರಮ ಭಕ್ತಿಯಿಂದ ಶಿವನ ಪೂಜೆಯನ್ನು ದಿನಾ ಮಾಡುತ್ತಿದ್ದ!**

## ದಿನ ಭವಿಷ್ಯ

**ಮೇಷ** ವಿರಾಮ ಬಯಸಿದರೂ ಕೆಲಸದ ಒತ್ತಡ ಬಾಧಿಸುವುದು. ಆಪ್ತರ ಸಂಗಡ ವಾಗ್ವಾದಕ್ಕೆ ಇಳಿಯಬೇಡಿ. ನೀವು ಮೌನವಾಗಿ ಉಳಿಯಿರಿ.

**ವೃಷಭ** ಗತದಿನಗಳ ಬಗ್ಗೆ ಅತಿಯಾಗಿ ಚಿಂತಿಸದಿರಿ. ಈಗ ಮಾಡಬೇಕಾದ ಕೆಲಸಕ್ಕೆ ಆದ್ಯತೆ ಕೊಡಿ. ಕೆಲ ವಿಷಯಗಳಿಗೆ ಅತಿರೇಕದ ಪ್ರತಿಕ್ರಿಯೆ ತೋರುತ್ತೀರಿ.

**ಮಿಥುನ** ಗುಣಾತ್ಮಕ ಸಂಕೇತಗಳಿಂದಲೇ ಇಂದಿನ ದಿನ ಆರಂಭ. ನಿಮಗೆ ಪೂರಕ ಪರಿಸ್ಥಿತಿ. ಆರ್ಥಿಕ ಚಿಂತೆ ನಿವಾರಣೆ. ಆತ್ಮೀಯರ ಸಂಗಡ ಖುಷಿ ಪಡುವಿರಿ.

**ಕಟಕ** ನಿಮ್ಮ ಜತೆಗೆ ಅತಿಯಾದ ಸಲುಗೆ ಸಾಧಿಸುವವರ ಕುರಿತು ಎಚ್ಚರವಿರಲಿ. ಮನೆಯಲ್ಲಿ ಸೌಹಾರ್ದ ವಾತಾವರಣ, ನೆಮ್ಮದಿ.

**ಸಿಂಹ** ಕೆಲವರನ್ನು ಕುರುಡಾಗಿ ನಂಬದಿರಿ. ಅವರಿಂದಲೇ ಮೋಸ ಹೋಗುವಿರಿ. ಕೆಲಸದ ಒತ್ತಡದಿಂದಾಗಿ ವಿಶ್ರಾಂತಿಗೆ ಆಸ್ಪದ ಸಿಗಲಾರದು.

**ಕನ್ಯಾ** ಯೋಜನೆ ಹಾಕಿ ಕೆಲಸ ನಿರ್ವಹಿಸಿ. ಇಲ್ಲವಾದರೆ ಗೊಂದಲ ಎದುರಿಸುವಿರಿ. ಆರೋಗ್ಯ ಸ್ಥಿರ. ಹಣದ ಚಿಂತೆಯೊಂದು ಪರಿಹಾರ.

**ತುಲಾ** ಜಡತ್ವ ಬಿಟ್ಟು ಕ್ರಿಯಾಶೀಲರಾಗಿ. ನಿಮ್ಮ ಹವ್ಯಾಸ ಬಿಡಬೇಡಿ. ದೈಹಿಕ ಶ್ರಮದಿಂದ ಬಳಲುವಿರಿ. ಆಪ್ತರ ಜತೆ ಮಾತಿನ ಚಕಮಕಿ

**ವೃಶ್ಚಿಕ** ಎಲ್ಲರೂ ನಿಮ್ಮಂತೆ ಯೋಚಿಸಬೇಕು ಎಂದು ಬಯಸುವುದು ತಪ್ಪು. ಇತರರ ಭಾವನೆ ಗೌರವಿಸಿ. ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಂಭವ.

**ಧನು** ಕೌಟುಂಬಿಕ ವಿಷಯ ಮುಖ್ಯವಾಗುತ್ತದೆ. ಕಳೆದು ಹೋದುದಕ್ಕೆ ಕೊರಗುತ್ತಾ ಕೂರದಿರಿ. ನಗುನಗುತ್ತಾ ನಿಮ್ಮ ಹೊಣೆ ನಿಭಾಯಿಸಿ. ಆರೋಗ್ಯ ಕಾಯ್ದುಕೊಳ್ಳಿ.

**ಮಕರ** ಕೌಟುಂಬಿಕ ಪರಿಸ್ಥಿತಿ ನೆಮ್ಮದಿ ತರಲಿದೆ. ಆತ್ಮೀಯರ ಒಡನಾಟದಲ್ಲಿ ಸಂತೋಷ ಕಾಣುವಿರಿ. ಹಣ ಗಳಿಕೆಗೆ ಮೊಟಕು ದಾರಿ ಹಿಡಿಯದಿರಿ.

**ಕುಂಭ** ವ್ಯವಹಾರದ ಬಗ್ಗೆ ಹೆಚ್ಚು ಗಮನ ಕೊಡಿ. ನಿರ್ಲಕ್ಷ್ಯ ತೋರಿದರೆ ನಷ್ಟ ಉಂಟಾದೀತು. ಹೆತ್ತವರು ಮಕ್ಕಳ ಜತೆ ಮೆದುವಾಗಿ ವರ್ತಿಸಬೇಕು.

**ಮೀನ** ವ್ಯವಹಾರದಲ್ಲಿ ಮಹತ್ವದ ಬದಲಾವಣೆ ತೋರುವ ಸಾಧ್ಯತೆಯಿದೆ. ಮಾನಸಿಕ ಒತ್ತಡ ನಿವಾರಣೆಗೆ ಧ್ಯಾನ ಸಹಕಾರಿಯಾದೀತು.

**ರಾಹುಕಾಲ: 7.30-9.00**
**ಗುಳಿಕಕಾಲ: 1.30-3.00**

ಅದೃಷ್ಟ ಸಂಖ್ಯೆ: 8,2,7,47

ರಾಜ್ಯದೆಲ್ಲೆಡೆ ವರುಣಾರ್ಭಟ | ಜನಜೀವನ, ಸಂಚಾರಕ್ಕೆ ತೊಂದರೆ

# ಐದು ದಿನ ಭಾರೀ ಮಳೆ

**• ಬೆಂಗಳೂರು:** ಕರ್ನಾಟಕದಲ್ಲಿ ಮುಂದಿನ ಇಂದಿನಿಂದ ಅಂದರೆ ಜೂನ್ 15ರಿಂದ ಐದು ದಿನಗಳವರೆಗೆ ಕೆಲವೆಡೆ ವರುಣಾರ್ಭಟ ಮುಂದುವರಿಯಲಿದ್ದು, ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಮಳೆಯ ಅಬ್ಬರ ಜೋರಾಗಿರಲಿದ್ದು, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

**ರಾಜ್ಯದ ವಿವಿಧೆಡೆ ನಿರಂತರ ಮಳೆ:** ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮುಂಗಾರು ಮಳೆ ಆರಂಭವಾಗಿದ್ದು, ಭಾನುವಾರ ಬೆಳ್ಳಂಬೆಳಿಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗಿದೆ.

**ರಸ್ತೆ ಸಂಚಾರ ಸ್ಥಗಿತ:** ರಾಯಚೂರು ಜಿಲ್ಲೆಯಾದ್ಯಂತ ಬೆಳ್ಳಂಬೆಳಿಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಒಂದೇ ಮಳೆಗೆ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು, ಸರಣಿ ಅವಾಂತರಗಳು ಸೃಷ್ಟಿಯಾಗಿವೆ. ರಾಯಚೂರು ತಾಲೂಕಿನ ಇಡಪನೂರಿನಲ್ಲಿ ಹಳ್ಳದ ನೀರು ಕಿರು ಸೇತುವೆ ಮೇಲೆ ಹರಿದಿದ್ದರಿಂದ ಮೀರಾಪುರ ಹಾಗೂ ಯರಗೇರಾ ಮಾರ್ಗದ ರಸ್ತೆ ಸಂಚಾರ ಸ್ಥಗಿತಗೊಂಡಿದೆ.

**ವೀಕೆಂಡ್ ಮೋಜು ಮಸ್ತಿಗೆ ಬ್ರೇಕ್:** ಬೆಂಗಳೂರಿನ ವಿವಿಧೆಡೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ವೀಕೆಂಡ್ ಮೋಜು ಮಸ್ತಿಗೆ ಪ್ಲ್ಯಾನ್ ಮಾಡಿದವರಿಗೆ ನಿರಾಶೆ ಮೂಡಿಸಿದೆ. ನಗರಾದ್ಯಂತ ಗುಡುಗು ಮಿಂಚು ಸಹಿತ ಧಾರಾಕಾರ ಮಳೆ ಸುರಿಯುತ್ತಿದ್ದು, ಜನರು ಮನೆಯಿಂದ ಕಾಲಿಡದಂತಹ ಸ್ಥಿತಿ ಇದೆ. ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ಥಗೊಂಡಿತು.



### ಅಧಿಕಾರಿಗಳ ನಿರ್ಲಕ್ಷ್ಯ, ಸಾರ್ವಜನಿಕರ ಆಕ್ರೋಶ

**ರಾಯಚೂರು ಐಡಿಎಸ್ ಎಂಟಿ ಲೇಔಟ್‌ನಲ್ಲಿ ಅವೈಜ್ಞಾನಿಕ ಚರಂಡಿ ಕಾಮಗಾರಿಯಿಂದಾಗಿ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ. ಹಲವೆಡೆ ಚರಂಡಿ ಮಿಶ್ರಿತ ಮಳೆನೀರು ನುಗ್ಗಿದ್ದು, ನಿವಾಸಿಗಳು ನೀರು ಹೊರಹಾಕಲು ಹರಸಾಹಸ ಪಡುತ್ತಿದ್ದಾರೆ. ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಹಲವೆಡೆ ಬಿರುಗಾಳಿ ಸಹಿತ ಭಾರೀ ಮಳೆಯಾಗಿದೆ. ಮಧ್ಯಾಹ್ನವಿಡ್ಡ ಜಿಟಿ ಜಿಟಿ ಮಳೆ, ಸಂಜೆ ಆಗುತ್ತಿದ್ದಂತೆ ಬಿರುಸು ಪಡೆದುಕೊಂಡಿದ್ದು ಮಹಾನಗರವನ್ನು ಮತ್ತಷ್ಟು ತಣ್ಣಗಾಗಿಸಿದೆ. ಆದರೆ, ಈ ದಿಢೀರ್ ಮಳೆಯಿಂದಾಗಿ ಕಚೇರಿ ಮುಗಿಸಿ ಮನೆಗೆ ಮರಳುತ್ತಿದ್ದ ಸಾರ್ವಜನಿಕರು ಹಾಗೂ ರಸ್ತೆ ಬದಿಯ ವ್ಯಾಪಾರಿಗಳು ತೀವ್ರ ತೊಂದರೆ ಅನುಭವಿಸುವಂತಾಯಿತು.

**ಕೆಲವೆಡೆ ಟ್ರಾಫಿಕ್ ಜಾಮ್:** ಧಾರಾಕಾರ ಮಳೆ ಹಿನ್ನೆಲೆ ನಗರದ ಪ್ರಮುಖ ರಸ್ತೆಗಳು ಕೆರೆಯಂತಾಗಿತ್ತು. ದಿಢೀರ್ ಮಳೆಗೆ ಸಿಲುಕಿದ ನೂರಾರು ಸಾರ್ವಜನಿಕರು ಮತ್ತು ದ್ವಿಚಕ್ರ ವಾಹನ ಸವಾರರು ಕೆ.ಆರ್. ಮಾರ್ಕೆಟ್ ಫ್ಲೈಓವರ್ ಕೆಳಗೆ ನಿಂತು ಆಶ್ರಯ ಪಡೆದರು. ಮಳೆಯಿಂದಾಗಿ ಕೆಲವೆಡೆ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಮಂಗಳವಾರದಿಂದ ಮಳೆ ಕ್ಷೀಣಿಸಲಿದೆ. ಉತ್ತರ ಒಳನಾಡಿನಲ್ಲಿ ಪ್ರಸ್ತುತ ಒಣ ಹವೆ ಇದ್ದರೂ, ಮುಂದಿನ ದಿನಗಳಲ್ಲಿ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಉತ್ತರ ಒಳನಾಡಲ್ಲಿ ಜೂನ್ 15 ರಿಂದ 20 ರವರೆಗೆ ಕೆಲವು ಕಡೆಗಳಲ್ಲಿ ಶೇ50 ಕಡೆ, ಹಗುರದಿಂದ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ದಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಮೈಸೂರು, ಕೊಡಗು, ಹಾಸನಕ್ಕೆ ಮಂಗಳವಾರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

# ಕರ್ನಾಟಕ ಪೊಲೀಸರು ರಾಜಸ್ಥಾನ ಎಸಿಬಿ ಬಲೆಗೆ

**• ಬೆಂಗಳೂರು/ಜೈಪುರ:** ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ರಾಜಸ್ಥಾನದ ಜೈಪುರಕ್ಕೆ ತೆರಳಿದ್ದ ಬೆಂಗಳೂರಿನ ಎಚ್‌ಎಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಹಾಗೂ ಇಬ್ಬರು ಹೆಡ್ ಕಾನ್ಸ್‌ಟೇಬಲ್‌ಗಳು ಭಾನುವಾರ ಜೈಪುರದ ಹೋಟೆಲೊಂದರಲ್ಲಿ 40,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ರಾಜಸ್ಥಾನ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಬಂಧಿತ ಆರೋಪಿಗಳನ್ನು ಎಚ್‌ಎಎಲ್ ಪೊಲೀಸ್ ಠಾಣೆಯ ಮಹಿಳಾ ಪಿಎಸ್‌ಐ ಅನಿತಾ ಕೆ., ಹೆಡ್ ಕಾನ್ಸ್‌ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಮತ್ತು ಯತೀಶ್ ಎಂದು ಗುರುತಿಸಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಜೈಪುರದಲ್ಲಿ ಲಂಚದ ಹಣ ಪಡೆಯುತ್ತಿದ್ದಾಗ ಕಾನ್ಸ್‌ಟೇಬಲ್ ಒಬ್ಬರು ಎಸಿಬಿ ಅಧಿಕಾರಿಗಳಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಎಚ್‌ಎಎಲ್ ಠಾಣೆಯಲ್ಲಿ ದಾಖಲಾಗಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಈ ಮೂವರು ಸಿಬ್ಬಂದಿ ಅಲ್ಲಿಗೆ ತೆರಳಿದ್ದರು. ಸದ್ಯ ರಾಜಸ್ಥಾನ ಎಸಿಬಿ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

**ಕೇಸ್ ಖುಲಾಸೆಗೊಳಿಸಲು 2 ಲಕ್ಷರೂ. ಬೇಡಿಕೆ!:** ರಾಜಸ್ಥಾನ ಎಸಿಬಿ ಅಧಿಕಾರಿಗಳ ಪ್ರಕಾರ, ಜೈಪುರ ನಿವಾಸಿಯೊಬ್ಬರು ತಮ್ಮ ಮತ್ತು ತಮ್ಮ ಕುಟುಂಬದವರ ವಿರುದ್ಧ ಬೆಂಗಳೂರಿನ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳದ ದೂರು ದಾಖಲಾಗಿರುವ ಬಗ್ಗೆ ಮಾಹಿತಿ ನೀಡಿದ್ದರು. ಈ ಪ್ರಕರಣದ ತನಿಖೆಗೆಂದು ಜೈಪುರಕ್ಕೆ ಬಂದಿದ್ದ ಬೆಂಗಳೂರಿನ ಮಹಿಳಾ ಪಿಎಸ್‌ಐ ನೇತೃತ್ವದ ಮೂವರ ತಂಡ, ಪ್ರಕರಣವನ್ನು ದುರ್ಬಲಗೊಳಿಸಲು ಹಾಗೂ ಕುಟುಂಬದವರ ಹೆಸರನ್ನು ಎಫ್‌ಐಆರ್‌ನಿಂದ ಕೈಬಿಡಲು 2 ಲಕ್ಷ ರೂಪಾಯಿ ಲಂಚದ ಬೇಡಿಕೆ ಇಟ್ಟಿತ್ತು.

ಲಂಚದ ಹಣದೊಂದಿಗೆ ಮರುದಿನ ಬೆಳಿಗ್ಗೆ ಜೈಪುರದ ಹೋಟೆಲ್‌ಗೆ ಬರುವಂತೆ ದೂರುದಾರರಿಗೆ ಪೊಲೀಸರು ಸೂಚಿಸಿದ್ದರು. ಇದರಿಂದ ಬೇಸತ್ತ ಸಂತ್ರಸ್ತ ಕುಟುಂಬದವರು ತಕ್ಷಣವೇ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಜೈಪುರದ ದೂರುದಾರರಿಂದ ಮುಂಗಡವಾಗಿ 40,000 ರೂಪಾಯಿ ಲಂಚದ ಹಣವನ್ನು ಪಡೆಯುತ್ತಿದ್ದಾಗ ಹೆಡ್ ಕಾನ್ಸ್‌ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಅವರನ್ನು ಎಸಿಬಿ ಅಧಿಕಾರಿಗಳು ರೆಡ್ ಹ್ಯಾಂಡ್ ಬಂಧಿಸಿದ್ದಾರೆ. ಬಳಿಕ ನಡೆಸಿದ ತೀವ್ರ ತನಿಖೆಯಲ್ಲಿ ಮಹಿಳಾ ಪಿಎಸ್‌ಐ ಅನಿತಾ ಹಾಗೂ ಮತ್ತೊಬ್ಬ ಹೆಡ್ ಕಾನ್ಸ್‌ಟೇಬಲ್ ಯತೀಶ್ ಅವರ ಶಾಮೀಲಾತಿ ಸಾಬೀತಾದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ವಶಕ್ಕೆ ಪಡೆಯಲಾಗಿದೆ.

ಬಂಧಿತ ಪೊಲೀಸರ ವಿರುದ್ಧ ರಾಜಸ್ಥಾನದಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ. ಲಂಚದ ಹಣಕ್ಕೆ ಕೈಯೊಡ್ಡಿ ಸಿಕ್ಕಿಬಿದ್ದ ಬೆಂಗಳೂರು ಪೊಲೀಸರ ನಡೆ ಇಲಾಖೆಗೆ ತಲೆನೋವಾಗಿದೆ.

# ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ

ಪುಟ ೧➡2014ರಿಂದ 2026ರ ನಡುವೆ 4 ಲಕ್ಷ ಕೋಟಿ ರೂ. ತೆರಿಗೆ ಕರ್ನಾಟಕಕ್ಕೆ ನೀಡಲಾಗಿದೆ. ಅದು 2014ಕ್ಕಿಂತ ಹಿಂದೆ ಯುಪಿಎ ಅವಧಿಯಲ್ಲಿ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಾಗಿದೆ. ಅದೇ ರೀತಿ ಅನುದಾನ ಮತ್ತು ಸಹಾಯಧನ 2014ರಿಂದ 2026ರ ಮಧ್ಯೆ 2.71 ಲಕ್ಷ ಕೋಟಿ ರೂ.ಗಳಾದರೆ ಯುಪಿಎಯ 10 ವರ್ಷದ ಅವಧಿಯಲ್ಲಿ 60 ಸಾವಿರ ಕೋಟಿ ರೂ.ಗಳಾಗಿವೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕಕ್ಕೆ 63 ಸಾವಿರ ಕೋಟಿ ರೂ. ಆದಾಯ ಹಂಚಿಕೆಯಾಗಿದೆ ಎಂದು ನಿರ್ಮಲಾ ಸೀತಾರಾಮನ್ ಅಂಕಿ-ಅಂಶ ನೀಡಿದರು.

ಬಂಡವಾಳ ಆಸ್ತಿಗಳಲ್ಲಿ ಹೂಡಿಕೆ ಮಾಡಲು ರಾಜ್ಯಕ್ಕೆ 50 ವರ್ಷಗಳವರೆಗೆ 18 ಸಾವಿರ ಕೋಟಿ ರೂ. ಬಡ್ಡಿರಹಿತ ಸಾಲವನ್ನು ನೀಡಲಾಯಿತು. 8100 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲು ರಾಜ್ಯವು 63 ಸಾವಿರ ಕೋಟಿ ರೂ. ಕೇಂದ್ರ ನಿಧಿಯನ್ನು, ರೈಲ್ವೆ ಮೂಲಸೌಕರ್ಯಕ್ಕಾಗಿ 7700 ಕೋಟಿ ರೂ. ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆಗೆ 7 ಸಾವಿರ ಕೋಟಿ ರೂ. ಪಡೆದಿದೆ ಎಂದು ಮಾಹಿತಿ ನೀಡಿದರು.

### ಕೊಪ್ಪಳ-ಗದಗ ಹಸಿರು ಇಂಧನ ಕೇಂದ್ರ

**ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಕೈಗೊಳ್ಳಲು 1,354 ಕೋಟಿ ರೂ.ಗಳನ್ನು ನೀಡಲಾಗಿದೆ. ಮುಂದಿನ ವರ್ಷದ ಜೂನ್ ವೇಳೆಗೆ ಕೊಪ್ಪಳ ಮತ್ತು ಗದಗ ಹಸಿರು ಇಂಧನ ಕೇಂದ್ರಗಳಾಗಲಿವೆ. ಕರ್ನಾಟಕವು ಜನಧನ್, ಮುದ್ರಾ ಸಾಲಗಳು, ಆಯುಷ್ಮಾನ್, ಜಲ ಜೀವನ್ ಮಿಷನ್, ಉಜ್ವಲ, ಕಿಸಾನ್ ಸಮ್ಮಾನ್, ಜನೌಷಧಿ ಕೇಂದ್ರಗಳು ಮತ್ತು ನವೋದ್ಯಮಗಳಿಗೆ ನೀಡಲಾಗುವ ಪ್ರೋತ್ಸಾಹಕಗಳಿಂದ ಪ್ರಯೋಜನ ಪಡೆದಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.**

# ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

ಪುಟ ೧➡ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೈಲ್ ಬಘೈ, ಭಾನುವಾರ ಸಹಿ ಪ್ರಕ್ರಿಯೆ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ, ಮುಂದಿನ ದಿನಗಳಲ್ಲಿ ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದ್ದಾರೆ. ಈ ಪ್ರಸ್ತುತ ಒಪ್ಪಂದದಲ್ಲಿ ಪರಮಾಣು ವಿಷಯಗಳ ಬಗ್ಗೆ ಚರ್ಚಿಸಲಾಗಿಲ್ಲ ಎನ್ನಲಾಗಿದೆ.

**ರಾಜತಾಂತ್ರಿಕ ಸಮಾಲೋಚನೆ:** ಏಪ್ರಿಲ್ 7 ರಿಂದ ಕದನ ವಿರಾಮ ಜಾರಿಯಲ್ಲಿದೆ. ಸೋಮವಾರದಿಂದ ಆರಂಭವಾಗಲಿರುವ ಜಿ-7 ಶೃಂಗಸಭೆಯ ಸಂದರ್ಭದಲ್ಲಿ ಟ್ರಂಪ್, ಈಜಿಪ್ಟ್, ಕತಾರ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಾಯಕರನ್ನು ಭೇಟಿ ಮಾಡಲು ಯೋಜಿಸಿದ್ದಾರೆ. ಯುದ್ಧವನ್ನು ಕೊನೆಗೊಳಿಸುವುದು ಮತ್ತು ಹಾರ್ಮುಜ್ ಜಲಸಂಧಿಯಿಂದ ಮೈನ್‌ಗಳನ್ನು ತೆರವುಗೊಳಿಸುವ ಬಗ್ಗೆ ಈ ಮಾತುಕತೆಗಳಲ್ಲಿ ಚರ್ಚಿಸಲಾಗುವುದು. ಇದಕ್ಕೆ ಬ್ರಿಟನ್ ಮತ್ತು ಫ್ರಾನ್ಸ್ ಸಹಾಯ ನೀಡಲು ಮುಂದಾಗಿವೆ.

# ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ

ಪುಟ ೧➡ಗ್ಯಾರಂಟಿ ಯೋಜನೆಗಳ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಎಲ್ಲ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ತಿಳಿಸಿದ್ದಾರೆ.

ಕೆಲವರು ಸತ್ತವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ, ಅವರ ಹೆಸರು, ವಿಳಾಸ, ಅಕೌಂಟ್ ನಂಬರ್ ಖಚಿತಪಡಿಸಿಕೊಳ್ಳಲು ಮತ್ತೆ ಅರ್ಜಿ ಸಲ್ಲಿಸಲು ಹೇಳಲಾಗಿದೆಯೇ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲ ಎಂದು ಮುಖ್ಯಮಂತ್ರಿಗಳು ಮಾಧ್ಯಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

# ಜಾಗತಿಕ ಕೊಡುಗೆದಾರ

ಪುಟ ೧➡ಶನಿವಾರ ರಾತ್ರಿ ಪ್ರಧಾನಿ ಮೋದಿಯವರು ಇಲ್ಲಿಗೆ ಆಗಮಿಸಿದ್ದರು. ಭಾರತ್ ಇನ್ನೋವೇಟ್ಸ್ -2026 ಭಾರತ ಸರಕಾರವು ದೇಶದ ಮಹತ್ವದ ಟೆಕ್ ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಉದ್ಯಮಗಳನ್ನು ಜಾಗತಿಕ ಮಟ್ಟದಲ್ಲಿ ನಿಲ್ಲಿಸಲು ರೂಪಿಸಿರುವ ವಿಶೇಷ ಯೋಜನೆಯಾಗಿದೆ.

### ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಪುಟ ೧➡ತಮ್ಮ ಸರಕಾರ ಉನ್ನತ ತಂತ್ರಜ್ಞಾನ, ರಕ್ಷಣೆ ಮತ್ತು ಆವಿಷ್ಕಾರಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಬಹುದೊಡ್ಡ ಸುಧಾರಣೆಗಳನ್ನು ತಂದಿರುವುದನ್ನು ಬೊಟ್ಟು ಮಾಡಿ, ಭಾರತದ 'ಸುಧಾರಣಾ ಎಕ್ಸ್‌ಪ್ರೆಸ್' ಎಂದೂ ನಿಲ್ಲದೆ ನಿರಂತರ ಮುಂದುವರಿದು ವಿಶ್ವಕ್ಕೆ ಒಳಿತನ್ನುಂಟು ಮಾಡಲಿದೆ ಎಂದರು. ಭಾರತ-ಫ್ರಾನ್ಸ್‌ನದು ವಿಶೇಷ ಪಾಲುದಾರಿಕೆಯ ಬಾಂಧವ್ಯ. ಇದು ಸಂಪರ್ಕ, ದೃಢನಿಶ್ಚಯ, ನಾವೀನ್ಯತೆ, ಪ್ರೇರಣೆ ಮತ್ತು ದೃಷ್ಟಿಕೋನದ ಹಂಚಿಕೊಳ್ಳುವಿಕೆಯನ್ನು ಒಳಗೊಂಡಿರುವಂಥದ್ದು ಎಂದರು.

# ಗ್ಯಾರಂಟಿಯಿಂದ ಆರ್ಥಿಕತೆಗೆ ಪೆಟ್ಟು

**• ಬೆಂಗಳೂರು:** ಗ್ಯಾರಂಟಿಯಿಂದ ಆರ್ಥಿಕ ಸಂಕಷ್ಟಕ್ಕೆ ಪೆಟ್ಟು ಬಿದ್ದಿದೆ. ಒಂದೊಂದೇ ನೆಪಗಳನ್ನು ಒಡ್ಡಿ ಈಗ ಗ್ಯಾರಂಟಿ ಫಲಾನುಭವಿಗಳ ಸಂಖ್ಯೆಯನ್ನು ಲಕ್ಷ ಲಕ್ಷದಷ್ಟು ಇಳಿಸುವ ದುಸ್ಸಾಹಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದೆ ಎಂದು ಬಿಜೆಪಿ ಆರೋಪಿಸಿದೆ.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಯಾರು ಅರ್ಹರಿದ್ದಾರೋ ಅವರಿಗೆ ಕೊಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮೂರು ವರ್ಷದ ಕೆಳಗೆ ಇವರದೇ ಸರ್ಕಾರ ಇತ್ತಲ್ಲವೇ? ಗ್ಯಾರಂಟಿ ಕೊಡುವಾಗ ಅರ್ಹತೆ, ಅನರ್ಹತೆಯನ್ನು ಯಾಕೆ ಯೋಚಿಸಿಲ್ಲ ಎಂದು ಪ್ರಶ್ನಿಸಿದರು.

ಗ್ಯಾರಂಟಿಯಿಂದ ಕ್ಷೇತ್ರದ ಅಭಿವೃದ್ಧಿ ಆಗುತ್ತಿಲ್ಲ ಎಂದು ಕಾಂಗ್ರೆಸ್ಸಿನ ಶಾಸಕ ದೇಶಪಾಂಡೆ ಹೇಳುತ್ತಾರೆ. ಗ್ಯಾರಂಟಿಯಿಂದ ಅಭಿವೃದ್ಧಿ ಆಗದೇ ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ ಇದೆ ಎಂದು ಕಾಂಗ್ರೆಸ್ ಶಾಸಕರೇ ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಯರೆಡ್ಡಿ ಅವರೂ ಗ್ಯಾರಂಟಿಗಳಿಂದ ಸಂಕಷ್ಟ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಸತ್ಯ ಮರೆಮಾಚಿ ಲಕ್ಷ ಲಕ್ಷ ಅನರ್ಹ ಫಲಾನುಭವಿಗಳಿಗೆ ಚುನಾವಣೆ ವೇಳೆ ಗ್ಯಾರಂಟಿ ಕೊಟ್ಟರು ಆಗ ಹೇಳಿದ್ದು ಒಂದು; ಈಗ ಹೇಳುವುದು ಒಂದು. ಮೊದಲು ಅರ್ಹರಾದವರು ಚುನಾವಣೆ ಆದ ನಂತರ ಅನರ್ಹ ಎಂದು ಹೇಳುವುದು ಜನರಿಗೆ ಮಾಡಿದ ಅಪಮಾನ. ಇದು ಸರಿ ಅಲ್ಲ ಎಂದು ವಿವರಿಸಿದರು.

# ಕಾಂಗ್ರೆಸ್ ಸರ್ಕಾರದಲ್ಲಿ ದುಡ್ಡಿಲ್ಲ: ಸದಾನಂದಗೌಡ

**• ಗದಗ:** ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆ ಮರು ಅರ್ಜಿ ಸಲ್ಲಿಕೆ ನೋಡಿದ್ರೆ ಆಡಳಿತ ವೈಫಲ್ಯವಾದಾಗ ಕಾಂಗ್ರೆಸ್‌ನವರು ಇಂತಹ ಹೊಸ ಸ್ವರೂಪ ಕೊಡುತ್ತಾರೆ. ಅದು ಜನ ವಿರೋಧಿಯಾಗಲಿ, ಮತ್ತೊಂದಾಗಲಿ ಅದು ಕಾಂಗ್ರೆಸ್‌ನವರ ಚಟ ಎಂದು ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಗರದ ಹೊರವಲಯದ ಖಾಸಗಿ ರೇಸಾರ್ಟ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಈಗ ದುಡ್ಡಿಲ್ಲ. ಬೇಡವಾದಕ್ಕೆ ಖರ್ಚು ಮಾಡುತ್ತಾರೆ. ಇಂತಹ ಯೋಜನೆಗಳಿಗೆ ಖರ್ಚು ಮಾಡೋಕೆ ಅವರಲ್ಲಿ ದುಡ್ಡಿಲ್ಲ. ದಾರಿ ತಪ್ಪಿಸುವ ಕೆಲಸ ಮಾಡೋದು ಕಾಂಗ್ರೆಸ್‌ನವರ ಸಣ್ಣ ಪ್ರಯತ್ನ, ಇದು ಆಗಬಾರದು ಎಂದು ಹೇಳಿದರು.

**ಬಿಡದಿ ಟೌನ್ ಶಿಪ್ ಜಟಾಪಟಿ:** ರೈತರು ದೇಶದ ಬೆನ್ನಲುಬು. ಇತ್ತೀಚೆಗೆ ದೇವನಹಳ್ಳಿಯಲ್ಲಿ ಸಿದ್ದರಾಮಯ್ಯ ಅವರಿಗೆ ಇದೇ ರೀತಿ ಪರಿಸ್ಥಿತಿ ಎದುರಾಗಿತ್ತು. ರೈತರ ಒತ್ತಡಕ್ಕೆ ಮಣಿದು ಅದನ್ನೆಲ್ಲ ಹಿಂದಕ್ಕೆ ತೆಗೆದುಕೊಂಡರು. ಆದರೆ, ಸಿಎಂ ಡಿಕೆಶಿ ಅವರಿಗೆ ಇಡಿ ನೋಟಿಫಿಕೇಶನ್ ಸಂಬಂಧಗಳು ಸ್ವಲ್ಪ ಜಾಸ್ತಿ ಗೊತ್ತು. ಹಾಗಾಗಿ ಏನಾದ್ರೂ ಮಾಡಬಹುದು. ರಾಮನಗರ, ಬಿಡದಿ ಅವರ ಕಾರ್ಯಕ್ಷೇತ್ರಕ್ಕೊಳಪಡುತ್ತದೆ. ಹಾಗಾಗಿ ಇದರಲ್ಲಿ ಅವರ ಸ್ವಾರ್ಥ ಅಡಗಿದೆ ಅಂತ ಅನಿಸುತ್ತದೆ ಎಂದರು.

# ಕಾರ್ಯಕರ್ತರ ಸೇವೆ ನೆನೆದು ಶರಣಪ್ರಕಾಶ ಪಾಟೀಲ ಭಾವುಕ

**• ಕಲಬುರಗಿ:** ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಆಗಮಿಸಿದ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮದ ವೇದಿಕೆಯಲ್ಲೇ ಭಾವುಕರಾಗಿ ಕಣ್ಣೀರಿಟ್ಟ ಘಟನೆ ಸೇಡಂ ಪಟ್ಟಣದಲ್ಲಿ ನಡೆದಿದೆ.

ಜಿಲ್ಲೆಯ ಸೇಡಂ ಪಟ್ಟಣದ ಶ್ರೀಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿದ್ದ ವೇಳೆ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಸೇವೆಯನ್ನು ಸ್ಮರಿಸಿ ಭಾವುಕರಾದರು. ಮೂರನೇ ಬಾರಿ ಸಚಿವ ಸ್ಥಾನ ದೊರೆತ ಹಿನ್ನೆಲೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪಕ್ಷದ ಬೆಳವಣಿಗೆ ಹಾಗೂ ತಮ್ಮ ರಾಜಕೀಯ ಪಯಣದಲ್ಲಿ ಸಾವಿರಾರು ಕಾರ್ಯಕರ್ತರ ನಿಸ್ವಾರ್ಥ ಸೇವೆ ಮಹತ್ತರ ಪಾತ್ರ ವಹಿಸಿದೆ. ಎಲ್ಲ ಕಾರ್ಯಕರ್ತರಿಗೂ ಹುದ್ದೆ ನೀಡುವುದು ಸಾಧ್ಯವಾಗದಿದ್ದರೂ, ಅವರ ತ್ಯಾಗ, ಶ್ರಮ ಮತ್ತು ನಿಷ್ಠೆ ಅಮೂಲ್ಯವಾಗಿದ್ದು, ಅದನ್ನು ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದರು.

ಸಚಿವರ ಭಾವನಾತ್ಮಕ ಮಾತುಗಳಿಂದ ಸಮಾರಂಭದಲ್ಲಿ ಉಪಸ್ಥಿತರಿದ್ದ ಕಾರ್ಯಕರ್ತರ ಕಣ್ಣಲ್ಲೂ ನೀರು ತರಿಸಿತು. ಕಾರ್ಯಕರ್ತರ ಸೇವೆಗೆ ತಾವು ಸದಾ ಬದ್ಧರಾಗಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ ಅವರು, ಗ್ರಾಮಗಳ ಸಮಸ್ಯೆಗಳು ಹಾಗೂ ಅಭಿವೃದ್ಧಿ ಅಗತ್ಯಗಳನ್ನು ಸರ್ಕಾರದ ಗಮನಕ್ಕೆ ತರಲು ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

# ಸಮಾಜ ಸಂಘಟನೆ ಗುರಿ: ಭಾಗವತ್

ಪುಟ ೧➡ಸಮಾಜದೊಳಗಿನ ಒಡಕಿನಿಂದಾಗಿ ಇಂತಹ ಸವಾಲುಗಳು ದೇಶಕ್ಕೆ ಎದುರಾಗುತ್ತಿದೆ. ಇಂತಹ ಸವಾಲುಗಳನ್ನು ಒಗ್ಗಟ್ಟಿನ, ಸಂಘಟಿತ ಮತ್ತು ಅನುಶಾಸನ ಬದ್ಧ ಸಮಾಜದಿಂದ ಮಾತ್ರವೇ ಎದುರಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂಬುದನ್ನು ಆರೆಸ್ಸೆಸ್ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು ಸುದೀರ್ಘ ಚಿಂತನೆ, ಸಮಾಲೋಚನೆ, ಅಧ್ಯಯನಗಳಿಂದ ಕಂಡುಕೊಂಡಿದ್ದರು ಎಂದು ಅವರು ನೆನಪಿಸಿದರು.

ಸಮಾಜ ಒಗ್ಗಟ್ಟಿನಿಂದ ಸಂಘಟಿತವಾಗಿರಬೇಕು. ಇದರಿಂದ ಸಮಾಜ ಸಶಕ್ತವಾಗುತ್ತದೆ. ಇದರಿಂದ ಜನರು ಎಲ್ಲ ವ್ಯತ್ಯಾಸಗಳ ಹೊರತಾಗಿಯೂ ಪರಸ್ಪರ ಒಟ್ಟಾಗಿ ತಮ್ಮ ಶ್ರೇಯಸ್ಸನ್ನು ಸಾಧಿಸಲು ಸಾಧ್ಯ. ಭಾರತದ ನಾಗರಿಕತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯು ಈ ರಾಷ್ಟ್ರೀಯ ಏಕತೆಯನ್ನೇ ಆಧರಿಸಿದೆ ಎಂಬ ನಂಬಿಕೆಯಿಂದಲೇ ಆರೆಸ್ಸೆಸ್ ಸ್ಥಾಪನೆಯಾಗಿದೆ. ಸಮಾಜ ಕಟ್ಟುವುದು ನಮ್ಮ ಕೆಲಸ. ಒಂದು ಬಾರಿ ಸಮಾಜ ಸಂಘಟಿತವಾಗಿ ಮತ್ತು ಜಾಗೃತವಾಗಿ ಎದ್ದು ನಿಂತರೆ ಸಹಜವಾಗಿಯೇ ರಾಷ್ಟ್ರಕ್ಕೆ ಎದುರಾಗಿರುವ ಎಲ್ಲ ಸವಾಲುಗಳಿಗೆ ಸಹಜವಾಗಿಯೇ ಪರಿಹಾರ ಲಭಿಸುತ್ತದೆ ಎಂದು ಅವರು ನುಡಿದರು. ನಾವೆಲ್ಲರೂ ಒಂದು ಸಮಾನ ನಾಗರಿಕ ನೀತಿ ತತ್ತ್ವದೊಂದರ ಮೂಲಕ ಜೋಡಿಸಲ್ಪಟ್ಟಿದ್ದೇವೆ. ಈ ಸಾಂಸ್ಕೃತಿಕ ಏಕತೆಯೇ ರಾಷ್ಟ್ರಜೀವನವಾಗಿದೆ. ಸಂಘದ ಹಿಂದುತ್ವ ಯಾವುದೇ ಮತೀಯ ಸಮುದಾಯವನ್ನು ವಿರೋಧಿಸಿರುವ ತತ್ವವಲ್ಲ. ಹಿಂದು ವರ್ಸಸ್ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಕೂಡ ಅಲ್ಲ. ಬದಲಿಗೆ ವಸುಧೈವ ಕುಟುಂಬಕಮ್ ಪರಿಕಲ್ಪನೆಯನ್ನು ಆಧರಿಸಿದ್ದು, ಎಲ್ಲ ವೈವಿಧ್ಯತೆಗಳ ಹೊರತಾಗಿಯೂ ಸೌಹಾರ್ದ, ಸಾಮರಸ್ಯದ ಸಹಬಾಳ್ವೆ ಸಾಧ್ಯ ಎಂಬುದು ಸಂಘದ ನಂಬಿಕೆ ಎಂದರು.

ಈ ಹಿನ್ನೆಲೆಯಲ್ಲೇ ಸಂಘ ಚಾರಿತ್ರ್ಯ ನಿರ್ಮಾಣವನ್ನು ಪ್ರಧಾನ ಕಾರ್ಯವನ್ನಾಗಿರಿಸಿಕೊಂಡಿದೆ. ರಾಷ್ಟ್ರೀಯ ಸೇವೆಗೆ ಬದ್ಧವಾದ ವ್ಯಕ್ತಿಗಳನ್ನು ಬೆಳೆಸುವುದು ಸಂಘದ ಕಾರ್ಯವಾಗಿದೆ. ಇದಕ್ಕಾಗಿಯೇ ಸಂಘ ಆರಂಭದಲ್ಲಿ ಪ್ರಾಮಾಣಿಕ, ನಿಸ್ವಾರ್ಥ, ಅನುಶಾಸನಬದ್ಧ ಹಾಗೂ ಸಮಾಜಕ್ಕೆ ಸಮರ್ಪಿತ ವ್ಯಕ್ತಿಗಳ ನಿರ್ಮಾಣಕ್ಕೆ ಆದ್ಯತೆ ನೀಡಿದ್ದು. ಇದರ ಫಲವಾಗಿಯೇ ಇಂದು ದೇಶದಲ್ಲಿ ಸಂಘಪ್ರೇರಿತವಾದ 1.30 ಲಕ್ಷಕ್ಕೂ ಅಧಿಕ ಸೇವಾ ಯೋಜನೆಗಳು ಸಮಾಜದ ಎಲ್ಲ ಕ್ಷೇತ್ರಗಳನ್ನು ಒಳಗೊಂಡು ನಡೆಯುತ್ತಿದ್ದು, ಜನರ ಬದುಕನ್ನು ಎತ್ತರಿಸುವ ಕೆಲಸ ನಡೆಯುತ್ತಿದೆ ಎಂದು ಅವರು ವಿವರಿಸಿದರು.

ವ್ಯಕ್ತಿಗಳನ್ನು ರಾಷ್ಟ್ರ ಸೇವೆಗೆ ಬದ್ಧವಾಗಿರುವಂತೆ ಬೆಳೆಸುವುದು ಸಂಘದ ಕಾರ್ಯವೇ ವಿನಾ ಅವರ ಸಾಧನೆಗಳಿಗೆ ಮನ್ನಣೆ ಪಡೆಯುವುದಲ್ಲ. ಸ್ವಯಂಸೇವಕರು ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಏನು ಸಾಧನೆಗೈಯ್ಯುತ್ತಿದ್ದಾರೆಯೋ ಅದು ಅವರದೇ ಸಾಧನೆ. ಅದರ ಕೀರ್ತಿ ಸಂಘಕ್ಕೆ ಬೇಕಾಗಿಲ್ಲ ಎಂದ ಅವರು, ಸ್ವಯಂಸೇವಕ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಯ ನಿದರ್ಶನವನ್ನು ಉಲ್ಲೇಖಿಸಿದರು.

ಭಾರತದ ಭವಿಷ್ಯವು ಕೇವಲ ಸರಕಾರಗಳ ಮೇಲೆ ಅವಲಂಬಿತವಾಗಿಲ್ಲ. ಬದಲಿಗೆ ಸಾಮಾನ್ಯ ನಾಗರಿಕರ ಚಾರಿತ್ರ್ಯ ಮತ್ತು ರಾಷ್ಟ್ರನಿರ್ಮಾಣದಲ್ಲಿ ಅವರ ಸಹಭಾಗಿತ್ವ ವನ್ನು ಅವಲಂಬಿಸಿದೆ. ಸಮಾಜ ಅಭಿವೃದ್ಧಿಯಾದಾಗ ರಾಷ್ಟ್ರವೂ ಅಭಿವೃದ್ಧಿ ಹೊಂದುತ್ತದೆ. ರಾಷ್ಟ್ರೀಯ ಪುನರುತ್ಥಾನದ ಹೊಣೆ ಪ್ರತಿ ನಾಗರಿಕನದಾಗಿದೆ. ಒಬ್ಬ ವ್ಯಕ್ತಿ ವೈಯಕ್ತಿಕ ನೆಲೆಯಲ್ಲಿ ಇನ್ನೊಂದು ನಂಬಿಕೆಯನ್ನು ಆಯ್ಕೆ ಮಾಡಿಕೊಂಡರೆ ಆರೆಸ್ಸೆಸ್ ಆಕ್ಷೇಪಿಸದು. ಆದರೆ ವಂಚನೆ, ಪ್ರಲೋಭನೆ, ಆಮಿಷ, ನಂಬಿಕೆ, ಪರಂಪರೆಗಳ ಅವಹೇಳನ, ಬಲವಂತದ ನೆಲೆಯಲ್ಲಿ ಮತಾಂತರ ಚಟುವಟಿಕೆಗಳು ನಡೆಯುತ್ತಿರುವುದು ಕಳವಳದ ಅಂಶವಾಗಿದೆ. ಭಾರತದಲ್ಲಿ ವಾಸಿಸುವ ಯಹೂದಿ ಸಮುದಾಯಗಳ ಐತಿಹಾಸಿಕ ಅನುಭವವನ್ನು ಬೊಟ್ಟು ಮಾಡಿದ ಅವರು, ಮುಸ್ಲಿಮರು, ಹಿಂದುಗಳು ಶತಮಾನಗಳಿಂದ ಇಲ್ಲಿ ಒಟ್ಟಾಗಿ ವಾಸಿಸುತ್ತಿದ್ದಾರೆ ಎಂದರು.

# ನಾಟಕ, ಕಲೆ, ಸಾಹಿತ್ಯ ಸಮಾಜದ ಜೀವನಾಡಿ



**ಬಳ್ಳಾರಿ:** ನಾಟಕ, ಕಲೆ, ಸಾಹಿತ್ಯ ಚಟುವಟಿಕೆಗಳು ಸಮಾಜದ ಜೀವನಾಡಿಯಾಗಿದ್ದು, ಮನುಷ್ಯನ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಸೃಜನಶೀಲ ಮಾಧ್ಯಮವಾಗಿವೆ ಎಂದು ಕರ್ನಾಟಕ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ತಿಳಿಸಿದರು.

ತಾಲೂಕಿನ ಕಪ್ಪಗಲ್ಲು ಗ್ರಾಮದಲ್ಲಿ ರಂಗತೋರಣ ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ ಕಪ್ಪಗಲ್ಲು ನಾಟಕೋತ್ಸವದ ಎರಡನೇ ದಿನದ ನಾಟಕಕ್ಕೆ ಚಾಲನೆ ಹಾಗೂ ಗ್ರಾಮದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಿ ಮಾತನಾಡಿದರು.

ಕಲೆ, ಸಾಹಿತ್ಯ, ರಂಗಭೂಮಿ ಚಟುವಟಿಕೆಗಳಿಂದ ಸಾಮಾಜಿಕ ಜಾಗೃತಿ ಮೂಡುತ್ತದೆ. ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಯ ಜೊತೆಗೆ ನಮ್ಮ ಮೂಲ ಸಂಸ್ಕೃತಿ, ಪರಂಪರೆ, ಸಂಪ್ರದಾಯ ಮುಂದಿನ ಪೀಳಿಗೆಗೆ ತಲುಪಿಸಲು ಸಾಧ್ಯವಾಗಲಿದೆ. ನೈತಿಕ ಮೌಲ್ಯಗಳನ್ನು ಬಿತ್ತಲು ರಂಗಭೂಮಿ ಚಟುವಟಿಕೆಗಳು ಹೆಚ್ಚು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಸೃಜನಶೀಲತೆಯೂ ಹೆಚ್ಚುತ್ತದೆ. ಉತ್ತಮ ನಾಟಕಗಳ ವೀಕ್ಷಣೆಯಿಂದ ಕಲ್ಪನಾಶಕ್ತಿ, ಚಿಂತನಾ ಸಾಮರ್ಥ್ಯ ವೃದ್ಧಿಸುತ್ತದೆ ಹಾಗೂ ಪರಸ್ಪರ ಸಹಬಾಳ್ವೆಯ ಮನೋಭಾವ ಬೆಳೆಯುತ್ತದೆ. ಉತ್ತಮ ವಿಚಾರ ಮತ್ತು ಸಂದೇಶಗಳನ್ನು ಜನರಿಗೆ ತಲುಪಿಸುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ನೆರವಾಗಲಿವೆ. ಕಲೆ, ಸಾಹಿತ್ಯ ಹಾಗೂ ರಂಗಭೂಮಿ ಕೇವಲ ಮನರಂಜನೆಯ ಸಾಧನಗಳಲ್ಲ, ಅವು ಸಮಾಜದ ಜಾಗೃತಿ, ಸಂಸ್ಕೃತಿ ಸಂರಕ್ಷಣೆ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷ ಪುರುಷೋತ್ತಮ ರೆಡ್ಡಿ ದಮ್ಮೂರು, ಆಹಾರ ಮತ್ತು ಸರಬರಾಜು ಇಲಾಖೆಯ ಬಿ.ಕಟ್ಟೆಗೌಡ, ನಿವೃತ್ತ ಸಹಾಯಕ ಔಷಧ ನಿಯಂತ್ರಣಾಧಿಕಾರಿ ಕೆ.ಎಸ್.ಮಲ್ಲಿಕಾರ್ಜುನ, ಗ್ರಾಮದ ಮುಖಂಡರಾದ ದೊಡ್ಡ ರಾಮಾಂಜಿನಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರಂಗತೋರಣ ಸಂಸ್ಥೆಯ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು ಪ್ರಾಸ್ತಾವಿಕವಾಗಿ ಮಾತನಾಡಿದರು.

ಚಂದ್ರಶೇಖರ ಆಚಾರ್ ಕಪ್ಪಗಲ್ಲು ಹಾಗೂ ಮೆಹತಾಬ್ ಅವರು ಕಾರ್ಯಕ್ರಮ ನಿರ್ವಹಿಸಿದರು. ನಂತರ ಜೇವರ್ಗಿ ರಾಜಣ್ಣ ಅವರ ರಚನೆ-ನಿರ್ದೇಶನದ ಕುಂಟಕೋಣ ಮೂಕ ಜಾಣ ನಾಟಕ ಪ್ರದರ್ಶನಗೊಂಡಿತು.

# ಅಭಿವೃದ್ಧಿ ಕುಂಠಿತ: ಬಿಜೆಪಿಯಿಂದ ಬೃಹತ್ ಪ್ರತಿಭಟನೆ



**ಕಲಬುರಗಿ:** ನಗರದ ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 47 ಹಾಗೂ 48ರಲ್ಲಿ ಮೂಲ ಸೌಕರ್ಯಗಳು ಮತ್ತು ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿರುವುದನ್ನು ಖಂಡಿಸಿ ಬಿಜೆಪಿ ದಕ್ಷಿಣ ಮಂಡಲ ಹಾಗೂ ಸ್ಥಳೀಯ ನಿವಾಸಿಗಳ ನೇತೃತ್ವದಲ್ಲಿ ಶಹಾಬಾದ್ ಕ್ರಾಸ್ ಸಮೀಪ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಮುಖಂಡರು, ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಹಲವು ಮೂಲಭೂತ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಾರ್ಡ್‌ಗಳ ಅಭಿವೃದ್ಧಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಪಾಲಿಕೆ ಸದಸ್ಯರಾದ ವೀರಣ್ಣ ಹೊನ್ನಳ್ಳಿ, ಹೊನ್ನಮ್ಮ ಬಾಬು ಹಾಗರಗಿ, ವಿಶಾಲ್ ಧಗಿರ್, ಶಂಭು ಪಾಟೀಲ ಬಾಳಬಟ್ಟಿ, ಮಲ್ಲು ಊಡನೂರು ಸೇರಿದಂತೆ ಬಿಜೆಪಿ ಮುಖಂಡರಾದ ರವಿ ಹಾಗರಗಿ, ಸಿದ್ರಾಮ ಮಹಾಂತಗೋಳ, ಸಿದ್ದಣ್ಣ ಬುಳಾಳ, ಪ್ರಕಾಶ ಪಾಟೀಲ ಹಿರಾಪುರ, ರಾಜು ವಾಡೇಕರ್, ಜಗನ್ನಾಥ ಪಟ್ಟಣಶೆಟ್ಟಿ, ಮಹಾದೇವ ಬೆಳಮಗಿ, ವಿಜಯಲಕ್ಷ್ಮೀ ಗೋಬೂರಕರ, ಜ್ಯೋತಿ ಪಾಟೀಲ, ಶ್ರೀನಿವಾಸ್ ದೇಶಾಯಿ, ವಿಶ್ವನಾಥ ಸಾಲಿಮಠ, ರಾಜಶೇಖರ ನಂದೂರು, ಅಮಿತ್ ಜಟ್ಟಗುಪ್ಪಿ, ಗುಂಡು ಮಹಾಂತಗೋಳ, ಚನ್ನು ಬಿರಾದಾರ, ಅಪ್ಪಾಸಾಬ್ ಜಂಗ್ಲೆ, ಉದಯ ರೇಷ್ಮಿ, ಮಲ್ಲಿಕಾರ್ಜುನ ಜಿನಕೇರಿ, ರಾಜು ಕಟ್ಟಿಮನಿ ಇತರರಿದ್ದರು.

## ರೈಲಿನಿಂದ ಬಿದ್ದು ಸಾವು

**ಗೋಕರ್ಣ:** ಭಟ್ಕಳದ ಕಡೆ ಹೊರಟಿದ್ದ ರೈಲಿನಿಂದ ಬಿದ್ದು ಪ್ರಯಾಣಿಕ ಮೃತಪಟ್ಟ ಘಟನೆ ಹಿರೇಗುತ್ತಿ ನುಶಿಕೋಟೆ ಬಳಿ ನಡೆದಿದೆ. ಭಟ್ಕಳದ ಹೆಬಳೆಯ ಬುಸಾರಮನೆಯ ಯತೀನ್ ಲಕ್ಷ್ಮಣ ಮೊಗೇರ್ (18) ಮೃತಪಟ್ಟವರು ಎಂದು ತಿಳಿದು ಬಂದಿದ್ದು, ಸಹ ಪ್ರಯಾಣಿಕರು ರೈಲಿನಿಂದ ದೂಡಿ ಸಾಯಿಸಿದ ಅನುಮಾನ ಪಾಲಕರನ್ನು ಕಾಡುತ್ತಿದೆ. ರೈಲು ಹಳಿಗಳ ಮೇಲೆ ಯತೀನ್ ಮೊಗೇರ್ ಅವರು ರಕ್ತದ ಮಡುವಿನಲ್ಲಿ ಬಿದ್ದು ಮೃತಪಟ್ಟಿದ್ದು, ಕುಟುಂಬದವರು ಆಘಾತಕ್ಕೊಳಗಾಗಿದ್ದಾರೆ. ಯತೀನ್ ಕಾಲೇಜು ವಿದ್ಯಾರ್ಥಿಯಾಗಿದ್ದು, ಜೂನ್ 12ರ ಸಂಜೆ ಗೋಕರ್ಣದಿಂದ ಭಟ್ಕಳದ ಕಡೆ ಸಾಗುವ ರೈಲಿನಲ್ಲಿ ಸಂಚರಿಸುತ್ತಿದ್ದರು. ಆ ರೈಲು ನುಶಿಕೋಟೆ ಬಳಿ ಬಂದಾಗ ಯತೀನ್ ಮೊಗೇರ್ ಅವರು ರೈಲಿನಿಂದ ಕೆಳಗೆ ಬಿದ್ದಿದ್ದಾರೆ. ಅಲ್ಲಿಯೇ ಅವರು ಗಾಯಗೊಂಡು ಮೃತಪಟ್ಟಿದ್ದಾರೆ. ಯತೀನ್ ಮೊಗೇರ್ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಥಿತಿಯವರಲ್ಲ. ಕಾಲು ಜಾರಿ ರೈಲಿನಿಂದ ಬೀಳುವ ಸಾಧ್ಯತೆಗಳು ಹೆಚ್ಚಿನದಾಗಿಲ್ಲ. ಹೀಗಾಗಿ ಅವರ ಜೊತೆಯಿದ್ದವರೇ ರೈಲಿನಿಂದ ದೂಡಿ ಕೊಲೆ ಮಾಡಿರುವ ಅನುಮಾನಗಳಿವೆ. ಮಗನ ಸಾವಿನ ಬಗ್ಗೆ ಲಕ್ಷ್ಮಣ ನಾರಾಯಣ ಮೊಗೇರ್ ಅವರು ಅನುಮಾನವ್ಯಕ್ತಪಡಿಸಿದ್ದಾರೆ. ಸಾವಿನ ಸಮಗ್ರ ತನಿಖೆ ನಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಈ ಬಗ್ಗೆ ಗೋಕರ್ಣ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ಪ್ರಾರಂಭಿಸಿದ್ದಾರೆ.

## ರುಕ್ಮಿಣಿಬಾಯಿ ನಿಧನ


**ಬೀದರ್:** ಬೀದರ್ ಜಿಲ್ಲೆಯ ಮನ್ನಳ್ಳಿ ಗ್ರಾಮದ ನಿವಾಸಿ ಹಾಗೂ ಮಾಜಿ ಶಾಸಕ ದಿವಂಗತ ನಾರಾಯಣರಾವ ಮನ್ನಳ್ಳಿ ಅವರ ಧರ್ಮಪತ್ನಿ ರುಕ್ಮಿಣಿಬಾಯಿ ನಾರಾಯಣರಾವ ಮನ್ನಳ್ಳಿ (80) ಅವರು ಇಂದು ನಿಧನರಾದರು. ಮೃತರು




ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಸರಳ ಸಜ್ಜನಿಕೆ ಮತ್ತು ಸಾಮಾಜಿಕ ಕಾಳಜಿಯಿಂದ ಗುರುತಿಸಿಕೊಂಡಿದ್ದ ಅವರು ಕುಟುಂಬ ಹಾಗೂ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಅಂತ್ಯಕ್ರಿಯೆಯು ಜೂನ್ 15ರಂದು ಬೆಳಿಗ್ಗೆ 11.30 ಗಂಟೆಗೆ ಮನ್ನಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ರುಕ್ಮಿಣಿಬಾಯಿ ಅವರ ನಿಧನಕ್ಕೆ ರಾಜಕೀಯ, ಸಾಮಾಜಿಕ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ದೊರೆಯಲಿ ಎಂದು ಪ್ರಾರ್ಥಿಸಿದ್ದಾರೆ.

## ಬೈಕ್-ಲಾರಿ ಡಿಕ್ಕಿ: ಶಿಕ್ಷಕ ದಂಪತಿ ಸಾವು

**ವಿಜಯಪುರ:** ಬೈಕ್ ಹಾಗೂ ಲಾರಿ ಡಿಕ್ಕಿಯಾಗಿ ಶಿಕ್ಷಕ ದಂಪತಿ ಸಾವಿಗೀಡಾದ ಘಟನೆ ನಗರ ಹೊರ ವಲಯ





ತೊರವಿ ಬಳಿ ನಡೆದಿದೆ. ಮೃತಪಟ್ಟವರನ್ನು ವಿಜಯಪುರ ತಾಲೂಕಿನ ಖತಿಜಾಪುರ ಎಚ್.ಪಿ.ಎಸ್ ಶಾಲೆಯ ಜಿಪಿಟಿ ಶಿಕ್ಷಕಿ ಅಂಬಿಕಾ ಪೂಜೇರಿ (34) ಹಾಗೂ ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಶಿಕ್ಷಕರಾಗಿದ್ದ ಗುರಲಿಂಗ ಹುನಶ್ಯಾಳ (37) ಮೃತ ದುರ್ದೈವಿ ದಂಪತಿ. ಬೈಕ್‌ನಲ್ಲಿ ದಂಪತಿಗಳು ತೆರಳುತ್ತಿದ್ದಾಗ ಈ ದುರ್ಘಟನೆ ನಡೆದಿದ್ದು, ಇದಕ್ಕೆ ಲಾರಿ ಚಾಲಕನ ಅತಿ ವೇಗವೇ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ಜಾರಿಗೆ ಒತ್ತಾಯ



**ವಿಜಯನಗರ:** ಜಿಲ್ಲೆಯ ವಿವಿಧ ಇಲಾಖೆಗಳ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ತಕ್ಷಣವಾ ಕಾರ್ಮಿಕ ಇಲಾಖೆ ನಿಗದಿಪಡಿಸಿದ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂದು ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಯ ಹೊರಗುತ್ತಿಗೆ ನೌಕರರ ಸಂಘ ಒತ್ತಾಯಿಸಿದೆ.

ಈ ಕುರಿತು ಸಂಘದ ಪ್ರಮುಖರು ಗುರುವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ, ಕನ್ನಡ ವಿಶ್ವವಿದ್ಯಾಲಯ ಹಂಪಿ ಮುಂತಾದ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾಗಾರರು, ಕಾವಲುಗಾರರು, ಜವಾನರು, ಡಾಟಾ ಎಂಟ್ರಿ ಆಪರೇಟರ್ ಮುಂತಾದ ಹೊರಗುತ್ತಿಗೆ ಸಿಬ್ಬಂದಿಗಳಾಗಿ ನೂರಾರು ಜನರು ದುಡಿಯುತ್ತಿದ್ದಾರೆ. ಕಾರ್ಮಿಕರ ಕನಿಷ್ಠ ವೇತನ ಜಾರಿಗೆ ಸಂಬಂಧಿಸಿ ಮೇ 22ರಂದು ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ್ದು, ನಿಯಮಾನುಸಾರ ಅದನ್ನು ತಕ್ಷಣ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದೆ. ಸಂಘದ ಜಿಲ್ಲಾ ಅಧ್ಯಕ್ಷ ಮರಡಿ ಜಂಬಯ್ಯ ನಾಯಕ, ಜಿಲ್ಲಾ ಕಾರ್ಯದರ್ಶಿ ಬಿ.ರಮೇಶ್‌ಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ನಾಗೂನಾಯ್ಕ ಇದ್ದರು.

# ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ



**ಕುಷ್ಟಗಿ:** ಮಣ್ಣಿನ ಆರೋಗ್ಯಕ್ಕೆ ಸಾವಯವ ಕೃಷಿ ಎಷ್ಟು ಅಗತ್ಯವೋ, ಮಾನವನ ಆರೋಗ್ಯಕ್ಕೆ ಯೋಗ ಮತ್ತು ಪ್ರಾಣಾಯಾಮವೂ ಅಷ್ಟೇ ಅಗತ್ಯವಾಗಿವೆ. ಆರೋಗ್ಯಕರ ಮಣ್ಣು ಉತ್ತಮ ಬೆಳೆ ನೀಡುವಂತೆ, ಆರೋಗ್ಯಕರ ದೇಹ ಮತ್ತು ಮನಸ್ಸು ಉತ್ತಮ ಜೀವನಕ್ಕೆ ಅಡಿಪಾಯವಾಗುತ್ತದೆ ಎಂದು ಯೋಗ ಸಾಧಕ ಸೋಮನಾಥ್ ರಡ್ಡಿ ಪುರ್ಮಾ ಕೋಡ್ಲಾ ಹೇಳಿದರು.

ಪಟ್ಟಣದ ಬುತ್ತಿ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಪತಂಜಲಿ ಯೋಗ ಸಮಿತಿ ಕುಷ್ಟಗಿ ಇನ್ನರ್‌ವೀಲ್ ಕ್ಲಬ್ ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ತವಾಗಿ ನಡೆದ ವಿಶೇಷ ಶಿಬಿರದಲ್ಲಿ ಭಾಗವಹಿಸಿದ ಜನರಿಗೆ ತರಬೇತಿ ನಡೆಸಿ ಮಾತನಾಡಿದರು, ಖಾಲಿ ಹೊಟ್ಟೆ ವ್ಯಾಯಾಮ ಊಟದ ನಂತರ ಆರಾಮ ಮಾಡೊ ನೀ ಯೋಗ ಹೋಡಿತು ತಾನೆ ರೋಗ ಬಾಯಿ ಮುಚ್ಚಿ ಮೌನ ಕಣ್ಣು ಮುಚ್ಚಿ ಧ್ಯಾನ ಹೊಟ್ಟೆ ಖಾಲಿ ಇದ್ದಾಗ ಮಾತ್ರ ಯೋಗಕ್ಕೆ ಶರೀರ ಒಗ್ಗುತ್ತದೆ.ಯೋಗಾಭ್ಯಾಸ ಮತ್ತು ಪ್ರಾಣಾಯಾಮ ಮಾಡುವುದರಿಂದ ದೇಹದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ, ಉಸಿರಾಟ ವ್ಯವಸ್ಥೆ ಸುಧಾರಿಸುತ್ತದೆ ಹಾಗೂ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಒತ್ತಡ, ಆತಂಕ ಮತ್ತು ಜೀವನಶೈಲಿ ಸಂಬಂಧಿತ ಅನೇಕ ಸಮಸ್ಯೆಗಳನ್ನು ನಿಯಂತ್ರಿಸಲು ಯೋಗ ಸಹಕಾರಿಯಾಗಿದೆ ಎಂದರು.

ಉಷಾಪಾನ ಮಾಡುವುದರಿಂದ ಶರೀರದ ಸ್ವಚ್ಛತೆಗಾಗಿ ಸಹಕಾರಿಯಾಗಿದೆ. ಉಷಾಪಾನ ಮಾಡಿದಾಗ ಮಾತ್ರ ಮೂತ್ರಪಿಂಡ ಮತ್ತು ಯಕೃತ್ತಿನ ಕಾರ್ಯಕ್ಷಮತೆ ಉತ್ತಮಗೊಳ್ಳುತ್ತದೆ.ದೇಹದಲ್ಲಿ ಚೈತನ್ಯ, ಉತ್ಸಾಹ ಮತ್ತು ತಾಜಾತನ ಹೆಚ್ಚುತ್ತದೆ. ತಲೆನೋವು, ಅಜೀರ್ಣ ಹಾಗೂ ಆಯಾಸದಂತಹ ಸಮಸ್ಯೆಗಳಿಗೆ ರಾಮಬಾಣ, ಈ ಉಷಾ ಪಾನ ಯೋಗ ಮತ್ತು ಪ್ರಾಣಾಯಾಮವು ದೇಹ ಹಾಗೂ ಮನಸ್ಸಿನ ಆರೋಗ್ಯವನ್ನು ವೃದ್ಧಿಸುತ್ತವೆ. ನಿಯಮಿತ ಉಷಾಪಾನದಿಂದ ದೇಹ ಶುದ್ಧೀಕರಣಗೊಂಡು ಯೋಗಾಭ್ಯಾಸದ ಫಲಿತಾಂಶ ಇನ್ನಷ್ಟು ಉತ್ತಮವಾಗುತ್ತದೆ. ಜೀರ್ಣಾಂಗ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸುತ್ತದೆ. ದೇಹದಲ್ಲಿನ ವಿಷಕಾರಿ ಅಂಶಗಳನ್ನು ಹೊರಹಾಕಲು ನೆರವಾಗುತ್ತದೆ. ರಕ್ತಸಂಚಾರ ಸುಧಾರಿಸುತ್ತದೆ. ಚರ್ಮದ ಕಾಂತಿ ಹೆಚ್ಚುತ್ತದೆ ಎಂದರು.

# ಬಾಲ್ಯದಿಂದಲೇ ಮಕ್ಕಳಿಗೆ ಸಂಸ್ಕೃತಿ ತಿಳಿಸಿ: ಮೀನಾಕ್ಷಿ ಶೇರಾವತ್




**ಹುಬ್ಬಳ್ಳಿ:** ಧರ್ಮ, ಸಂಸ್ಕೃತಿ, ಇತಿಹಾಸ ಮತ್ತು ಮಹನೀಯರ ತ್ಯಾಗ-ಬಲಿದಾನಗಳ ಬಗ್ಗೆ ಮಕ್ಕಳಿಗೆ ಬಾಲ್ಯದಿಂದಲೇ ತಿಳಿಸಬೇಕು ಎಂದು ವಾಗ್ಮಿ ಮೀನಾಕ್ಷಿ ಶೇರಾವತ್ ಹೇಳಿದರು.

ನಗರದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಶ್ರೀರಾಮ ಸೇನೆಯ ದುರ್ಗಾ ಶಕ್ತಿ ಘಟಕದ ವತಿಯಿಂದ ಹಮ್ಮಿಕೊಂಡಿದ್ದ 'ತ್ರಿಶೂಲ ದೀಕ್ಷಾ' ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮಾಜವು ಧರ್ಮ, ಸಂಸ್ಕೃತಿ ಹಾಗೂ ಇತಿಹಾಸವನ್ನು ಅರಿಯದಿದ್ದರೆ ಬೇರುಗಳಿಲ್ಲದ ಮರದಂತಾಗುತ್ತದೆ. ಹೊರಗಿನವರಿಂದ ಧರ್ಮಕ್ಕೆ ಅಪಾಯವಿ ಅಪಾಯವಿಲ್ಲ; ಧರ್ಮದ ಬಗ್ಗೆ ನಿರ್ಲಕ್ಷ್ಯ ವಹಿಸುವ ನಮ್ಮದೇ ಸಮಾಜದಿಂದ ಅಪಾಯ ಉಂಟಾಗುತ್ತದೆ ಎಂದರು.

ಮಕ್ಕಳಿಗೆ ಭಗವದ್ಗೀತೆ, ವೇದಗಳು ಹಾಗೂ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಪರಿಚಯಿಸುವುದು ಅಗತ್ಯ. ಯುವಜನರಲ್ಲಿ ಧರ್ಮದ ಕುರಿತು ಪ್ರಶ್ನೆಗಳು ಹೆಚ್ಚಾಗುತ್ತಿವೆ. ಅಂತಹ ಪ್ರಶ್ನೆಗಳಿಗೆ ಪೋಷಕರು ಸಮರ್ಪಕ ಉತ್ತರ ನೀಡದಿದ್ದರೆ, ಬೇರೆ

ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಮಾತನಾಡಿ, ಪ್ರಸ್ತುತವಾಗಿ ನಡೆಯುತ್ತಿರುವ ಇಸ್ಲಾಮಿಕ್, ಕ್ರಿಶ್ಚಿಯನ್, ನಾಸ್ತಿಕವಾದಿಗಳ ಮನಸ್ಥಿತಿ ಅಪಾಯ ತರುತ್ತಿದೆ. ಅವರ ವಿರುದ್ಧ ಹೋರಾಡುವ ಸಮಯ ಬಂದಿದೆ ಎಂದು ಹೇಳಿದರು.

10 ಲಕ್ಷ ಹಿಂದೂ ಯುವತಿಯರು ಲವ್ ಜಿಹಾದ್‌ಗೆ ಬಲಿಯಾಗಿ, ಬುರ್ಖಾ ಹಾಕುತ್ತಿದ್ದಾರೆ. ಗೋಮಾಂಸ ತಿನ್ನುತ್ತಿದ್ದಾರೆ. 12 ವರ್ಷಕ್ಕೆ ಅವರು ಮದುವೆ ಮಾಡುತ್ತಾರೆ, ಯಾವ ನಿಯಮವೂ ಇಲ್ಲ ನಮಗೆ. ನಮ್ಮದು 18 ವರ್ಷ ನಿಯಮ, ಅಷ್ಟರಲ್ಲಿ ಅವರಿಗೆ ಆರು ಮಕ್ಕಳಾಗಿರುತ್ತದೆ. ಶಾಹೀನ್ ಗ್ರೂಪ್ ಮೂಲಕ ಶಾಲೆ-ಕಾಲೇಜಿನಲ್ಲಿ ಜಿಹಾದ್ ನಡೆಯುತ್ತಿದೆ. ದೇಶದ್ರೋಹಿ ಕ್ಯಾನ್ಸರ್ ತಡೆಯಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸತ್ಯಪ್ರಮೋಧೇಂದ್ರ ಸರಸ್ವತಿ ಸ್ವಾಮೀಜಿ, ಹಿಂದೂ ಜನಜಾಗೃತಿ ಸಮಿತಿಯ ರಣರಾಗಿಣಿ ಮಹಿಳಾ ಶಾಖೆಯ ಭವ್ಯಾಗೌಡ, ಸಾನ್ನಿಧ್ಯ ವಹಿಸಿದ್ದ ಶ್ರೀಮಾತಾ ಆಶ್ರಮದ ಮಾತಾಜಿ ತೇಜೋಮಯಿ ಮಾತನಾಡಿದರು.

ಮೋಹನ ಗುರುಸ್ವಾಮಿ, ಎಸ್ ಎಸ್‌ಕೆ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ರಾಜೇಶ್ವರಿ ಜಡಿ, ಮಜೇಥಿಯಾ ಫೌಂಡೇಷನ್ ಸಂಸ್ಥಾಪಕ ಜಿತೇಂದ್ರ ಮಜೇಥಿಯಾ ಇದ್ದರು. ಕಾಲೇಜು ವಿದ್ಯಾರ್ಥಿನಿಯರಿಗೆ, ಮಹಿಳಾ ಮಂಡಳದ ಸದಸ್ಯರಿಗೆ ತ್ರಿಶೂಲ ವಿತರಿಸಿ, ಪ್ರತಿಜ್ಞಾವಿಧಿ ಬೋಧಿಸಲಾಯಿತು.

# ಮೀಸಲಾತಿ 9ನೇ ಷೆಡ್ಯೂಲ್‌ಗೆ ಸೇರಿಸಲು ಒತ್ತಾಯ



**ಬಾಗಲಕೋಟೆ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹೆಚ್ಚಿಸುವ ಕಾನೂನನ್ನು 9ನೇ ಷೆಡ್ಯೂಲ್‌ಗೆ ಸೇರಿಸಲು ಕೇಂದ್ರ ಸರ್ಕಾರದ ಮೇಲೆ ಕೂಡಲೇ ರಾಜ್ಯ ಸರ್ಕಾರ ಒತ್ತಡವನ್ನು ಹಾಕಬೇಕು ಎಂದು ವಾಲ್ಮೀಕಿ ಸಮಾಜದ ಮುಖಂಡ ಹಾಗೂ ಲೋಕಸಭೆಯ ಮಾಜಿ ಸದಸ್ಯ ವಿ.ಎಸ್.ಉಗ್ರಪ್ಪ ಒತ್ತಾಯಿಸಿದರು.

ನವನಗರದ ಪತ್ರಿಕಾಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲೆ ರಾಜ್ಯದ ಎಲ್ಲಾ ಸಂಸದರು, ಶಾಸಕರು ಮತ್ತು ಮಂತ್ರಿಗಳ ಒತ್ತಡ ತಂದು ಶೇ.56ರಷ್ಟು ಮೀಸಲಾತಿಯ ಕಾನೂನನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಲು ಹೋರಾಟ ಮಾಡಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಆಶಯದಂತೆ ಎಸ್ಸಿ, ಎಸ್ಟಿ ಮತ್ತು ಓಬಿಸಿ ವರ್ಗದವರಿಗೆ ಊಟ ಹಾಕಿದ ನಂತರ ತಟ್ಟೆಯನ್ನು ಕಸಿದುಕೊಳ್ಳುವ ಕೆಲಸ ರಾಜ್ಯ ಮತ್ತು ಕೇಂದ್ರ ಸರ್ಕಾರ ಮಾಡುತ್ತಿವೆ. ನಮ್ಮ ಬದುಕಿನ ಮೇಲೆ ಸವಾರಿಯನ್ನು ಮಾಡುವ ಪ್ರಯತ್ನ ಸರ್ಕಾರ ಮಾಡುತ್ತಿದೆ ಎಂದರು.

ರಾಜ್ಯ ಸರ್ಕಾರ ಈಗಾಗಲೇ ಶೈಕ್ಷಣಿಕ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ ಅಧಿನಿಯಮ 2022ನ್ನು ಜಾರಿಗೆ ತಂದಿದೆ. ಈ ಕಾನೂನು ಜಾರಿಯಾದಾಗಿನಿಂದ ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸಿದರೆ ಮಾತ್ರ ಕಾನೂನು ಊರ್ಜಿತವಾಗುತ್ತದೆ. ಇಲ್ಲದಿದ್ದರೆ ತೊಂದರೆಯಾಗಲಿದೆ. ಈ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಚರ್ಚೆ ನಡೆಸಬೇಕು ಎಂದರು.

ವಾಲ್ಮೀಕಿ ಸಮಾಜದ ಅಧ್ಯಕ್ಷ ದ್ಯಾಮಣ್ಣ ಗಾಳಿ, ಯಲ್ಲಪ್ಪ ಕ್ಯಾದಿಗೇರಿ, ಎಂ.ನರಸಿಂಹಯ್ಯ, ವೆಂಕಟೇಶ್ ನಾಯಕ್, ರಾಜಣ್ಣ ಇದ್ದರು.

# ಯಲಮಗೇಟ್-ಗಡಿಕೇಶ್ವರ ರಸ್ತೆ ಅವ್ಯವಸ್ಥೆ



**ಕಲಬುರಗಿ:** ಜಿಲ್ಲೆಯ ಸೇಡಂ ತಾಲೂಕಿನ ಯಲಮಗೇಟ್-ಗಡಿಕೇಶ್ವರ ಮುಖ್ಯ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಸಂಕಷ್ಟದ ನಡುವೆ ಸಂಚರಿಸುವಂತಾಗಿದೆ. ರಸ್ತೆಯಲ್ಲಿನ ದೊಡ್ಡ ದೊಡ್ಡ ಗುಂಡಿಗಳು ಹಾಗೂ ಅನಿಯಮಿತ ಬಸ್ ಸಂಚಾರದಿಂದ ಶಾಲೆ ಮತ್ತು ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ತಡವಾಗಿ ತಲುಪುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಶಿಕ್ಷಣದ ಮೇಲೆಯೂ ಪ್ರತಿಕೂಲ ಪರಿಣಾಮ ಬೀರುತ್ತಿದೆ.

ರಸ್ತೆಯ ದುಸ್ಥಿತಿಯಿಂದ ವಿದ್ಯಾರ್ಥಿಗಳ ಸುರಕ್ಷತೆ ಪ್ರಶ್ನಾರ್ಥಕವಾಗಿದ್ದು, ಅಪಘಾತದ ಭೀತಿ ಹೆಚ್ಚಾಗಿದೆ. ರೈತರು ಕೃಷಿ ಉತ್ಪನ್ನ ಹಾಗೂ ಸಾಮಗ್ರಿಗಳ ಸಾಗಣೆಯಲ್ಲಿ ತೊಂದರೆ ಅನುಭವಿಸುತ್ತಿದ್ದು, ಗರ್ಭಿಣಿಯರು, ಮಹಿಳೆಯರು ಹಾಗೂ ವಯೋವೃದ್ಧರು ತುರ್ತು ಆರೋಗ್ಯ ಸೇವೆ ಪಡೆಯಲು ಪರದಾಡುವಂತಾಗಿದೆ. ಈ ಸಮಸ್ಯೆ ಕೇವಲ ರಸ್ತೆ ಅಭಿವೃದ್ಧಿಗೆ ಸೀಮಿತವಾಗದೇ, ಗ್ರಾಮೀಣ ಭಾಗದ ಜನರ ದೈನಂದಿನ ಬದುಕು ಮತ್ತು ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ಗಂಭೀರ ವಿಷಯವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವೀರೇಂದ್ರ ಪಾಟೀಲ್ ರಾಯ್ಕೋಡ್, ಯಲಮಗೇಟ್-ಗಡಿಕೇಶ್ವರ ರಸ್ತೆಯ ದುರಸ್ತಿ ಕಾಮಗಾರಿಯನ್ನು ತಕ್ಷಣ ಕೈಗೊಂಡು ವಿದ್ಯಾರ್ಥಿಗಳು, ರೈತರು ಹಾಗೂ ಸಾರ್ವಜನಿಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವರನ್ನು ಆಗ್ರಹಿಸಿದ್ದಾರೆ.

ಬೇಡಿಕೆಗೆ ಸ್ಪಂದಿಸದಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಹೋರಾಟ ಮತ್ತು ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಮುಂದುವರಿದ ಬಲ್ಡೋಟ ಹಠಾವೋ ಧರಣಿ




**ಕೊಪ್ಪಳ:** ಅನಿರ್ದಿಷ್ಟಾವಧಿ ಧರಣಿ 227 ದಿನಗಳನ್ನು ಪೂರೈಸಿತು.

ಕಳೆದ ಮೂರು ದಶಕದಲ್ಲಿ ತಾಲೂಕಿನ ಫಲವತ್ತಾದ ಭೂಮಿ, ಬೋರವೆಲ್, ಏತ ನೀರಾವರಿ ಆಧಾರಿತ ಕೃಷಿ ಸಂಪದ್ಭರಿತವಾಗಿದ್ದ ಜಾಗೆಯಲ್ಲಿ 28 ಬೃಹತ್ ಕಾರ್ಖಾನೆಗಳು ಸ್ಥಾಪನೆಯಾಗಿವೆ. ತುಂಗಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ಅಂತರ್ಜಲ ಸಾಕಷ್ಟಿದೆ.

ಇಲ್ಲಿನ ಕೃಷಿ ಭೂಮಿಯಲ್ಲಿ ತರಕಾರಿ, ಕಬ್ಬು, ಹಣ್ಣುಹಂಪಲು, ಎಲೆಬಳ್ಳಿ ಮುಂತಾದ ವಾಣಿಜ್ಯ ಬೆಳೆಯುತ್ತಿದ್ದರು. ನದಿ ತಟದಲ್ಲಿ ತುಂಗಭದ್ರಾ ಯೋಜನೆಗಾಗಿ ನಿರಾಶ್ರಿತರಾದ ಜನರಿಗೆ ಪುನರ್ವಸತಿ ಮಾಡಿದ ಗ್ರಾಮಗಳಾದ ಹಿರೇಬಗನಾಳ, ಕಾಸನಕಂಡಿ, ಚಿಕ್ಕಬಗನಾಳ, ಅಲ್ಲಾನಗರ, ಕುಣಿಕೇರಿ ಮುಂತಾದ 15 ಹಳ್ಳಿಗಳು ಸ್ಪಾಂಜ್ ಐರನ್, ಕೆಮಿಕಲ್ ಕಾರ್ಖಾನೆಗಳ ಮಾಲಿನ್ಯದಿಂದ ಬಾಧಿತವಾಗಿವೆ. ಜನರಿಗೆ ಅಕಾಲಿಕವಾಗಿ ರೋಗರುಜಿನಗಳು ಬಾಧಿಸುತ್ತಿವೆ. ಇಂದು ಸಾವು ಅವರ ಮನೆಯ ಕದ ತಟ್ಟುತ್ತಿದೆ.

ಹೀಗಿದ್ದೂ ಜನರು ಇಂಥ ಗಭೀರ ಸಮಸ್ಯೆಯನ್ನು ಸಹಿಸಿಕೊಳ್ಳಬೇಕು ಎನ್ನುವ ಕಾರ್ಖಾನೆ ಮಾಫಿಯಾ ಒತ್ತಡ ಹಾಕುತ್ತಿದೆ. ಈ ತರಹದ ಬೆದರಿಕೆಗಳಿಂದಾಗಿ ಗ್ರಾಮೀಣ ಜನರು ಅಹವಾಲು ಸಲ್ಲಿಸಲು ಮುಂದೆ ಬರುತ್ತಿಲ್ಲ, ಅವರ ಸಂಪೂರ್ಣ ಕೃಷಿ, ಹೈನುಗಾರಿಕೆ, ತೋಟದ ವಾಣಿಜ್ಯ ಬೆಳೆ ಎಲ್ಲಾ ಕಳೆದುಕೋಂಡು ಪರಿಹಾರಕ್ಕಾಗಿ ಕಂಪನಿ ಗೇಟ್ ಸುತ್ತುವಂತೆ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ. ತುಂಗಭದ್ರಾ ವಿಷವಾಗಿದೆ. ಅದೆ ನೀರನ್ನು ನಗರ ಮತ್ತು ಗ್ರಾಮೀಣ ಜನರಿಗೆ ಕುಡಿಸಲಾಗುತ್ತಿದೆ. ಎಷ್ಟು ಕಾಲ ಕಳೆದರೂ ವಿಷಗೊಳಿಸಿದ ಅಂತರ್ಜಾಲ ಶುದ್ಧವಾಗದು. ಈ ಕಾರಣದಿಂದ ಕಳೆದ ಏಳು ತಿಂಗಳಿಂದ ಬಲ್ಡೋಟ ಬೃಹತ್ ಹೂಡಿಕೆ ಬೇಡವೆಂದು ಕೊಪ್ಪಳ -ಭಾಗ್ಯನಗರ ಜನರ ಆರೋಗ್ಯ ಕಾಪಾಡಬೇಕೆಂದು ಹೋರಾಟ ಮಾಡಲಾಗುತ್ತಿದೆ. ಬಸಾಪುರ ಕೆರೆ ಬಲ್ಡೋಟ ಕಂಪನಿ ಅಕ್ರಮ ವಶದಿಂದ ಮುಕ್ತಗೊಳಿಸಿ ಜನ ಜಾನುವಾರು ನೀರು ಕುಡಿಯಲು ಅನುಕೂಲ ಮಾಡಬೇಕೆಂದು ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ನೇತೃತ್ವದಲ್ಲಿ ಧರಣಿ ಹೋರಾಟ ನಡೆಯುತ್ತಿದೆ. ಮಾಲಿನ್ಯಕಾರಿ ಕಾರ್ಖಾನೆ ಬಂದ್ ಮಾಡಿ, ಬಲ್ಡೋಟ ಬೃಹತ್ ಹೂಡಿಕೆ ಅನುಮತಿ ವಾಪಸ್ಸಾಗುವವರೆಗೆ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ನಿವೃತ್ತ ಉಪನ್ಯಾಸಕ ಡಾ.ಬಸವರಾಜ ಪೂಜಾರ, ನಿವೃತ್ತ ಪ್ರಾಚಾರ್ಯ ಬಿ.ಜಿ.ಕರಿಗಾರ, ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ರಂಗಕರ್ಮಿ ಲಕ್ಷ್ಮಣ ಪಿರಗಾರ, ಶರಣು ಶೆಟ್ಟರು, ರವಿ ಕಾಂತನವರ, ಭಾಕರ್ ಹುಸೇನ್, ಮಹಾದೇವಪ್ಪ ಜಲ್ಲಿ, ಶಿವಪ್ಪ ಜಲ್ಲಿ, ಗವಿಸಿದ್ದಪ್ಪ ಚಿಕ್ಕೇನಕೊಪ್ಪ, ವೆಂಕಣ್ಣಾಚಾರ ಬಿ.ಕಟ್ಟಿ, ಪ್ರಮೀಳಮ್ಮ ಪೂಜಾರ ಇತರರಿದ್ದರು.

## ಸಂಪಾದಕೀಯ

# ಅಮೆರಿಕದ ಉದ್ಧಟತನಕ್ಕೆ ಕಡಿವಾಣ ಅಗತ್ಯ

ಜಾಗತಿಕ ಮಟ್ಟದಲ್ಲಿ ಸ್ನೇಹ, ಸಹಕಾರ ಮತ್ತು ಪರಸ್ಪರ ಗೌರವದ ಮಾತುಗಳನ್ನು ಆಡುವ ರಾಷ್ಟ್ರಗಳು ತಮ್ಮ ನಡೆ-ನುಡಿಗಳಲ್ಲೂ ಅದನ್ನೇ ಪ್ರತಿಬಿಂಬಿಸಬೇಕು. ಆದರೆ ಇತ್ತೀಚೆಗೆ ಭಾರತೀಯ ತೈಲ ಹಡಗಿನ ಮೇಲೆ ಅಮೆರಿಕದ ಸೇನೆ ನಡೆಸಿರುವ ದಾಳಿ ಹಾಗೂ ಅದರ ಬಳಿಕ ವ್ಯಕ್ತವಾಗಿರುವ ಧೋರಣೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಎರಡು ದೇಶಗಳು ಉತ್ತಮ ರಾಜತಾಂತ್ರಿಕ ಮತ್ತು ಆರ್ಥಿಕ ಸಂಬಂಧಗಳನ್ನು ಹೊಂದಿರುವ ಸಂದರ್ಭದಲ್ಲಿ ಇಂತಹ ಘಟನೆ ನಡೆಯುವುದು ಸಮಂಜಸವಲ್ಲ. ಇದು ಪರಸ್ಪರ ವಿಶ್ವಾಸಕ್ಕೆ ಧಕ್ಕೆ ತರುವುದರ ಜತೆಗೆ ರಾಷ್ಟ್ರಗಳ ನಡುವೆ ಅಪನಂಬಿಕೆಯ ವಾತಾವರಣವನ್ನೂ ಸೃಷ್ಟಿಸುತ್ತದೆ.



ಘಟನೆಯ ಬಳಿಕ ವಿಷಾದ ವ್ಯಕ್ತಪಡಿಸುವುದು ಅಥವಾ ಸ್ಪಷ್ಟನೆ ನೀಡುವ ಬದಲು ತಾನು ಮಾಡಿದ ಕ್ರಮವೇ ಸರಿ ಎಂಬ ರೀತಿಯಲ್ಲಿ ಅಮೆರಿಕ ವರ್ತಿಸುತ್ತಿರುವುದು ಮತ್ತಷ್ಟು ಆತಂಕಕಾರಿ. ಜಾಗತಿಕ ಶಕ್ತಿಯಾಗಿರುವುದರಿಂದ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವ ಇಂದಿನ ಜಗತ್ತಿನಲ್ಲಿ ಯಾರಿಗೂ ಅನುಕೂಲಕರವಲ್ಲ. ಅದರ ಪರಿಣಾಮಗಳನ್ನು ಅಮೆರಿಕ ಈಗಾಗಲೇ ಹಲವು ಸಂದರ್ಭಗಳಲ್ಲಿ ಅನುಭವಿಸಿದೆ.

ವಿಶೇಷವಾಗಿ ಇರಾನ್ ವಿಚಾರದಲ್ಲಿ ಅಮೆರಿಕದ ಲೆಕ್ಕಾಚಾರಗಳು ಹಲವು ಬಾರಿ ತಪ್ಪಾಗಿವೆ. ತನ್ನ ಪ್ರಾಬಲ್ಯದಿಂದ ಎಲ್ಲವನ್ನೂ ಸಾಧಿಸಬಹುದು ಎಂಬ ಅಹಂಕಾರಕ್ಕೆ ಅಲ್ಲಿನ ಬೆಳವಣಿಗೆಗಳು ಸವಾಲು ಹಾಕಿವೆ. ಶಾಂತಿ ಮಾತುಕತೆಗಳ ಪ್ರಯತ್ನಗಳು ನಿರೀಕ್ಷಿತ ಫಲ ನೀಡದಿರುವುದು ಕೂಡ ಇದೇ ವಾಸ್ತವವನ್ನು ತೋರಿಸುತ್ತದೆ. ಅಂತಾರಾಷ್ಟ್ರೀಯ ಸಂಬಂಧಗಳು ಕೇವಲ ಸೇನಾ ಬಲ ಅಥವಾ ಆರ್ಥಿಕ ಶಕ್ತಿಯ ಮೇಲೆ ನಿಂತಿರುವುದಿಲ್ಲ. ಪರಸ್ಪರ ಗೌರವ, ವಿಶ್ವಾಸ ಮತ್ತು ಜವಾಬ್ದಾರಿಯುತ ನಡವಳಿಕೆಗಳು ಅವುಗಳ ಅಡಿಪಾಯವಾಗಿವೆ. ದೊಡ್ಡ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಬಳಸುವಾಗ ಇನ್ನಷ್ಟು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಇಲ್ಲವಾದರೆ ಸಣ್ಣ ಘಟನೆಗಳೇ ದೊಡ್ಡ ರಾಜತಾಂತ್ರಿಕ ಬಿಕ್ಕಟ್ಟುಗಳಿಗೆ ಕಾರಣವಾಗುವ ಸಾಧ್ಯತೆ ಇರುತ್ತದೆ.

ಭಾರತವು ಕಳೆದ ಕೆಲವು ವರ್ಷಗಳಲ್ಲಿ ಜಾಗತಿಕ ವೇದಿಕೆಯಲ್ಲಿ ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದೆ. ಆರ್ಥಿಕತೆ, ಭದ್ರತೆ, ತಂತ್ರಜ್ಞಾನ ಹಾಗೂ ವಿದೇಶಾಂಗ ನೀತಿಯಲ್ಲಿ ದೇಶ ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಇಂತಹ ಸಂದರ್ಭದಲ್ಲಿ ಭಾರತದ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಯಾವುದೇ ಕ್ರಮವನ್ನು ದೇಶ ಸುಮ್ಮನೆ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಸ್ನೇಹಪರ ಸಂಬಂಧಗಳನ್ನು ಕಾಪಾಡಿಕೊಳ್ಳುವ ಇಚ್ಛೆ ಇದ್ದರೂ ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಭಾರತ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಅಮೆರಿಕವೂ ಈ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕಿದೆ. ಸ್ನೇಹಿತ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ದರ್ಪ ಮತ್ತು ಪ್ರಾಬಲ್ಯದ ರಾಜಕಾರಣಕ್ಕಿಂತ ಸಮಾನತೆಯ ಮನೋಭಾವ ಅಗತ್ಯ. ತಪ್ಪು ನಡೆದಿದ್ದರೆ ಅದನ್ನು ಒಪ್ಪಿಕೊಳ್ಳುವ ಮತ್ತು ತಿದ್ದುಪಡಿ ಕ್ರಮ ಕೈಗೊಳ್ಳುವ ಪ್ರೌಢತೆ ವಿಶ್ವ ನಾಯಕತ್ವದ ಲಕ್ಷಣವಾಗಬೇಕು. ಇಲ್ಲವಾದರೆ ವಿಶ್ವಾಸದ ಬಿರುಕುಗಳು ಮತ್ತಷ್ಟು ಅಗಲವಾಗುವ ಅಪಾಯವಿದೆ.

ಹೀಗಾಗಿ ಅಮೆರಿಕ ತನ್ನ ನಡೆ-ನುಡಿಗಳನ್ನು ಮರುಪರಿಶೀಲಿಸಬೇಕಾದ ಸಮಯ ಇದು. ಶಕ್ತಿಯ ಪ್ರದರ್ಶನಕ್ಕಿಂತ ಸಂವಾದ ಮತ್ತು ಸಹಕಾರದ ಮಾರ್ಗವೇ ಶಾಶ್ವತ ಪರಿಹಾರವನ್ನು ನೀಡಬಲ್ಲದು. ಭಾರತ ಸೇರಿದಂತೆ ಸ್ನೇಹ ರಾಷ್ಟ್ರಗಳ ಭಾವನೆಗಳಿಗೆ ಗೌರವ ನೀಡುವ ಮೂಲಕವೇ ಅಮೆರಿಕ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯ. ಜಾಗತಿಕ ಶಾಂತಿ ಮತ್ತು ಸ್ಥಿರತೆಯ ದೃಷ್ಟಿಯಿಂದಲೂ ಇದೇ ಸೂಕ್ತ ಮಾರ್ಗವಾಗಿದೆ.

# ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

**ಮೋದಿ ಸಾಧನೆಗಳನ್ನು ಟೀಕಿಸುವ ಕಾಂಗ್ರೆಸಿಗರು ನೆಹರು ಸಾಧಿಸಿದ ಈ ಕೆಲವು ಋಣಾತ್ಮಕ ಸಾಧನೆಗಳನ್ನು ಕೂಡಾ ಅರಿಯಬೇಕಾಗಿದೆ.**

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಪ್ರಧಾನಿಯಾಗಿ ಮೋದಿಯ ದೀರ್ಘಾವಧಿ ಆಡಳಿತದ ಚರ್ಚೆ ಆರೋಗ್ಯಪೂರ್ಣ ಹಂತ ದಾಟಿ ಇನ್ನೆಲ್ಲಿಗೋ ಸಾಗಿದೆ. ಇಟಲಿ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ನೀಡಿದ್ದೊಂದೇ ಪ್ರಧಾನಿ ಮೋದಿಯ ದಾಖಲೆ ಎಂಬಲ್ಲಿವರೆಗೂ ಕಾಂಗ್ರೆಸ್ ಮುಖಂಡರೆನಿಸಿಕೊಂಡವರಿಂದ ಅತ್ಯಂತ ಕುತ್ಸಿತ ಟೀಕೆಗಳು ವ್ಯಕ್ತವಾಗುತ್ತಲೇ ಇವೆ. ಆದರೆ ದೇಶದ ಮೊದಲ ಪ್ರಧಾನಿ ನೆಹರು ಅವರು ಸಾಧಿಸಿದ ದಾಖಲೆಗಳನ್ನು ಮೋದಿ ಇರಲಿ, ಇನ್ನಾರಿಗೂ ಮುರಿಯಲು ಸಾಧ್ಯವೇ ಇಲ್ಲ ಎಂಬ ಅಸಲಿ ಸತ್ಯ ಸಂಗತಿಗಳು ಈಗಿನ ಕಾಂಗ್ರೆಸ್ ಮುಖಂಡರಿಗೆ ಖಂಡಿತ ಗೊತ್ತಿರಲಿಕ್ಕಿಲ್ಲ. ಅದೇನಾದರೂ ಗೊತ್ತಾದರೆ ಅವರೆಲ್ಲ ಹೌಹಾರಿ, ದಂಗಾಗಬಹುದು.

ಹೌದು. ನೆಹರು ಅವರ ಅಂತಹ ದಾಖಲೆಗಳು ಒಂದೆರಡಲ್ಲ. ಅಂತಹ ಕೆಲವು ದಾಖಲೆಗಳನ್ನಾದರೂ ಪರಿಶೀಲಿಸೋಣ. ಅದು ಸ್ವಾತಂತ್ರ್ಯ ಬಂದ ಹೊಸತು. ಕಾಶ್ಮೀರ ಇನ್ನೂ ಭಾರತದೊಳಗೆ ವಿಲೀನವಾಗಿರಲಿಲ್ಲ. ಗೃಹಮಂತ್ರಿ ಸರ್ದಾರ್ ಪಟೇಲರ ಸತತ ಪ್ರಯತ್ನ ಈ ದಿಸೆಯಲ್ಲಿ ನಡೆದೇ ಇತ್ತು. ಪಟೇಲರನ್ನು ಅವರಷ್ಟಕ್ಕೇ ಬಿಟ್ಟಿರುತ್ತಿದ್ದರೆ, ನೆಹರೂ ನಡುವೆ ಮೂಗು ತೂರಿಸದಿರುತ್ತಿದ್ದರೆ ಕಾಶ್ಮೀರ ಸಮಸ್ಯೆ ಪೆಡಂಭೂತವಾಗಿ ಕಾಡುತ್ತಲೇ ಇರಲಿಲ್ಲ. ಹೈದ್ರಾಬಾದ್, ಜುನಾಗಢದಂತಹ ಸ್ವತಂತ್ರ ಸಂಸ್ಥಾನಗಳನ್ನು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನಗೊಳಿಸಿದ ಪಟೇಲರಿಗೆ ಕಾಶ್ಮೀರವನ್ನೂ ಅದೇ ರೀತಿ ವಿಲೀನಗೊಳಿಸುವುದು ಏನೇನೂ ಕಷ್ಟದ ಸಂಗತಿಯಾಗಿರಲಿಲ್ಲ. ಆಗ ಕಾಶ್ಮೀರದ ರಾಜನಾಗಿದ್ದವನು ರಾಜಾ ಹರಿಸಿಂಗ್. ಆದರೆ ಸಂಸ್ಥಾನದ ಶೇ. 77 ಮಂದಿ ಪ್ರಜೆಗಳು ಮುಸ್ಲಿಮರಾಗಿದ್ದರು. ಇದೇ ಕಾರಣಕ್ಕೆ ನೆರೆಯ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳಿ ಎಸಗಿತು. ರಾಜಾ ಹರಿಸಿಂಗ್ ರಕ್ಷಣೆಗಾಗಿ ಪಟೇಲರ ಬಳಿ ಧಾವಿಸಿ ಬಂದರು. ಕೊಡಗಿನ ಕಲಿ ಜನರಲ್ ತಿಮ್ಮಯ್ಯ ಕಾಶ್ಮೀರದ ರಕ್ಷಣೆಯ ಸಂಪೂರ್ಣ ಹೊಣೆ ಹೊತ್ತಿದ್ದರು. ಪಾಕಿಸ್ತಾನ ವಶಪಡಿಸಿಕೊಂಡ ಐದನೇ ಎರಡು ಭಾಗ ಕಾಶ್ಮೀರವನ್ನು (ಪಿಒಕೆ) ಮರಳಿ ಪಡೆಯಲು ಸೈನ್ಯದೊಂದಿಗೆ ಸಜ್ಜಾಗಿದ್ದರು. ಆದರೆ ಅವರ ಈ ಸಾಹಸಕ್ಕೆ ಅಡ್ಡಿಯಾದವರು ಸನ್ಮಾನ್ಯ ನೆಹರು ಅವರು. ಇದ್ದಕ್ಕಿದ್ದಂತೆ ನೆಹರು ಕದನ ವಿರಾಮ ಘೋಷಿಸಿಬಿಟ್ಟರು. ಅನಂತರ ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆಗೊಯ್ದು ಅದನ್ನೊಂದು ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿಸಿದರು. ಜಮ್ಮು-ಕಾಶ್ಮೀರಕ್ಕೆ 370ನೇ ವಿಧಿ ಕರುಣಿಸಿ, ವಿಶೇಷ ಸ್ಥಾನಮಾನ ನೀಡಿ ಒಂದೇ ದೇಶದಲ್ಲಿ ಇಬ್ಬರು ಪ್ರಧಾನಿ, ಎರಡು ಸಂವಿಧಾನ, ಎರಡು ರಾಷ್ಟ್ರಧ್ವಜಗಳಿರುವಂತೆ ನೋಡಿಕೊಂಡರು. ನೆಹರು ಎಸಗಿದ ಈ ಪ್ರಮಾದವನ್ನು ಸರಿಪಡಿಸಲು 73 ವರ್ಷ ಬೇಕಾಯ್ತು. ನೆಹರೂ ಅವರ ಈ ದಾಖಲೆಯನ್ನು ಸರಿಗಟ್ಟಲು ಸಾಧ್ಯವೇ?

**ಕಲಾತ್ ವಿಲೀನಕ್ಕೆ ತಿರಸ್ಕಾರ :** 1947ರಲ್ಲಿ ಬಲೂಚಿಸ್ತಾನದ ಒಂದು ರಾಜ ಸಂಸ್ಥಾನವಾಗಿದ್ದ ಕಲಾತ್ ಅನ್ನು ಭಾರತದಲ್ಲಿ ವಿಲೀನಗೊಳಿಸಲು ಆ ಸಂಸ್ಥಾನದ ಮುಖ್ಯಸ್ಥ ಅಹಮದ್ ಯಾರ್ಖಾನ್ ಎಲ್ಲ ಬಗೆಯ ಸಿದ್ಧತೆಗಳೊಡನೆ ನೆಹರು ಬಳಿಗೆ ಬಂದಿದ್ದರು. ಸಮ್ಮತಿ ಪತ್ರಕ್ಕೆ ನೆಹರು ಸಹಿ ಹಾಕಿದ್ದರೆ ಸಾಕಿತ್ತು. ಆದರೆ ಯಾವುದೋ ಕಾರಣಕ್ಕೆ ನೆಹರು ಸಹಿ ಹಾಕಲೇ ಇಲ್ಲ. ಇದನ್ನೇ ಕಾಯುತ್ತಿದ್ದ ಪಾಕಿಸ್ತಾನ ಕಲಾತ್ ಮೇಲೆ ದಾಳಿ ನಡೆಸಿ ಅದನ್ನು ತನ್ನ ವಶಪಡಿಸಿಕೊಂಡಿತು. ಭಾರತದ ಭಾಗವೇ ಆಗಿಹೋಗುತ್ತಿದ್ದ ಬಲೂಚಿಸ್ತಾನ್ ಹೀಗೆ ಪಾಕ್‌ಗೆ ಸೇರಿಹೋಯಿತು. ಇದೆಂತಹ ದಾಖಲೆ ನೆಹರು ಅವರದು!

**ಹೈದ್ರಾಬಾದ್ ವಿಲೀನಕ್ಕೂ ವಿರೋಧ :** ನಿಜಾಮನ ಆಳ್ವಿಕೆಯಲ್ಲಿದ್ದ ಹೈದ್ರಾಬಾದ್ ಸಂಸ್ಥಾನದ ವಿಲೀನಕ್ಕೂ ನೆಹರು ತೀವ್ರ ವಿರೋಧವಿತ್ತು. ಆದರೆ ಗೃಹಮಂತ್ರಿ ಪಟೇಲರು ನೆಹರು ವಿರೋಧಕ್ಕೆ ಮಣಿಯಲಿಲ್ಲ. ನಿಜಾಮನ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಕೈಗೊಂಡು ಅದನ್ನು ಭಾರತದೊಳಗೆ ವಿಲೀನ ಗೊಳಿಸಿದರು. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ನೀವೇಕೆ ಕೋಮುವಾದಿ ಎಂಬ ಹಣೆಪಟ್ಟಿ ಅಂಟಿಸಿಕೊಳ್ಳಲು ಹೊರಟಿದ್ದೀರಿ? ಎಂದು ಪಟೇಲರನ್ನು ನೆಹರು ಹಂಗಿಸಿದ್ದರು. ಉಕ್ಕಿನ ಮನುಷ್ಯ ಪಟೇಲ್ ಅದಕ್ಕೆ ಸೊಪ್ಪು ಹಾಕಲಿಲ್ಲ. ನೆಹರು ಅವರ ಈ 'ಸೆಕ್ಯುಲರ್' ದಾಖಲೆ ಮುರಿಯಲು ಮೋದಿಗೆ ಸಾಧ್ಯವೆ?

**ಕಾಬೋ ಕಣಿವೆ ಬರ್ಮಾಕ್ಕೆ ಬಹುಮಾನ :** ಫಲವತ್ತಾದ, ಸಮೃದ್ಧ ಹಸಿರು ನಳನಳಿಸುವ 11 ಸಾವಿರ ಚ.ಕಿ.ಮೀ. ವಿಸ್ತೀರ್ಣದ ಮಣಿಪುರ ರಾಜಧಾನಿಯ ಭಾಗವಾಗಿದ್ದ ಕಾಬೋ ಕಣಿವೆ 1450ರಿಂದಲೂ ಭಾರತದ ಭಾಗವಾಗಿಯೇ ಇತ್ತು. ಬ್ರಿಟಿಷರು ಮಣಿಪುರವನ್ನು ವಶಪಡಿಸಿಕೊಂಡ ಬಳಿಕ ಕಾಬೋ ಕಣಿವೆಯನ್ನು 1834ರಲ್ಲಿ ಬರ್ಮಾಕ್ಕೆ ಭೋಗ್ಯಕ್ಕೆ ನೀಡಿದ್ದರು. ಸ್ವಾತಂತ್ರ್ಯ ಬಂದ ಬಳಿಕ ಭೋಗ್ಯಕ್ಕೆ ನೀಡಲಾದ ಕಾಬೋ ಕಣಿವೆಯನ್ನು ಬರ್ಮಾದಿದ ಮರಳಿ ಪಡೆಯುವ ಎಲ್ಲಾ ಅವಕಾಶಗಳೂ ಮುಕ್ತವಾಗಿತ್ತು. ಸೂಕ್ತ ಪರಿಹಾರ ನೀಡಿದ್ದರೆ ಬರ್ಮಾ ಅದನ್ನು ಭಾರತಕ್ಕೆ ಬಿಟ್ಟುಕೊಡುತ್ತಿತ್ತು. ಆದರೆ ನೆಹರೂಗೆ ತಾನೊಬ್ಬ ದಾನಶೂರ ಕರ್ಣನೆಂದು ಬಿಂಬಿಸಿಕೊಳ್ಳಬೇಕಿತ್ತು. ಬರ್ಮಾಕ್ಕೆ ಅದನ್ನು ಬಹುಮಾನವಾಗಿ ಬಳುವಳಿ ನೀಡಿಬಿಟ್ಟರು. ನಮ್ಮ ನೆಹರು ಎಂತಹ ತ್ಯಾಗಮಯಿ! ಎಂತಹ ದಾಖಲೆವೀರ.

**ಕೋಕೋ ದ್ವೀಪಗಳು ಬರ್ಮಾಕ್ಕೆ ದಾನ :** ಅಂಡಮಾನ್‌ನ ಭಾಗವಾಗಿದ್ದ ಎರಡು ಕೋಕೋ ದ್ವೀಪಗಳನ್ನೂ ಸ್ವಾತಂತ್ರ್ಯ ಬಂದ ಕೂಡಲೇ ನೆಹರು ಬರ್ಮಾಕ್ಕೆ ದಾನ ಮಾಡಿಬಿಟ್ಟರು. ಬರ್ಮಾ ಅವುಗಳನ್ನು ಚೀನಾ ದೇಶಕ್ಕೆ ಕೊಡುಗೆಯಾಗಿ ನೀಡಿತು. ಚೀನಾ ಮಾತ್ರ ಭಾರತದ ಮಿಲಿಟರಿ ಕಾರ್ಯಾಚರಣೆ ಮೇಲೆ ಕಣ್ಣಿಡಲು ಆ ದ್ವೀಪದಲ್ಲೊಂದು ಎಲೆಕ್ಟ್ರಾನಿಕ್ ಸರ್ವಿಯಲೆನ್ಸ್ ಸ್ಟೇಷನ್ ಸ್ಥಾಪಿಸಿದೆ. ಬಂಗಾಳ ಕೊಲ್ಲಿಯಲ್ಲಿ ಭಾರತದ ನೌಕಾಪಡೆಯ ಯಾವುದೇ ಚಟುವಟಿಕೆ ನಡೆದರೂ ಚೀನಾಕ್ಕೆ ತಕ್ಷಣ ತಿಳಿಯುತ್ತದೆ. ಅದು ಭಾರತದಲ್ಲೇ ಇದ್ದಿದ್ದರೆ ಭಾರತದ ಮಿಲಿಟರಿ ಕಾರ್ಯಾಚರಣೆಗೆ ಅದೊಂದು ವ್ಯೂಹಾತ್ಮಕ ಕೇಂದ್ರವಾಗಿರುತ್ತಿತ್ತು. ನೆಹರೂ ಮತ್ತೊಮ್ಮೆ ತ್ಯಾಗಮಯಿಯಾದರು!

**ವಿಶ್ವಸಂಸ್ಥೆಯ ಖಾಯಂ ಸ್ಥಾನ ಬೇಡವೆಂದರು :** 1950ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತವನ್ನು ಖಾಯಂ ಸದಸ್ಯನನ್ನಾಗಿ ಮಾಡಿಕೊಳ್ಳಲು ಅಮೆರಿಕ ಆಹ್ವಾನ ನೀಡಿತ್ತು. ನೆಹರು ಮಾತ್ರ ಅದನ್ನು ತಿರಸ್ಕರಿಸಿದರು. ಚೀನಾಕ್ಕೆ ಖಾಯಂ ಸ್ಥಾನ ನೀಡದಿದ್ದರೆ ಭಾರತಕ್ಕೂ ಬೇಡ ಎಂದರು. 1955ರಲ್ಲಿ ಅಮೆರಿಕ ಮತ್ತೊಮ್ಮೆ ರಷ್ಯಾದೊಂದಿಗೆ ಸೇರಿ ಭಾರತಕ್ಕೆ ಖಾಯಂ ಸ್ಥಾನ ನೀಡಲು ಮುಂದಾಗಿತ್ತು. ಆಗಲೂ ನೆಹರು ಅವರದ್ದು ಅದೇ ಹಠ. ಹೀಗಾಗಿ ನೆಹರು ಕೃಪೆಯಿಂದ ಚೀನಾಕ್ಕೆ ಖಾಯಂ ಸ್ಥಾನ ಸಿಕ್ಕಿಬಿಟ್ಟಿತು. ಇದಂತೂ ನೆಹರೂ ಅವರ ತ್ಯಾಗದ ಪರಾಕಾಷ್ಠೆಯ ದಾಖಲೆ!

**ಗ್ವಾದರ್ ಬಂದರು, ಬೇಡವೆಂದರು:** 1958ರಲ್ಲಿ ಓಮನ್ ದೇಶದ ಸುಲ್ತಾನರು ಆಯಕಟ್ಟಿನ ಗ್ವಾದರ್ ಬಂದರು ಪ್ರದೇಶವನ್ನು ಭಾರತಕ್ಕೆ ನೀಡಲು ಸಿದ್ಧರಾಗಿದ್ದರು. ನೆಹರು ಅವರೇ ಬೇಡವೆಂದರು. ಕೂಡಲೇ ಪಾಕಿಸ್ತಾನ ಅದನ್ನು ಖರೀದಿಸಿತು. ಇದೀಗ ಗ್ವಾದರ್ ಬಂದರು ಚೀನಾದ ಎಲ್ಲಾ ರಸ್ತೆ ನಿರ್ಮಾಣ ಯೋಜನೆಗಳಿಗೆ ಹೆಬ್ಬಾಗಿಲಿನಂತಾಗಿದೆ. ಚೀನಾದ ಸಾಮ್ರಾಜ್ಯಶಾಹಿ ದಾಹಕ್ಕೆ ಕಡಿವಾಣ ಹಾಕಬಹುದಾಗಿದ್ದ ಗ್ವಾದರ್ ಬಂದರು ಖರೀದಿಸದ ನೆಹರು ದಾಖಲೆ ಮೀರುವವರಾರು?

**ನೇಪಾಳ ವಿಲೀನಕ್ಕೂ ಅಡ್ಡಿ:** ಹಿಂದು ದೇಶವಾಗಿದ್ದ, ಹಿಂದು ಸಂಸ್ಕೃತಿ ಪರಂಪರೆಗಳನ್ನೇ ಹಾಸಿ ಹೊದ್ದಿರುವ ನೇಪಾಳವನ್ನು ಭಾರತದಲ್ಲಿ ವಿಲೀನಗೊಳಿಸಲು ಅಲ್ಲಿನ ರಾಜ ತ್ರಿಭುವನ ಬೀರು ಬಿಕ್ರಂ ಶಹಾದೇವ್ (1906-1955) ಅವರು 1950ರಲ್ಲಿ ಬಯಸಿದ್ದರು. ಭಾರತದಲ್ಲಿ ವಿಲೀನವಾದರೆ ನೇಪಾಳದ ಸರ್ವಾಂಗೀಣ ವಿಕಾಸ ಸಾಧ್ಯವೆಂದು ತ್ರಿಭುವನ್ ನಂಬಿದ್ದರು. ಆದರೆ ನೆಹರುಗೆ ಅದು ಬೇಕಿರಲಿಲ್ಲ. ವಿಲೀನಕ್ಕೆ ಒಪ್ಪಲಿಲ್ಲ. ಇವತ್ತು ಮಾವೋವಾದಿಗಳ ಹಿಡಿತದಲ್ಲಿ ನೇಪಾಳ ತೊಳಲಾಡಬೇಕಾದ ಅನಿವಾರ್ಯತೆಗೆ ನೆಹರು ಅವರ ಈ ಕೆಟ್ಟ ನಿರ್ಧಾರವೇ ಕಾರಣ.

**ಭಾರತ ಪರಮಾಣು ಶಕ್ತಿ ರಾಷ್ಟ್ರವಾಗದಂತೆ ತಡೆ:** ಚೀನಾ ದೇಶಕ್ಕೂ ಮೊದಲು ಭಾರತ ಪರಮಾಣು ಶಕ್ತಿ ರಾಷ್ಟ್ರವಾಗಲು ಅಮೆರಿಕ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ರಾಜಸ್ಥಾನದ ಮರಳುಗಾಡಿನಲ್ಲಿ ಪರಮಾಣು ಬಾಂಬ್ ಪರೀಕ್ಷೆಗೆ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ನೆಹರುಗೆ ಭಾರತ ನ್ಯೂಕ್ಲಿಯರ್ ಪವರ್ ದೇಶವಾಗುವುದು ಬೇಡ ಎಂಬ ಬಯಕೆ ಇತ್ತು. ಹೀಗಾಗಿಯೇ 1962ರಲ್ಲಿ ಚೀನಾ ಜೊತೆಗೆ ಯುದ್ಧ ಸಂಭವಿಸಿ ಭಾರತದ ಸಾವಿರಾರು ಚದರ ಕಿ.ಮೀ. ಭೂಭಾಗ ಕೈತಪ್ಪಿತು. ಹಿಂದಿ-ಚೀನಿ ಭಾಯಿ ಭಾಯಿ ಎಂಬ ನೆಹರು ಅವರ ಭೋಳೆತನದ ಈ ದಾಖಲೆಯನ್ನು ಯಾರಿಗಾದರೂ ಮುರಿಯಲು ಸಾಧ್ಯವೇ?

**ಸೋಮನಾಥ ಪುನರ್ ನಿರ್ಮಾಣಕ್ಕೂ ವಿರೋಧ:** ಮೋದಿ ಪ್ರಧಾನಿಯಾದ ಬಳಿಕ ಹಿಂದುಗಳ ಅಸ್ಮಿತೆ, ಶ್ರದ್ಧಾ ಕೇಂದ್ರವಾಗಿದ್ದ ಅಯೋಧ್ಯೆ ಶ್ರೀರಾಮ ಮಂದಿರ ಜನ್ಮಸ್ಥಾನದಲ್ಲೇ ಪುನರ್ ನಿರ್ಮಾಣ ಆಗುವಂತೆ ತಾರ್ಕಿಕ ಅಂತ್ಯಕ್ಕೆ ಸಹಕರಿಸಿದರು.

ಕಾಶಿ ವಿಶ್ವನಾಥ ಮಂದಿರಕ್ಕೆ ವಿಶೇಷ ಕಾರಿಡಾರ್ ನಿರ್ಮಿಸಿದರು. ಆದರೆ ನೆಹರು ನಮ್ಮ ಪ್ರಮುಖ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಸೌರಾಷ್ಟ್ರದ ಸೋಮನಾಥ ಮಂದಿರದ ಪುನರ್ ನಿರ್ಮಾಣಕ್ಕೆ ಉಗ್ರ ವಿರೋಧ ವ್ಯಕ್ತಪಡಿಸಿದ್ದರು. ತನ್ಮೂಲಕ ತಾನೊಬ್ಬ 'ಸೆಕ್ಯುಲರ್' ಪ್ರಧಾನಿ ಎಂಬ ದಾಖಲೆ ಬರೆಯಲು ಹೊರಟಿದ್ದರು. ಆದರೆ ಗೃಹಮಂತ್ರಿ ಪಟೇಲರು ಪಟ್ಟು ಹಿಡಿದು ಈ ಹಿಂದು ಶ್ರದ್ಧಾ ಕೇಂದ್ರದ ಪುನರ್ ನಿರ್ಮಾಣ ಪೂರ್ತಿಗೊಳಿಸಿದ್ದರು.

**ಆತ್ಮರತಿಯ ಪರಾಕಾಷ್ಠೆ:** 1947ರಿಂದ ಹೆಚ್ಚುಕಡಿಮೆ 2000 ಇಸವಿಯವರೆಗೆ ದೇಶದ ದೊಡ್ಡ ಯೋಜನೆಗಳು, ಬೃಹತ್ ಸೇತುವೆಗಳು, ವಿದ್ಯುತ್ ಕೇಂದ್ರಗಳು, ವಿವಿಗಳು, ಆಸ್ಪತ್ರೆಗಳು, ರಸ್ತೆಗಳು, ಉದ್ಯಾನವನಗಳು ಎಲ್ಲವೂ ನೆಹರು ಸಂತತಿಮಯ. ನೆಹರು ಹೆಸರು ಬಿಟ್ಟರೆ ಬೇರೆ ಪುಣ್ಯಾತ್ಮರ ಹೆಸರೇ ಹೊಳೆಯಲಿಲ್ಲ. ಮೋದಿ ಕಾಲದಲ್ಲಿ ನೂರಾರು ವಿವಿಗಳು, ಆಸ್ಪತ್ರೆಗಳು, ವಿಮಾನ ನಿಲ್ದಾಣಗಳು, ಹೊಸ ರೈಲುಗಳು, ಬೃಹತ್ ಸೇತುವೆಗಳ ನಿರ್ಮಾಣ ವಾಯಿತು. ಆದರೆ ಯಾವುದಕ್ಕೂ ಮೋದಿಯ ಹೆಸರಿಡಲಿಲ್ಲ (ಅಹ್ಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂ ಮಾತ್ರ ಇದಕ್ಕೆ ಅಪವಾದ). ನೆಹರು ತಮಗೆ ತಾವೇ 'ಭಾರತ ರತ್ನ' ಪುರಸ್ಕಾರ ಸಿಗುವಂತೆ ನೋಡಿಕೊಂಡರು. ಆತ್ಮರತಿಯ ಪರಾಕಾಷ್ಠೆಯ ಈ ನೆಹರು ದಾಖಲೆ ಸದಾ ಕಾಲಕ್ಕೂ ಅಬಾಧಿತ.

ಇಲ್ಲಿ ದಾಖಲಿಸಿದ ನೆಹರೂ ಕುರಿತ ದಾಖಲೆಗಳು ಖಂಡಿತ ಉತ್ಪ್ರೇಕ್ಷೆಯದಲ್ಲ. ಬಾಬು ರಾಜೇಂದ್ರ ಪ್ರಸಾದರ 'ಇಂಡಿಯಾ ಡಿವೈಡೆಡ್', ಲೋಹಿಯಾ ಅವರ 'ಗಿಲ್ಟಿಮೆನ್ ಆಫ್ ಪಾರ್ಟೀಶನ್', ದಳವಿಯವರ 'ದಿ ಹಿಮಾಲಯನ್ ಬ್ಲಂಡರ್', ಎಂ. ಓ. ಮಥಾಯ್ ಬರೆದ 'ರೆಮಿನಿಸೆನ್ಸಸ್ ಆಫ್ ದಿ ನೆಹರು ಏಜ್', ಬಂದೋಪಾಧ್ಯಾಯರ 'ದಿ ಮೇಕಿಂಗ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ' ಮುಂತಾದ ಕೃತಿಗಳಲ್ಲಿ ನೆಹರು ಅವರ ದ್ವಂದ್ವ ನಿಲುವುಗಳು ,ದೇಶವಿರೋಧಿ ನೀತಿಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ.

ನೆಹರು ಅವರ ಇನ್ನಷ್ಟು ದಾಖಲೆಗಳಿವೆ. ಪ್ರಧಾನಿಯಾಗಿ ಮಾಡಬಾರದಿದ್ದ ಹಲವು ಸಂಗತಿಗಳಿವೆ. ಈ ಲೇಖನದಲ್ಲಿ ದಾಖಲಿಸಲಾಗದ 'ದಾಖಲೆಗಳೂ' ಇವೆ! ನೆಹರು ಅಂಧಾಭಿಮಾನಿಗಳು ಬೇಕಿದ್ದರೆ ಅವನ್ನೆಲ್ಲ ಹುಡುಕಿ ಓದಿ, ಜನ್ಮ ಪಾವನ ಮಾಡಿಕೊಳ್ಳಲಿ.

# ಹರೆಯದವರು ಮತ್ತು ಲೈಂಗಿಕ ವಿಜ್ಞಾನ-1

**ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.**

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಹರೆಯದವರಿಗೆ ಲೈಂಗಿಕ ವಿಜ್ಞಾನದ ಕುರಿತು ಲೇಖನವನ್ನು ಬರೆದರೆ ಸರಿಯೇ ಎಂದು ಓದುಗರು ಪ್ರಶ್ನೆಮಾಡಬಹುದು. ನಮ್ಮ ದೇಶದಲ್ಲಿ ವಿಶೇಷವಾಗಿ ಹತ್ತನೇ ವಯಸ್ಸಿನಿಂದ ಹತ್ತೊಂಭತ್ತನೇ ವಯಸ್ಸಿನ ಹರೆಯದವರು ಜನಸಂಖ್ಯೆಯ ಸುಮಾರು ಐದನೇ ಒಂದು ಭಾಗದಷ್ಟಿದ್ದಾರೆ. ನಮ್ಮ ಸಮಾಜದಲ್ಲಿ ಶತಮಾನಗಳಿಂದ ಮಕ್ಕಳು ಮತ್ತು ಹರೆಯದವರಿಗೆ ಲೈಂಗಿಕತೆ ಕುರಿತು ಹೇಳುವುದು ಅಪಾಯ. ಲೈಂಗಿಕ ವಿಚಾರಗಳನ್ನು ಹಂಚಿಕೊಳ್ಳುವುದು ನಾಚಿಕೆಗೇಡು. ಅವರಿಗೆ ಲೈಂಗಿಕತೆ ಕುರಿತು ಮಾಹಿತಿ ನೀಡಿದರೆ, ದಾರಿ ತಪ್ಪಿದ ಮಕ್ಕಳಾಗುತ್ತಾರೆ ಎಂದು ಹಿರಿಯರು ಭಾವಿಸುತ್ತಾರೆ. ಅದರೊಂದಿಗೆ ಪುರುಷ-ಸ್ತ್ರೀ ಮಧ್ಯೆ ಇರುವ ಲಿಂಗಭೇದ ಮತ್ತು ಪುರುಷ ಪ್ರಧಾನ ಸಮಾಜ ಹೀಗೆ ಕೆಲವು ಅಂಶಗಳಿಂದ ಪೋಷಕರಾಗಲೀ, ಸ್ನೇಹಿತರಾಗಲೀ ಹರೆಯದವರನ್ನು ಲೈಂಗಿಕ ಜ್ಞಾನದಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಹಾಗಾಗಿ ಹರೆಯದವರು ಲೈಂಗಿಕ ಅಂಗಾಂಗಗಳ ಬೆಳವಣಿಗೆ, ಲೈಂಗಿಕ ಪ್ರಕ್ರಿಯೆ, ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳು, ಮತ್ತು ಅದರ ಸಾಧಕ-ಬಾಧಕಗಳನ್ನು ಕುರಿತು ಸಂದೇಹ ಮತ್ತು ಒತ್ತಡಗಳಿಂದ ಬಳಲುವುದನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಇದಕ್ಕೆ ಅವರಲ್ಲಿ ಇರುವ ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳೇ ಕಾರಣ. ಈಗ ನಮ್ಮದು ನಾಗರೀಕ ಸಮಾಜ. ಎಲ್ಲರೂ ಲೈಂಗಿಕ ಜ್ಞಾನ ಉಳ್ಳವರೆಂದು ಜನರು ಭಾವಿಸುತ್ತಾರೆ. ಆದರೆ ಅರ್ಧಕ್ಕಿಂತ ಹೆಚ್ಚು ಮಂದಿ ಹಿರಿಯರು ಲೈಂಗಿಕತೆ ಕುರಿತು ಹರೆಯದ ಮಕ್ಕಳೊಂದಿಗೆ ಸಹಜ ಜ್ಞಾನವನ್ನು ಹಂಚಿಕೊಂಡು ಅವರ ಸಂದೇಹಗಳನ್ನು ನಿವಾರಿಸಲು ನಾಚಿಕೊಳ್ಳುತ್ತಾರೆ. ಇದು ಕೇವಲ ಅವಿದ್ಯಾವಂತರು ಮತ್ತು ಹಳ್ಳಿಗಳಲ್ಲಿ ಒಂದೇ ಅಲ್ಲ, ವಿದ್ಯಾವಂತರು ಎನಿಸಿಕೊಂಡವರಲ್ಲೂ ವ್ಯಾಪಕವಾಗಿ ಕಾಣಬಹುದು. ಈ ದಿಶೆಯಲ್ಲಿ ಒಂದೆರಡು ಉದಾಹರಣೆಗಳನ್ನು ತಿಳಿಯೋಣ.




ಎರಡನೇ ಪಿಯುಸಿಯಲ್ಲಿ ಓದುತ್ತಿದ್ದ ಹದಿನಾರು ವರ್ಷದ ರವಿಗೆ ಇದ್ದಕ್ಕಿದ್ದಂತೆ ಹೊಟ್ಟೆ ನೋವು ಕಾಣಿಸಿಕೊಂಡಿತು. ರವಿ ಹೊಟ್ಟೆನೋವೆಂದು ಹೇಳಿದಾಗ ಮೊದಲಿಗೆ ಮನೆ ಮದ್ದು ಮಾಡಿದ ತಂದೆ ತಾಯಿಗಳು ಮಗನಿಗೆ ತರಗತಿಯಲ್ಲಿ ಓದುವುದು ಕಷ್ಟವಾಗಿ ಹೀಗೆ ಹೇಳುತ್ತಿದ್ದಾನೆಂದು ಭಾವಿಸಿದರು. ದಿನಕಳೆದಂತೆ ರವಿಯ ಹೊಟ್ಟೆನೋವು ಹೆಚ್ಚಾಗಿ ಸುಸ್ತು ಎಂದು ಹೇಳಲು ಪ್ರಾರಂಭಿಸಿದ. ಹಸಿವಿಲ್ಲದೇ ಊಟ ಕಡಿಮೆ ಮಾಡುತ್ತಿದ್ದ. ನಿದ್ದೆ ಬರುವುದಿಲ್ಲ ಮತ್ತು ನಿದ್ದೆಗೆ ಹೋದರೆ ಭಯ ಎಂದ. ಆದರೂ ಕಾಲೇಜಿಗೆ ಹೋಗುತ್ತಿದ್ದ. ಕ್ರಮೇಣ ಓದಿನಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಸುಸ್ತು ಎಂದು ಹೇಳಿ, ಮನೆಯಲ್ಲೇ ಉಳಿಯುತ್ತಿದ್ದ. ಗತ್ಯಂತರವಿಲ್ಲದೇ ರವಿಯನ್ನು ವೈದ್ಯರಲ್ಲಿ ಕರೆದೊಯ್ದರು. ಅಲ್ಲಿ ಎಲ್ಲ ವೈದ್ಯಕೀಯ ಪರೀಕ್ಷೆಗಳೂ ನಾರ್ಮಲ್ ಆಗಿದ್ದವು. ಹೊಟ್ಟೆ ಸ್ಕ್ಯಾನ್, ಎಂ.ಆರ್.ಐ. ಹೀಗೆ ವೈದ್ಯರ ಶಾಪಿಂಗ್ ಪ್ರಾರಂಭವಾಗಿ ಎರಡು ಮೂರು ತಿಂಗಳುಗಳೇ ಕಳೆದವು. ಆದರೆ ರವಿಯ ತೊಂದರೆ ವಾಸಿಯಾಗಲಿಲ್ಲ. ಯಾರೋ ಏನೋ ಮಾಡಿಸಿರಬೇಕೆಂದು ಮಂತ್ರ-ತಂತ್ರ, ಮಾಟ ಎಲ್ಲವೂ ನಡೆಯಿತು. ಕೊನೆಗೆ ಕೈಮದ್ದು ಹಾಕಿಸಿದ್ದಾರೆಂದು, ಔಷಧ ನೀಡಿ ವಾಂತಿ ಮಾಡಿಸಿದರು. ವಾಂತಿಯಲ್ಲಿದ್ದ ಒಂದು ಗಡ್ಡೆ ನೋಡಿ, ಇನ್ನೇನು ತಮ್ಮ ಮಗ ಅಂತೂ ಇಂತೂ ಬಚಾವಾದ ಎಂದು ಅಂದುಕೊಂಡರು. ಆದರೆ ಹದಿನೈದು ದಿನಗಳ ನಂತರ ಒಂದು ರಾತ್ರಿ ರವಿ ಎದ್ದು ಬಂದು ಅಮ್ಮನ ಹತ್ತಿರ ತನಗೆ ಇರುವುದೇ ಬೇಡ ಅನಿಸುತ್ತದೆ ಎಂದ. ಕೂಡಲೇ ರವಿಯನ್ನು ಕುಟುಂಬ ವೈದ್ಯರ ಹತ್ತಿರ ಕರೆದೊಯ್ದರು. ಕುಟುಂಬ ವೈದ್ಯರು ರವಿಯನ್ನು ಪರೀಕ್ಷಿಸಿ ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಲು ಹೇಳಿದರು. ಒಲ್ಲದ ಮನಸ್ಸಿನಿಂದ ರವಿಯ ಅಪ್ಪ ಅಮ್ಮ ರವಿಯನ್ನು ಮನೋವೈದ್ಯರಲ್ಲಿಗೆ ಕರೆದೊಯ್ದರು.

ವಿವರವಾದ ಮಾಹಿತಿಗಳನ್ನು ಪಡೆದ ವೈದ್ಯರು ರವಿಯ ಮನಃಪರೀಕ್ಷೆ ಮಾಡಿದರು. ರವಿಗೆ ಇತ್ತೀಚೆಗೆ ನಿದ್ದೆಯಲ್ಲಿ ವೀರ್ಯ ಸ್ಖಲನವಾಗಿ ಅದರಿಂದ ತಾನು ಮುಂದೆ ನಪುಂಸಕನಾಗುತ್ತೇನೆಂಬ ಭಯವೇ ಕಾರಣ. ಅದರಿಂದ ರವಿಗೆ ಈ ವಿಧದ ತೊಂದರೆಗಳು ಪ್ರಾರಂಭವಾಗಿವೆ ಎಂದು ತಿಳಿಯಿತು. ರವಿಯ ಅಪ್ಪ ಅಮ್ಮನನ್ನು ಕರೆದು ರವಿಯ ತೊಂದರೆಯನ್ನು ವಿವರಿಸಿ, ರವಿಗೆ ಆಪ್ತ ಸಲಹೆ ಮತ್ತು ಖಿನ್ನತೆಗೆ ಅವಶ್ಯವಾದ ಔಷಧ ಅವಶ್ಯವೆಂದು ತಿಳಿಸಿದರು. ಇದನ್ನು ಕೇಳಿದ ರವಿಯ ತಾಯಿ, ನಮ್ಮ ರವಿ ಬಹಳ ಬುದ್ಧಿವಂತ ಹುಡುಗ, ಅವನಿಗೆ ಇದು ಸಹಜ ಎನ್ನೋದು ಗೊತ್ತಿರಬೇಕು. ಅದನ್ನೆಲ್ಲಾ ಹೇಗೆ ನಾವು ದೊಡ್ಡವರು ಹೇಳೋದು ಹೇಳಿ ಸಾರ್ ಎಂದರು. ವೈದ್ಯರು ಅದರ ಕುರಿತು ವಿವರಿಸಿದ ನಂತರ ಮಗನಿಗೆ ಚಿಕಿತ್ಸೆ ಕೊಡಿಸಲು ಒಪ್ಪಿದರು. ಚಿಕಿತ್ಸೆಯ ನಂತರ ರವಿ ಪೂರ್ಣ ಗುಣಮುಖನಾಗಿ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿದನು.

ಹದಿನಾಲ್ಕು ವರ್ಷ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು ಹನ್ನೆರಡು ವರ್ಷಕ್ಕೆ ಋತುಮತಿಯಾದಳು. ಏಕಮಾತ್ರ ಪುತ್ರಿ. ಇಷ್ಟು ಬೇಗ ಋತುಮತಿಯಾದಳಲ್ಲಾ ಎಂದು ಒಂದೆಡೆ ಅಪ್ಪ ಅಮ್ಮನಿಗೆ ಗಾಬರಿ. ಎಷ್ಟೋ ಜನ ಗೆಳತಿಯರು ''ಹದಿಮೂರು -ಹದಿನಾಲ್ಕು ವರ್ಷವಾದರೂ ಇನ್ನೂ ಋತುಮತಿಯಾಗಿಲ್ಲ. ಅದು ನಮಗೆ ದೊಡ್ಡ ಚಿಂತೆ ಆಗಿದೆ'' ಎಂದು ಹೇಳುವುದನ್ನು ಕೇಳಿದಾಗ, ತಮ್ಮ ಮಗಳು ಋತುಮತಿಯಾದಳು, ತಾನೆಷ್ಟು ಅದೃಷ್ಟವಂತೆ ಎಂದು ಮನದಲ್ಲೇ ತಾಯಿ ಸಂತಸಪಟ್ಟರು. ಹೇಗಿದ್ದರೂ ಮಗಳು ಬುದ್ಧಿವಂತೆ, ಮಗಳಿಗೆ ಋತುಮತಿಯಾಗುವುದರ ಅರ್ಥ ಏನು? ಅದರಿಂದ ಭವಿಷ್ಯದಲ್ಲಿ ಏನಾಗುತ್ತದೆ ಎಂಬುದನ್ನು ಅವಳೇ ತಿಳಿದುಕೊಳ್ಳುತ್ತಾಳೆ. ತಾನು ಹೇಳುವ ಅವಶ್ಯಕತೆ ಇಲ್ಲ ಎಂದು ಮಗಳಿಗೆ ವಿವರಿಸಲೇ ಇಲ್ಲ. ಒಂದು ದಿನ ಮಗಳು (ಹೆಸರು ನಮೂದಿಸುವುದು ಸರಿಯಲ್ಲ, ಆದರೆ ಇದು ನೈಜ ಘಟನೆ) ಇದ್ದಕ್ಕಿದ್ದಂತೆ ಬೆಳಿಗ್ಗೆ ಎದ್ದು, ತನಗೆ ಯಾಕೋ ಏನೋ ಹೊಟ್ಟೆಯಲ್ಲಿ ವಾಕರಿಕೆ ಆಗುತ್ತಿದೆ ಎಂದಳು. ರಾತ್ರಿ ಏನೋ ತಿಂದಿದ್ದು ಅಜೀರ್ಣ ಆಗಿರಬಹುದು ಎಂದು ತಾಯಿ ಮಾತ್ರೆಗಳನ್ನು ಕೊಟ್ಟರು. ಆದರೆ ಮಾರನೇ ದಿನ ಪುನಃ ವಾಂತಿ ಆದಾಗ, ಮಗಳು ಕಳೆದ ಎರಡು ತಿಂಗಳಿಂದ ಮುಟ್ಟಾಗಿಲ್ಲ ಎಂಬುದು ನೆನಪಿಗೆ ಬಂದು ಮಗಳನ್ನು ಕೇಳಿದಳು. ಅದಕ್ಕೆ ಮಗಳು ಏನೇನೋ ಕಾರಣ ಹೇಳಿ ಸುಮ್ಮನಾದಳು. ಮೂರು ದಿನಗಳಾದರೂ ವಾಕರಿಕೆ ನಿಲ್ಲದಿದ್ದಾಗ ವೈದ್ಯರ ಹತ್ತಿರ ಕರೆದೊಯ್ದರು. ವಿದ್ಯಾರ್ಥಿನಿಯನ್ನು ಪರೀಕ್ಷಿಸಿದ ವೈದ್ಯರು ಹುಡುಗಿಯ ರಕ್ತ ಪರೀಕ್ಷೆ ಮಾಡಿದಾಗ, ಮಗಳು ಎರಡು ತಿಂಗಳ ಗರ್ಭಿಣಿ ಎಂದು ತಿಳಿದುಬಂತು. ಇದನ್ನು ತಿಳಿಸಿದಾಗ ತಾಯಿಗೆ ಶಾಕ್. ಅದು ಯಾಕೆಂದು ಮಗಳನ್ನು ವಿಚಾರಿಸಿದಾಗ ತನಗೆ ಫೇಸ್ ಬುಕ್‌ನಲ್ಲಿ ಒಬ್ಬ ಡಿಗ್ರಿ ಹುಡುಗನ ಪರಿಚಯವಾಗಿ ಒಂದು ದಿನ ಇಬ್ಬರೂ ಕಾಫಿಗೆಂದು ಹೋದಾಗ ನಡೆದ ಘಟನೆ ಎಂದು ವಿವರಿಸಿ ಅಳುವುದಕ್ಕೆ ಪ್ರಾರಂಭಿಸಿದಳು. ನಂತರ ಅದನ್ನು ಯಾರಿಗೂ ಹೇಳಬಾರದೆಂದೂ, ಇತರರಿಗೆ ತಿಳಿದರೆ ತಮ್ಮ ಮಾನ ಹೋಗುತ್ತದೆಂದೂ ಕೂಡಲೇ ಗರ್ಭಪಾತ ಮಾಡಿಸಬೇಕೆಂದು ವೈದ್ಯರಿಗೂ ತಿಳಿಸದೇ ಅಲ್ಲಿಂದ ಪಲಾಯನ ಮಾಡಿದರು. ಮುಂದೇನಾಯಿತು ಎಂಬುದರ ಕುರಿತು ವೈದ್ಯರಿಗೂ ಮಾಹಿತಿ ಸಿಗಲಿಲ್ಲ. ಇಂತಹ ಎಷ್ಟೋ ಉದಾಹರಣೆಗಳನ್ನು ತಿಳಿಸಬಹುದು.

ಮೇಲಿನ ಉದಾಹರಣೆಗಳು ಹರೆಯದವರು ಹೇಗೆ ಲೈಂಗಿಕ ಅಜ್ಞಾನದಿಂದ ಬೇರೆಯವರ ಶೋಷಣೆಗಳಿಗೊಳಗಾಗುತ್ತಾರೆ ಎಂಬುದು ಓದುಗರಿಗೆ ಈಗ ಸ್ಪಷ್ಟವಾಗಿರಲು ಸಾಕು.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಇದರಿಂದ ಹರೆಯದವರ ಮನಸ್ಸಿನಲ್ಲಿ ತಡೆಯಲಾಗದ ಗೊಂದಲಗಳುಂಟಾಗುತ್ತದೆ. ಸಂದೇಹಗಳು ಪುಟಿದೇಳುತ್ತವೆ. ಸಂದೇಹಗಳನ್ನು ಹಿರಿಯರ ಅಥವಾ ಗೆಳೆಯರ ಹತ್ತಿರ ಕೇಳಲು ನಾಚಿಕೆ. ಸಾಮಾಜಿಕ ಜಾಲತಾಣಗಳಲ್ಲಿ ತೋರಿಸುವ ದೃಷ್ಯಗಳು ಮನಸ್ಸನ್ನು ಮತ್ತಷ್ಟು ಒತ್ತಡಕ್ಕೀಡು ಮಾಡುತ್ತದೆ. ಇದರಿಂದ ಹಲವಾರು ದುಷ್ಪರಿಣಾಮಗಳಾಗುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.

ಕೆಲವು ದಶಕಗಳ ಹಿಂದೆ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯವೇ ಎಂಬುದರ ಕುರಿತು ಸರ್ಕಾರಿ ಹಂತದಲ್ಲಿ ಚರ್ಚೆ ನಡೆಯಿತು. ಕೆಲವರು ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯ ಎಂದು ವಾದಿಸಿದರೆ, ಕೆಲವರು ಅದು ಅಪಾಯ ಎಂದು ವಾದಿಸಿದರು. ಶಾಲೆಗಳಲ್ಲಿ ಯಾವ ಹಂತದಲ್ಲಿ ಲೈಂಗಿಕ ಶಿಕ್ಷಣವನ್ನು ಕೊಡಬೇಕು ಎಂಬುದರ ಕುರಿತು ಪುನಃ ಚರ್ಚೆಯಾಯಿತು. ಪ್ರೌಢಶಾಲಾ ಹಂತದಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಒಳ್ಳೆಯದು ಎಂದು ತೀರ್ಮಾನಿಸಿದರು. ಅದನ್ನು ವಿದ್ಯಾರ್ಥಿಗಳಿಗೆ ಹೇಳುವುದು ಕಷ್ಟ ಎಂಬ ಅಭಿಪ್ರಾಯ ಉಪಾಧ್ಯಾಯರಿಂದ ಬಂತು. ಅಂತೂ ಈಗ ಲೈಂಗಿಕ ಶಿಕ್ಷಣವನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿದೆ ಎಂಬುದು ಸಮಾಧಾನದ ಸಂಗತಿ.

(ಮುಂದುವರಿಯುವುದು)

# ಬಿಡುವಿಲ್ಲ, ಈ ಬೆರಳುಗಳು ಭಲೇ ಬ್ಯುಸಿ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ನಮ್ಮ ದೇಹದ ಪ್ರತಿಯೊಂದು ಅಂಗಗಳ ಮೇಲೂ ನಮಗೆ ಒಂದಲ್ಲ ಒಂದು ರೀತಿಯ ನಿಯಂತ್ರಣ ಇರುವ ವಿಚಾರ ಗೊತ್ತಿರುವಂಥದ್ದೇ. ಆ ಅಂಗಗಳ ಮೇಲಿನ ಹಾಗೊಂದು ನಿಯಂತ್ರಣದ ಅಗತ್ಯ, ಅವಶ್ಯಕತೆ ಹಾಗೂ ಪರಿಣಾಮಗಳ ಅರಿವೂ ನಮ್ಮಲ್ಲಿ ಬಹುತೇಕರಿಗೆ ಇರುತ್ತದೆ. ಆದಾಗ್ಯೂ ನಮ್ಮ ದೇಹದ ಯಾವುದಾದರೂ ಒಂದು ಅಂಗ ಮಾತ್ರ ನಮ್ಮ ಮಾತನ್ನೇ ಕೇಳದೇ ಆಗಾಗ ತನ್ನದೇ ಚಟುವಟಿಕೆಗಳಲ್ಲಿ – ಚಟುವಟಿಕೆ ಅನ್ನುವುದಕ್ಕಿಂತಲೂ ಕಿತಾಪತಿಯಲ್ಲಿ– ತೊಡಗಿಸಿಕೊಳ್ಳುತ್ತದೆ ಎಂದರೆ ಅದು ನಮ್ಮ ಬೆರಳುಗಳು. ''ಇದು ಬೇಡ..., ಅದು ಬೇಡ...., ಬೇಡಪ್ಪಾ ಮಾಡಬೇಡ'' ಎಂದು ಅದೆಷ್ಟೇ ಹೇಳಿದರೂ, ಮನಸ್ಸು ಆ ಕುರಿತು ಜಾಗೃತವಾಗಿದ್ದರೂ ಕೂಡಾ ಅವು ಅದು ಹೇಗೋ ನಮ್ಮ ಗಮನವನ್ನು ತಪ್ಪಿಸಿಕೊಂಡು ಒಂದಿಲ್ಲೊಂದು ಇಂಥ ಕೀಟಲೆಗಳಲ್ಲಿ ತೊಡಗಿಸಿಕೊಳ್ಳದೇ ಇರಲಾರವು!

ನೀವು ಸುಮ್ಮನೇ ಇದ್ದರೂ, ನಿಮ್ಮ ಮೆದುಳು ಕೊಂಚ ವಿರಾಮ ತೆಗೆದುಕೊಳ್ಳೋಣ ಅಂದುಕೊಂಡರೂ, ಈ ಬೆರಳುಗಳು ಮಾತ್ರ, 'ಇಲ್ಲ ಇಲ್ಲ ನಮಗಂತೂ ಏನೂ ಮಾಡದೇ ಸುಮ್ಮನೇ ನಿಶ್ಚಲ ಸ್ಥಿತಿಯಲ್ಲಿ ಇರಲೂ ಸಾಧ್ಯವೇ ಇಲ್ಲ' ಎಂದೆನ್ನುತ್ತಾ ಏನಾದರೊಂದು ಕಾರುಬಾರಿಗೆ ಇಳಿದೇ ಇಳಿಯುತ್ತವೆ. ಆಗಷ್ಟೇ ಶಾಲೆಗೆ ಸೇರಿದ ಪುಟ್ಟ ಪುಟ್ಟ ಮಕ್ಕಳಿಗೆ ಟೀಚರ್, 'ಏನೂ ಮಾಡಬೇಡಿ, ಸುಮ್ಮನೇ ಕುಳಿತುಕೊಳ್ಳಿ, ಮಾತಾಡಬೇಡಿ' ಎಂದು ಅದೆಷ್ಟೇ ಸಲ, ಪರಿ ಪರಿಯಾಗಿ ಹೇಳಿದರೂ ಆ ಪುಟಾಣಿ ಪಿಳ್ಳೆಗಳು ಏನಾದರೊಂದು ನಾನ್‌ಸ್ಟಾಪ್ ಕೆಲಸದಲ್ಲಿ ಇನ್ನಿಲ್ಲದಂತೆ ತೊಡಗಿಸಿಕೊಳ್ಳುತ್ತವಲ್ಲ ಹಾಗೆಯೇ ನಮ್ಮ ಬೆರಳುಗಳು. 'ಐ ಹ್ಯಾವ್ ನಂಥಿಂಗ್ ಟು ಡೂ' ಎಂದು ಈ ನರಮಾನವರಾದರೂ ಆಗಾಗ ಹೇಳುತ್ತಲೇ ಇರುತ್ತಾರೆ. ಏನೇನೋ ಮಾಡಲು ಇದ್ದರೂ ಮಾಡಲು ಏನೂ ಇಲ್ಲವೇ ಇಲ್ಲ ಎಂದು ನೆಪ ಹೇಳಿಯಾದರೂ ಕೆಲವೊಮ್ಮೆ ಸುಮ್ಮನೇ ಖಾಲಿ ಖಾಲಿಯಾಗಿ ಕುಳಿತುಕೊಳ್ಳುವುದೂ ಇದೆಯೆನ್ನಿ. ಆದರೆ ಈ ನಮ್ಮ ಬೆರಳುಗಳೋ ತಾವೆಂದೂ 'ಐ ಹ್ಯಾವ್ ನಂಥಿಂಗ್ ಟು ಡೂ' ಎಂದು ಹೇಳಿಕೊಂಡವರೂ ಅಲ್ಲ, ಹಾಗೆ ನಡೆದುಕೊಂಡವರೂ ಅಲ್ಲ ಎಂದು ಪರಮ ಬಿಗುಮಾನದಿಂದ ಹೇಳಿ ಬೀಗಿಕೊಳ್ಳಬಹುದು. ಆ ಮಟ್ಟಿಗೆ ಅವು ಒಂದಿಲ್ಲೊಂದು ಕೆಲಸದಲ್ಲಿ ಸದಾ ವ್ಯಸ್ತ. ಹಾಗಾದರೆ ಈ ಬೆರಳುಗಳು ಬಿಡುವಿನಲ್ಲಿ ಏನೇನು ಮಾಡುತ್ತವೆ? ಬನ್ನಿ ಒಂದೊಂದಾಗಿ ನೋಡೋಣ.

**ಬೆರಳುಗಳ ಚಂಡೆ-ಮದ್ದಳೆ ನಾದ:** ಮಾಡಲು ತಮಗೇನೂ ಕೆಲಸ ಇಲ್ಲ ಎನ್ನುವುದು ಖಾತ್ರಿಯಾದ ತಕ್ಷಣ ಬೆರಳುಗಳು ಮಾಡಲಿಳಿಯುವ ಮೊದಲ ಕೆಲಸವೇ ಸಿಕ್ಕ ಸಿಕ್ಕಲ್ಲಿ ಸಣ್ಣಗೆ ಬಡಿಯುತ್ತಾ, ಸಂಗೀತ ರಸ ಧಾರೆ ಹರಿಸುತ್ತಾ ಯಾವುದೋ ವಾದ್ಯ ತಂಡದ ಸದಸ್ಯರಂತೆ ವರ್ತಿಸುವುದು. ಯಾವ ಮೇಲ್ಮೈ ಆದರೂ ಸರಿಯೇ ಬೆರಳುಗಳಿಗೆ ಅವು ಒಂದು ಬಗೆಯಲ್ಲಿ ಚೆಂಡೆ, ಮದ್ದಳೆ, ತಮಟೆ, ಡ್ರಮ್‌ನಂತೆ ಕಾಣಿಸಲಾರಂಭಿಸುತ್ತವೆ. ಮತ್ತೆ ಅರೆಕ್ಷಣವೂ ತಡಮಾಡದೇ ಬೆರಳುಗಳು ಅವುಗಳ ಮೇಲೆ ಹಾರಿ ಹಾರಿ ಕುಣಿದು, ನೆಗೆಯುತ್ತಾ ಬಗೆ ಬಗೆಯ ಶಬ್ದ ಹೊರಡಿಸುವಲ್ಲಿ ನಿರತರಾಗುತ್ತವೆ. ತಮಾಷೆ ಅಂದರೆ ಬೆರಳುಗಳು ಈ ಪರಿ ಸಂಗೀತ ಕಚೇರಿ, ಪರಸ್ಪರ ಜುಗಲ್‌ಬಂಧಿಯಲ್ಲಿ ತೊಡಗಿಸಿಕೊಂಡರೂ ಅದು ಕೆಲವೊಮ್ಮೆ ನಮಗೇ ಗೊತ್ತಾಗುವುದಿಲ್ಲ!

**ಗಡ್ಡ ನೇವರಿಸೋ 'ದಾಡಿ'ಗಾರ್ಡ್:** ಕೆಲಸ ಇಲ್ಲದ ಬೆರಳುಗಳು ಮಾಡೋ ಇನ್ನೊಂದು ಕೆಲಸ ಗಡ್ಡ ನೇವರಿಸುವುದು. ಆರಂಭದಲ್ಲಿ ನಯವಾಗಿ, ವಿನಯವಾಗಿ ಗಡ್ಡವನ್ನು ನೇವರಿಸಲಾರಂಭಿಸಿ, ಕ್ರಮೇಣ ಅದು ಪರ ಪರನೇ ಗಡ್ಡ ಕೆರೆಯುವವರೆಗೂ ಮುಂದುವರಿದೀತು. ಸದಾ ಗಡ್ಡದ ಅಕ್ಕಪಕ್ಕವೇ ಸುಳಿದಾಡುವ ಈ ಬೆರಳುಗಳ ನಡೆ ನುಡಿಯನ್ನು ಗಮನಿಸುತ್ತಿದ್ದರೆ, ಇವುಗಳನ್ನು 'ದಾಡಿ'ಗಾರ್ಡ್ ಎಂದು ಕರೆಯಬಹುದು ನೋಡಿ. ಆಲೋಚನೆ, ಅಸಹಾಯಕತೆ, ಕೋಪ, ನಿಟ್ಟುಸಿರು ಹೀಗೆ ಒಂದೊಂದಕ್ಕೂ ಒಂದೊಂದು ರೀತಿಯಲ್ಲಿ ಗಡ್ಡದ ಕಡೆಗೆ ಬೆರಳುಗಳು ದೌಡಾಯಿಸುತ್ತವೆ. ವಿಶೇಷವೆಂದರೆ ಇದಾವುದೂ ಇಲ್ಲದೇ ಇರುವಾಗಲೂ ಆಗಾಗ ಗಡ್ಡವೆಂಬ ಗುಡ್ಡವನ್ನು ಹತ್ತದೇ ಹೋದರೆ ಬೆರಳುಗಳಿಗೆ ಸಮಾಧಾನವೇ ಇರಲಾರದು.

**ಪರಿ ಪರಿ ಪೆನ್ ಆಟ:** ಅತ್ಯಂತ ಗಂಭೀರವಾಗಿ ನಡೆಯುತ್ತಿದ್ದ ಮೀಟಿಂಗ್ ಒಂದು ನೀರಸವಾಗುತ್ತಿರುವುದರ ನಿಜ ದ್ಯೋತಕ ಯಾವುದು ಗೊತ್ತೇ? ಯಾವುದೆಂದರೆ ಆ ಮೀಟಿಂಗ್‌ನಲ್ಲಿ ಭಾಗಿಯಾದವರ ಬೆರಳುಗಳು ಪೆನ್ ಜೊತೆಗೆ ಆಟಕ್ಕೆ ಇಳಿಯುವುದು. ಅಷ್ಟೊತ್ತೂ ಸುಮ್ಮನೇ ಎಲ್ಲೋ ನೋಟ್‌ಪ್ಯಾಡ್ ಅಥವಾ ಡೈರಿಯ ನಡುವಿನಲ್ಲಿದ್ದ ಪೆನ್ನು ಬೆರಳುಗಳ ಸುಪರ್ದಿಗೆ ಬಂದು, ಬೆರಳುಗಳು ಒಂದೇ ಸಮನೆ ಪೆನ್‌ನ ಜೊತೆಗೆ ಸರಸ ಸಲ್ಲಾಪಕ್ಕೆ ಇಳಿದಿವೆ ಎಂದರೆ ಮೀಟಿಂಗ್ ಬೋರ್ ಹೊಡೆಸಲಾರಂಭಿಸಿದೆ ಎಂದೇ ಅರ್ಥ. ಬೆರಳುಗಳು ಪೆನ್ನನ್ನು ಅತ್ತಿಂದಿತ್ತ ಲಾಗ ಹಾಕಿಸುತ್ತಾ ಥೇಟ್ ಜಿಮ್ನಾಸ್ಟಿಕ್ ಪಟುವಿನಂತೆ ನಡೆಸಿಕೊಳ್ಳಲಾರಂಭಿಸುತ್ತವೆ ಹಾಗೂ ಲೆಕ್ಕವಿಲ್ಲದಷ್ಟು ಸಲ ಸುಮ್ಮ ಸುಮ್ಮನೆ 'ಟಿಕ್ ಟಾಕ್.. ಟಿಕ್ ಟಾಕ್' ಎಂದು ಕ್ಲಿಕ್ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಅವುಗಳದ್ದು.

**ಸರಿ ಸರಿ ಕೂದಲ ಸರಿಸು:** ವಾಹನಗಳಲ್ಲಿ ವೈಪರ್‌ಗಳಿರುತ್ತವೆ. ಗಾಜಿನ ಮೇಲೆ ಬೀಳುವ ನೀರನ್ನು ಬದಿಗೆ ಸಾರಿಸುವುದು ಅವುಗಳ ಕೆಲಸ. ಕೆಲವರ ಬೆರಳುಗಳದ್ದೂ ಅದೇ ಕೆಲಸ. ಅದರಲ್ಲಿ ಎರಡು ವಿಧಗಳು. ಆಗಾಗ ಮುಖಕ್ಕೆ ಅಡ್ಡ ಬರುವ ಕೂದಲನ್ನು ಥಟ್ಟನೇ ಬದಿಗೆ ಸರಿಸುವುದು ಒಂದಾದರೆ, ಇನ್ನೊಂದು ಕೂದಲು ಅಡ್ಡ ಬರದಿದ್ದರೂ ಸುಮ್ಮನೇ ಆಗಾಗ ಸರಿಸದೇ ಹೋದರೆ ಅದೇನೋ ಬೆರಳುಗಳಿಗೆ ಸಮಾಧಾನವೇ ಇಲ್ಲ. ಮತ್ತೆ ಮತ್ತೆ ಇಳಿಯುತ್ತದೆ ಎಂದು ಗೊತ್ತಿದ್ದರೂ ಸರಿಸುವ ಈ ಕಾಯಕದಲ್ಲಿ ಬೆರಳುಗಳು ಭಾರೀ ಬ್ಯುಸಿ.

**ನಟಿಕೆ ಮುರಿಯೋಣು ಬಾ:** ಬೆರಳುಗಳು ತಮ್ಮ ಈ ಬಗೆಯ ಕೀಟಲೆಗಳಿಗೆ ಬೇರೆ ವಸ್ತು ಅಥವಾ ಸಾಮಾಗ್ರಿಯ ಸಾಥ್ ದೊರಕದೇ ಇದ್ದಾಗ ಅವು ತಮ್ಮಲ್ಲೇ ಏನಾದರೂ ಬದಲೀ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗುತ್ತವೆ. ಅದರ ಪರಿಣಾಮವೇ ನಟಿಕೆ ಮುರಿಯೋದು. ಈ ಕೈಯ ಬೆರಳಿನಿಂದ ಆ ಕೈಯ ಬೆರಳುಗಳ, ಹಾಗೂ ಆ ಕೈಯ ಬೆರಳಿನಿಂದ ಈ ಕೈಯ ಬೆರಳುಗಳ ನಟಿಕೆ ಮುರಿಯುವ ವೈಖರಿ ನೀ ನನಗಾದರೆ ನಾ ನಿನಗಾಗುವೆ ಎಂಬ ತತ್ವವನ್ನು ನೆನಪಿಸುವಂತಿದೆ. ಮುರಿಯುವುದು ಒಳ್ಳೆಯದಲ್ಲ ಎಂದರೂ ಈ ನಟಿಕೆ ಮುರಿಯುವುದು ಅವುಗಳ ಪ್ರಕಾರ ಆ ಪರಿಧಿಯ ಹೊರಗೆ ನಿಲ್ಲುವಂಥದ್ದು.

**ನಿಲ್ಲದ ಉಗುರು ಕಚ್ಚಾಟ:** ಗುರುತರ ಹೊಣೆಗಾರಿಕೆ ಇರುವ ಬಗ್ಗೆ ಕೇಳಿರುತ್ತೇವೆ. ಆದರೆ ಎಲ್ಲೋ ಕೆಲವರಲ್ಲಿ ಒಂದು ಬಗೆಯ 'ಉಗುರು'ತರ ಹೊಣೆಯೂ ಇದೆ ಎನ್ನುವುದನ್ನು ಹೊರ ಪ್ರಪಂಚಕ್ಕೆ ಸಾಧಿಸಿ ತೋರಿಸುವ ದೀಕ್ಷೆ ತೊಟ್ಟಿರುವಂತೆ ಬೆರಳುಗಳು ತಮ್ಮ ಉಗುರನ್ನು ಕಚ್ಚುವಂತೆ ಮತ್ತೆ ಮತ್ತೆ ಹಲ್ಲಿಗೆ ಸುಪಾರಿ ನೀಡುತ್ತವಿರಬೇಕು. ಉಗುರು ಕತ್ತರಿಸಿಕೊಳ್ಳಲು ಬಿಡುವು ಮಾಡಿಕೊಳ್ಳುವ ಬದಲಾಗಿ, ಚೂರೇ ಚೂರು ಬಿಡುವು ಸಿಕ್ಕರೂ ಹೀಗೆ ಉಗುರು ಒಂದೇ ಸಮನೆ ಕತ್ತರಿಸಿಕೊಳ್ಳಲ್ಪಡುವುದರಿಂದ ಆ ಉಗುರುಗಳ ನಿರ್ನಾಮವೇ ಆಗಿರುತ್ತದೆ. ಉಗುರು ಕಚ್ಚುವುದು ಒಳ್ಳೆಯ ಅಭ್ಯಾಸವಲ್ಲ ಎಂದು ಯಾರೇ ಗುರ್ರ್ ಎಂದರೂ ಬೆರಳುಗಳು ಅದಕ್ಕೆಲ್ಲಾ ಸೊಪ್ಪು ಹಾಕದೇ, ಈ ಕಚ್ಚುವ ಕ್ರಿಯೆಗೆ ಶರಣಾಗುತ್ತಲೇ ಇರುತ್ತವೆ.

**ಅಗೆಯುವ ಕೆಲಸ ಪ್ರಗತಿಯಲ್ಲಿದೆ:** ಬೆರಳುಗಳು ತಮಗಿನ್ನು ಬಿಡುವು ಎಂದಾಕ್ಷಣ ಅವು ಕೇವಲ ಬೆರಳಾಗಿ ಉಳಿಯದೇ ಅಕ್ಷರಶಃ ಡ್ರಿಲ್ಲಿಂಗ್ ಯಂತ್ರವೇನೋ ಎನಿಸುವಂತೆ ಪರಿವರ್ತನೆ ಹೊಂದುವುದೂ ಇದೆ. ಆಗಾಗ ಹೀಗೆ ಮೂಗು, ಕಿವಿಯ ಹೂಳೆತ್ತದೇ ಹೋದರೆ, ಬೆರಳುಗಳು ತಮ್ಮ ಬಿಡುವಿನ ಸಮಯ ಸಾಗುವುದೇ ಇಲ್ಲವೇನೋ ಎನ್ನುವುದನ್ನು ನಿರ್ಧರಿಸಿದಂತೆ ವರ್ತಿಸುತ್ತವೆ. ಬೆರಳಿನ ಈ ಕ್ರಿಯೆ ಅದೆಷ್ಟೋ ಬಾರಿ ಮುಜುಗರಕ್ಕೆ ಕಾರಣವಾದರೂ ಅವು ಮಾತ್ರ ಜಗ್ಗುವ ಮಾತೇ ಇಲ್ಲ ಎಂದೆನ್ನಬಹುದು. ಇದೋ ಎಂದೂ ಪೂರ್ಣಗೊಳ್ಳದ ಕಾಮಗಾರಿ ಎಂದರೆ ಬಹುಶಃ ಯಾರೂ ಮೂಗುಮುರಿಯಲಿಕ್ಕಿಲ್ಲ.

**ಮೊಬೈಲ್ ಮೇಲೆ ನಲಿದಾಡೋ:** ಈ ಮೇಲೆ ಹೇಳಿದ್ದೆಲ್ಲವನ್ನೂ ಮೀರಿಸುವಂತೆ ಬೆರಳು ಇನ್ನೊಂದು ಬಹುಮುಖ್ಯ ಕೆಲಸದಲ್ಲಿ ಸದಾ ನಿರತವಾಗಿರುತ್ತದೆ. ಅದುವೇ ಮೊಬೈಲ್ ಮೇಲೆ ನಲಿದಾಡುವುದು. ಅದನ್ನು ಸುಮ್ಮನೆ ಕೈಯಲ್ಲಿ ಎತ್ತಿಕೊಳ್ಳುವುದು, ಸ್ಕ್ರೀನ್ ನೋಡುವುದು, ಪವರ್ ಆನ್ ಮಾಡುವುದು, ಮತ್ತೆ ಅನ್‌ಲಾಕ್ ಮಾಡುವುದು, ಹತ್ತು-ಹದಿನೈದು ಸೆಕೆಂಡ್ ಬಿಟ್ಟು ಲಾಕ್ ಮಾಡಿ ಬದಿಗಿರಿಸುವುದು. ಅದಾಗಿ ಐದಾರು ನಿಮಿಷವೂ ಆಗಿರುವುದಿಲ್ಲ ಮತ್ತೊಮ್ಮೆ ಅದೆಲ್ಲವನ್ನೂ ಇನ್ನೊಮ್ಮೆ ಸರಣಿಯಂತೆ ಮಾಡಿ ಮುಗಿಸುವುದು. ಹೀಗೆ ಇನ್ನೊಂದು, ಮತ್ತೊಂದು, ಮಗದೊಂದು ಸಿರೀಸ್ ಮುಂದುವರಿಯುತ್ತಲೇ ಇರುತ್ತದೆ, ನಿಜವಾಗಿಯೂ ಏನಾದರೊಂದು ಮಾಡಲೇಬೇಕಾದ ಕೆಲಸ ಸಿಕ್ಕುವ ತನಕವೂ. ಮೊಬೈಲ್‌ನ ಕಾರಣದಿಂದ ಬೆರಳುಗಳಿಗಂತೂ ಈಗ ಫುಲ್ ಟೈಮ್ ಎಂಪ್ಲಾಯ್‌ಮೆಂಟ್ ಎಂದರೆ ತಪ್ಪಾಗಲಾರದು!

ಈಗ ಸುಮ್ಮನೆ ಯೋಚಿಸಿ. ನೀವು ಏನೇನೂ ಕೆಲಸವಿಲ್ಲವೆಂದು ಭಾರೀ ಬಿಡುವಿನ, ರಿಲ್ಯಾಕ್ಸ್ ಮೂಡ್‌ನಲ್ಲಿ ಇರುವಾಗ, ನಿಮ್ಮ ಆಣತಿಗೆ ಕಾಯದ ಬೆರಳುಗಳು ಇನ್ನು ಅದ್ಯಾವ್ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತವೆ ಎನ್ನುವುದನ್ನು ಒಂದೊಂದಾಗಿ ಗುರುತಿಸಿ ನೋಡೋಣ.

**ಓವರ್‌ಡೋಸ್:** ಎಲ್ಲರೂ ಉದ್ಯೋಗ ಸೃಷ್ಟಿಯ ಬಗ್ಗೆ ಮಾತನಾಡುತ್ತಾರೆ. ಆದರೆ ತಮಗೆ ಬೇಕಾದ ಉದ್ಯೋಗವನ್ನು ತಾವೇ ಸೃಷ್ಟಿಸಿಕೊಳ್ಳುವ ಸ್ವಾವಲಂಬನೆಯನ್ನು ಸಾಧಿಸುವಲ್ಲಿ ಬೆರಳುಗಳು ಎಂದೋ ಯಶಸ್ವಿಯಾಗಿವೆ!

ಭಾರತ ಜತೆ ತಂತ್ರಜ್ಞಾನ ಬಂಧ: ಮ್ಯಾಕ್ರಾನ್

## ತಾಂತ್ರಿಕ ಪ್ರಗತಿಯಲ್ಲಿ ಭಾರತ ಮಹಾನ್ ಶಕ್ತಿ




ಫ್ರಾನ್ಸ್‌ನ ನೈಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭಾರತೀಯ ಅನಿವಾಸಿಗಳು ಆತ್ಮೀಯವಾಗಿ ಬರಮಾಡಿಕೊಂಡರು.

**ಪ್ಯಾರಿಸ್:** ಜಾಗತಿಕ ತಾಂತ್ರಿಕ ಪ್ರಗತಿಯಲ್ಲಿ ಭಾರತವನ್ನು ಪ್ರಮುಖ ಶಕ್ತಿ ಎಂದು ಶ್ಲಾಘಿಸಿದ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಉಭಯ ದೇಶಗಳ ನಡುವಿನ ಸಹಕಾರದ ಸಂಬಂಧವನ್ನು ಬಲಪಡಿಸುವ ಬದ್ಧತೆಯನ್ನು ಪುನರುಚ್ಚರಿಸಿದರು.

ಪ್ರಧಾನಿ ನರೇಂದ್ರ ಮೋದಿಯೊಂದಿಗೆ ನೈಸ್‌ನಲ್ಲಿ ನಡೆದ ಭಾರತ್ ಇನ್ನೋವೇಟ್ಸ್ 2026 ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಮ್ಯಾಕ್ರಾನ್, ಭಾರತದ ಸಂಶೋಧನಾ ಸಾಮರ್ಥ್ಯ ಅಪಾರ ಇಂಜಿನಿಯರಿಂಗ್ ಪ್ರತಿಭೆಯನ್ನು ಶ್ಲಾಘಿಸಿದರು. ಭಾರತ ವಾರ್ಷಿಕವಾಗಿ 10 ಲಕ್ಷಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ಉತ್ಪಾದಿಸುತ್ತದೆ, ಇದು ಯುರೋಪ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಒಟ್ಟು ಉತ್ಪಾದನೆಗೆ ಸಮಾನ ಎಂದು ಅವರು ಉಲ್ಲೇಖಿಸಿದರು. ಜಾಗತಿಕ ಪಾಲುದಾರರ ಮುಂದಿರುವ ಪ್ರಮುಖ ಪ್ರಶ್ನೆ ಭಾರತ ಆವಿಷ್ಕಾರ ಮಾಡುತ್ತದೆಯೇ ಎಂದಲ್ಲ, ಬದಲಿಗೆ ಯಾರು ಭಾರತದೊಂದಿಗೆ ಆವಿಷ್ಕಾರ ಮಾಡುತ್ತಾರೆ ಎಂದು ಅವರು ಬಣ್ಣಿಸಿದರು.

ಜೂನ್ 14ರಿಂದ 16ರವರೆಗೆ ನಡೆಯಲಿರುವ ಮೂರು ದಿನಗಳ ಈ ಸಮ್ಮೇಳನದ ಮೊದಲ ಅಂತಾರಾಷ್ಟ್ರೀಯ ಆವೃತ್ತಿಯನ್ನು ಫ್ರಾನ್ಸ್ ಆಯೋಜಿಸುತ್ತಿದೆ. ಮೋದಿ ಮತ್ತು ಮ್ಯಾಕ್ರಾನ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಇದು ಉಭಯ ದೇಶಗಳ ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು, ನೀತಿ ನಿರೂಪಕರು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಒಟ್ಟುಗೂಡಿಸುತ್ತದೆ. ಇದೇ ವೇಳೆ, ಭಾರತದ ದೀರ್ಘಾವಧಿಯ ಚುನಾಯಿತ ಪ್ರಧಾನ ಮಂತ್ರಿಯಾಗಿ ದಾಖಲೆ ಬರೆದ ಮೋದಿಯವರನ್ನು ಅಭಿನಂದಿಸಿದರು.

**ದ್ವಿಪಕ್ಷೀಯ ಸಹಕಾರ:** ದ್ವಿಪಕ್ಷೀಯ ಸಹಕಾರ ಪ್ರಮುಖವಾಗಿ ಕೃತಕ ಬುದ್ಧಿಮತ್ತೆಯ(ಎಐ) ಮೇಲೆ ಕೇಂದ್ರೀಕೃತವಾಗಿದ್ದು, ಎರಡೂ ದೇಶಗಳು ಮುಕ್ತ, ಬಹುಭಾಷಾ ಮತ್ತು ಸಹಯೋಗದ ಮಾದರಿಯನ್ನು ಬೆಂಬಲಿಸುತ್ತವೆ. ಸುಧಾರಿತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳಿಗೆ ಪ್ರವೇಶವನ್ನು ನಿರ್ಬಂಧಿಸುವ ಜಾಗತಿಕ ಪ್ರವೃತ್ತಿಯ ವಿರುದ್ಧ ಮ್ಯಾಕ್ರಾನ್ ಎಚ್ಚರಿಸಿದರು. ಜತೆಗೆ, ಇಂಧನ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳಲು ಅಂತಾರಾಷ್ಟ್ರೀಯ ಸೌರ ಒಕ್ಕೂಟ ಮತ್ತು ಪರಮಾಣು ಇಂಧನ ವಲಯಗಳ ಮೂಲಕ ಪಾಲುದಾರಿಕೆಗಳನ್ನು ಯೋಜಿಸಲಾಗಿದೆ.



ಬ್ರಿಟಿಷ್ ಕಾಲದ ಸಮವಸ್ತ್ರ ಪದ್ಧತಿಗೆ ತಿಲಾಂಜಲಿ
ಬಂಡಿ ಜಾಕೆಟ್ ಹಾಗೂ ಹೊಸ ನಿಯಮಗಳ ಜಾರಿ

## ಭಾರತ ಸೇನೆಯಲ್ಲಿ ನೂತನ ವಸ್ತ್ರ ಪದ್ಧತಿ

ಭಾರತೀಯ ಸೇನೆ ತನ್ನ ಸಮವಸ್ತ್ರ ನಿಯಮಗಳಲ್ಲಿ ಭಾರಿ ಬದಲಾವಣೆಗಳನ್ನು ತಂದಿದ್ದು, ಬ್ರಿಟಿಷರ ಕಾಲದ ಸಂಪ್ರದಾಯಗಳ ಬದಲಿಗೆ ದೇಶದ ರಾಷ್ಟ್ರೀಯ ಗುರುತನ್ನು ಬಿಂಬಿಸುವ ಹೊಸ ವಸ್ತ್ರ ಪದ್ಧತಿಗಳನ್ನು ಜಾರಿಗೆ ತಂದಿದೆ. ಈ ಪರಿಷ್ಕೃತ ನಿಯಮಗಳು ಸೇನೆಯ ಎಲ್ಲಾ ಶ್ರೇಣಿಗಳಿಗೂ ಅನ್ವಯವಾಗಲಿದ್ದು, ಮಿಲಿಟರಿ ಪರಂಪರೆಯನ್ನು ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿ ಬದಲಿಸುವ ಉದ್ದೇಶ ಹೊಂದಿವೆ.

### ಬಂಡಿ ಜಾಕೆಟ್ ಅಧಿಕೃತ ಸೇರ್ಪಡೆ

ಅಧಿಕಾರಿಗಳ ಅಧಿಕೃತ ಉಡುಪಿನ ಭಾಗವಾಗಿ ಮುಚ್ಚಿದ ಕತ್ತಿನ ಬಂಡಿ ಜಾಕೆಟ್(ನೆಹರು ಜಾಕೆಟ್) ಅನ್ನು ಅಧಿಕೃತವಾಗಿ ಸೇರಿಸಿರುವುದು ಒಂದು ಪ್ರಮುಖ ಬದಲಾವಣೆ. ಮಿಲಿಟರಿ ಕಾರ್ಯಕ್ರಮಗಳಿಗೆ ಸಂಪೂರ್ಣ ಭಾರತೀಯ ಶೈಲಿಯ ಸ್ಪರ್ಶ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಜಾಕೆಟ್ ಸರಳ ಹಾಗೂ ಸಭ್ಯ ಬಣ್ಣದ್ದಾಗಿದ್ದು, ಅದಕ್ಕೆ ಹೊಂದುವ ಪ್ಯಾಂಟ್ ಮತ್ತು ಮುಚ್ಚಿದ ಶೂಗಳೊಂದಿಗೆ ಧರಿಸಬೇಕು ಎಂದು ಕೈಪಿಡಿಯಲ್ಲಿ ತಿಳಿಸಲಾಗಿದೆ. ಇದನ್ನು ಅಧಿಕಾರಿಗಳು ಬಂದ್ ಗಲಾ, ಲೌಂಜ್ ಸೂಟ್ ಅಥವಾ ಟೈ ಧರಿಸುವ ಶರ್ಟ್-ಪ್ಯಾಂಟ್ ಜೊತೆಗೆ ಆಯ್ಕೆಯಾಗಿ ಬಳಸಬಹುದು.



### ಹೊಸ ಕೈಪಿಡಿ, ಹೊಸ ಹಾದಿ

ಎಂಟು ವರ್ಷಗಳ ನಂತರ ಬಿಡುಗಡೆಯಾಗಿರುವ ಆರ್ಮಿ ಯುನಿಫಾರ್ಮ್ಸ್-2026 ಎಂಬ 174 ಪುಟಗಳ ಹೊಸ ಕೈಪಿಡಿ, ಕಳೆದ ಸುಮಾರು ಒಂದು ದಶಕದಲ್ಲೇ ಮಿಲಿಟರಿ ಉಡುಪಿನ ಶೈಲಿಯಲ್ಲಿ ಮಾಡಲಾದ ಅತ್ಯಂತ ಪ್ರಮುಖ ಬದಲಾವಣೆಗಳಲ್ಲಿ ಒಂದಾಗಿದೆ. ಸೇನೆಯ ಪ್ರಮುಖ ಸಂಪ್ರದಾಯಗಳು ಮತ್ತು ಕಾರ್ಯಾಚರಣೆಯ ಅಗತ್ಯಗಳನ್ನು ಉಳಿಸಿಕೊಂಡೇ, ವಸಾಹತುಶಾಹಿ ಕಾಲದ ಉಳಿಕೆಗಳನ್ನು ತೆಗೆದುಹಾಕಲು ಈ ಬದಲಾವಣೆಗಳನ್ನು ರೂಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಡ್ಜಟಂಟ್ ಜನರಲ್ ಲೆಫ್ಟಿನೆಂಟ್ ಜನರಲ್ ವಿಪಿಎಸ್ ಕೌಶಿಕ್ ಈ ಕೈಪಿಡಿಯ ಮುನ್ನುಡಿಯಲ್ಲಿ, ವಸಾಹತುಶಾಹಿ ಕಾಲದ ಆಚರಣೆಗಳು, ಅಲಂಕಾರಗಳು ಮತ್ತು ಪದಕೋಶಗಳನ್ನು ಹಂತಹಂತವಾಗಿ ತೆಗೆದುಹಾಕುವ ಮೂಲಕ ಸೇನೆಯ ಸಮವಸ್ತ್ರ ನಿಯಮಾವಳಿಗಳನ್ನು ಸಮಕಾಲೀನ ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿಸಲು ಇಟ್ಟಿರುವ ಒಂದು ಚಿಂತನಾಶೀಲ ಹೆಜ್ಜೆ ಇದಾಗಿದೆ ಎಂದು ಹೊಸ ಆವೃತ್ತಿಯನ್ನು ವಿವರಿಸಿದ್ದಾರೆ. ಈ ಬದಲಾವಣೆಗಳು ದೇಶದ ಭಾವನೆಗಳನ್ನು ಮತ್ತು ವಿಕಸನಗೊಳ್ಳುತ್ತಿರುವ ಸಾರ್ವಭೌಮ ಗುರುತನ್ನು ಪ್ರತಿಬಿಂಬಿಸುತ್ತವೆ ಎಂದೂ ಕೈಪಿಡಿಯಲ್ಲಿ ತಿಳಿಸಲಾಗಿದೆ.

### ಬ್ರಿಟಿಷ್ ಸಂಕೇತಗಳಿಗೆ ಎಳ್ಳು-ನೀರು

ವಸಾಹತುಶಾಹಿ ಕಾಲದ ಸಂಕೇತಗಳನ್ನು ದೂರವಿಡುವ ಭಾಗವಾಗಿ ಮಿಲಿಟರಿ ಪದಕೋಶದಿಂದ ರಾಯಲ್ ಎಂಬ ಪದದ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಇನ್ನು ಮುಂದೆ ಪರೇಡ್‌ಗಳ ಪರಿಶೀಲನೆ ನಡೆಸುವ ಅಧಿಕಾರಿಗಳು ಕತ್ತಿ (ಸ್ವೋರ್ಡ್) ಹಿಡಿಯುವ ಅಗತ್ಯವಿರುವುದಿಲ್ಲ. ಇದರೊಂದಿಗೆ, ರಾಜ್ಯಮಟ್ಟದ ಕಾರ್ಯಕ್ರಮಗಳು ಮತ್ತು ಅಧಿಕೃತ ಮಿಲಿಟರಿ ಔತಣಕೂಟಗಳಲ್ಲಿ ಧರಿಸುವ ಮೆಸ್ ಡ್ರೆಸ್ ಸಂಖ್ಯೆ 5 ಮತ್ತು 6ರ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳನ್ನು ತೆಗೆದುಹಾಕಲಾಗಿದೆ. ಆದರೆ, ನಿರ್ದಿಷ್ಟ ರೆಜಿಮೆಂಟ್‌ಗಳ ಆಚರಣೆಗಳಲ್ಲಿ ಇವುಗಳನ್ನು ಬಳಸಲು ವಿನಾಯಿತಿ ನೀಡಲಾಗಿದೆ.



### ಚಳಿಗಾಲದ ಹೊಸ ಸಮವಸ್ತ್ರ

**ಎಲ್ಲಾ ಶ್ರೇಣಿಯ ಸಿಬ್ಬಂದಿಗೆ ಡ್ರೆಸ್ 3ಬಿ ಎಂಬ ಚಳಿಗಾಲದ ಹೊಸ ಸಮವಸ್ತ್ರವನ್ನು ಪರಿಚಯಿಸಲಾಗಿದೆ. ಇದು ಅಂಗೋಲಾ ಶರ್ಟ್, ಬ್ಯಾಟಲ್ ಜಾಕೆಟ್ ಮತ್ತು ಬೆರೆಟ್ ಟೋಪಿಯನ್ನು ಒಳಗೊಂಡಿರುತ್ತದೆ. ಈ ನಿಯಮ ಎಲ್ಲಾ ವಿಭಾಗಗಳಲ್ಲಿ ಸಮಾನತೆ ತರಲು ಸಹಕಾರಿಯಾಗಲಿದೆ.**

### ಮಹಿಳಾ ಅಧಿಕಾರಿಗಳ ಉಡುಪಿನ ಮಾರ್ಗಸೂಚಿ

ಮಹಿಳಾ ಅಧಿಕಾರಿಗಳು ಸಭ್ಯ ಬಣ್ಣದ ಸೀರೆ ಅಥವಾ ಕುರ್ತಾ-ಸಲ್ವಾರ್ ಜತೆಗೆ ದುಪಟ್ಟಾ ಮತ್ತು ನೇರವಾದ ಪ್ಯಾಂಟ್‌ಗಳನ್ನು ಧರಿಸಲು ಅವಕಾಶವಿದೆ. ಆದರೆ ಸ್ಲೀವ್‌ಲೆಸ್ ಕುರ್ತಾಗಳು, ಪಲಾಜೊ ಮತ್ತು ಸಿಗರೇಟ್ ಪ್ಯಾಂಟ್‌ಗಳನ್ನು ನಿಷೇಧಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಲಿಪ್‌ಸ್ಟಿಕ್, ನೈಲ್ ಪಾಲಿಷ್, ಬಿಂದಿ ಮತ್ತು ಮೂಗುತಿ ಧರಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಟೋಪಿಯ ಕೆಳಗೆ ಕಾಣಿಸದ ರೀತಿಯಲ್ಲಿ ಸಣ್ಣದಾಗಿ ಸಿಂಧೂರ ಇಡಲು ಅವಕಾಶ ನೀಡಲಾಗಿದೆ.

### ಕಟ್ಟುನಿಟ್ಟಿನ ಅಂದಚೆಂದದ ನಿಯಮಗಳು

ಸೇನಾ ಸಿಬ್ಬಂದಿಯ ಶಿಸ್ತು ಕಾಯ್ದುಕೊಳ್ಳಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ಹಚ್ಚೆ(ಟ್ಯಾಟೂ) ಮತ್ತು ಬಾಡಿ ಪಿಯರ್ಸಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಧಾರ್ಮಿಕ ಕಾರ್ಯಕ್ರಮದ ದಿನದಂದು ಧರಿಸುವ ಪವಿತ್ರ ದಾರಕ್ಕೆ ಮಾತ್ರ ವಿನಾಯಿತಿ ಇದ್ದು, ಸಮವಸ್ತ್ರದಲ್ಲಿರುವಾಗ ಯಾವುದೇ ಬಳೆ ಅಥವಾ ಕಡಗಗಳನ್ನು ಧರಿಸುವಂತಿಲ್ಲ. ಸಿಖ್ ಸಿಬ್ಬಂದಿಗೆ ಇರುವ ನಿರ್ದಿಷ್ಟ ವಿನಾಯಿತಿಗಳನ್ನು ಹೊರತುಪಡಿಸಿ, ಧಾರ್ಮಿಕ ಲಾಂಛನಗಳಿಗೆ ಅನುಮತಿಯಿಲ್ಲ. ಮೀಸೆಗಳ ಗರಿಷ್ಠ ಉದ್ದವನ್ನು 12 ಸೆಂಟಿಮೀಟರ್‌ಗಳಿಗೆ ಸೀಮಿತಗೊಳಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಆಫ್ಟರ್ ಶೇವ್ ಲೋಷನ್ ಬಳಸಬಹುದು, ಆದರೆ ಡಿಯೋಡರೆಂಟ್ ಮತ್ತು ಪರ್ಫ್ಯೂಮ್ ಬಳಕೆಯನ್ನು ನಿಷೇಧಿಸಲಾಗಿದೆ.

### ರಾಷ್ಟ್ರೀಯ ನೀತಿಗೆ ಪೂರಕ



ಪ್ರಧಾನಿ ನರೇಂದ್ರ ಮೋದಿ, ಇತ್ತೀಚಿನ ವರ್ಷಗಳಲ್ಲಿ ಸಶಸ್ತ್ರ ಪಡೆಗಳು ಬ್ರಿಟಿಷ್ ಕಾಲದ ಪದ್ಧತಿಗಳಿಂದ ಹೊರಬಂದು ಭಾರತೀಯ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ನೀಡಿದ್ದ ಕರೆಗೆ ಅನುಗುಣವಾಗಿ ಈ ಬದಲಾವಣೆಗಳನ್ನು ತರಲಾಗಿದೆ. ಮಿಲಿಟರಿ ಸಿದ್ಧಾಂತ ಮತ್ತು ಆಚರಣೆಗಳನ್ನು ಭಾರತೀಯಕರಣಗೊಳಿಸುವ ಸರ್ಕಾರದ ವಿಶಾಲ ಯೋಜನೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

### ಪ್ರಮುಖ ಪರಿಷ್ಕರಣೆಗಳು

- ಬಂಡಿ ಜಾಕೆಟ್‌ಗಳನ್ನು ಧರಿಸಲು ಅಧಿಕೃತ ಅನುಮತಿ
- ಪರೇಡ್ ವೇಳೆ ಅಧಿಕಾರಿಗಳು ಕತ್ತಿ ಹಿಡಿಯುವ ಅಗತ್ಯವಿಲ್ಲ
- ಮೆಸ್ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳಿಗೆ ಕೊಕ್
- ಚಳಿಗಾಲದ ಹೊಸ ಡ್ರೆಸ್ 3ಬಿ ಪರಿಚಯ
- ಮೀಸೆಯ ಗರಿಷ್ಠ ಉದ್ದ 12 ಸೆಂಟಿಮೀಟರ್‌ಗೆ ಸೀಮಿತ

## ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ

**ಹೊಸದಿಲ್ಲಿ:** ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಬಂಡಾಯ ಸಂಸದರು ಸಂಖ್ಯೆ 22ಕ್ಕೇರಿದ್ದು, ನ್ಯಾಷಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಬೆಂಬಲಿಸುವುದಾಗಿ ಭಾನುವಾರ ಘೋಷಿಸಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ, ಸಂಸತ್‌ನಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮನವಿ ಸಲ್ಲಿಸಿದ್ದಾರೆ.

ಸ್ಪೀಕರ್ ಓಂ ಬಿರ್ಲಾ ಭೇಟಿ ಬಳಿಕ ಮಾತನಾಡಿದ ಬಂಡಾಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್, ಮೂರನೇ ಎರಡು ಭಾಗದಷ್ಟು ಟಿಎಂಸಿ ಸಂಸದರನ್ನು ಲೋಕಸಭೆಯಲ್ಲಿ ಪ್ರತ್ಯೇಕ ಗುಂಪನ್ನಾಗಿ ಗುರುತಿಸಬೇಕು. ನಮಗೆ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದ್ದೇವೆ. ನಾವು ನ್ಯಾಷನಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನರಾಗಲಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ ಎಂದರು. ಹಿರಿಯ ಟಿಎಂಸಿ ನಾಯಕ ಮತ್ತು ಸಂಸದ ಸುದೀಪ್ ಬಂಡೋಪಾಧ್ಯಾಯ ತಮ್ಮ ಬಂಡಾಯ ಸಂಸದರ ಗುಂಪು ಪ್ರಾದೇಶಿಕ ಪಕ್ಷವೊಂದರಲ್ಲಿ ವಿಲೀನವಾಗಿರುವುದಾಗಿ ಹೇಳಿದ್ದಾರೆ. ಯಾವುದು ನಿಜವಾದ ಟಿಎಂಸಿ ಎಂಬುದನ್ನು ನ್ಯಾಯಾಲಯದಲ್ಲಿ ತೀರ್ಮಾನ ಆಗಲಿದೆ, ಎರಡು ಹೂವುಗಳ ಪಕ್ಷದ ಚುನಾವಣಾ ಚಿಹ್ನೆಯನ್ನೂ ಕಾನೂನಾತ್ಮಕ ಹೋರಾಟದ ಮೂಲಕ ಪಡೆಯುವುದಾಗಿ ಸುದೀಪ್ ತಿಳಿಸಿದ್ದಾರೆ.

**ಗುರುತಿಸಬೇಡಿ:** ಟಿಎಂಸಿ ನಾಯಕರಾದ ಕೀರ್ತಿ ಆಜಾದ್, ಸಾಗರಿಕಾ ಘೋಷ್ ಸಹ ಸ್ಪೀಕರ್ ಬಿರ್ಲಾ ಭೇಟಿಯಾಗಿ, ಬಂಡಾಯ ಸಂಸದರನ್ನು ಗುರುತಿಸದಂತೆ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಬರೆದ ಪತ್ರವನ್ನು ಸಲ್ಲಿಸಿದ್ದಾರೆ.

**ಕಿರುಸುದ್ದಿ**

### ಬಂಗೀ ಜಂಪ್: ಸುರಕ್ಷತಾ ಹಗ್ಗ ಕಟ್ಟದ ಸಿಬ್ಬಂದಿ, ಸಾವು

**ಸಾವೊ ಪೌಲೋ(ಬ್ರೆಜಿಲ್):** ಬಂಗೀ ಜಂಪ್ ವೇಳೆ ಸುರಕ್ಷತಾ ಹಗ್ಗ ಕಟ್ಟದೇ 130 ಅಡಿ ಎತ್ತರದಿಂದ ಸಿಬ್ಬಂದಿ ಎಸೆದಿದ್ದರಿಂದ 21ರ ಯುವತಿ ಮಾರಿಯಾ ಎಡುರ್ಡ ರಾಡ್ರಿಗ್ಸ್ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿದ್ದಾರೆ. ಲಿಮೇರಾ ಎಂಬಲ್ಲಿ ಬಂಗೀ ಜಂಪ್ ವೇಳೆ ಸಿಬ್ಬಂದಿ ಸುರಕ್ಷತಾ ಹಗ್ಗವನ್ನೇ ಮರೆತು ಬೇಜವಾಬ್ದಾರಿ ಮೆರೆದಿದ್ದು, ಮಾರಿಯಾರನ್ನು ಸ್ಕೆಲೆಟಾನ್ ಸೇತುವೆಯ ಮೇಲಿಂದ ಕೆಳಕ್ಕೆ ಎಸೆದಿದ್ದಾರೆ. ಸುರಕ್ಷತಾ ಹಗ್ಗವಿಲ್ಲದ ಕಾರಣ ಯುವತಿ ಸಾವಿಗೀಡಾಗಿದ್ದಾರೆ. ಇತರ ಸಿಬ್ಬಂದಿ ವಿಡಿಯೋ ಮಾಡಿದ್ದು, ಯುವತಿಯನ್ನು ಸೇತುವೆಯಿಂದ ಎಸೆದ ಬಳಿಕ ಆಕೆಯ ಹಗ್ಗ ಎಂದು ಕಿರುಚಿದ್ದಾರೆ. ಆದರೆ ಅಷ್ಟಾಗಲೇ ಎಲ್ಲವೂ ಮುಗಿದಿತ್ತು. ಈ ದೃಶ್ಯ ವೈರಲ್ ಆಗಿದ್ದು, ವಿಶ್ವದೆಲ್ಲೆಡೆ ಜನರನ್ನು ಆತಂಕಕ್ಕೀಡು ಮಾಡಿದೆ. ಖಾಸಗಿ ಕಂಪನಿಯೊಂದು ಚಟುವಟಿಕೆಯನ್ನು ಆಯೋಜಿಸಿದ್ದು, ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿ 6 ಮಂದಿಯನ್ನು ಬಂಧಿಸಿದ್ದಾರೆ. ದುರಂತ ಸ್ಥಳದಲ್ಲಿದ್ದ ಮಾರಿಯಾ ವಿವಾಹವಾಗಲಿರುವ ಯುವಕ ಆಘಾತದಿಂದ ತೀವ್ರ ಅಸ್ವಸ್ಥರಾಗಿದ್ದಾರೆ.

### ವಿಶ್ವದ 2ನೇ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

**ಹೊಸದಿಲ್ಲಿ:** ಭಾರತೀಯ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಭಾರೀ ಮೌಲ್ಯದ ಹೈಡ್ರೋಕಾರ್ಬನ್ ಖರೀದಿಸಿದ್ದು, ಮೇನಲ್ಲೂ ವಿಶ್ವದ ಎರಡನೇ ಅತಿ ದೊಡ್ಡ ರಷ್ಯಾ ಕಚ್ಚಾ ತೈಲ ಖರೀದಿದಾರ ರಾಷ್ಟ್ರವಾಗಿ ಭಾರತ ಉಳಿದುಕೊಂಡಿದೆ ಎಂದು ಐರೋಪ್ಯ ಚಿಂತನಾ ಚಾವಡಿ ಶುದ್ಧ ಗಾಳಿ ಮತ್ತು ಇಂಧನ ಸಂಶೋಧನಾ ಕೇಂದ್ರ (ಸಿಆರ್‌ಇಎ) ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಮೇನಲ್ಲಿ ಭಾರತೀಯ ತೈಲ ಕಂಪನಿಗಳು ಸುಮಾರು 5.8 ಶತಕೋಟಿ ಯೂರೋ (6.7 ಶತಕೋಟಿ ಡಾಲರ್) ಅಥವಾ ಅಂದಾಜು 57ರಿಂದ 58,000 ಕೋಟಿ ರೂ. ವೆಚ್ಚದ ಹೈಡ್ರೋಕಾರ್ಬನ್ ಅನ್ನು ರಷ್ಯಾದಿಂದ ಆಮದು ಮಾಡಿಕೊಂಡಿವೆ. ಆಮದು ಮಾಡಿಕೊಂಡ ಸಗಟು ಹೈಡ್ರೋಕಾರ್ಬನ್‌ನಿಂದ ಕಚ್ಚಾ ತೈಲ ತೆಗೆಯಲಾಗುತ್ತದೆ.

ಮೇ ತಿಂಗಳಲ್ಲಿ ಒಟ್ಟು ಮಾರಾಟವಾದ ರಷ್ಯಾ ತೈಲದ ಶೇ.83ರಷ್ಟು ಭಾರತವೇ ಆಮದು ಮಾಡಿಕೊಂಡಿದ್ದು, ಇದರ ವೆಚ್ಚ 4.8 ಶತಕೋಟಿ ಯೂರೋ (47,500 ಕೋಟಿ ರೂ.) ಆಗಿದೆ. ಉಳಿದಂತೆ ರಷ್ಯಾದಿಂದ 550 ದಶಲಕ್ಷ ಯೂರೋ (5,500 ಕೋಟಿ ರೂ.) ವೆಚ್ಚದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಮತ್ತು 429 ದಶಲಕ್ಷ ಯೂರೋ (4,250 ಕೋಟಿ ರೂ.) ವೆಚ್ಚದಲ್ಲಿ ಕಲ್ಲಿದ್ದಲು ಆಮದು ಮಾಡಿಕೊಂಡಿದೆ.

ಭಾರತದ ಒಟ್ಟಾರೆ ಕಚ್ಚಾ ತೈಲ ಆಮದು ಮೇನಲ್ಲಿ ಶೇ.8ರಷ್ಟು ಏರಿಕೆ ಕಂಡಿದ್ದು, ಭಾರತದ ರಷ್ಯಾ ತೈಲ ಆಮದು ಶೇ.21 ಏರಿಕೆಯನ್ನು ಕಂಡಿದೆ.

### ಹಿಮಾಲಯ ತಪ್ಪಲಿನಲ್ಲಿ ಸೈನಿಕರ ಯೋಗಾಭ್ಯಾಸ



**ಡೆಹ್ರಾಡೂನ್:** ಅಂತಾರಾಷ್ಟ್ರೀಯ ಯೋಗ ದಿನ ಸಮೀಪಿಸುತ್ತಿರುವ ಸಂದರ್ಭದಲ್ಲಿ ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗೋಲ್ಡನ್ ಕೀ ಡಿವಿಷನ್‌ನ ಯೋಧರು ಯೋಗಾಭ್ಯಾಸ ನಡೆಸಿ ತಮ್ಮ ಸಹಿಷ್ಣುತೆ, ಏಕಾಗ್ರತೆ ಮತ್ತು ಆಂತರಿಕ ಶಕ್ತಿಯನ್ನು ಮತ್ತಷ್ಟು ಬಲಪಡಿಸಿದರು. ಸವಾಲಿನ ಕಾರ್ಯಾಚರಣಾ ಭೌಗೋಳಿಕ ಪ್ರದೇಶದಲ್ಲಿ ಯೋಗವು ದೈಹಿಕ ಸನ್ನದ್ಧತೆ, ಮಾನಸಿಕ ಚುರುಕುತನ ಹಾಗೂ ಭಾವನಾತ್ಮಕ ಕ್ಷೇಮವನ್ನು ವೃದ್ಧಿಸಿ, ರಾಷ್ಟ್ರಸೇವೆಯಲ್ಲಿ ತೊಡಗಿರುವ ಯೋಧರು ತಮ್ಮ ಶ್ರೇಷ್ಠ ಸಾಮರ್ಥ್ಯವನ್ನು ಪ್ರದರ್ಶಿಸಲು ನೆರವಾಗುತ್ತದೆ.

### ಕೇರಳದಲ್ಲಿ ಮಹಿಳೆಯರಿಗೆ ಉಚಿತ ಯಾನ ಇಂದಿನಿಂದ

**ತಿರುವನಂತಪುರಂ:** ಕೇರಳದಲ್ಲಿ ಮಹಿಳೆಯರು ಮತ್ತು ತೃತೀಯ ಲಿಂಗಿಗಳಿಗೆ ಸಾಮಾನ್ಯ ಕೆಎಸ್ಆರ್ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಪ್ರಿಯದರ್ಶಿನಿ ಯೋಜನೆಯನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ಥಂಪನ್ನೂರ್ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ಉದ್ಘಾಟಿಸಲಿದ್ದಾರೆ. ಇದೇ ವೇಳೆ, ಕೇವಲ ರಾಜಕೀಯ ಉದ್ದೇಶಕ್ಕಾಗಿ ಸರಕಾರದ ಈ ಪಕ್ಷಪಾತಿ ನಡೆಯನ್ನು ಪ್ರತಿಭಟಿಸಿ ಕೇರಳದ ಖಾಸಗಿ ಬಸ್ಸೊಂದು ಪುರುಷರಿಗೂ ಒಂದು ದಿನ ಉಚಿತ ಪ್ರಯಾಣ ಸೌಕರ್ಯವನ್ನು ಘೋಷಿಸಿದ ಘಟನೆಯೂ ಇದೀಗ ಗಮನ ಸೆಳೆದಿದೆ.

ಕುಟುಂಬದ ಇತರ ಸದಸ್ಯರು ಟಿಕೆಟ್ ಮಾಡಿ ಜೊತೆಯಲ್ಲಿದ್ದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಕಲ್ಪಿಸುವ 'ಪ್ರಿಯದರ್ಶಿನಿಯೋಜನೆ'ಯನ್ನು ಯುಡಿಎಫ್ ಇತ್ತೀಚಿನ ಚುನಾವಣೆಯ ಸಂದರ್ಭ ನೀಡಿದ 'ಗ್ಯಾರಂಟಿ'ಭರವಸೆಯಲ್ಲಿ ತಿಳಿಸಿತ್ತು. ಇದರಂತೆ ರಾಜ್ಯಮಟ್ಟದ ಈ ಯೋಜನೆಯನ್ನು ಮುಖ್ಯಮಂತ್ರಿಯವರು ಉದ್ಘಾಟಿಸುವರು. ವಿಧಾನಸಭಾಧ್ಯಕ್ಷ ತಿರುವಾಂಕೂರ್ ರಾಧಾಕೃಷ್ಣನ್ ಅವರು ಕೊಟ್ಟಾಯಂನಲ್ಲಿ ಉದ್ಘಾಟಿಸಲಿದ್ದು, ಪ್ರಥಮ ಉಚಿತ ಪ್ರಯಾಣ ಸೌಲಭ್ಯದ ಬಸ್ಸು ಕೊಟ್ಟಾಯಂನಿಂದ ಕುಮರಕಾಮ್ ಆಗಿ ಚೇರ್ತಲಕ್ಕೆ ಪ್ರಯಾಣಿಸಲಿದೆ.

ಇದರಡಿ ಮಹಿಳೆಯರು ಮತ್ತು ತೃತೀಯಲಿಂಗಿಗಳಿಗೆ ಬಸ್ಸು ನಿರ್ವಾಹಕರು 'ಶೂನ್ಯ ಟಿಕೆಟ್' ನೀಡಲಿದ್ದಾರೆ. ಅವರು ಯಾವುದೇ ಐಡಿ ಕಾರ್ಡ್ ಅಥವಾ ಇತರ ದಾಖಲೆಗಳನ್ನು ತೋರಿಸಬೇಕಾಗಿಲ್ಲ. ರಾಜ್ಯವ್ಯಾಪಿ 3125 ಬಸ್ಸುಗಳಲ್ಲಿ ಈ ಸೌಲಭ್ಯ ಇರಲಿದೆ.

### ಮನೆಗೇ ನುಗ್ಗಿ ಬಿಜೆಪಿ ಸದಸ್ಯನ ಹತ್ಯೆಗೈದ ಮುಸ್ಲಿಂ

**ಡೆಹ್ರಾಡೂನ್:** ಉತ್ತರಾಖಂಡ್‌ನ ಸ್ಥಳೀಯ ಬಿಜೆಪಿ ಕಾರ್ಯಕರ್ತ ವಿನೋದ್ (44) ಅವರನ್ನು ಅದೇ ಗ್ರಾಮದ ಇಮ್ತಿಯಾಜ್ ನೇತೃತ್ವದ 40 ಮುಸ್ಲಿಮರ ಗುಂಪೊಂದು ಮನೆಗೆ ನುಗ್ಗಿ ಹತ್ಯೆ ನಡೆಸಿದ್ದು, ವಿನೋದ್ ಕುಟುಂಬದ ಮೂವರು ಸದಸ್ಯರೂ ಗಂಭೀರ ಗಾಯಗೊಂಡಿದ್ದಾರೆ. ಆರೋಪಿಗಳಿಗೆ ಸೇರಿದ ಕಾನೂನುಬಾಹಿರ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ. ಘಟನೆ ಡೆಹ್ರಾಡೂನ್‌ನ ಬೈರಾಗಿವಾಲಾ ಗ್ರಾಮದಲ್ಲಿ ಶನಿವಾರ ನಡೆದಿದೆ.

ಹೊಲದಲ್ಲಿ ನೀರಾವರಿ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿತ್ತೆಂದು ಪೊಲೀಸರು ಹೇಳಿದ್ದಾರೆ. ವಿನೋದ್ ಹತ್ಯೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆ ಕೂಗಿ ದೊಡ್ಡ ಪ್ರತಿಭಟನೆ ನಡೆಸಿದ್ದಾರೆ. ವಿನೋದ್ ನಿವಾಸದಲ್ಲಿ ದಾಂಧಲೆ ನಡೆಸಿದ ಮುಸ್ಲಿಮ್ ಗುಂಪು ಲಾಠಿ, ಮರದ ದೊಣ್ಣೆ, ಸುತ್ತಿಗೆಗಳು, ಸಲಿಕೆ ಇತ್ಯಾದಿಗಳನ್ನು ತಂದಿದ್ದರು.


ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ 4.9 ಕಿಮೀ ಹೆದ್ದಾರಿ ನಿರ್ಮಾಣ

## ಮೊದಲ 8 ಪಥ ಸುರಂಗ ಮಾರ್ಗ ಸಿದ್ಧ

**ಹೊಸದಿಲ್ಲಿ:** ಭಾರತದ ಮೊದಲ ಎಂಟು ಪಥಗಳ ಸುರಂಗ ಹೆದ್ದಾರಿ ರಾಜಸ್ಥಾನದ ಕೋಟಾ ಸಮೀಪ ಉದ್ಘಾಟನೆಗೆ ಸಿದ್ಧವಾಗಿದೆ. ಇದು 4.9 ಕಿ.ಮೀ. ಉದ್ದದ ಎಂಟು ಪಥಗಳ ಸುರಂಗ ಹೆದ್ದಾರಿಯಾಗಿದೆ. ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ಮುಕುಂದರ ಪರ್ವತ ಹುಲಿ ಅಭಯಾರಣ್ಯ ಪ್ರದೇಶದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ.

1,386 ಕಿ.ಮೀ. ಉದ್ದದ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದ್ದು, ಜೂ.20ರಂದು ತೆರೆಯಲಾಗುವುದು. ಬರೋಬ್ಬರಿ 95,000 ಕೋಟಿ ರೂ. ವೆಚ್ಚದಲ್ಲಿ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ನಿರ್ಮಾಣ ಮಾಡಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ದಿಲ್ಲಿ ಮತ್ತು ಮುಂಬೈ ನಡುವಿನ ಪ್ರಯಾಣವು ಸುಮಾರು 24 ಗಂಟೆಗೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ನೂತನ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾರಿಡಾರ್ ಸಂಪೂರ್ಣ ಕಾರ್ಯಾರಂಭಗೊಂಡ ನಂತರ ಕೇವಲ 12 ಗಂಟೆಯನ್ನಷ್ಟೇ ತೆಗೆದುಕೊಳ್ಳಲಿದೆ.



- ಎಂಟು ಪಥ ಸುರಂಗ ಹೆದ್ದಾರಿಯ ಉದ್ದ 4.9 ಕಿ.ಮೀ.
- ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಉದ್ದ 1,386 ಕಿ.ಮೀ.
- 95,000 ಕೋಟಿ ರೂ. ವೆಚ್ಚದಲ್ಲಿ ಎಕ್ಸ್‌ಪ್ರೆಸ್‌ವೇ ನಿರ್ಮಾಣ

### ವನ್ಯಜೀವಿಗಳಿಗೆ ಹಾನಿಯಿಲ್ಲ

**ವನ್ಯಜೀವಿಗಳಿಗೆ ಯಾವುದೇ ಹಾನಿಯಾಗದಂತೆ ಹಾಗೂ ತಿರುವು-ಮುರುವಾದ ಮಾರ್ಗವನ್ನು ತಪ್ಪಿಸುವ ಉದ್ದೇಶದಿಂದ ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆ ನಿರ್ಮಿಸಲಾಗಿದೆ. ತಡೆರಹಿತ ಪ್ರಯಾಣಕ್ಕಾಗಿ ಕೋಟಾ ಪ್ರದೇಶವೊಂದೇ ಹೆದ್ದಾರಿ ಯೋಜನೆಯಲ್ಲಿ ಬಾಕಿಯಾಗಿತ್ತು. ಹುಲಿ ಅಭಯಾರಣ್ಯದ ಪರಿಸರದ ಸೂಕ್ಷ್ಮ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಸುರಂಗ ನಿರ್ಮಾಣಕ್ಕೆ ಸುಮಾರು ನಾಲ್ಕೂವರೆ ಐದು ವರ್ಷಗಳ ಕಾಲ ಬೇಕಾಯಿತು.**

### ಸಮಯ ಉಳಿತಾಯ

ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಸಹಾಯದಿಂದ ಪ್ರಯಾಣಿಕರ ಪ್ರಯಾಣದ ಸಮಯ ಉಳಿತಾಯ ಆಗಲಿದೆ. ಇದಲ್ಲದೆ, ಸರಕು ಸಾಗಣೆ ವೆಚ್ಚ ಅಗ್ಗವಾಗಲಿದೆ. ಹರ್ಯಾಣ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರ ನಡುವಿನ ಸಾಮಾನ್ಯ ಜನರಿಗೆ ಪ್ರಯಾಣ ಸಂಪರ್ಕ ಬೆಳೆಸಲಿದೆ.

ಒಮಾನ್‌ನಲ್ಲಿ ಭಾರತೀಯ ಧ್ವಜದ ಹಡಗಿನ ಎಂಜಿನ್ ವೈಫಲ್ಯ

## ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ

**ದುಬೈ:** ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಎಂಜಿನ್ ವೈಫಲ್ಯಕ್ಕೊಳಗಾದ ಭಾರತೀಯ ಧ್ವಜದ ವಾಣಿಜ್ಯ ಹಡಗಿನಿಂದ ಎಲ್ಲಾ 14 ಭಾರತೀಯ ಸಿಬ್ಬಂದಿಯನ್ನು ಭಾನುವಾರ ರಕ್ಷಿಸಲಾಗಿದೆ.

ಈ ಘಟನೆ ಭಾರತೀಯ ಧ್ವಜದ ವ್ಯಾಪಾರ ಹಡಗು ವಿರಾಟ್ 1ರಲ್ಲಿ ಸಂಭವಿಸಿದೆ. ಮಸ್ಕಟ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಮಾಹಿತಿ ಪ್ರಕಾರ, ಹಡಗಿನಲ್ಲಿದ್ದ ಎಲ್ಲಾ 14 ಸಿಬ್ಬಂದಿಯನ್ನು ಸಮುದ್ರದಲ್ಲಿ ನಡೆಸಲಾದ ರಕ್ಷಣಾ ಕಾರ್ಯಾಚರಣೆಯ ಮೂಲಕ ಸುರಕ್ಷಿತವಾಗಿ ರಕ್ಷಿಸಲಾಗಿದೆ.

ರಾಯಭಾರ ಕಚೇರಿ ನೀಡಿದ ಮಾಹಿತಿಯಂತೆ, ಹಡಗಿನಲ್ಲಿ ಎಂಜಿನ್ ವೈಫಲ್ಯ ಉಂಟಾಗಿತ್ತು. ಇದರ ಪರಿಣಾಮವಾಗಿ ಸಿಬ್ಬಂದಿ ಸುರಕ್ಷಿತವಾಗಿ ಲೈಫ್ ರಾಫ್ಟ್‌ಗೆ ಸ್ಥಳಾಂತರಗೊಂಡಿದ್ದರು. ಒಮಾನ್ ಅಧಿಕಾರಿಗಳ ಸಮನ್ವಯದಲ್ಲಿ ಸಮೀಪದಲ್ಲಿದ್ದ ಹಡಗುಗಳ ನೆರವಿನಿಂದ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಈ ಘಟನೆ ಗಲ್ಫ್ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ನಡೆದಿದೆ. ಕಳೆದ ವಾರ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳು ಅಮೆರಿಕದ ದಾಳಿಗೆ ಒಳಗಾಗಿದ್ದವು. ಆ ಘಟನೆಗಳಲ್ಲಿ ಒಂದರಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದರು.



ಶುಕ್ರವಾರ ಭಾರತ ಅಮೆರಿಕದ ಚಾರ್ಜ್ ಡಿ ಅಫೇರ್ಸ್ ಜೇಸನ್ ಮೀಕ್ಸ್ ಅವರನ್ನು ಒಂದು ವಾರದ ಅವಧಿಯಲ್ಲಿ ಎರಡನೇ ಬಾರಿ ಕರೆಸಿಕೊಂಡಿತ್ತು. ಭಾರತೀಯ ಸಿಬ್ಬಂದಿ ಇದ್ದ ವಾಣಿಜ್ಯ ಹಡಗುಗಳ ಮೇಲೆ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಅಮೆರಿಕ ಸೇನೆ ನಡೆಸಿದ ದಾಳಿಗಳು ಸ್ವೀಕಾರಾರ್ಹವಲ್ಲ ಎಂದು ಭಾರತ ತಿಳಿಸಿತ್ತು. ಇಂತಹ ಕ್ರಮಗಳು ಅಂತಾರಾಷ್ಟ್ರೀಯ ಸಮುದ್ರ ವಾಣಿಜ್ಯದ ಸುರಕ್ಷತೆ, ಭದ್ರತೆ ಮತ್ತು ಸ್ಥಿರತೆಯನ್ನು ದುರ್ಬಲಗೊಳಿಸುತ್ತವೆ ಎಂದು ಭಾರತ ಆಕ್ಷೇಪ ವ್ಯಕ್ತಪಡಿಸಿತ್ತು.

## ಕಿರುಸುದ್ದಿ

### ಮೆಗಾ ರಕ್ತದಾನ ಶಿಬಿರ

**ಧಾರವಾಡ:** ಡಾ. ಬಿ.ಡಿ.ಜತ್ತಿ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜು-ಆಸ್ಪತ್ರೆ ಮತ್ತು ಸ್ನಾತಕೋತ್ತರ ಸಂಶೋಧನಾ ಕೇಂದ್ರ, ಸಿ.ಬಿ.ಗುತ್ತಲ ಆಯುರ್ವೇದಿಕ್ ಮೆಡಿಕಲ್ ಕಾಲೇಜು-ಆಸ್ಪತ್ರೆ ಸಹಯೋಗದಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ರುಷೋತ್ತಮ ಸಭಾಂಗಣದಲ್ಲಿ ಮೆಗಾ ರಕ್ತದಾನ ಶಿಬಿರ ಜರುಗಿತು. ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ ನಡೆದ ಈ ಶಿಬಿರಕ್ಕೆ ಚಾಲನೆ ನೀಡಿದ ಮುರುಘಾಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಸಮಾಜದಲ್ಲಿ ಪ್ರತಿ ವ್ಯಕ್ತಿ ಪರೋಪಕಾರದ ಗುಣ ಬೆಳೆಸಿಕೊಳ್ಳಬೇಕು. ಅಪಘಾತಕ್ಕೆ ಒಳಗಾದವರು, ಗಂಭೀರ ಖಾಯಿಲೆಗಳಿಂದ ಬಳಲುವ ಮತ್ತು ತುರ್ತು ಚಿಕಿತ್ಸೆಗೆ ಒಳಗಾದ ರೋಗಿಗಳಿಗೆ ರಕ್ತದ ಅವಶ್ಯಕತೆ ಹೆಚ್ಚು. ಹೀಗಾಗಿ ಸರ್ವರೂ ಸ್ವಯಂಪ್ರೇರಿತ ರಕ್ತದಾನ ಮಾಡಿದರೆ ಜೀವಗಳಿಗೆ ಹೊಸ ಆಶಾಕಿರಣ ಮೂಡುವುದಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಕಾರ್ಯಾಧ್ಯಕ್ಷ ಈರೇಶ ಅಂಚಟಗೇರಿ ಮಾತನಾಡಿ, ಆರೋಗ್ಯವಂತ ಪ್ರತಿ ವ್ಯಕ್ತಿ ಸಹ ವರ್ಷದಲ್ಲಿ ಕನಿಷ್ಠ ಎರಡು ಬಾರಿ ರಕ್ತದಾನ ಮಾಡಬೇಕು. ಒಬ್ಬ ವ್ಯಕ್ತಿ ರಕ್ತದಾನದಿಂದ ಮೂರು ಜೀವಗಳನ್ನು ಉಳಿಸಬಹುದಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಯುವಜನ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಉತ್ತಮ ನಾಗರಿಕರಾಗಿ ಬೆಳೆಯಬೇಕು. ರಕ್ತದಾನ ಅಂತಹ ಶಿಬಿರಗಳಲ್ಲಿ ಪಾಲ್ಗೊಂಡರೆ ಸಮಾಜದಲ್ಲಿ ಮಾನವೀಯತೆ ಮತ್ತು ಸಹಾನುಭೂತಿ ಮತ್ತು ಸೇವೆ ಮನೋಭಾವನೆ ಕೂಡ ವೃದ್ಧಿಸುತ್ತದೆ ಎಂದರು. ಡಾ.ಆನಂದ ಹೊಸಕರ, ವೀಣಾ ತುವ್ವದ, ಡಾ. ಬಿ.ಎಚ್.ವೆಂಕಟರೆಡ್ಡಿ, ದತ್ತಮೂರ್ತಿ ಕುಲಕರ್ಣಿ, ಅಶೋಕ ಶೆಟ್ಟರ್, ಸುಧಾ ಕಾಳೆ, ಮಾಳಗಿ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

### ಜೂ.17ಕ್ಕೆ ಬೃಹತ್ ರ್‍ಯಾಲಿ

**ನವಲಗುಂದ:** ನವಲಗುಂದ ಮತ್ತು ಅಣ್ಣಿಗೇರಿ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಎನ್.ಎಚ್. ಕೋನರೆಡ್ಡಿ ಅಭಿಮಾನಿ ಬಳಗದಿಂದ ಶಾಸಕ ಎನ್.ಎಚ್. ಕೋನರೆಡ್ಡಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ರ್‍ಯಾಲಿಯನ್ನು ಜೂ.17ರಂದು 11 ಗಂಟೆಗೆ ಗಣಪತಿ ಗುಡಿ ದೇವಸ್ಥಾನದಿಂದ ಗಾಂಧಿ ಮಾರ್ಕೆಟ್ ಲಿಂಗರಾಜ ಸರ್ಕಲ್ ಹಾಗೂ ಗಾಂಧಿ ಸರ್ಕಲ್ ಮಾರ್ಗವಾಗಿ ತಹಶೀಲ್ದಾರ್ ಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ನವಲಗುಂದ ಬ್ಲಾಕ್ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡ್ರು, ಅಣ್ಣಿಗೇರಿ ಬ್ಲಾಕ್ ಅಧ್ಯಕ್ಷ ಮಂಜುನಾಥ ಮಾಯಣ್ಣನವರ ಹಾಗೂ ಎನ್.ಎಚ್. ಕೋನರಡ್ಡಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರಭಾಕರ ಮೊಹಿತೆ ತಿಳಿಸಿದ್ದಾರೆ.

### ವನಮಹೋತ್ಸವಕ್ಕೆ ಚಾಲನೆ



**ಧಾರವಾಡ:** ಸ್ಥಳೀಯ ಬಸವೇಶ್ವರ ನಗರದ ಶಿವಾಲಯದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ವನಮಹೋತ್ಸವ ಕಾರ್ಯಕ್ರಮಕ್ಕೆ ಹಾಗೂ ರಾಜ್ಯ ಪಾಲಿಕೆ ಸಭಾನಾಯಕ ಈರೇಶ ಅಂಚಟಗೇರಿ ಸಸಿ ನೆಡುವ ಮೂಲಕ ಚಾಲನೆ ನೀಡಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಆರ್. ರಾಮನಗೌಡರ, ಸಂಗಮೇಶ ಹನಸಿ, ಬಸವರಾಜ ಕೆಂಚಳ್ಳಿ, ಶೇಖರ ಕವಳಿ, ಶೋಭಾ ಜಾಧವ, ಶಂಕರ ಮುರಳಿ, ಸಂಜು ಹೊಸಕೋಟಿ, ಅನಿತಾ ಹೊಸಕೋಟಿ ಅನೇಕರು ಇದ್ದರು.

### ವೇತನ ಬಿಡಲು ಆಗ್ರಹ



**ಧಾರವಾಡ:** ಇರಾನ್ ದೇಶದ ಯುದ್ಧದಿಂದ ಕುಸಿದ ಭಾರತದ ಆರ್ಥಿಕತೆ ಸದೃಢತೆಗೆ ಲೋಕಸಭೆ ಹಾಗೂ ರಾಜ್ಯಸಭೆ ಸದಸ್ಯರು, ಕೇಂದ್ರ ಸಚಿವರು, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು, ಸಚಿವರು ಆರು ತಿಂಗಳ ವೇತನ ಸರ್ಕಾರದ ಬೊಕ್ಕಸಕ್ಕೆ ಬಿಡುವಂತೆ ಕರೆ ನೀಡಲು ಹು-ಧಾ ಮಹಾನಗರ ಪಾಲಿಕೆ ಸದಸ್ಯ ಆನಂದ ಸಿಂಗನಾಥ್ ಪ್ರಧಾನಮಂತ್ರಿಗಳಿಗೆ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಈಗಾಗಲೇ ತೈಲ ಬಿಟ್ಟಿಕ್ಕಿನ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಮಿತವಾಗಿ ಬಳಸಲು ಕರೆ ನೀಡಿರುವಂತೆ ದೇಶದ 28 ರಾಜ್ಯಗಳಲ್ಲಿ ಬಿಜೆಪಿ ಆಳ್ವಿಕೆ ಇದೆ. ಅಲ್ಲದೇ ಎನ್‌ಡಿಎ ಅಡಿಯಲ್ಲಿ ಹಲವು ಪಕ್ಷಗಳು ಮಿಲನಗೊಂಡಿವೆ. ಹೀಗಾಗಿ ಕನಿಷ್ಠ ಆರು ತಿಂಗಳ ವೇತನ ವಾಪಾಸ್ ನೀಡಿದರೆ ಸರ್ಕಾರಕ್ಕೆ ಹಣ ಹರಿದು ಬರಲಿದೆ ಎಂದಿದ್ದಾರೆ.

ಮಾಜಿ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಸೈನಿಕರು ಯುದ್ಧ ಮಾಡುವ ವೇಳೆ ಆರ್ಥಿಕ ಸಮಸ್ಯೆ ತಲೆದೋರಿದಾಗ ಸಮಸ್ತ ನಾಗರಿಕರಿಗೂ ಒಂದು ದಿನದ ಊಟ ಬಿಡುವಂತೆ ಕರೆ ನೀಡಿದ್ದು, ಅವರ ಕರೆಯ ಮೇರೆ ದೇಶದ ಜನತೆ ಒಂದು ದಿನದ ಊಟ ಬಿಟ್ಟು ಮಾದರಿಯಾಗಿದ್ದರು ಎಂದು ಸ್ಮರಿಸಿದ್ದಾರೆ.




ಧಾರವಾಡ: ಡಾ. ಬಿ.ಡಿ.ಜತ್ತಿ ಹೋಮಿಯೋಪಥಿಕ್ ಮೆಡಿಕಲ್ ಕಾಲೇಜು-ಆಸ್ಪತ್ರೆ ಮತ್ತು ಸ್ನಾತಕೋತ್ತರ ಸಂಶೋಧನಾ ಕೇಂದ್ರ, ಸಿ.ಬಿ.ಗುತ್ತಲ ಆಯುರ್ವೇದಿಕ್ ಮೆಡಿಕಲ್ ಕಾಲೇಜು-ಆಸ್ಪತ್ರೆ ಸಹಯೋಗದಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ರುಷೋತ್ತಮ ಸಭಾಂಗಣದಲ್ಲಿ ಮೆಗಾ ರಕ್ತದಾನ ಶಿಬಿರ ಜರುಗಿತು.

## ಸುಡಗಾಡು ಸಿದ್ಧರ ಬಗ್ಗೆ ಅಧ್ಯಯನ ಅಗತ್ಯ: ಭಜಂತ್ರಿ

**ಧಾರವಾಡ:** ಸರ್ಕಾರಿ ಸೌಲಭ್ಯಗಳಿಂದ ಸುಡುಗಾಡು ಸಿದ್ದರು ವಂಚಿತರಾಗಿದ್ದಾರೆ. ನಮ್ಮ ನೆಲದ ಸಾಂಸ್ಕೃತಿಕ ವಾರಸುದಾರರಾದ ಈ ಅಲೆಮಾರಿ ಜನಾಂಗ ಅನಾಥ ಪ್ರಜ್ಞೆಯಿಂದ ಬಳಲುತ್ತಿರುವುದಾಗಿಯೂ ಸಾಹಿತಿ ಡಾ. ವೈ.ಎಂ. ಭಜಂತ್ರಿ ವಿಷಾದ ವ್ಯಕ್ತಪಡಿಸಿದರು.

ಜಾನಪದ ಸಂಶೋಧನಾ ಕೇಂದ್ರ ಡಾ.ಜಿನದತ್ತ ಹಡಗಲಿ ದತ್ತಿ ನಿಮಿತ್ತ ನಗರದ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ನಡೆದ ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕದಲ್ಲಿ ಕಂಡು ಬರುವಷ್ಟು ಜಗತ್ತಿನ ಯಾವುದೇ ಭಾಗದಲ್ಲಿ ಈ ಜನಾಂಗ ಕಾಣಸಲ್ಲ. ಈ ಅಲೆಮಾರಿ ಬುಡಕಟ್ಟು ಜನಾಂಗದಲ್ಲಿ ಅನಕ್ಷರಸ್ಥರೇ ಹೆಚ್ಚು, ಈ ಕುರಿತು ಸಾಂಸ್ಕೃತಿಕ ಅಧ್ಯಯನ ವಾಸ್ತವವಾಗಿ ನಡೆಯಬೇಕಿದೆ. ಆಂಧ್ರಪ್ರದೇಶದ ಮೂಲದ ಈ ಸುಡುಗಾಡ ಸಿದ್ಧರು ಉತ್ತರ ಕರ್ನಾಟಕದಲ್ಲಿ ಹೆಚ್ಚು ನೆಲೆಸಿದ್ದಾರೆ. ಇವರು ಅಕ್ಷರದಿಂದ ದೂರ ಇದ್ದರೂ, ಸಂಸ್ಕೃತಿಯಿಂದ ದೂರವಿಲ್ಲ. ಈ ಜನರ ಭಾಷೆ ಅವನತಿ ಹೊಂದಿದರೆ, ಈ ಸಮುದಾಯವೂ ಅವನತಿ ಕಾಣಲಿದೆ ಎಂದರು. ಸಾಹಿತಿ ಚಂದ್ರಶೇಖರ ರೊಟ್ಟಿಗವಾಡ ಮಾತನಾಡಿ, ಕರ್ನಾಟಕದ ಗೊಂದಲಿಗರು, ದುರ್ಗಮುರಿಗಿ, ಶಿಳ್ಳಿಕ್ಯಾತರು, ಹಕ್ಕಿ ಪಣಕಟ್ಟವರು, ಹೆಳವರು, ಕೊರವರು ಅನೇಕ ಜನಾಂಗಗಳ ಸಮೀಕ್ಷೆ ಆಗಬೇಕಿದೆ. ಈ ಮೊದಲು ಸುಡುಗಾಡಸಿದ್ಧರಿಗೆ ಸದಾಶಿವ ಆಯೋಗದ ವರದಿಯಲ್ಲಿ ಮೊದಲ ಆದ್ಯತೆ ಇತ್ತು ಎಂದರು. ಸುಡುಗಾಡು ಸಿದ್ಧ ಯಲ್ಲಪ್ಪ ಡಕ್ಕಣ್ಣವರ ಪ್ರದರ್ಶನಕ್ಕೆ ಹುಸೇನಪ್ಪ ಕುಲಾವಿ ಸಾಥ್ ನೀಡಿದರು. ಗುರು ಕಲ್ಮಠ ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಜಿನದತ್ತ ಹಡಗಲಿ, ಸುಜಾತ ಹಡಗಲಿ, ನಾಗಭೂಷಣ ಹಿರೇಮಠ, ವಿಶ್ವೇಶ್ವರಿ ಹಿರೇಮಠ ಇತರರಿದ್ದರು.



ಧಾರವಾಡ: ಜಾನಪದ ಸಂಶೋಧನಾ ಕೇಂದ್ರ, ಡಾ.ಜಿನದತ್ತ ಹಡಗಲಿ ದತ್ತಿ ನಿಮಿತ್ತ ನಗರದ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ನಡೆದ ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದ ಸಾಹಿತಿ ಡಾ. ವೈ.ಎಂ.ಭಜಂತ್ರಿ.

# ನ್ಯಾಯಾಂಗ ವ್ಯವಸ್ಥೆಯ ವಿಶ್ವಾಸ ಉಳಿಸಿ

**ಧಾರವಾಡ:** ದೇಶದ ಪ್ರತಿ ನಾಗರಿಕನಿಗೂ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ಕಾನೂನು ಸೇವೆಯ ಪಾತ್ರ ಪ್ರಮುಖ. ನ್ಯಾಯಾಂಗ ವ್ಯವಸ್ಥೆ ಮೇಲಿನ ಜನರ ವಿಶ್ವಾಸ ಉಳಿಸುವುದು ವಕೀಲರ ಜವಾಬ್ದಾರಿ ಎಂದು ಹೈಕೋರ್ಟ್ ನ್ಯಾಯಾಧೀಶ ಎಚ್.ಪಿ. ಸಂದೇಶ ಹೇಳಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಕಾನೂನು ವಿಶ್ವವಿದ್ಯಾಲಯ ಸಹಯೋಗದಲ್ಲಿ ನಗರದ ಕೃಷಿ ವಿಶ್ವವಿದ್ಯಾಲಯದ ರೈತ ಜ್ಞಾನ ಕೇಂದ್ರ ಸಭಾಂಗಣದಲ್ಲಿ ಭಾನುವಾರ ಕಾನೂನು ವಿದ್ಯಾರ್ಥಿಗಳಿಗೆ ಏರ್ಪಡಿಸಿದ 4ನೇ ವಲಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿ, ವಕೀಲರಾಗುವ ಕಾನೂನು ವಿದ್ಯಾರ್ಥಿಗಳು ಅನ್ಯಾಯಕ್ಕೆ ಒಳಗಾದವರ ಧ್ವನಿಯಾಗಿ ಕಾರ್ಯನಿರ್ವಹಿಸಬೇಕು. ಇಲ್ಲವಾದರೆ ಕಪ್ಪು ಕೋಟ್‌ಗೆ ಅರ್ಥವಿರಲ್ಲ. ಕಕ್ಷಿದಾರರು ನ್ಯಾಯದ ಮೇಲೆ ವಿಶ್ವಾಸ ಇಟ್ಟು ಬಂದಾಗ ನ್ಯಾಯ ಒದಗಿಸುವಂತೆ ಹೇಳಿದರು.




> **ಮಾನವೀಯತೆ ಮರೆಯದಿರಿ**
> ಮುಂದಿನ ದಿನಗಳಲ್ಲಿ ವಕೀಲರು ಹಾಗೂ ಕಾನೂನು ತಜ್ಞರಾಗಿ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುವ ಗುರಿ ಹೊಂದಬೇಕು. ಮಾನವೀಯತೆ ಮರೆಯಬಾರದು. ಸಮಾಜದಲ್ಲಿ ಸಂಸ್ಕಾರ, ಸಂಸ್ಕೃತಿ ಹಾಗೂ ನೀತಿ ಮೌಲ್ಯಗಳನ್ನು ಬೆಳೆಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನ ನ್ಯಾಯ ದೊರೆಯಬೇಕು ಎಂದು ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಬಸವರಾಜು ಹೇಳಿದರು.

ಕಾನೂನು ವಿದ್ಯಾರ್ಥಿಗಳು ಶಿಸ್ತು, ಶ್ರಮ, ಸಮಯಪ್ರಜ್ಞೆ, ಆತ್ಮವಿಶ್ವಾಸ, ನಿರ್ಭೀತಿಯ ಮನೋಭಾವ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದಲ್ಲಿ ನೊಂದವರು, ವಿಧವೆಯರು ಹಾಗೂ ಅನ್ಯಾಯಕ್ಕೆ ಒಳಗಾದವರ ಹಕ್ಕುಗಳ ರಕ್ಷಿಸುವಂತೆ ಸಲಹೆ ನೀಡಿದರು.

ಹೈಕೋರ್ಟ್ ನ್ಯಾಯಾಧೀಶ ಎಸ್. ಸುನಿಲದತ್ತ ಯಾದವ್ ಮಾತನಾಡಿ, ಭವಿಷ್ಯದ ವಕೀಲರು ಸಮಾಜದ ಸಮಸ್ಯೆಗಳ ಬಗ್ಗೆ ಜಾಗೃತರಾಗಿದ್ದು, ಕಕ್ಷಿದಾರರಿಗೆ ನ್ಯಾಯ ದೊರಕಿಸಬೇಕು. ಸಮಾಜದ ಅಭಿವೃದ್ಧಿಗೆ ತೊಡಗಿಸಿಕೊಳ್ಳಬೇಕು ಎಂದರು. ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನ್ಯಾಯಾಧೀಶ ಅನು ಶಿವರಾಮನ್ ಮಾತನಾಡಿ, ಸೇವಾ ಮೌಲ್ಯಮಾಪನ ಕಾನೂನಿನ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ. ಕಾನೂನಿನ ಮಹತ್ವ ಅನುಷ್ಠಾನ ಹಾಗೂ ದೊರೆಯುವ ಸೌಲಭ್ಯಗಳ ಅರಿವು ಅಗತ್ಯ ಎಂದರು.

ನ್ಯಾಯಾಧೀಶರಾದ ಪೂರ್ಣಿಮಾ ಪೈ, ನೇರಳೆ ವೀರಭದ್ರಯ್ಯ ವಿಜಯ್, ಸಿವಿಲ್ ನ್ಯಾಯಾಧೀಶ ಅಲ್ಲಪ್ಪ ಬಡಿಗೇರ, ಎಚ್.ಶಶಿಧರ, ಕೃಷಿ ವಿವಿಯ ಉಪಕುಲಪತಿ ಡಾ. ಪಿ.ಯು. ಕೃಷ್ಣರಾಜ್, ವಕೀಲರು, ಕಾನೂನು ವಿಭಾಗದ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಎಲ್ಲ ಕಲೆಯ ಮೂಲ ತತ್ವಗಳು ಒಂದೇ: ಚೌಗಲೆ



**ಹುಬ್ಬಳ್ಳಿ:** ಆಧುನಿಕತೆಯೆಂಬುದು ಹರಿವ ನೀರಿನಂತೆ. ಅದು ಮನುಷ್ಯ ಬದುಕಿನಲ್ಲಿ ನಾವು ಇಚ್ಛಿಸದೇ ಹೋದರೂ ಎದುರಾಗುತ್ತದೆ. ಮತ್ತೆ ಕೊಚ್ಚಿ ಹೋಗುತ್ತದೆ. ಪುನಃ ಹೊಸದು ಬರುತ್ತದೆ. ಜೀವನದ ಮೌಲ್ಯಗಳು ಅದಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಿರುತ್ತವೆ. ಸಾಹಿತ್ಯ ಕೂಡ ಇದಕ್ಕೆ ಹೊರತಾಗಿಲ್ಲ ಎಂದು ಕಥೆಗಾರ ಡಾ.ಡಿ.ಎಸ್. ಚೌಗಲೆ ಹೇಳಿದರು.

ಅಕ್ಷರ ಸಾಹಿತ್ಯ ವೇದಿಕೆ, ಹುಬ್ಬಳ್ಳಿ ಮತ್ತು ಕಿಮ್ಸ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಕಿಮ್ಸ್‌ನ ಗೋಲ್ಡನ್ ಜುಬಿಲಿ ಸಭಾಭವನದಲ್ಲಿ ನಡೆದ ಡಾ ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾಸ್ಪರ್ಧೆಯ ಬಹುಮಾನ ಪ್ರದಾನ ಮಾಡಿ ಮಾತನಾಡಿ, ಚಿತ್ರಕಲಾವಿದರು ಬರಹಗಾರರಾದರೆ ಅವರ ಬರವಣಿಗೆಯಲ್ಲೂ ಚಿತ್ರಕಲೆಯ ವಿಸ್ತಾರ ಹಣಕಿಹಾಕುತ್ತದೆ. ಎಲ್ಲ ಕಲೆಯ ಮೂಲ ತತ್ವಗಳೂ ಒಂದೇ ಆಗಿರುತ್ತವೆ. ವಿಜೇತ ಕಥೆಗಾರ್ತಿ ನಭಾ ಮತ್ತು ನಾನು ಮೂಲತಃ ಚಿತ್ರಕಲಾವಿದರು ಎಂದರು.

ತೀರ್ಪುಗಾರ ಚನ್ನಪ್ಪ ಅಂಗಡಿ ಮಾತನಾಡಿ, ವಿಜೇತ ಕಥೆಯು ಸಮಕಾಲೀನ ನಾಗರಿಕ ಬದುಕಿನ ಸಾಂಸ್ಕೃತಿಕ ಪಲ್ಲಟಗಳ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧವನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸುತ್ತದೆ ಎಂದರು. ಈ ಬಾರಿಯ ಡಾ.ಪ್ರಹ್ಲಾದ ಅಗಸನಕಟ್ಟೆ ಕಥಾ ಬಹುಮಾನವನ್ನು ಪಡೆದ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡುತ್ತಿರುವ ನಭಾ, ಬಹುಮಾನ ಸ್ವೀಕರಿಸಿ, ಈ ಬಹುಮಾನ ನನಗೆ ಕಥಾ ಬರವಣಿಗೆಯ ಮೇಲಿನ ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಮಹಾಂತಪ್ಪ ನಂದೂರ ಮಾತನಾಡಿ, ಕನ್ನಡದ ಕಥೆಗಾರ್ತಿಯರ ಹೊಸ ತಲೆಮಾರು ವಿಭಿನ್ನಂಥವರಿಂದ ಮುಂದುವರೆಯುತ್ತಿದೆ ಎಂದರು. ಹರ್ಷವರ್ಧನ ಅಗಸನಕಟ್ಟೆ ತಮ್ಮ ತಂದೆಯ ಕುರಿತು ಅಭಿಪ್ರಾಯ ಹಂಚಿಕೊಂಡರು. ವಿಜಯಾ ಅಗಸನಕಟ್ಟೆ ಹಾಗೂ ಕಿಮ್ಸ್ ನಿರ್ದೇಶಕ ಡಾ. ಕೆ.ಎಫ್. ಕಮ್ಮಾರ್ ಉಪಸ್ಥಿತರಿದ್ದರು. ಸಿ.ಎಂ ಚೆನ್ನಬಸಪ್ಪ ಮತ್ತು ಡಾ.ಸಿದ್ದೇಶ್ವರ ಕಟಕೋಳ ಅತಿಥಿಗಳನ್ನು ಪರಿಚಯಿಸಿದರು. ಸುನಂದಾ ಕಡಮೆ ಪ್ರಾಸ್ತಾವಿಸಿದರು. ನಿರ್ಮಲಾ ಶೆಟ್ಟರ ಸ್ವಾಗತಿಸಿದರು. ವಿರೂಪಾಕ್ಷ ಕಟ್ಟಿಮನಿ ನಿರೂಪಿಸಿದರು. ಸಿ.ಎಂ ಮುನಿಸ್ವಾಮಿ, ಡಾ. ಭಾರತಿ ಹಿರೇಮಠ, ಗಾಯತ್ರಿ ರವಿ, ಪ್ರಕಾಶ ಕಡಮೆ, ಡಾ. ಎಂ.ಡಿ ಒಕ್ಕುಂದ ಡಾ.ವಿನಯಾ, ಲಿಂಗರಾಜ ಅಂಗಡಿ, ಬಿ.ಎಸ್. ಸೊಪ್ಪಿನ, ವೀರಣ್ಣ ಬಡಿಗೇರ, ಪ್ರೊ.ಕೌಜಲಗಿ, ಗೋವಿಂದ ಹೆಗಡೆ, ಪ್ರದೀಪ ಭಟ್ ಮುಂತಾದವರಿದ್ದರು.

## ಮಿನಿ ಉದ್ಯೋಗ ಮೇಳ ಯಶಸ್ವಿ

**ಧಾರವಾಡ:** ನಗರದ ಜೆಸ್ಸೆಸ್ ಮಂಜುನಾಥೇಶ್ವರ ಐಟಿಐ ಕಾಲೇಜಿನಲ್ಲಿ ಭಾನುವಾರ ನಡೆದ ಮಿನಿ ಉದ್ಯೋಗ ಮೇಳದಲ್ಲಿ ಮೈಸೂರಿನ ಪ್ರಿಕಾಲ್ ಪ್ರಿಸಿಶನ್ ಕಂಪನಿ, ಬೆಂಗಳೂರಿನ ಸ್ಪ್ರಿಂಗ್ಸ್ ಹೋಂಡಾ, ಧಾರವಾಡದ ಆರ್.ಪಿ. ಲಾಜೆಸ್ಟಿಕ್ ಕಂಪನಿಗಳು ಭಾಗವಹಿಸಿದ್ದವು.

ಈ ಮೇಳದಲ್ಲಿ ಒಟ್ಟು 106 ಅಭ್ಯರ್ಥಿಗಳು ಭಾಗವಹಿಸಿದ್ದರು. 23 ಅಭ್ಯರ್ಥಿಗಳು ಉದ್ಯೋಗಕ್ಕೆ ಆಯ್ಕೆಯಾದರೆ, 42 ಅಭ್ಯರ್ಥಿಗಳು ಕೊನೆಯ ಸುತ್ತಿನ ಸಂದರ್ಶನಕ್ಕೆ ಹಾಜರಾಗಲಿದ್ದಾರೆ.





ಧಾರವಾಡ: ತಾಲೂಕಿನ ಕಲ್ಲಾಪೂರದ ಸರ್ಕಾರ ಪ್ರಾಥಮಿಕ ಶಾಲೆಯ ಬಡ ಮಕ್ಕಳಿಗೆ ವಿಎಕೆ ಫೌಂಡೇಶನ್ ಸಂಸ್ಥಾಪಕ ವೆಂಕಟೇಶ ಕಾಟವೆ ಅವರು ಶಾಲಾ ಬ್ಯಾಗ್ ಮತ್ತು ಪರೀಕ್ಷಾ ಕಿಟ್ ವಿತರಿಸಿದರು. ಫೌಂಡೇಶನ್ ಸದಸ್ಯ ಬೀರಪ್ಪ ಡೊಳ್ಳಿನ, ಗೋಪಾಲ ಪಾಟೀಲ, ಶಿಕ್ಷಕರಾದ ಶಾರದಾ ಶಿರಕೋಳ, ಈರನಗೌಡ ಪಾಟೀಲ ಇದ್ದರು.

## ಪುಷ್ಪ ಮರಗಳ ಸಸ್ಯಾರೋಪಣ ಕಾರ್ಯಕ್ರಮ

**ಧಾರವಾಡ:** ನಗರದ ಪ್ರತಿಷ್ಠಿತ ಬಡಾವಣೆಯಾದ ಭುವನೇಶ್ವರಿ ನಗರ (ಯಲಿಗಾರ ಲೇಔಟ್) ಅತ್ತಿಕೊಳ್ಳ ದಲ್ಲಿ ಭಾನುವಾರ ಬಡಾವಣೆಯ ಮಿಯಾವಾಕಿ ಉದ್ಯಾನವನದಲ್ಲಿ ಪುಷ್ಪ ಮರಗಳ ಸಸ್ಯಾರೋಪಣ ಕಾರ್ಯಕ್ರಮ ನೆರವೇರಿತು. ಹುಬ್ಬಳ್ಳಿ- ಧಾರವಾಡ ಮೇಯರ್ ಜ್ಯೋತಿ ಪಾಟೀಲ ಅವರು ಗಿಡಗಳನ್ನು ನೆಟ್ಟರು. ನಶಿಸುವ ಅಂಚಿನಲ್ಲಿರುವ ಹೂ ಮರಗಳ ತಳಿಗಳನ್ನು ಮೈಸೂರಿನ ಶ್ರೀಕಂಠರಾಜ ಅರಸು ಅವರು ಇಪ್ಪತ್ತಕ್ಕೂ ಹೆಚ್ಚು ತಳಿಗಳ ಎಂಬತ್ತು ಗಿಡಗಳನ್ನು ನೀಡಿದರು. ಪರಿಸರ ಪ್ರೇಮಿ ಪಂಚಾಕ್ಷರಯ್ಯ ಹಿರೇಮಠ, ಆಡಿ. ವಿ. ಎಸ್. ಪಾಟೀಲ ತೋಟಗಾರಿಕೆ ಸಸ್ಯಗಳ ತಜ್ಞರು, ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಶಾಂತ ದೀಕ್ಷಿತ ಸ್ವಾಗತಿಸಿದರು. ಮಾಣಿಕ ಶಿವಕರ, ಉದಯರವಿ ಯಲಿಗಾರ, ಬಸವರಾಜ, ಎಚ್‌ಡಿಎಂಸಿ ತೋಟಗಾರಿಕೆ ಇಲಾಖೆಯವರು ಉಪಸ್ಥಿತರಿದ್ದರು. ವೀರನಾರಾಯಣ ಕುಲಕರ್ಣಿ ವಂದಿಸಿದರು.



## ಹುಬ್ಬಳ್ಳಿ ಸೆಂಟ್ರಲ್ ಬಲಿಷ್ಠ ಕ್ಷೇತ್ರ: ಪಾಟೀಲ



**ಹುಬ್ಬಳ್ಳಿ:** ಅರವಿಂದ ನಗರದ ಬಿಜೆಪಿ ಕಾರ್ಯಾಲಯದಲ್ಲಿ ಭಾನುವಾರ ಸೆಂಟ್ರಲ್ ಕ್ಷೇತ್ರದ ಕಾರ್ಯಕಾರಣಿ ಸಭೆಯ ಉದ್ಘಾಟನೆಯನ್ನು ವಿಧಾನ ಪರಿಷತ್ ಚುನಾವಣೆಯ ಪಕ್ಷದ ಅಭ್ಯರ್ಥಿ ಲಿಂಗರಾಜ್ ಪಾಟೀಲ ಮಾಡಿದರು.

ನಂತರ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರವು ಬಲಿಷ್ಠವಾದ ಕ್ಷೇತ್ರ. ಶಾಸಕ ಮಹೇಶ ಟೆಂಗಿನಕಾಯಿ ಸಂಘಟನೆಯಿಂದ ಬೆಳೆದವರು. ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡವರು. ಅಂಥವರು ಈಗ ಕ್ಷೇತ್ರದ ಶಾಸಕರಾಗಿದ್ದಾರೆ. ಅವರ ಅನುಭವ ಕ್ಷೇತ್ರಕ್ಕೆ ಹಾಗೂ ಪಕ್ಷಕ್ಕೆ ದೊರೆತಿದ್ದು ಒಳ್ಳೆಯ ವಿಷಯ ಎಂದರು.

ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದ ಸೆಂಟ್ರಲ್ ಕ್ಷೇತ್ರ ಸಂಘಟನೆಯಲ್ಲಿ ಎಲ್ಲಾ ಮೋರ್ಚಾಗಳ ವರದಿಯನ್ನು ಈಗ ನೋಡಿದೆ. ಬಹಳ ಚೆನ್ನಾಗಿ ಸಂಘಟನೆಯನ್ನು ಮಾಡಿದ್ದಾರೆ. ಪಕ್ಷವು ನೀಡಿದ ಜವಾಬ್ದಾರಿಯನ್ನು ಚೆನ್ನಾಗಿ ನಿಬಾಯಿಸಿದ್ದಾರೆ. ಮುಂಬರುವ ಮತದಾರರ ಪರಿಷ್ಕರಣೆ ಎಸ್ ಐಆರ್‌ದಲ್ಲಿ ಪ್ರತಿಯೊಬ್ಬರೂ ತಮ್ಮ ಬೂತ್‌ಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾತನಾಡಿ, ಕ್ಷೇತ್ರದಲ್ಲಿ ಎಲ್ಲರೂ ಸಕ್ರಿಯವಾಗಿ ಪಕ್ಷದ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಮಾಡುತ್ತಿದ್ದಾರೆ. ಪಕ್ಷದಲ್ಲಿ ಪ್ರತಿಯೊಬ್ಬ ಕಾರ್ಯಕರ್ತರನ್ನು ಗುರುತಿಸಿ ಕಾರ್ಯಕರ್ತರಿಗೆ ಸ್ಥಾನಮಾನವನ್ನು ವರಿಷ್ಠರು ನೀಡಲಿದ್ದಾರೆ ಎಂದರು.

ರಾಜ್ಯ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಕೌತಾಳ ಮಾತನಾಡಿದರು. ಬಿಜೆಪಿ ಸೆಂಟ್ರಲ್‌ನ ಎಲ್ಲಾ ಮೋರ್ಚಾಗಳ ಅಧ್ಯಕ್ಷರುಗಳು ಸೆಂಟ್ರಲ್ ಅಧ್ಯಕ್ಷ ರಾಜು ಕಾಳೈ ಅವರಿಗೆ ವರದಿ ಒಪ್ಪಿಸಿದರು. ಅಧ್ಯಕ್ಷತೆಯನ್ನು ರಾಜು ಕಾಳೆ ವಹಿಸಿದ್ದರು. ಮಂಡಲ ಪ್ರಧಾನ ಕಾರ್ಯದರ್ಶಿ ಪ್ರವೀಣ ಪವಾರ್ ರಾಮನಗೌಡ ಶೆಟ್ಟನಗೌಡರ, ಪಾಲಿಕೆಯ ಸದಸ್ಯ ರಾಜಣ್ಣ ಕೊರವಿ, ಸೆಂಟ್ರಲ್ ಅಧ್ಯಕ್ಷರಾದ ಅಕ್ಕಮ್ಮ ಹೆಗಡೆ, ವೀಣಾ ಬರದ್ವಾಡ, ಉಮಾ ಮುಕುಂದ, ಚಂದ್ರಿಕಾ ಮೇಸ್ತ್ರಿ , ರೂಪಾ ಶೆಟ್ಟಿ, ಈಶ್ವರ್ ಗೌಡ ಪಾಟೀಲ್ ,ಮುಖಂಡರಾದ ಸಿದ್ದು ಮೊಗಲಿ ಶೆಟ್ಟರ್, ರವಿ ನಾಯಕ, ಕೃಷ್ಣ ಗಂಡ ಗಾಳಕರ್ ಮೊದಲಾದವರಿದ್ದರು.

## ಕನ್ನಡ ನಾಡಿನ ಇತಿಹಾಸ ಬೆಳೆಸಿ: ಡಾ. ಹಂಸಲೇಖ

**ಅಣ್ಣಿಗೇರಿ:** ಉತ್ತರ ಕರ್ನಾಟಕದ ಕಲೆ ಸಾಹಿತ್ಯ ಸಂಗೀತ, ನೃತ್ಯ, ಚಿತ್ರಕಲೆ, ಸಂಸ್ಕೃತಿ, ಪಾರಂಪರಿಕ ಪದ್ಧತಿಗಳು, ಕನ್ನಡ ಭಾಷೆ, ನೆಲ, ಜಲ, ಸಂಪತ್ತುಗಳು, ಐತಿಹಾಸಿಕ ಪ್ರಸಿದ್ಧ ಯಾತ್ರಾ ಕ್ಷೇತ್ರಗಳು, ಕವಿಗಳು, ವಿದ್ವಾಂಸರು, ಶರಣರು, ಜನಪದ ಕಲಾವಿದರು, ರಂಗಭೂಮಿ ಕಲಾವಿದರು, ಸತ್ಪುರಷರು, ಮಹಾತ್ಮರ, ಅವಿಮುಕ್ತ ಕ್ಷೇತ್ರಗಳನ್ನು ಉಳಿಸಿ ಬೆಳೆಸುವಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಂಡು ಕನ್ನಡ ನಾಡಿನ ಇತಿಹಾಸ ಮೇಲ್ಪಂಕ್ತಿಯಲ್ಲಿ ಉಳಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಗೀತ ನಾದಬ್ರಹ್ಮ ಡಾ. ಹಂಸಲೇಖ ಹೇಳಿದರು.

ಅಣ್ಣಿಗೇರಿ ತಾಲೂಕಿನ ಆದಿಕವಿ ಪಂಪನ ಜನ್ಮಭೂಮಿಯ ಮನೆಯ ದೇಶಪಾಂಡೆ ವಾಡೆದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹೆಣ್ಣುಮಕ್ಕಳಿಗೆ ಆಗುತ್ತಿರುವ ಶೋಷಣೆ, ಭ್ರೂಣಹತ್ಯೆ, ಅತ್ಯಾಚಾರ, ಕೌಟುಂಬಿಕ ಕಲಹಗಳು, ಅನ್ಯಾಯಗಳ ಕುರಿತು ಅವಲೋಕಿಸಿ ಸೂರಿ ಹೇಳಿದ ಸ್ಟೋರಿಯ ಒಕೆ ಚಲನಚಿತ್ರದ ಚಿತ್ರೀಕರಣಕ್ಕೆ ಪಟ್ಟಣದ ದೇಸಾಯಿ ವಾಡೆದಲ್ಲಿ ಹಮ್ಮಿಕೊಂಡಿದ್ದು, ಈ ಭಾಗದ ಶಿಶುನಾಳ, ಇಟಗಿ ಇನ್ನಿತರ ಕ್ಷೇತ್ರಗಳಲ್ಲಿ ಚಿತ್ರಿಕರಣ ಮಾಡುವುದರ ಜೊತೆಗೆ ಈ ಭಾಗದ ರಂಗಭೂಮಿಯ ಕಲಾವಿದರನ್ನೇ ಬಳಸಿಕೊಂಡು ಸಿನೆಮಾ ತೆಗೆಯುತ್ತಿದ್ದೇವೆ. ಚಿತ್ರಕಥೆ, ಸಂಭಾಷಣೆ, ಸಂಗೀತ, ಸಾಹಿತ್ಯ, ನಿರ್ದೇಶನ, ಕೂಡಾ ನಾನೇ ಮಾಡುತ್ತಿದ್ದೇನೆ. ನನ್ನ ಚಿತ್ರದ ನಿರ್ಮಾಣ ಜೊತೆ ನಾಗೇಶ ವಾಸ್ಟರ್ ನಿರ್ಮಾಕರಾಗಿ ಜೊತೆಗಿದ್ದಾರೆ. ಅದೀಬಾ ಅಕ್ಷರ್ ಕಥೆ ಬರೆದಿದ್ದು, ಪಿ.ಕೆ.ಎಚ್.ದಾಸ್ ಛಾಯಗ್ರಾಹಕರಾಗಿದ್ದಾರೆ. ಹೊಸ್ಮನೆ ಮೂರ್ತಿ ಕಲೆಗೆ ಪ್ರೇರಣೆ ಕಲ್ಪಿಸುತ್ತಿದ್ದಾರೆ. ಹಂಸಲೇಖ ಮೂವಿಸ್ ಮತ್ತು ಆಕಾಂಕ್ಷಾ ಪ್ರೊಡಕ್ಷನ್ ಸಂಸ್ಥೆಗಳ ಜಂಟಿ ನಿರ್ಮಾಣದಲ್ಲಿ ಒಕೆ ಚಲನಚಿತ್ರದ ಚಿತ್ರೀಕರಣ ಪ್ರಾರಂಭಗೊಂಡಿದೆ. ತಾರಾಗಣದಲ್ಲಿ ಕಿಶೋರ್, ರವಿಚಂದ್ರನ್, ಮಾಲಶ್ರೀ, ನಿಷ್ಕಲಾ, ತನಿಷ್ಕಾ ,ರಾಶಿಕಾ ಶೆಟ್ಟಿ, ದೊಡ್ಡಣ್ಣ, ಅಶೋಕ, ಚಿತ್ಕಲಾ ಬಿರಾದರ್, ನೀತಾ ಮೈಂದರ್ಗಿ ಗವಿಸಿದ್ದಯ್ಯ, ಶ್ಯಾಮ್ ಖಾನಾಪುರ ಸುನಂದ ಹೊಸ್ಪೇಟ್, ಇಂದ್ರಜಿತ್ , ಅಕ್ಷತಾ ತಾರಗಣದಲ್ಲಿದ್ದಾರೆ. ಈ ಚಿತ್ರ ಡಿಸೆಂಬರ್ ಅಂತ್ಯದೊಳಗೆ ಚಿತ್ರೀಕರಣ ಮುಗಿಸಿ ಬಿಡುಗಡೆ ಮಾಡುವ ಹಂತದಲ್ಲಿದ್ದೇವೆ. ಪ್ರತಿಯೊಬ್ಬ ಹೆಣ್ಣುಮಕ್ಕಳು ನೋಡುವಂತ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವಂತ ಚಲನಚಿತ್ರವಾಗಿದೆ ಎಂದರು. ಕಲಾವಿದರಾದ ಕಿಶೋರ್, ಇಂದ್ರಜೀತ್ ನಿಷ್ಕಲಾ, ತನಿಷ್ಕಾ, ರಾಶಿಕಾ ಶೆಟ್ಟಿ, ದೊಡ್ಡಣ್ಣ, ಅಶೋಕ, ಚಿತ್ಕಲಾ ಬಿರಾದರ, ಗವಿಸಿದ್ದಯ್ಯ ಸುನಂದ ಹೊಸಪೇಟಿ, ಅಕ್ಷತಾ ಇದ್ದರು.



## ಪ್ರತಿಬಿಂಬ ಪ್ರತಿಭಾಶೋಧ ಕಾರ್ಯಕ್ರಮ



**ಹುಬ್ಬಳ್ಳಿ:** ಅಖಿಲ ಹವ್ಯಕ ಮಹಾಸಭಾ, ಬೆಂಗಳೂರು ಇವರ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಪ್ರತಿಬಿಂಬ ಪ್ರತಿಭಾಶೋಧ ಕಾರ್ಯಕ್ರಮವನ್ನು ಹವ್ಯಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷ ವೆ.ಎಂ.ಭಟ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹವ್ಯಕರ ಮೂಲತಃ ಪ್ರತಿಭಾವಂತರು. ಈ ರೀತಿಯ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ನಡೆಸಲು ನಿರ್ಧರಿಸಲಾಗಿದೆ ಎಂದರು.

ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ.ಗಿರಿಧರ ಕಜೆ ಮಾತನಾಡಿ, ಹವ್ಯಕ ಸಮುದಾಯವೆಂದರೆ ಪ್ರತಿಭೆಗಳ ಮಹಾಸಾಗರ. ಜ್ಞಾನದ ಗಣಿ. ಈ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಸ್ಥೆ ಕಳೆದ 31 ವರ್ಷಗಳಿಂದ ನಡೆಸಿಕೊಂಡು ಬಂದಿದೆ. ಕಳೆದ ಐದು ವರ್ಷಗಳಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರತಿಬಿಂಬ ಕಾರ್ಯಕ್ರಮ ನಡೆಸಿ ಅಂತಿಮವಾಗಿ ಜಿಲ್ಲಾ ಮಟ್ಟದಲ್ಲಿ ಗೆದ್ದವರಿಗೆ ಬೆಂಗಳೂರಿನಲ್ಲಿ ಸ್ಪರ್ಧೆ ಆಯೋಜಿಸಲಾಗುತ್ತದೆ ಎಂದರು.

ಹವ್ಯಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸದಸ್ಯ ಶಿವರಾಮ ಹೆಗಡೆ ಮಾತನಾಡಿದರು. ಸಂಚಾಲಕ ಮೂರ್ತಿ ಹೆಗಡೆ, ವೀಣಾ ಹೆಗಡೆ, ವಸಂತ ಭಟ್, ಶ್ರೀಕಾಂತ ಹೆಗಡೆ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಅಖಿಲ ಹವ್ಯಕ ಮಹಾಸಭಾದ ಮಹಿಳಾ ವೇದಿಕೆಯ ಹುಬ್ಬಳ್ಳಿ ಮತ್ತು ಧಾರವಾಡ ಶಾಖೆಗಳನ್ನು ಅಧ್ಯಕ್ಷ ಡಾ.ಗಿರಿಧರ ಕಜೆ ಉದ್ಘಾಟಿಸಿದರು.

## ಗುರುವಂದನೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ

**ಉಪ್ಪಿನಬೆಟಗೇರಿ:** ಸ್ಥಳೀಯ ಶ್ರೀ ಗುರು ವಿರುಪಾಕ್ಷೇಶ್ವರ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ ಸಭಾಭವನದಲ್ಲಿ ಭಾನುವಾರ 2000-2001ನೇ ಸಾಲಿನ ಎಸ್‌ಎಸ್ ಎಲ್ ಸಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಯಿತು. ನಿವೃತ್ತ ಪ್ರಾಂಶುಪಾಲ ಬಿ.ಎಸ್. ಮರಿನಾಗಣ್ಣವರ, ಶಿಕ್ಷಕ ಆರ್.ಜಿ. ಇಂಚಗೇರಿಮಠ, ಎಂ. ಬಿ.ವಾಸನ್, ಸಿ.ಎಂ. ತಾಳಿಕೋಟಿ, ಜಿ.ಎಸ್. ಸಾಲಿಮಠ, ಎಸ್.ಎಸ್. ಆವ್ರೋಜಿ, ಶಾಲಾ ಸಿಬ್ಬಂದಿ ಉಮೇಶ ಹೊಸೂರ, ಚಂದ್ರಶೇಖರ ಪೋಳ ಸನ್ಮಾನಿಸಿದರು. ಅಧ್ಯಕ್ಷತೆ ವಹಿಸಿದ್ದ ವಿ.ಆರ್. ಪರಾಂಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಾಲಾ ಹಳೆಯ ವಿದ್ಯಾರ್ಥಿಗಳು ಗುರುಗಳ ಮೇಲೆ ಅಪಾರ ಪ್ರೀತಿಯಿಂದ ಗುರುಗಳ ದರ್ಶನ ಪಡೆದು ಅವರ ಆಶೀರ್ವಾದ ಪಡೆಯುವ ಉದ್ದೇಶದಿಂದ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸುವ ಮೂಲಕ ಒಂದಡೆ ಸೇರಿ ಎಲ್ಲರೂ ಸಂತೋಷ ಹಂಚಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು. ಮಂಜಯ್ಯ ಧಾರವಾಡ, ಮಂಜುನಾಥ ತೋಟಗೇರ ಬಸವರಾಜ ಹೊಸಮನಿ, ವಿರೇಶ ಪಟ್ಟಣಶೆಟ್ಟಿ, ಮಾತನಾಡಿ ನಮಗೆ ವಿದ್ಯಾ ನೀಡಿದ ಗುರುವಿನ ಆಶೀರ್ವಾದ ಸದಾ ಇರಲಿ ಎಂದು ತಮ್ಮ ಅನಿಸಿಕೆ ಹೇಳಿದರು. ಆಡಳಿತ ಮಂಡಳಿ ಗೌರವ ಕಾರ್ಯದರ್ಶಿ ಜಿ.ಆರ್. ಜವಳಗಿ, ವಿದ್ಯಾದಾನ ಸಮಿತಿ ನಿರ್ದೇಶಕ ಮಲ್ಲಣ್ಣಾ ಅಷ್ಟಗಿ, ಮಂಜುನಾಥ ಸಂಕಣ್ಣವರ, ಪರಮೇಶ್ವರ ಬೊಬ್ಬಿ, ಶಶಿಕಲಾ ಚಿಕ್ಕಮಠ, ರಾಮಲಿಂಗಪ್ಪ ನವಲಗುಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಶಿಕಲಾ ಹೂಗಾರ ಸ್ವಾಗತಿಸಿದರು. ಶಿಕ್ಷಕ ಆತ್ಮಾನಂದ ಕಿತ್ತೂರು ಕಾರ್ಯಕ್ರಮ ನಿರ್ವಹಿಸಿದರು. ಸುಪರ್ಣಾ ಬೆಟಗೇರಿ ವಂದಿಸಿದರು.



## ಜೂ.28ರಂದು ಪ್ರತಿಭಾ ಪುರಸ್ಕಾರ: ಕಲ್ಲೂರ



**ನವಲಗುಂದ:** ನವಲಗುಂದ ಮತ್ತು ಅಣ್ಣಿಗೇರಿ ತಾಲೂಕಿನ ಎಲ್ಲ ವಿವಿಧ ಪಂಗಡಗಳನ್ನು ಹೊಂದಿದ ವೀರಶೈವ ಲಿಂಗಾಯತ ಮಹಾ ಸಮಾಜದ ಮಕ್ಕಳನ್ನು 2025-26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಎಲ್ಲ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರವನ್ನು ಜೂ.28 ರಂದು ಆಯೋಜಿಸಲಾಗಿದೆ ಎಂದು ತಾಲೂಕಾಧ್ಯಕ್ಷ ಶಿವಶಂಕರ ಕಲ್ಲೂರ ಹೇಳಿದರು.

ಪಟ್ಟಣದ ಗವಿಮಠದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ತಾಲೂಕು ಯುವಕ ಮತ್ತು ಮಹಿಳಾ ಸಂಘ ರಚನೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ವೀರಶೈವ ಲಿಂಗಾಯತ ಸಮಾಜದ ಎಲ್ಲ ಒಳ ಪಂಗಡಗಳಲ್ಲಿರುವ ಮಕ್ಕಳಿಗೆ ಹುಬ್ಬಳ್ಳಿ ರಸ್ತೆಯಲ್ಲಿರುವ ವೀರಶೈವ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಉದ್ಘಾಟನೆಗೆ ರಾಜ್ಯ ಸಮಿತಿಯ ಅಧ್ಯಕ್ಷ ಶಂಕರ ಬಿದರಿ ಆಗಮಿಸುತ್ತಿದ್ದಾರೆ. ಮಾಜಿ ಶಾಸಕ ಆರ್.ಬಿ. ಶಿರಿಯಣ್ಣವರ, ಮಾಜಿ ಸಚಿವ ಶಂಕರಪಾಟೀಲ ಮುನೇನಕೊಪ್ಪ, ವಿಜಯ ಕುಲಕರ್ಣಿ, ಬಿ.ಬಿ.ಗಂಗಾಧರಮಠ, ಎ.ಬಿ.ಹಿರೇಮಠ ಉಪಸ್ಥಿತರಿರುವರು. ನೋಂದಣಿಗೆ ಶಿವಶಂಕರ ಕಲ್ಲೂರ ಮೊ: 9740959873 ಮತ್ತು ನಾಗನಗೌಡ ಪಾಟೀಲ ಮೊ: 6361539134 ಸಂಖ್ಯೆಗಳಿಗೆ ಸಂಪರ್ಕಿಸಲು ತಿಳಿಸಿದ್ದಾರೆ. ಅಣ್ಣಪ್ಪ ಬಾಗಿ, ದೇವರಾಜ ದಾಡಿಬಾವಿ, ನಾಗನಗೌಡ ಪಾಟೀಲ, ಕೆ.ಬಿ.ಮದ್ದೂರ, ಶ್ರೀಶೈಲ ಮೂಲಿಮನಿ, ಎಮ್.ವಿ.ಹೊಳೆಯನ್ನವರ, ಶರಣಪ್ಪ ಗುಜಮಾಗಡಿ, ಪರಶುರಾಮ ಹಡಪದ, ಲಿಂಗರಾಜ ಕೊಟಗಿ, ಶಶಿಧರ ಮುಖಂಡಮಠ, ವಿ.ವಿ.ಲಟ್ಟಿ, ಜಿ.ಎನ್.ತೋಟದ, ಗಂಗಾಧರ ಹಳ್ಳದ, ಎಂ.ಡಿ.ಕುಲಕರ್ಣಿ ಮತ್ತಿತರರಿದ್ದರು.

## ಕರಿಯಮ್ಮ ದೇವಿ ಜಾತ್ರಾ ಮಹೋತ್ಸವ

**ಕಲಘಟಗಿ:** ಪಟ್ಟಣದ ಸೊಪ್ಪಿಮಠ ಓಣಿಯಲ್ಲಿರುವ ಕರಿಯಮ್ಮ ದೇವಿಯ ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ಜಾತ್ರೆಯು ಗೋಂದಳಿ ಸಮಾಜದ ವತಿಯಿಂದ ಅದ್ದೂರಿಯಾಗಿ ನೆರವೇರಿತು.

ಬೆಳಗ್ಗೆ ದೇವಿಯರ ಅಭಿಷೇಕ ಕಲಾಪದೊಂದಿಗೆ ಸಮಾಜ ಬಾಂಧವರಿಂದ ಹೊನ್ನಾಟದೊಂದಿಗೆ, ವಿವಿಧ ವಾದ್ಯ ಮೇಳದೊಂದಿಗೆ ಪಟ್ಟಣದ ಪ್ರಮುಖ ದೇವಾಲಯಗಳಿಗೆ ಸುಮಂಗಲಿಯರಿಂದ ಉಡಿ ಸಮರ್ಪಿಸಲಾಯಿತು. ವಿವಿಧ ಬೀದಿಯಲ್ಲಿ ದೇವಿಯರ ಮೆರವಣಿಗೆಯ ಮೂಲಕ ದೇವಿಯರನ್ನು ಪೀಠಕ್ಕೆ ಕುಳ್ಳರಿಸಲಾಯಿತು. ಸಮಾಜದ ಸಾಂಪ್ರದಾಯಿಕ ದೇವಿಯರ ಬಗ್ಗೆ ಗೋಂದಳಿ ಗೀತೆಗಳನ್ನು ಹಾಡಲಾಯಿತು. ಮಹಾಪ್ರಸಾದ ಸೇವೆ ನೆರವೇರಿಸಲಾಯಿತು. ಪುಂಡಲೀಕ ಕಾಳೆ, ಲಕ್ಷ್ಮಣ ಕಾಳೆ, ನಾರಾಯಣ ಕಾಳೆ, ಹನಮಂತ ಪಾಚಂಗೆ, ಸಂತೋಷ ವಾಕುಡೆ, ಯಲ್ಲಪ್ಪ ಪಾಚಂಗೆ, ರಾಜು ಜಾಧವ, ಶಾಂತಾಬಾಯಿ ಕಾಳೆ, ರುಕುಮಾಬಾಯಿ ಕಾಳೆ, ಮಂಜುಳಾ ಕಾಳೆ, ರತ್ನಾ ಕಾಳೆ ಇದ್ದರು.



## ಕಿರುಸುದ್ದಿ

### ಬಾಲ ಕಾರ್ಮಿಕ ಪದ್ಧತಿ ನಶಿಸಲಿ

**ಗದಗ:** ಮಕ್ಕಳು ದೇಶದ ಭವಿಷ್ಯವಾಗಿದ್ದು, ಅವರನ್ನು ಬಾಲಕಾರ್ಮಿಕ ಪದ್ಧತಿಯಿಂದ ಮುಕ್ತಗೊಳಿಸಿ ಶಿಕ್ಷಣದ ಮುಖ್ಯವಾಹಿನಿಗೆ ತರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹಿರಿಯ ದಿವಾಣಿ (ಸಿವಿಲ್) ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿವನಗೌಡ್ರ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ವಿಶ್ವ ಬಾಲ ಕಾರ್ಮಿಕ ಹಾಗೂ ವಿರೋಧಿ ದಿನದ ಅಂಗವಾಗಿ ಬಾಲ ಕಾರ್ಮಿಕ ಪದ್ಧತಿ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಇಲ್ಲಿನ ನಗರಸಭೆ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಜಿಲ್ಲಾ ಕಾರ್ಮಿಕ ಇಲಾಖೆಯ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಯದೇವಿ ಕವಲೂರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಹಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧ ಮಣ್ಣೂರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಆರ್., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಮೆಹಬೂಬ ತುಂಬರಮಟ್ಟಿ, ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಸಂದೇಶ ಪಾಟೀಲ, ನಗರಸಭೆ ಪೌರಾಯುಕ್ತ ರಾಜರಾಮ ಪವಾರ ಇತರರಿದ್ದರು.

### ಸಂಚಾಲಕರಾಗಿ ನೇಮಕ



**ಲಕ್ಷ್ಮೇಶ್ವರ:** ಪಟ್ಟಣದ ಯುವ ಮುಖಂಡ ಸದಾನಂದ ಅಶೋಕ ನಂದೆಣ್ಣವರ ಅವರನ್ನು ಇತ್ತೀಚಿಗೆ ನೂತನವಾಗಿ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಲಕ್ಷ್ಮೇಶ್ವರ ತಾಲೂಕು ಸಂಚಾಲಕರನ್ನಾಗಿ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಹಾಗೂ ರಾಜ್ಯ ಸಂಘಟನಾ ಸಂಚಾಲಕ ಎಸ್.ಎನ್. ಬಳ್ಳಾರಿ ಮತ್ತು ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್ ಅವರ ಸಮ್ಮುಖದಲ್ಲಿ ಗದಗ ಜಿಲ್ಲಾ ಸಂಚಾಲಕ ದುರಗಪ್ಪ ಎಲ್.ಎಚ್. ನೇಮಕಾತಿ ಮಾಡಿದ್ದಾರೆ.

### ಇಂದಿನಿಂದ ಯೋಗಾಸನ ಶಿಬಿರ



**ಗದಗ:** ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂ.15 ರಿಂದ 30ರವರೆಗೆ ಯೋಗ ಹಾಗೂ ಯೋಗಾಸನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ರಾಜಯೋಗಿನಿ ಜಯಂತಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 6 ರಿಂದ 7.30ರವರೆಗೆ ಬಸವೇಶ್ವರ ನಗರದ ಬ್ರಹ್ಮಕುಮಾರಿ ವಿಶ್ವವಿದ್ಯಾಲಯ, ಸಿದ್ಧರಾಮೇಶ್ವರ ನಗರದ ಆಧ್ಯಾತ್ಮಿಕ ಸಂಸ್ಕೃತಿ ಭವನ, ಬೆಟಗೇರಿಯ ಹೊಸ್ಪೇಟ್ ಚೆಕ್‌ನಲ್ಲಿರುವ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದಲ್ಲಿ ಶಿಬಿರ ಜರುಗಲಿದೆ ಎಂದರು. ಜೂ.15ರಂದು ಬೆಳಗ್ಗೆ 7ಕ್ಕೆ ಜಿಲ್ಲಾ ಆಯುಷ್ ಅಧಿಕಾರಿ ಡಾ.ಜುಬೇದಾ ತಿಗಳೇರ ಶಿಬಿರ ಉದ್ಘಾಟಿಸುವರು. ಪ್ರವೇಶ ಉಚಿತವಾಗಿದ್ದು, ಪ್ರಾರ್ಥನೆ, ಯೋಗಾಸನ, ಪ್ರಾಣಾಯಾಮ, ಧ್ಯಾನ ಹೇಳಿಕೊಡಲಾಗುತ್ತದೆ. ಆಸಕ್ತರು, 6360753992, 8095679175, 9632769950 ಸಂಖ್ಯೆ ಸಂಪರ್ಕಿಸಿ, ಹೆಸರು ನೋಂದಾಯಿಸಬೇಕು ಎಂದು ತಿಳಿಸಿದರು. ಜೂ.21ರಂದು 12ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದೆ. ಆಯುಷ್ ಇಲಾಖೆ, ಭಾರತ ಸರ್ಕಾರವು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದಡಿ ಯೋಗ ದಿನಾಚರಣೆ ಆಯೋಜಿಸಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಾವಿತ್ರಿ, ಜೋತ್ಸ್ನಾ ಇದ್ದರು.

### ಗೊಬ್ಬರ ಅಸಮರ್ಪಕ ಪೂರೈಕೆ



**ಮುಂಡರಗಿ:** ರಾಜ್ಯದಲ್ಲಿ ರೈತರಿಗೆ ಕೃಷಿ ಬಿತ್ತನೆಗೆ ಸರಿಯಾಗಿ ಬೀಜ ಗೊಬ್ಬರ ಪೂರೈಕೆ ಆಗುತ್ತಿಲ್ಲ. ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಭೀಮ್‌ಸಿಂಗ್ ರಾಠೋಡ ಆರೋಪಿಸಿದ್ದಾರೆ.

ಅವರು ಮುಂಡರಗಿ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಮುಂಗಾರು ಮಾನ್ಸೂನ್ ಪ್ರಾರಂಭವಾಗಿದ್ದು ಸರ್ಕಾರ ರೈತರಿಗೆ ಬಿತ್ತನೆಗೆ ಬೇಕಾಗಿರುವಂಥ ಬೀಜ, ಗೊಬ್ಬರಗಳನ್ನು ಸಮರ್ಪಕವಾಗಿ ಪೂರೈಕೆ ಮಾಡುತ್ತಿಲ್ಲ. ಶಿರಹಟ್ಟಿ ಮತಕ್ಷೇತ್ರವು ಎಸ್.ಸಿ ಮೀಸಲು ಕ್ಷೇತ್ರವಾದ್ದರಿಂದ ಸರ್ಕಾರವು ವಿಶೇಷ ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಸಹಾಯ ಸಹಕಾರ ನೀಡಬೇಕಿತ್ತು. ಆದರೆ ಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕರು ಅನೇಕ ಬಾರಿ ವಿಧಾನಸೌಧದಲ್ಲಿ ಸರ್ಕಾರಕ್ಕೆ ಮನವಿ ಮಾಡಿದರೂ ಸಹ ಸರ್ಕಾರದಿಂದ ಯಾವುದೇ ಅನುದಾನ ನೀಡಲು ಮುಂದಾಗುತ್ತಿಲ್ಲ. ಕಳೆದ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ರೈತರ ಪರವಾಗಿ ರಾಜ್ಯ ಸರ್ಕಾರ ಯಾವುದೇ ಕೆಲಸ ಮಾಡುತ್ತಿಲ್ಲ. ಜ್ಯಾಲವಾಡಗಿ ಏತವನೀರಾವರಿಗೆ ಅನುದಾನ ನೀಡಲು ಮುಂದಾಗುತ್ತಿಲ್ಲಂದು ಆರೋಪಿಸಿದರು. ನಾಗರಾಜ ಚಿಂಚಲಿ, ಪ್ರಭು ಅಬ್ಬಿಗೇರಿ, ಶಿವರಾಜ ಕಪ್ಪತ್ತನವರ, ಸಿದ್ರಾಮಪ್ಪ ಮೊರಬದ, ಹನುಮಂತಪ್ಪ ಚವ್ಹಾಣ್, ಮುಂತಾದವರಿದ್ದರು.



ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ವಿಶ್ವ ಬಾಲ ಕಾರ್ಮಿಕ ಹಾಗೂ ವಿರೋಧಿ ದಿನದ ಅಂಗವಾಗಿ ಬಾಲ ಕಾರ್ಮಿಕ ಪದ್ಧತಿ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ನಗರಸಭೆ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಜಾಥಾ ಕಾರ್ಯಕ್ರಮಕ್ಕೆ ಚಾಲನೆ.

## ದೇಶದ ಸುಭದ್ರ, ಆಡಳಿತಕ್ಕೆ ಮೋದಿ ಅಗತ್ಯ

**ಗಜೇಂದ್ರಗಡ:** ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಅತೀ ಹೆಚ್ಚು ದಿನಗಳು ಪೂರೈಸಿದ ನಿಮಿತ್ತ ಬಿಜೆಪಿ ರೋಣ ಮಂಡಲ ಯುವ ಮೋರ್ಚಾ ವತಿಯಿಂದ ಗಜೇಂದ್ರಗಡ ಸಮೀಪದ ಮ್ಯಾಕಲಝರಿ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿಲಾಯಿತು. ಪಕ್ಷದ ಹಿರಿಯ ಮುದಿಯಪ್ಪ ಕರಡಿ ಮಾತನಾಡಿ, ಅಧಿಕಾರಕ್ಕಾಗಿ ಆಸೆ ಪಡದೆ ಸುಭದ್ರ ದೇಶವನ್ನು ಕಟ್ಟುವಲ್ಲಿ ಜನರ ಸೇವೆಯನ್ನು ಮಾಡಲು ಹಗಲಿರುಳು ನಿರಂತರವಾಗಿ ಕಾರ್ಯಪ್ರವೃತರಾದ ಮೋದಿ ಅವರು ದೇಶದ ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚಿನ ಅವಧಿಯ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ನೆಹರು ಅವರ ದಾಖಲೆಯನ್ನು ಮುರಿದು ಸುದೀರ್ಘ 12 ವರ್ಷಗಳ ಅಧಿಕಾರ ಪೂರೈಸಿದ್ದಾರೆ ಅಂದರೆ ದೇಶದ ಜನತೆಗೆ ಮೋದಿ ಅವರ ಅಧಿಕಾರ ಜನತೆಗೆ ಅಚ್ಚುಮೆಚ್ಚು ಆಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ರೋಣ ಮಂಡಲ ಅಧ್ಯಕ್ಷ ಉಮೇಶ ಮಲ್ಲಾಪುರ, ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ವಕ್ಕರ್, ಬಾಲಾಜಿ ಬೋಸ್ಲೆ, ಯುವ ಮೋರ್ಚಾ ಅಧ್ಯಕ್ಷ ಹುಲ್ಲಪ್ಪ ಕೆಂಗಾರ್, ಓಬಿಸಿ ಅಧ್ಯಕ್ಷ ರಂಗನಾಥ್ ಮೇಟಿ, ಮಂಡಲ ಉಪಾಧ್ಯಕ್ಷ ಸೂಗೂರೇಶ ಕಾಜಗಾರ, ಎಸ್ಸಿ ಮೋರ್ಚಾ ಅಧ್ಯಕ್ಷ ಭೀಮಪ್ಪ ಮಾದರ, ಪಕ್ಷದ ಮುಖಂಡರಾದ ಅಂದಪ್ಪ ಅಂಗಡಿ, ಮುತ್ತಯ್ಯ ಕಾರಡಗಿಮಠ, ಶಿವಾನಂದ ಕಟಗಾಲ, ದೇವರಾಜ ವರಗಾ, ಕಿರಣ ಕಟ್ಟಿ, ಮಲ್ಲಪ್ಪ ಕುರಿ, ಅಶೋಕ ಆಲೂರ, ಪ್ರವೀಣ ಕಳಗಣ್ಣವರ, ಶಿವಾನಂದ ಅರಮನೆ, ರುದ್ರೇಶ ಕೆರಿ, ಸಚಿನ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗಜೇಂದ್ರಗಡ: ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಅತೀ ಹೆಚ್ಚು ದಿನಗಳು ಪೂರೈಸಿದ ನಿಮಿತ್ತ ಬಿಜೆಪಿ ರೋಣ ಮಂಡಲ ಯುವ ಮೋರ್ಚಾ ವತಿಯಿಂದ ಗಜೇಂದ್ರಗಡ ಸಮೀಪದ ಮ್ಯಾಕಲಝರಿ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

30 ಸಾವಿರ ಸಸಿಗಳ ಪಾಲನೆ, ಪೋಷಣೆ | ಹಸಿರೀಕರಣ ಅಭಿಯಾನ ಯಶಸ್ವಿಗೆ ಶ್ರಮ

# ಹಸಿರು ಪರಿಸರ ಸೃಷ್ಟಿಗೆ ಬಿಂಕದಕಟ್ಟಿ ಸಸ್ಯ ಕ್ಷೇತ್ರ ಸಜ್ಜು

ರುದ್ರಗೌಡ ಪಾಟೀಲ

ದಿಗಂತ ವಿಶೇಷ

**ಗದಗ:** ಹಸಿರು ಪರಿಸರಸೃಷ್ಟಿಸುವಲ್ಲಿ ಸಾಮಾಜಿಕ ಅರಣ್ಯ ವಲಯ ವ್ಯಾಪ್ತಿಯ ಬಿಂಕದಕಟ್ಟಿ ಸಸ್ಯ ಕ್ಷೇತ್ರವು 30 ಸಾವಿರ ಸಸಿಗಳ ಮೂಲಕ ಸಜ್ಜಾಗಿ ನಿಂತಿದೆ. ರೈತರಿಗೆ ಸಬ್ಸಿಡಿ ಯೋಜನೆ ಅಡಿಯಲ್ಲಿ ಸಸಿಗಳನ್ನು ವಿತರಣೆ ಮಾಡುತ್ತಿದೆ. ರೈತರು ಹಾಗೂ ಪರಿಸರ ಪ್ರೇಮಿಗಳು ಸಸ್ಯ ಕ್ಷೇತ್ರಕ್ಕೆ ಭೇಟಿ ನೀಡುವ ಮೂಲಕ ಸಸಿ ಪಡೆದು ಅದರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿ ಹಸಿರು ಸಮುದಾಯ ನಿರ್ಮಾಣ ಮಾಡುವಲ್ಲಿ ಕೈಜೋಡಿಸಲು ಕರೆ ನೀಡಲಾಗಿದೆ.

ಧಾರವಾಡ ಬೀಜ ಅಭಿವೃದ್ಧಿ ಘಟಕದಿಂದ ಬೀಜಗಳನ್ನು ಪಡೆದು ಸಸ್ಯ ಕ್ಷೇತ್ರದಲ್ಲಿ ಬೀಜ ನೆಟ್ಟು ವರ್ಷದವರೆಗೂ ಬೆಳೆಸಿ, ವರ್ಷವಾದ ಮೇಲೆ ವಿತರಿಸಲಾಗುವುದು. 30 ಸಾವಿರ ವಿವಿದ ಬಗೆಯ ಸಸಿಗಳಲ್ಲಿ ಮಹಾಗನಿ, ಶ್ರೀಗಂಧ, ದಾಂಡೇಲಿ ತೇಗ, ಬಿದಿರು, ರಕ್ತ ಚಂದನ, ಇಲಾಚಿ (ಸಿಹಿ ಹುಣಸೆ) ನೇರಳೆ, ಹೆಬ್ಬೇವು, ನೆಲ್ಲಿ, ಬೇವು, ಕರಿಬೇವು, ಚತುರ್ಮುಖ, ಸಂಪಿಗೆ, ಬಂಗಾಳಿ, ಗಜಗ, ಕಬುಬಿಯ, ಶಿವನಿ, ಹೊಳೆಮತ್ತಿ, ಚರಿ, ಬಳುಲ, ಹೊಂಗೆ, ಪೇರಲ್, ಮಾವು, ಲಿಂಬಿ, ಸಿತಾಫಲ್, ಅರಳಿ, ಬಸರಿ, ಬಸವನಪಾದ, ಆಕಾಶ ಮಲ್ಲಿಗೆ, ಜವಾನಿಕಾ, ಕಾಡು ಬದಾಮಿ, ತಪಸ್, ಅತ್ತಿ, ಚಳ್ಳ, ಗುಲಮೊಹಲ್, ಸಿರಸಲ್, ರೇನ ಟ್ರೀ ಸೇರಿದಂತೆ ವಿವಿಧ ತಳಿಯ ಸಸಿಗಳನ್ನು ನೀಡಲಾಗುತ್ತಿದೆ.

- ಬೀಜದಿಂದ ಸಸಿ ಮಾಡಿ ವರ್ಷವಾದ ಮೇಲೆ ನೆಡಲು ಪೂರೈಕೆ
- ಹೆಚ್ಚಚ್ಚು ಸಸಿಗಳನ್ನು ನೆಟ್ಟು ತಾಲೂಕಿನಾದ್ಯಂತ ಹಸಿರು ಪರಿಸರ ಸೃಷ್ಠಿಸಿ ಹಸಿರಿಕರಣಗೊಳಿಸಿ ಎಂದ ಅರಣ್ಯ ವಲಯ ಅಧಿಕಾರಿಗಳು

> ಕಬಲಾಯತ ಕಟ್ಟಿ ತಾಂಡಾ ಸೇರಿದಂತೆ ಅರಣ್ಯ ವ್ಯಾಪ್ತಿಯಲ್ಲಿ ಸಾಗುವಳಿ ಮಾಡುವ ಹಕ್ಕು ಪತ್ರಗಳನ್ನು ಪಡೆದಿರುವ ರೈತರಿಗೆ ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ ಉಚಿತವಾಗಿ 3,500 ಸಸಿಗಳನ್ನು ಉಚಿತವಾಗಿ ನೀಡಲಾಗುವುದು. ಮಾನ್ಸೂನ್ ಮಳೆಗಾಲ ಪ್ರಾರಂಭವಾಗಿರುವುದರಿಂದ ರೈತರಿಗಾಗಿ 30 ಸಾವಿರ ಸಸಿ ವಿತರಿಸುವ ಗುರಿ ಹೊಂದಲಾಗಿದೆ.
> ■ ನಮನ ನಾಯ್ಕ, ವಲಯ ಅರಣ್ಯ ಅಧಿಕಾರಿ

### ಬಿಂಕದಕಟ್ಟಿ ಹೈಟೆಕ್ ಸಸ್ಯ ಕ್ಷೇತ್ರ

ವಿವಿಧ ಬಗೆಯ ಸಸಿ ತಳಿಗಳಿಗೆ ಹೆಸರುವಾಸಿಯಾಗಿರುವ ಬಿಂಕದಕಟ್ಟಿ ಹೈಟೆಕ್ ಸಸ್ಯ ಕ್ಷೇತ್ರದಲ್ಲಿ ಎಲ್ಲ ತಳಿ ಸಸ್ಯ ಲಭ್ಯ. ಬೇಸಿಗೆಯಲ್ಲಿ ಬೇಕಾದ ಬೀಜಗಳನ್ನು ಜಿಲ್ಲೆಯಾದ್ಯಂತ ಸಂಚಾರ ಮಾಡಿ ಶೇಖರಿಸಲಾಗುವುದು. ಸಿಗಲಾರದ ಬೀಜಗಳನ್ನು ಹೊರ ಜಿಲ್ಲೆಗಳಿಂದ ತರಿಸಲಾಗುವುದು. ಶ್ರೀಗಂಧ, ಕಬೂಬಿಯ, ನುಗ್ಗಿ, ಹೆಬ್ಬೇವು ಬೀಜಗಳನ್ನು ದಾವಣಗೇರಿ, ಶಿವಮೊಗ್ಗ, ಮೈಸೂರಿನಿಂದ ತರಿಸಲಾಗುವುದು.



### ಕಡಿಮೆ ದರದಲ್ಲಿ ಸಸಿ ವಿತರಣೆ

ಸಾಮಾಜಿಕ ಅರಣ್ಯ ವಲಯ ಆರ್.ಎಸ್.ಪಿ.ಡಿ ಯೋಜನೆ ಅಡಿಯಲ್ಲಿ ರೈತರಿಗೆ ಸಹಾಯಧನದ ರೂಪದಲ್ಲಿ ಸಸಿಗಳ ವಿತರಣೆಗೆ ಮುಂದಾಗಿದೆ. 30 ಸಾವಿರ ವಿವಿಧ ಬಗೆ ಸಸಿಗಳನ್ನು ವಿತರಿಸಲಾಗುತ್ತಿದ್ದು, ರೈತರು ಬಿಂಕದಕಟ್ಟಿ ಸಸ್ಯಕ್ಷೇತ್ರಕ್ಕೇ ಭೇಟಿ ನೀಡಿ ಸಸಿ ಪಡೆಯಬಹುದು. ಸಸಿಗಳ ಗಾತ್ರದ ಮೇಲೆ ಹಣ ಪಾವತಿಸಬೇಕಿದೆ. ಸಣ್ಣ ಸಸಿಗೆ 3 ರೂ. ಹಾಗೂ ದೊಡ್ಡ ಸಸಿಗೆ 6 ರೂ. ನಿಗದಿ ಮಾಡಲಾಗಿದೆ. ಇದೇ ಸಸಿಗಳನ್ನು ಮಾರುಕಟ್ಟೆಯಲ್ಲಿ 20 ರೂಗಳಿಂದ 33 ರೂ.ಗಳಿಗೆ ಬೆಲೆ ನಿಗದಿ ಮಾಡಲಾಗಿದೆ. ಸಬ್ಸಿಡಿ ಯೋಜನೆ ಅಡಿಯಲ್ಲಿ ಸಸಿಗಳನ್ನು ಪಡೆಯುವ ರೈತರು ಆರ.ಟಿ.ಸಿ ಉತಾರ, ಆಧಾರ್‌ಕಾರ್ಡ್ ಹಾಗೂ ಭಾವಚಿತ್ರದೊಂದಿಗೆ ಸಂಪರ್ಕಿಸಬೇಕು.

## ಗುಣಮಟ್ಟದ ರಸ್ತೆ ಕಾಮಗಾರಿಗೆ ಆದ್ಯತೆ ನೀಡಿ: ಶಾಸಕ ಲಮಾಣಿ

**ಲಕ್ಷ್ಮೇಶ್ವರ:** ರೈತರ, ವಿದ್ಯಾರ್ಥಿಗಳ ಬಹುದಿನಗಳ ಬೇಡಿಕೆಯಾದ ರಸ್ತೆಯ ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಸವಣೂರ ರಸ್ತೆಯಿಂದ ಶಿಗ್ಲಿ ರಸ್ತೆ ಸಂಪರ್ಕ ಕಲ್ಪಿಸುವ ರಸ್ತೆಯ ಕೆ ಆರ್ ಐ ಡಿ ಎಲ್ ಅಡಿಯಲ್ಲಿ 1 ಕೋಟಿ ವೆಚ್ಚದ ಸಿ ಸಿ ರಸ್ತೆಯ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಈ ರಸ್ತೆ ಅನೇಕ ಜಮೀನುಗಳಿಗೆ ಸರ್ಕಾರಿ ವಿಜ್ಞಾನ ಕಾಲೇಜಿಗೆ ಹಾಗೂ ಸುತ್ತಮುತ್ತಲಿನ ಗ್ರಾಮದಿಂದ ಎಪಿಎಂಸಿ ಮಾರ್ಕೆಟ್ ಬರುವ ರೈತರಿಗೆ ಸಂಪರ್ಕ ರಸ್ತೆಯಾಗಿದ್ದು ಬಹುದಿನದ ಬೇಡಿಕೆಯಾಗಿತ್ತು. ಗುತ್ತಿಗೆದಾರ ಈ ರಸ್ತೆಯನ್ನು ಗುಣಮಟ್ಟದಿಂದ ನಿರ್ಮಿಸಬೇಕು. ರಸ್ತೆ ನಿರ್ಮಾಣ ಸಮಯದಲ್ಲಿ ಅಕ್ಕಪಕ್ಕದ ಜಮೀನಿನ ಮಾಲಕರು ರಸ್ತೆ ಆಗೋತನಕ ಸಹಕರಿಸಬೇಕು. ಬೇಗನೆ ರಸ್ತೆ ಕಾಮಗಾರಿ ಮುಗಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು

ಮಾಜಿ ತಾಪಂ ಸದಸ್ಯ ಚನ್ನಪ್ಪ ಜಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ಜಿ.ಎಂ. ಮಹಾಂತಶೆಟ್ಟರ, ಜಾನು ಲಮಾಣಿ, ಎಂ.ಆರ್. ಪಾಟೀಲ, ಮಲ್ಲೇಶಪ್ಪ ಲಮಾಣಿ, ಪ್ರವೀಣ ಬೋಮಲೆ, ಶಕ್ತಿ ಕತ್ತಿ, ಭೀಮಣ್ಣ ಯಂಗಾಡಿ, ಶಿವಾನಂದ ಲಿಂಗಶೆಟ್ಟಿ, ದುಂಡೇಶ ಕೋಟಗಿ, ಸುರೇಶ ಹಟ್ಟಿ, ಅನೀಲ ಮುಳಗುಂದ, ವಿಶಾಲ ಬಟಗುರ್ಕಿ, ಚಂದ್ರು ಲಮಾಣಿ, ರಾಜಶೇಖರ ಶಿರಹಟ್ಟಿ, ಉಳವೇಶಗೌಡ ಪಾಟೀಲ್, ಮಲ್ಲೇಶಪ್ಪ ಬಸಾಪುರ, ಸಂತೋಷ ಜಾವೂರ, ಮಲ್ಲಯ್ಯ ಭಕ್ತಿಮಠ ಮಂಜುನಾಥ ಶೇರಸೂರಿ, ರವಿ ಲಿಂಗಶೆಟ್ಟಿ ಸೋಮನಗೌಡ ಪಾಟೀಲ್, ಹನುಮಂತಪ್ಪ ಶೇರಸೂರಿ, ಸತೀಶ ಕಾಡಣ್ಣವರ ಅನೇಕರು ಇದ್ದರು.



## ಸಮಾಜದ ಅಭಿವೃದ್ಧಿಗೆ ಶಿಕ್ಷಣ ಅಗತ್ಯ: ಸ್ವಾಮೀಜಿ

**ಗದಗ:** ಸಮಾಜದ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಪಾಲಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ, ಉನ್ನತ ಗುರಿ ಸಾಧನೆಗೆ, ಉಜ್ವಲ ಭವಿಷ್ಯ ರೂಪಿಸಿಕೊಳ್ಳುವಿಕೆಗೆ ಪ್ರೋತ್ಸಾಹಿಸಬೇಕು ಎಂದು ಶಿವಾನಂದ ಬ್ರಹನ್ಮಠದ ಸದಾಶಿವಾನಂದ ಸ್ವಾಮೀಜಿ ಹೇಳಿದರು.

ಇಲ್ಲಿನ ವಿವೇಕಾನಂದ ನಗರದ ಗಾಣಿಗ ಸಮುದಾಯ ಭವನದಲ್ಲಿ ಅಖಿಲ ಭಾರತ ಗಾಣಿಗ ವಿದ್ಯಾ ಹಾಗೂ ಉದ್ಯೋಗವರ್ಧಕ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ, ವಾರ್ಷಿಕ ಸಭೆ ಹಾಗೂ ವಧು-ವರರ ಸಮಾವೇಶ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಉತ್ತಮ ಸಮುದಾಯ ಭವನದಲ್ಲಿ ಮದುವೆ ಸಮಾರಂಭ ಮುಗಿದ ನಂತರ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ಕ್ಲಾಸ್ ಆರಂಭಿಸಬೇಕು ಎಂದರು.

ನಿವೃತ್ತ ಡಿಡಿಪಿಐ ಐ.ಬಿ.ಬೆನಕೊಪ್ಪ ಮಾತನಾಡಿ, ಎಲ್ಲರೂ ಒತ್ತಡದಲ್ಲಿಯೇ ಜೀವನ ಕಳೆಯುತ್ತಿದ್ದಾರೆ. ಆಧುನಿಕ ಬದುಕಿನ ಜೀವನ ಶೈಲಿಗೆ ಅಂಟಿಕೊಂಡು ಮಾನಸಿಕ ನೆಮ್ಮದಿ ಕಳೆದುಕೊಂಡಿದ್ದಾರೆ. ಇದರಿಂದಾಗಿ ಕೆಲವರಿಗೆ ಜೀವನದಲ್ಲಿ ಜಿಗುಪ್ಸೆ ಉಂಟಾಗುತ್ತದೆ. ಯುವ ಜನತೆಗೆ ಸುಜ್ಞಾನದ ಅರಿವಿಲ್ಲದೆ ದಾರಿ ತಪ್ಪುತ್ತಿದ್ದಾರೆ. ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಬೆಳೆಸಿದಾಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಭಾರತೀಯ ಅರಣ್ಯ ಸೇವೆಯಲ್ಲಿ ರಾಷ್ಟ್ರಕ್ಕೆ ಪ್ರಥಮ ಸ್ಥಾನ ಪಡೆದ ಬಸವರಾಜ ಕೆಂಪವಾಡ ಮಾತನಾಡಿ, ಪ್ರತಿಯೊಬ್ಬರೂ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ ಮುಂದಿನ ದಿನಗಳಲ್ಲಿ ಆಸ್ತಿ ಗೌರವ ತಾನಾಗಿಯೇ ಬರುತ್ತದೆ. ಉತ್ತಮ ಅಂಕ ಪಡೆದರೆ ಮುಂದಿನ ದಿನಗಳಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಗಾಣಿಗ ಸಮಾಜದ ಅಧ್ಯಕ್ಷ ಬಸವರಾಜ ಬಿಂಗಿ ಮಾತನಾಡಿ, ಕಳೆದ ಹತ್ತು ವರ್ಷಗಳಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ಒಂದೇ ವೇದಿಕೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸೇರುವ ಉದ್ದೇಶದಿಂದ ಇಂತಹ ಕಾರ್ಯಕ್ರಮ ಮಾಡಲಾಗುತ್ತಿದೆ. ಸಂಘದಿಂದ ವಿದ್ಯಾರ್ಥಿಗಳಿಗೆ ಗೌರವ ಧನವನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳು ಸರಿಯಾದ ಗುರಿ ಇಟ್ಟುಕೊಂಡರೆ ಮಾತ್ರ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ಸುಮಾರು 135 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಭಾರತೀಯ ಅರಣ್ಯ ಸೇವೆಯಲ್ಲಿ ರಾಷ್ಟ್ರಕ್ಕೆ ಪ್ರಥಮ ಸ್ಥಾನ ಪಡೆದ ಬಸವರಾಜ ಕೆಂಪವಾಡ ಅವರನ್ನು ಸನ್ಮಾನಿಸಲಾಯಿತು. ಗೌರವಾಧ್ಯಕ್ಷ ಷಣ್ಮುಖಪ್ಪ ಬಡ್ನಿ, ನಿಂಗಪ್ಪ ಕೆಂಗಾರ, ಬಿ.ಬಿ. ಐನಾಪೂರ, ಗಾಣಿಗ ಸಮಾಜದ ಮುಖಂಡ ಅಶೋಕ ಮಂದಾಲಿ, ಸಿದ್ದು ಪಾಟೀಲ ಇದ್ದರು.




## ಜಿಟಿಟಿಸಿ ತರಬೇತಿ ಕೇಂದ್ರ ಮಂಜೂರಾಗಲಿ



**ಮುಂಡರಗಿ:** ತಾಲೂಕು ಜಿ.ಟಿ.ಟಿ.ಸಿ ಹೋರಾಟ ಸಮಿತಿಯು ಹಿಂದುಳಿದ ಮುಂಡರಗಿ ತಾಲೂಕಿಗೆ ಸರ್ಕಾರಿ ತಂತ್ರಜ್ಞಾನ ತರಬೇತಿ ಕೇಂದ್ರ ಮಂಜೂರಾತಿಗೆ ಆಗ್ರಹಿಸಿ ತಾಲೂಕು ದಂಡಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಲಾಯಿತು. ಜಿಟಿಟಿಸಿ ಹೋರಾಟ ಸಮಿತಿ ಸಂಚಾಲಕ ದೇವಪ್ಪ ಇಟಗಿ ಮಾತನಾಡಿ, ಸರ್ಕಾರಿ ತಂತ್ರಜ್ಞಾನ ತರಬೇತಿ ಕೇಂದ್ರ ಅವಶ್ಯಕವಾಗಿದ್ದು, ಗದಗ ಜಿಲ್ಲೆಯ ಹಿಂದುಳಿದ ವರ್ಗದ ಬಡವರ, ರೈತರ, ಕೂಲಿಕಾರ್ಮಿಕರ ಮಕ್ಕಳ ಒಂದು ಉಜ್ವಲ ಭವಿಷ್ಯಕ್ಕಾಗಿ ಅತ್ಯಂತ ಅವಶ್ಯಕವಾಗಿದೆ. ಈ ರಾಜ್ಯದ ನೂತನ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಿ ಮುಂಡರಗಿ ತಾಲೂಕಿಗೆ ಸರ್ಕಾರಿ ತಂತ್ರಜ್ಞಾನ ತರಬೇತಿ ಕೇಂದ್ರ ಮಂಜೂರಾತಿ ನೀಡಬೇಕೆಂದು ಆಗ್ರಹಿಸಿದರು. ನಾಗರಾಜ ಮುರುಡಿ, ಮಾಂತೇಶ್ ಕಲಾಲ್, ಚಂದ್ರು ಬಂಡಣ್ಣವರ, ಯಮುನಪ್ಪ ಭಜಂತ್ರಿ, ಕುರುವತ್ತಪ್ಪ ಅರಿಶಿನದ, ಕಾಂತಪ್ಪ ಚಿಕ್ಕಣ್ಣವರ್, ಸೋಮಶೇಖರ್ ಹಿರೇಮಠ, ನಾಗನೂರ ರೆಡ್ಡಿ,ಬಸವರಾಜ್ ಹಿರೇಮಠ, ರಾಮಣ್ಣ ಮಾದಣ್ಣವರ್, ಬಸವರಾಜ ಪೂಜಾರ್, ಬಸವರಾಜ ವಡ್ಡರ ಉಪಸ್ಥಿತರಿದ್ದರು.

## ಮಣ್ಣಿನ ಫಲವತ್ತತೆ ಹೆಚ್ಚಿಸಲು ಗಮನ ನೀಡಿ

**ನರಗುಂದ:** ಸಾವಯವ ಪದ್ಧತಿಯನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ ಮತ್ತು ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಹೆಚ್ಚಾಗಿ ಮಣ್ಣು ರಾಸಾಯನಿಕಗಳಿಂದ ಮುಕ್ತಗೊಳ್ಳಲು ಸಹಕಾರಿಯಾಗುತ್ತದೆ. ರೈತರು ನೇರ ರಸಗೊಬ್ಬರಗಳನ್ನು ಬಳಸುವ ಬದಲಾಗಿ ಕಾಂಪ್ಲೆಕ್ಸ್ ರಸಗೊಬ್ಬರಗಳಾದ 17:17:17, 12:32:16, 20:20:0:13, 10:26:26 ಮುಂತಾದ ರಸಗೊಬ್ಬರಗಳನ್ನು ಬಳಸುವುದರಿಂದ ಬೆಳೆಗೆ ಬೇಕಾದ ಅವಶ್ಯಕ ಪ್ರಾಥಮಿಕ ಪೋಷಕಾಂಶಗಳನ್ನು ಒದಗಿಸಲು ಸಾಧ್ಯವಾಗುತ್ತದೆ ಎಂದು ಕೃಷಿ ವಿಜ್ಞಾನಿ ಡಾ.ವಿನಾಯಕ ನಿರಂಜನ ಹೇಳಿದರು.

ತಾಲೂಕಿನ ಬನಹಟ್ಟಿ ಹಾಗೂ ಬೈರನಹಟ್ಟಿ ಗ್ರಾಮಗಳಲ್ಲಿ ನರಗುಂದ ಕೃಷಿ ಇಲಾಖೆ ಮತ್ತು ಹುಲಕೋಟಿ ಕೃಷಿ ವಿಜ್ಞಾನ ಕೇಂದ್ರ ಇವರ ಸಂಯುಕ್ತ ಆಶ್ರಯದಲ್ಲಿ 2026-27 ನೇ ಸಾಲಿನ ಆತ್ಮ ಯೋಜನೆ ಅಡಿಯಲ್ಲಿ ಖೇತ ಬಚಾವೋ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಯೂರಿಯಾದಂತಹ ರಸಗೊಬ್ಬರಗಳನ್ನು ಬಳಸುವುದರಿಂದ ಕೇವಲ ಸಾರಜನಕವನ್ನು ಮಾತ್ರ ಬೆಳೆಗೆ ಒದಗಿಸಲು ಸಾಧ್ಯವಾಗುತ್ತದೆ. ಇದರಿಂದ ಭೂಮಿಯ ಫಲವತ್ತತೆಯು ಹಾಳಾಗುತ್ತದೆ. ಆದ್ದರಿಂದ ರೈತರು ಮಣ್ಣು ಪರೀಕ್ಷೆಯ ಆಧಾರದ ಮೇಲೆ ಅಗತ್ಯಕ್ಕೆ ಅನುಗುಣವಾಗಿ ರಾಸಾಯನಿಕ ರಸಗೊಬ್ಬರಗಳನ್ನು ಬಳಸುವುದು ಮುಖ್ಯ.




ಯೂರಿಯಾ ರಸಗೊಬ್ಬರದ ಬದಲಾಗಿ ನ್ಯಾನೋ ಯೂರಿಯಾವನ್ನು ಬಳಸುವುದರಿಂದ ಸಾರಜನಕವು ಬೆಳೆಗೆ ನೇರವಾಗಿ ಒದಗಿಸಲು ಸಾಧ್ಯವಾಗುತ್ತದೆ. ಇದರಿಂದ ನಾವು ಒದಗಿಸಿದ ಪೋಷಕಾಂಶವು ವ್ಯರ್ಥವಾಗುವುದಿಲ್ಲ. ರೈತರು ತಮ್ಮ ಜಮೀನಿನ ಮಣ್ಣು ಪರೀಕ್ಷೆ ಮಾಡಿಸಬೇಕೆಂದು ತಿಳಿಸಿದರು. ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ರೈತರು ಕಡ್ಡಾಯವಾಗಿ ಎಫ್‌ಐಡಿ ಮಾಡಿಸಬೇಕು. ಎಫ್‌ಐಡಿ ಮಾಡಿಸಲು ರೈತರು ಆಧಾರ್ ಕಾರ್ಡ್ ಚಾಲ್ತಿ ಇರುವ ಬ್ಯಾಂಕ್ ಖಾತೆ ಪುಸ್ತಕ ಮತ್ತು ಪಹಣಿಗಳೊಂದಿಗೆ ನಿಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಬೇಕೆಂದು ತಿಳಿಸಿದರು. ಸಹಾಯಕ ಕೃಷಿ ನಿರ್ದೇಶಕ ಎಸ್.ಎಫ್. ಬೆಳವಟಗಿ, ಎಂ.ಎಸ್ ಕುಲಕರ್ಣಿ, ಆತ್ಮ ಯೋಜನೆಯ ನಿರ್ದೇಶಕ ಮಂಜುನಾಥ ಭರಮಗೌಡ್ರ, ಸಿಬ್ಬಂದಿ ಪ್ರವೀಣ ಪಾಟೀಲ, ಶಿವಾಜಿ ಸಾತೆ, ಶರತ ಪಾಟೀಲ ಇತರರಿದ್ದರು.

## ಪರಿಸರ ರಕ್ಷಣೆ ನಮ್ಮ ಬದುಕಿನ ಭಾಗವಾಗಲಿ

**ಗಜೇಂದ್ರಗಡ:** ನಗರದ ಶ್ರೀ ವಿ.ಟಿ. ರಾಯಬಾಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವನಮಹೋತ್ಸವ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅರಣ್ಯ ಅಧಿಕಾರಿ ಎ.ಬಿ. ಕೋಲಾರ ಸಸಿ ನಡೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಜಾಗತಿಕ ತಾಪಮಾನ ಏರಿಕೆ ದೊಡ್ಡ ಸವಾಲಾಗಿದೆ. ಇದನ್ನು ತಡೆಗಟ್ಟಲು ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನಾದರೂ ನೆಟ್ಟು ಪೋಷಿಸಬೇಕು. ಪರಿಸರ ರಕ್ಷಣೆ ಕೇವಲ ಒಂದು ದಿನದ ಆಚರಣೆಯಾಗದೆ, ನಮ್ಮ ದಿನ ನಿತ್ಯದ ಬದುಕಿನ ಭಾಗವಾಗಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ಸಂಸ್ಥೆಯ ಅಧ್ಯಕ್ಷ ಗಣಪತಸಾ ರಂಗ್ರೇಜ, ಆಡಳಿತಾಧಿಕಾರಿ ಗೋವಿಂದ ದಂಡಿನ ಮಾತನಾಡಿದರು. ಶಾಲೆಯ ಕಾರ್ಯದರ್ಶಿ ಗುರುನಾಥಸಾ ಕೆ. ರಾಯಬಾಗಿ, ಸಹ ಕಾರ್ಯದರ್ಶಿ ಭಾಸ್ಕರಸಾ ರಾಯಬಾಗಿ, ಸದಸ್ಯರಾದ ಸುರೇಂದ್ರಸಾ ರಾಯಬಾಗಿ, ರಾಘವೇಂದ್ರ ರಾಯಬಾಗಿ, ಶಂಕರಸಾ ರಾಯಬಾಗಿ, ನಾಗರಾಜ್ ಪವಾರ, ಸಿದ್ರಾಮಸಾ ರಾಯಬಾಗಿ, ಸುಮಾ ಲಕ್ಕುಂಡಿ, ಲಕ್ಷ್ಮಿ ಅಣ್ಣಿಗೇರಿ, ರಾಘು ಕೊಣ್ಣೂರಕರ, ಶಿವು ಚಲವಾದಿ, ಬಸವರಾಜ ಗುಳಗುಳಿ, ಮಾರುತಿ ನದ್ಯಾಳ, ಅನಿಲ ಮಹೇಂದ್ರಕರ ಇತರರಿದ್ದರು.



## ಶಾಲೆಗೆ ದಾಖಲಾದ ಪ್ರತಿ ಹೆಣ್ಣು ಮಗುವಿನ ಹೆಸರಿನಲ್ಲಿ ₹500 ಠೇವಣಿ





ಸಿ.ಎಸ್. ಪರಡ್ಡಿ

ಮೆಹಬೂಬ ಎಚ್ ಮೋತೆಖಾನ್

ದಿಗಂತ ವಿಶೇಷ

**ರೋಣ:** ಹೆಣ್ಣು ಮಕ್ಕಳ ಕಲಿಕೆಯ ದೃಷ್ಟಿಯಿಂದ ತಾಲೂಕಿನ ಸವಡಿ ಗ್ರಾಮದ ಶಿಕ್ಷಕ ಸಿ.ಎಸ್.ಪರಡ್ಡಿ ಅವರು ವಿನೂತನ ಪ್ರಯೋಗ ಮಾಡಿದ್ದು, ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ಒಂದನೇ ತರಗತಿಗೆ ದಾಖಲು ಮಾಡಿದರೆ ಪ್ರತಿ ಮಗುವಿನ ಹೆಸರಿನಲ್ಲಿ ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ 500 ರೂ.ಗಳನ್ನು ಅವರ ಹೆಸರಿನಲ್ಲಿ ಠೇವಣಿ ಇಡುವುದಾಗಿ ಘೋಷಿಸುವ ಜೊತೆಗೆ ಕಾರ್ಯಪ್ರವೃತ್ತರಾಗಿದ್ದು,

ಶಿಕ್ಷಕ ಸಿ.ಎಸ್.ಪರಡ್ಡಿ ಅವರು ಮಕ್ಕಳು ಸರ್ಕಾರಿ ಶಾಲೆಗೆ ಬರಲಿ ಎಂದು ದಾಖಲಾದ ಮಗುವಿನ ಹೆಸರಿನಲ್ಲಿ 500 ರೂ. ಜಮಾವಣೆ ಮಾಡಲಾಗುವುದು ಎಂದಿದ್ದಾರೆ. ಇತ್ತೀಚಿಗೆ ವಾರನಬಸರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಶಿಕ್ಷಕ ಪ್ರಭಣ್ಣವರ ಅವರು ಮಕ್ಕಳ ಕಲಿಕೆಯ ಪ್ರಗತಿಗಾಗಿ ಮತ್ತು ಶಾಲೆಗೆ ಬರುವ ಮಕ್ಕಳು ಸ್ವಯಂ ಅಕ್ಷರ ಜ್ಞಾನ ಪಡೆದುಕೊಳ್ಳಲು ಉತ್ತೇಜಿಸಬೇಕು. ಆಕಾಂಕ್ಷೆಯನ್ನು ಹೊಂದಿ ಶಾಲೆಗೆ 1 ಲಕ್ಷ ರೂ.ಗಳನ್ನು ದೇಣಿಗೆ ನೀಡಿದ್ದರು. ಅದರಂತೆ ಸಿ.ಎಸ್.ಪರಡ್ಡಿ ಹೆಣ್ಣು ಮಕ್ಕಳು ಶಾಲೆಗೆ ಬರಬೇಕು ಅದು ಸರ್ಕಾರಿ ಶಾಲೆಯತ್ತ ಮುಖ ಮಾಡಬೇಕು ಎನ್ನುವ ಉದ್ದೇಶದಿಂದ ಡಿಪಾಜಿಟ್ ಮಾಡಲು ಮುಂದಾಗಿರುವುದು ಗ್ರಾಮಸ್ಥರ ಪ್ರಶಂಸೆಗೆ ಕಾರಣವಾಗಿದೆ.

> ಪ್ರತಿ ಹೆಣ್ಣು ಮಗು ಅಕ್ಷರ ಜ್ಞಾನ ಪಡೆಯಬೇಕು ಎನ್ನುವುದು ನನ್ನ ಉದ್ದೇಶ. ಹೀಗಾಗಿ ಈ ವರ್ಷ ಸರ್ಕಾರಿ ಶಾಲೆಯಲ್ಲಿ ದಾಖಲಾಗುವ ಪ್ರತಿ ಹೆಣ್ಣು ಮಗುವಿನ ಹೆಸರಿನಲ್ಲಿ 500 ರೂ.ಗಳ ಠೇವಣಿ ಇಡುವುದಾಗಿ ತಿಳಿಸಿದ್ದೇನೆ. ದಾಖಲಾಗುವ ಎಲ್ಲ ಮಕ್ಕಳ ಬ್ಯಾಂಕ್ ಖಾತೆಗಳನ್ನು ಸ್ವತಃ ನಾನೇ ತೆರೆದುಕೊಡಲಿದ್ದೇನೆ.
> ■ ಸಿ.ಎಸ್.ಪರಡ್ಡಿ, ಶಿಕ್ಷಕ ಸವಡಿ

> ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಿಗಿಂತ ಗುಣಮಟ್ಟದ ಶಿಕ್ಷಣ ಸಿಗುತ್ತದೆ. ಅಲ್ಲದೇ ಸರ್ಕಾರ ಕೂಡಾ ಸಾಕಷ್ಟು ಯೋಜನೆಗಳನ್ನು ನೀಡಿದ್ದು, ಶಿಕ್ಷಕ ಸಿ.ಎಸ್.ಪರಡ್ಡಿ ಸರ್ಕಾರಿ ಶಾಲೆಗೆ ದಾಖಲಾದ ಪ್ರತಿ ಹೆಣ್ಣು ಮಗುವಿಗೆ 500 ರೂ.ಗಳ ಠೇವಣಿ ಇಡುತ್ತಿರುವುದು ಶ್ಲಾಘನೀಯವಾಗಿದೆ.
> ■ ಆರ್.ಎಲ್.ನಾಯ್ಕರ, ಅಕ್ಷರದಾಸೋಹ ಅಧಿಕಾರಿ, ರೋಣ

> ಶಿಕ್ಷಕ ಸಿ.ಎಸ್.ಪರಡ್ಡಿ ಅವರು ಸರ್ಕಾರಿ ಶಾಲೆಗಳ ಬೆಳವಣಿಗೆಗೆ ಅಭೂತಪೂರ್ವ ಸೇವೆ ಗೈಯುತ್ತಿರುವುದು ಸ್ವಾಗತಾರ್ಹವಾದ ಬೆಳವಣಿಗೆ. ಹೆಣ್ಣು ಮಗುವಿನ ಕಲಿಕೆಯ ಉತ್ತೇಜನಕ್ಕೆ ಇದೊಂದು ಉತ್ತಮವಾದ ಕೊಡುಗೆ. ಪಾಲಕರು ಹೆಣ್ಣು ಮಗುವಿನ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು.
> ■ ಎಸ್.ಬಿ.ಹಿರೇಮಠ, ಮುಖ್ಯ ಶಿಕ್ಷಕ, ಸವಡಿ

## ಜೂ.30ರಿಂದ ಬಿಎಲ್‌ಓಗಳಿಂದ ಮನೆ-ಮನೆ ಗಣತಿ: ಸಿ.ಎನ್. ಶ್ರೀಧರ

**ಗದಗ:** ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಶೇ.94.14 ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಳಿಸಲಾಗಿದೆ. ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್ ಐಆರ್ ಕುರಿತು ಪತ್ರಿಕಾಗೋಷ್ಠಿ ನಡೆಸಿ ಅವರು ಮಾಹಿತಿ ನೀಡಿ, ಆಯೋಗದ ಮಾರ್ಗಸೂಚಿಯಂತೆ 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು 2025ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಹಾಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಸಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಓ) ಮನೆಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಜಿಲ್ಲೆಯಲ್ಲಿ ಈಗಾಗಲೇ ಶೇ.94.14 ರಷ್ಟು ನೈಜ ಮತದಾರರನ್ನು ಗುರುತಿಸಿ ಕುಟುಂಬಗಳ ಲಿಂಕೇಜ್‌ನೊಂದಿಗೆ ಹೊಂದಾಣಿಕೆ ಮಾಡಲಾಗಿದೆ. ವಿಶೇಷ ಪರಿಷ್ಕರಣೆ ಅಂಗವಾಗಿ ಜೂ.20 ರಿಂದ 29ರವರೆಗೆ ಪೂರ್ವಸಿದ್ಧತೆ, ತರಬೇತಿ ಮತ್ತು ಮುದ್ರಣ ಕಾರ್ಯಗಳು ನಡೆಯಲಿವೆ. ಜೂ.30 ರಿಂದ ಜು.29 ರವರೆಗೆ ಬಿ.ಎಲ್.ಓ.ಗಳು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಹಾಗೂ ಪರಿಶೀಲನೆ ನಡೆಸಲಿದ್ದಾರೆ. ತದನಂತರ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಧ್ಯಮಗಳು ಸಹಕರಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಚುನಾವಣಾ ಶಾಖೆಯ ತಹಶೀಲ್ದಾರ್ ಸಂತೋಷ್‌ಕುಮಾರ ಹಿರೇಮಠ ಸೇರಿದಂತೆ ಸಹಾಯಕ ಚುನಾವಣಾಧಿಕಾರಿಗಳು ಇದ್ದರು.



### ವಿಶೇಷ ಕಾರ್ಯಾಚರಣೆ

2025ರ ಜಿಲ್ಲೆಯ ಮತದಾರರ ಪಟ್ಟಿಯ ಪ್ರಕಾರ ಒಟ್ಟು 9,04,994 ಅರ್ಹ ಮತದಾರರಿದ್ದು, ಈ ಪೈಕಿ ಈಗಾಗಲೇ 8,51,991 ಮತದಾರರನ್ನು ಗುರುತಿಸಿ ಮ್ಯಾಪಿಂಗ್ ಮಾಡಲಾಗಿದೆ. ಇದರಲ್ಲಿ ಕೆಲವರು ಮೃತರಾಗಿರಬಹುದು, ಬೇರೆ ಕಡೆಗೆ ಕಾಯಂ ಆಗಿ ವಲಸೆ ಹೋಗಿರಬಹುದು ಅಥವಾ ಮತಪಟ್ಟಿಯಲ್ಲಿ ಎರಡು ಬಾರಿ ಹೆಸರು ಸೇರ್ಪಡೆಯಾಗಿರಬಹುದು. ಆದರೆ ಯಾರನ್ನೂ ಏಕಾಏಕಿ ಪಟ್ಟಿಯಿಂದ ಕೈಬಿಡಲಾಗುವುದಿಲ್ಲ. ಪತ್ತೆಯಾಗದ ಈ 53004 ಮತದಾರರಿಗೆ ನೋಟಿಸ್ ನೀಡಿ ಪರಿಶೀಲಿಸಲಾಗುವುದು. ಮೃತಪಟ್ಟವರ ಬಗ್ಗೆ ಅಧಿಕೃತ ಮರಣ ಪ್ರಮಾಣಪತ್ರ ಸಿಗುವವರೆಗೂ ಯಾರ ಹೆಸರನ್ನೂ ಪಟ್ಟಿಯಿಂದ ತೆಗೆದುಹಾಕುವುದಿಲ್ಲ. ಮತದಾರರ ಪತ್ತೆಗಾಗಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಎಂದು ಡಿಸಿ ತಿಳಿಸಿದರು.

### ಅ.7ರಂದು ಅಂತಿಮ ಮತಪಟ್ಟಿ ಪ್ರಕಟ

ಮನೆ ಗಣತಿ ತರುವಾಯ ಆ.5 ರಂದು ಕರಡು ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗುವುದು. ಮತದಾರ ಪಟ್ಟಿಗೆ ಆಕ್ಷೇಪಣೆಗಳ ಸಲ್ಲಿಕೆಗೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ. ಸಾರ್ವಜನಿಕರು ಅ.3ರ ಒಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಸಾರ್ವಜನಿಕರಿಂದ ಬರುವ ಆಕ್ಷೇಪಣೆಗಳ ಇತ್ಯರ್ಥದ ನಂತರ, ಅ.7ರಂದು ಅಂತಿಮ ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

## ಸೋಮವಾರದ ಪಂದ್ಯಗಳು

- ಸ್ವೀಡನ್-ಟುನೀಶಿಯಾ, (ಬೆಳಗ್ಗೆ: 7:30)
- ಸ್ಪೇನ್-ಕಾಬೋವರ್ಡೆ,(ಬೆಳಗ್ಗೆ 9:30), ಸೋಮವಾರ-ಮಂಗಳವಾರ ತಡರಾತ್ರಿ
- ಬೆಲ್ಜಿಯಂ-ಇಜಿಪ್ಟ್, (ಮಧ್ಯರಾತ್ರಿ 12:30)
- ಸೌದಿ ಅರೇಬಿಯಾ-ಉರುಗ್ವೆ, (ಮಧ್ಯರಾತ್ರಿ 3:30)

## ಕಿರುಸುದ್ದಿ

### ಸ್ವಂತ ಖರ್ಚಿನಲ್ಲೇ ಏಷ್ಯನ್ ಗೇಮ್ಸ್ ಆಡಿ: ಪಾಕ್

**ರಾವಲ್ಪಿಂಡಿ:** ಒಂದು ವೇಳೆ ನಿಮಗೆ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಬೇಕೆಂಬ ಆಸೆ ಏನಾದರೂ ಇದ್ದರೆ ನಿಮ್ಮ ಖರ್ಚಿನಿಂದಲೇ ಜಪಾನ್‌ಗೆ ಹೋಗಿ. ಆಡುವಾಗ ಮಾತ್ರ ದೇಶದ ಹೆಸರಲ್ಲಿ ಆಡಿ ಎಂದು ಪಾಕ್ ತನ್ನ ಟೇಬಲ್ ಟೆನಿಸ್ ಆಟಗಾರರಿಗೆ ಸೂಚನೆ ನೀಡಿದೆ.

ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಕೂಟಕ್ಕಾಗಿ ಪಾಕಿಸ್ತಾನ ಟೇಬಲ್ ಟೆನಿಸ್ ತನ್ನ ಭಾಗವಹಿಸುವ ಆಟಗಾರರ ಆಯ್ಕೆ ಪ್ರಕ್ರಿಯೆಯನ್ನು ಲಾಹೋರ್‌ನಲ್ಲಿ ನಡೆಸಿತು. ಅದರಂತೆ ಸಾವಿರಾರು ಪೆಡ್ಲಲರ್‌ಗಳು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಈ ನಡುವೆ ಆಯ್ಕೆಯಾದ ಆಟಗಾರರಿಗೆ ಅಲ್ಲಿನ ಟಿಟಿ ಸಂಸ್ಥೆ ಸೂಚನೆ ನೀಡಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಆಟಗಾರರಿಗೆ ಹಣ ಪಾವತಿಸುವ ಅಗತ್ಯವಿಲ್ಲ. ಆದರೆ ಜಪಾನ್‌ಗೆ ಪ್ರಯಾಣಿಸುವ ವೆಚ್ಚವನ್ನು ಆಟಗಾರರು ತಾವೇ ನೋಡಿಕೊಳ್ಳಬೇಕು. ಹಾಗೇ ಅಲ್ಲಿ ಇರಲು ಬೇಕಿರುವ ದಿನಕ್ಕೆ ವಸತಿ ವ್ಯವಸ್ಥೆಗಾಗಿ 50 ಡಾಲರ್ ಕೂಡ ನೀವೇ ಭರಿಸಬೇಕೆಂದು ಹೇಳಿದೆ. ಈ ಬಗ್ಗೆ ಆಟಗಾರರೊಬ್ಬರು ಮಾಧ್ಯಮದ ಮುಂದೆ ಹೇಳಿದ್ದಲ್ಲದೆ, ಮೇಲಾಧಿಕಾರಿಗಳಿಗೂ ದೂರು ಕೊಟ್ಟಿದ್ದಾರೆ. ಆದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

### ಆರ್ಚರಿ: ಧೀರಜ್‌ಗೆ ಐತಿಹಾಸಿಕ ಚಿನ್ನ

**ಹೊಸದಿಲ್ಲಿ:** ಭಾರತದ ಬಿಲ್ಲುಗಾರ ಧೀರಜ್ ಬೊಮ್ಮದೇವರ ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಕೂಟದಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಕೊರಿಯಾದ ಲೀ ವೋ ಅವರನ್ನು ಎದುರಿಸಿದ್ದ ಅವರು, ಫೈನಲ್‌ನಲ್ಲಿ 7-3ರಿಂದ ಗೆಲುವು ಸಾಧಿಸಿದರು. ಇದಕ್ಕೂ ಮೊದಲೇ ಅವರು ಭಾರತೀಯ ಕುಂಕುಮ್ ಮೊಹೊದ್ ಅವರೊಂದಿಗೆ ಮಿಶ್ರ ಡಬಲ್ಸ್ ವಿಭಾಗದಲ್ಲೂ ಚಿನ್ನದ ಪದಕ ಗೆದ್ದಿದ್ದು



ವಿಶ್ವಕಪ್‌ನಲ್ಲಿ ಭಾರತೀಯ ಬಿಲ್ಲುಗಾರರು ಪಾರುಪತ್ಯ ಸಾಧಿಸಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಧೀರಜ್ 5-1ರ ಮುನ್ನಡೆ ಸಾಧಿಸಿದರು. ಮೊದಲನೇ ಸೆಟ್‌ಗಳಲ್ಲಿ 30-29 ಅಂಕಗಳಿಂದ ಗೆದ್ದ ಅವರು, ಎರಡನೇ ಸೆಟ್ ಅನ್ನು 29-28, ಮೂರನೇ ಸೆಟ್ ಅನ್ನು 27-27ರಿಂದ ಟೈಗೊಂಡಿತು. ಪರಿಣಾಮ ಶೂಟೌಟ್ ಮೊರೆಗೆ ಹೋಗಬೇಕಾಯಿತು. ಶೂಟೌಟ್‌ನಲ್ಲಿ ಭಾರತೀಯ ಬಿಲ್ಲುಗಾರ ಅಲ್ಪ ಹಿನ್ನಡೆ ಅನುಭವಿಸಿದರು. ಆದಾಗ್ಯೂ ಮುಂದಿನ ಎರಡೂ ಸೆಟ್‌ಗಳಲ್ಲಿ ಗೆಲುವು ಸಾಧಿಸಿ ಚಿನ್ನ ಖಚಿತ ಪಡಿಸಿಕೊಂಡರು. ಡಬಲ್ಸ್ ವಿಭಾಗದಲ್ಲೂ ಭಾರತೀಯರಿಬ್ಬರೂ ಮಿಂಚಿದರು. ಧೀರಜ್‌ಗೆ ಇದು ಐತಿಹಾಸಿಕ ಮೊದಲನೇ ಚಿನ್ನದ ಪದಕವಾಗಿದೆ.

ಫಿಫಾ ವಿಶ್ವಕಪ್: ಆಸ್ಟ್ರೇಲಿಯಾ, ಸ್ಕಾಟ್ಲೆಂಡ್‌ಗೆ ಗೆಲುವು | ಎರಡು ಪಂದ್ಯಗಳು ಡ್ರಾ!

# ಸೊಕ್ಕೆರೂಸ್‌ಗಳ ವಿಜಯಘೋಷ

**ವ್ಯಾಂಕೋವರ್:** ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಟಾರ್‌ಗಳ ಮಿಂಚಿನಾಟ ಮತ್ತು ಕೊನೆ ಕ್ಷಣದ ರೋಚಕ ಕಾದಾಟಗಳು ಮುಂದುವರಿದಿವೆ. ಭಾನುವಾರದ ನಡೆದ 4 ಪಂದ್ಯಗಳಲ್ಲಿ 2 ಡ್ರಾಗೊಂಡರೆ, 2 ಪಂದ್ಯಗಳಿಂ ಸ್ಪಷ್ಟ ಫಲಿತಾಂಶ ಹೊರಬಂದಿದೆ.

ಸಿ' ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ 1-0 ಗೋಲುಗಳಿಂದ ಹೈಟಿಯನ್ನು ಮಣಿಸಿ ಮಹತ್ವದ ಗೆಲುವು ದಾಖಲಿಸಿದೆ. ಡಿ ಗುಂಪಿನಲ್ಲಿ ಆಸ್ಟ್ರೇಲಿಯಾ ತಂಡವು ಟರ್ಕಿ ತಂಡವನ್ನು 2-0ರಿಂದ ಮಣಿಸಿದೆ. ಕತಾರ್ ತಂಡವು ಸ್ವಿಟ್ಜರ್ಲೆಂಡ್ ವಿರುದ್ಧ 1-1ರಿಂದ ಡ್ರಾ ಸಾಧಿಸಿದರೆ, ಬ್ರೆಜಿಲ್ ಮತ್ತು ಮೊರೊಕ್ಕೊ ತಂಡಗಳ ಪಂದ್ಯವೂ 1-1ರಿಂದ ಡ್ರಾಗೊಂಡಿತು.

**ಆಸ್ಟ್ರೇಲಿಯಾಗೆ ಗೆಲುವಿನ ಆರಂಭ:** ಟರ್ಕಿ ವಿರುದ್ಧ 2-0 ಜಯ । ಇರನ್‌ಕುಂಡಾ, ಮೆಟ್‌ಕಾಲ್ಫ್ ಮಿಂಚು 2026ರ ಫಿಫಾ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿದೆ. ವ್ಯಾಂಕೂವರ್‌ನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟರ್ಕಿಯನ್ನು 2-0 ಗೋಲುಗಳಿಂದ ಮಣಿಸಿದ ಸೊಕ್ಕೆರೂಸ್, ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು. 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ್ದ ಟರ್ಕಿಗೆ ಆಸ್ಟ್ರೇಲಿಯಾ ಆರಂಭದಲ್ಲೇ ಆಘಾತ ನೀಡಿತು. 27ನೇ ನಿಮಿಷದಲ್ಲಿ ನೆಸ್ಟೊರಿ ಇರನ್ ಕುಂಡಾ ಮೂವರು ರಕ್ಷಣಾ ಆಟಗಾರರ ನಡುವೆ ಅದ್ಭುತವಾಗಿ ಮುನ್ನಗ್ಗಿ ಕೆಳಮಟ್ಟದ ಶಾಟ್ ಮೂಲಕ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 75ನೇ ನಿಮಿಷದಲ್ಲಿ ಇಸ್ಮಾಯಿಲ್ ಯುಕೆಕ್ ಮಾಡಿದ ತಪ್ಪನ್ನು ಸದುಪಯೋಗಪಡಿಸಿಕೊಂಡ ಕಾನರ್ ಮೆಟ್‌ಕಾಲ್ಫ್ ಗೋಲು ಬಾರಿಸಿ ಆಸ್ಟ್ರೇಲಿಯಾದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಅಂತಿಮವಾಗಿ ಇದೇ ಅಂತರದಲ್ಲಿ ಪಂದ್ಯ ಮುಕ್ತಾಯಗೊಂಡಿತು.

**ಟರ್ಕಿಗೆ ಆಘಾತ**

**ಇರನ್‌ಕುಂಡಾ ದಾಖಲೆ:** 20 ವರ್ಷದ ಇರನ್‌ಕುಂಡಾ ವಿಶ್ವಕಪ್‌ನಲ್ಲಿ ಗೋಲು ದಾಖಲಿಸಿದ ಆಸ್ಟ್ರೇಲಿಯಾದ ಅತಿ ಕಿರಿಯ ಆಟಗಾರ ಎಂಬ ದಾಖಲೆ ನಿರ್ಮಿಸಿದರು. ಗೋಲು ಬಳಿಕ ಆಸ್ಟ್ರೇಲಿಯಾ ಫುಟ್‌ಬಾಲ್ ದಂತಕಥೆ ಟಿಮ್ ಕಾಹಿಲ್ ಅವರಿಗೆ ಗೌರವ ಸೂಚಿಸುವ ರೀತಿಯಲ್ಲಿ ಕಾರ್ನರ್ ಧ್ವಜವನ್ನು ಹೊಡೆದು ಸಂಭ್ರಮಿಸಿದರು.

**ಬೀಚ್‌ನಿಂದ 8 ಸೇವ್!:** ಎರಡನೇರ್ಧದಲ್ಲಿ ಟರ್ಕಿ ಸಮಬಲಕ್ಕಾಗಿ ಹಲವು ಪ್ರಯತ್ನಗಳನ್ನು ನಡೆಸಿತು. ಆದರೆ ಗೋಲ್ ಕೀಪರ್ ಪ್ಯಾಟ್ರಿಕ್ ಬೀಚ್ ಅದ್ಭುತ ಪ್ರದರ್ಶನ ನೀಡಿ ಎಂಟು ಪ್ರಮುಖ ಸೇವ್‌ಗಳನ್ನು ಮಾಡಿದರು. 57ನೇ ನಿಮಿಷದಲ್ಲಿ ಅರ್ದಾ ಗುಲರ್ ಅವರ ಫ್ರೀ ಕಿಕ್ ಪ್ರಯತ್ನವನ್ನೂ ತಡೆದರು.



### ಪಂದ್ಯದಮುಖ್ಯಾಂಶಗಳು

- ಆಸ್ಟ್ರೇಲಿಯಾ 2-0 ಟರ್ಕಿ
- 27ನೇ ನಿಮಿಷ ನೆಸ್ಟೊರಿ ಇರಂಕುಂಡಾ ಗೋಲು
- 75ನೇ ನಿಮಿಷ ಕಾನರ್ ಮೆಟ್ ಕಾಲ್ಫ್ ಗೋಲು
- ಗೋಲ್‌ಕೀಪರ್ ಪ್ಯಾಟ್ರಿಕ್ ಬೀಚ್‌ನಿಂದ 8 ಸೇವ್‌ಗಳು
- 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ ಟರ್ಕಿಗೆ ಸೋಲು

## ಸೂಪರ್ ಸ್ಕಾಟ್ಲೆಂಡ್

### ಹೈಟಿ ವಿರುದ್ಧ 1-0 ಜಯ, ಸಿ ಗುಂಪಿನಲ್ಲಿ ಅಗ್ರಸ್ಥಾನ

ಹೈಟಿ ವಿರುದ್ಧ ನಡೆದ ಪಂದ್ಯದಲ್ಲಿ ಸ್ಕಾಟ್ಲೆಂಡ್ ಭರ್ಜರಿ ಗೆಲುವು ಸಾಧಿಸಿದೆ. ಇದು 1990ರ ಬಳಿಕ ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್‌ಗೆ ದೊರೆತ ಮೊದಲ ಜಯ. ಮ್ಯಾಸಚೂಸೆಟ್ಸ್‌ನ ಫಾಕ್ಸ್‌ಬರೋದಲ್ಲಿರುವ ಜಿಲೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಾನ್ ಮ್ಯಾಕ್‌ಗಿನ್ 28ನೇ ನಿಮಿಷದಲ್ಲಿ ಗಳಿಸಿದ ಏಕೈಕ ಗೋಲು ಸ್ಕಾಟ್ಲೆಂಡ್‌ಗೆ ಗೆಲುವು ತಂದುಕೊಟ್ಟಿತು.

ಚೆ ಆಡಮ್ಸ್ ಅವರ ಪ್ರಯತ್ನವನ್ನು ಹೈಟಿ ಗೋಲ್‌ಕೀಪರ್ ಜಾನಿ ಪ್ಲಾಸಿಡ್ ತಡೆದರು. ಆದರೆ ಬಾಲ್ ತೆರವಾದ ಜಾಗಕ್ಕೆ ಬಿದ್ದಿತು. ಅದನ್ನು ಬಳಸಿಕೊಂಡ ಮ್ಯಾಕ್‌ಗಿನ್ ಹೊಡೆದ ಶಾಟ್ ರಕ್ಷಣಾ ಆಟಗಾರನಿಗೆ ತಾಗಿ ಗೋಲುಪೆಟ್ಟಿಗೆ ಸೇರಿತು. 17ನೇ ನಿಮಿಷದಲ್ಲೇ ನಾಯಕ ಸ್ಕಾಟ್ ಮೆಕ್ಟೊಮಿನೇ ಅವರ ಪ್ರಯತ್ನ ಗೋಲ್‌ಪೋಸ್ಟ್‌ಗೆ ತಾಗಿ ಹೊರಬಿದ್ದಿದ್ದರಿಂದ ಸ್ಕಾಟ್ಲೆಂಡ್ ಮತ್ತೊಂದು ಗೋಲು ಅವಕಾಶ ಕಳೆದುಕೊಂಡಿತು.

ದ್ವಿತಿಯಾರ್ಧದಲ್ಲಿ ಹೈಟಿ ತಿರುಗೇಟು ನೀಡಲು ಯತ್ನಿಸಿತು. 74ನೇ ನಿಮಿಷದಲ್ಲಿ ವಿಲ್ಸನ್ ಇಸಿಡೋರ್‌ಗೆ ದೊರೆತ ಅವಕಾಶ ಕೈತಪ್ಪಿದರೆ, 84ನೇ ನಿಮಿಷದಲ್ಲಿ ಫ್ರಾಂಟ್‌ಜ್ಡಿ ಪಿಯೆರೊಟ್ ಅವರ ಹೆಡರ್ ಗುರಿಯಿಂದ ಹೊರಹೋಯಿತು.



### ಪಂದ್ಯದ ಮುಖ್ಯಾಂಶಗಳು

- ಸ್ಕಾಟ್ಲೆಂಡ್ 1-0 ಹೈಟಿ
- 28ನೇ ನಿಮಿಷ: ಜಾನ್ ಮ್ಯಾಕ್‌ಗಿನ್ ಗೋಲು
- 1990ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಗೆಲುವು
- 1998ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಭಾಗವಹಿಸುವಿಕೆ
- ಹೈಟಿಗೆ ಇನ್ನೂ ವಿಶ್ವಕಪ್‌ನಲ್ಲಿ ಮೊದಲ ಅಂಕದ ನಿರೀಕ್ಷೆ

## ಮೊರಾಕ್ಕೊ ವಿರುದ್ಧ ಬ್ರೆಜಿಲ್‌ಗೆ ಡ್ರಾ

ಸಿ ಗುಂಪಿನ ಬಹುನಿರೀಕ್ಷಿತ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಬ್ರೆಜಿಲ್, ಮೊರಾಕ್ಕೊ ವಿರುದ್ಧ 1-1 ಗೋಲುಗಳ ಸಮಬಲ ಸಾಧಿಸಿದೆ. ಈಸ್ಟ್ ರುದರ್‌ಫೋರ್ಡ್‌ನ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆಕ್ರಮಣಕಾರಿ ಆಟವಾಡಿ ಪ್ರೇಕ್ಷಕರಿಗೆ ರಂಜಿಸಿದವು.

ಕಳೆದ ವಿಶ್ವಕಪ್‌ನ ಸೆಮಿಫೈನಲಿಸ್ಟ್ ಮೊರಾಕ್ಕೊ ಆರಂಭದಲ್ಲೇ ಮೇಲುಗೈ ಸಾಧಿಸಿತು. 21ನೇ ನಿಮಿಷದಲ್ಲಿ ಇಸ್ಮಾಯಿಲ್ ಸೈಬಾರಿ ಗೋಲು ಬಾರಿಸಿ ಆಫ್ರಿಕಾ ಚಾಂಪಿಯನ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಹಿನ್ನಡೆಯಲ್ಲಿದ್ದ ಬ್ರೆಜಿಲ್ 32ನೇ ನಿಮಿಷದಲ್ಲಿ ತಿರುಗೇಟು ನೀಡಿತು. ಬ್ರುನೋ ಗಿಮರಾಯಿಸ್ ಅವರೊಂದಿಗೆ ಸುಂದರ ಪಾಸ್ ವಿನಿಮಯ ನಡೆಸಿದ ವಿನಿಸಿಯಸ್ ಜೂನಿಯರ್, ರಕ್ಷಣಾ ಆಟಗಾರರನ್ನು ಮಣಿಸಿ ಬಲ ಕಾಲಿನ ಸಿಡಿಲಿನಂತಹ ಶಾಟ್ ಮೂಲಕ ಗೋಲು ಬಾರಿಸಿ ಸಮಬಲ ಸಾಧಿಸಿದರು. ಇದು ವಿನಿಸಿಯಸ್ ಅವರ ಅಂತಾರಾಷ್ಟ್ರೀಯ ವೃತ್ತಿಜೀವನದ 10ನೇ ಗೋಲಾಗಿತ್ತು. ಬಳಿಕ ಎರಡೂ ತಂಡಗಳಿಗೆ ಅವಕಾಶಗಳು ದೊರಕಿದರೂ ಗೋಲುಗಳಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಪಂದ್ಯ 1-1 ಡ್ರಾದಲ್ಲಿ ಅಂತ್ಯವಾಯಿತು.



### ಪಂದ್ಯದ ಮುಖ್ಯಾಂಶಗಳು

- 21ನೇ ನಿಮಿಷ: ಇಸ್ಮಾಯಿಲ್ ಸೈಬಾರಿ (ಮೊರಾಕ್ಕೊ)
- 32ನೇ ನಿಮಿಷ: ವಿನಿಸಿಯಸ್ ಜೂನಿಯರ್ (ಬ್ರೆಜಿಲ್)
- ವಿನಿಸಿಯಸ್ ಜೂನಿಯರ್‌ಗೆ 10ನೇ ಗೋಲು
- ವಿಶ್ವಕಪ್ ಉದ್ಘಾಟನಾ ಪಂದ್ಯಗಳಲ್ಲಿ ಬ್ರೆಜಿಲ್‌ನ ಅಜೇಯ ಸರಣಿ 21ಕ್ಕೆ ವಿಸ್ತರಣೆ

## ಕತಾರ್ ಕಿಕ್, ಪಂದ್ಯ ಸಮಬಲ

ಬಿ ಗುಂಪಿನ ಪಂದ್ಯದಲ್ಲಿ ಕತಾರ್ ಕೊನೆಯ ಕ್ಷಣದಲ್ಲಿ ಗೋಲು ಗಳಿಸಿ ಸ್ವಿಟ್ಜರ್ಲೆಂಡ್ ವಿರುದ್ಧ 1-1 ಸಮಬಲ ಸಾಧಿಸಿತು. ಸಾಂಟಾ ಕ್ಲಾರಾದ ಲೆವಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಹುತೇಕ ಸಮಯ ಮೇಲುಗೈ ಸಾಧಿಸಿದ್ದ ಸ್ವಿಟ್ಜರ್ಲೆಂಡ್‌ಗೆ ಹೆಚ್ಚುವರಿ ವೇಳೆಯ ಗೋಲು ಆಘಾತ ನೀಡಿತು.

ಸ್ವಿಟ್ಜರ್ಲೆಂಡ್ ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿತ್ತು. 13ನೇ ನಿಮಿಷದಲ್ಲಿ ಸ್ವಿಸ್ ಆಟಗಾರ ಬ್ರೀಲ್ ಎಂಬೋಲೊ ಅವರನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾದಾ ಫೌಲ್ ಮಾಡಿದ ಪರಿಣಾಮ ಪೆನಾಲ್ಟಿ ದೊರೆಯಿತು. 17ನೇ ನಿಮಿಷದಲ್ಲಿ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸಿದ ಎಂಬೋಲೊ, ಸ್ವಿಟ್ಜರ್ಲೆಂಡ್‌ಗೆ 1-0 ಮುನ್ನಡೆ ತಂದುಕೊಟ್ಟರು. ಬಳಿಕವೂ ಸ್ವಿಸ್ ತಂಡಕ್ಕೆ ಹಲವು ಅವಕಾಶಗಳು ದೊರೆತರೂ ಮುನ್ನಡೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿಲ್ಲ.

**ಕತಾರ್ ಕಂಬ್ಯಾಕ್:** ಪಂದ್ಯ ಅಂತ್ಯದತ್ತ ಸಾಗುತ್ತಿದ್ದಂತೆ ಕತಾರ್ ಹೋರಾಟ ತೀವ್ರಗೊಳಿಸಿತು. ಹೆಚ್ಚುವರಿ ವೇಳೆಯ ನಾಲ್ಕನೇ ನಿಮಿಷದಲ್ಲಿ ಬೌಲೆಮ್ ಖೌಖಿ ಹೆಡರ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿ ಕತಾರ್‌ಗೆ ಅಮೂಲ್ಯ ಸಮಬಲ ತಂದುಕೊಟ್ಟರು. ಕೊನೆಯ ಕ್ಷಣದ ಗೋಲಿನ ಬಳಿಕ ಕತಾರ್ ಆಟಗಾರರು ಸಂಭ್ರಮಾಚರಣೆಯಲ್ಲಿ ತೊಡಗಿದರೆ, ಗೆಲುವಿನ ಅಂಚಿನಲ್ಲಿದ್ದ ಸ್ವಿಟ್ಜರ್ಲೆಂಡ್ ನಿರಾಸೆ ಅನುಭವಿಸಿತು.




### ಪಂದ್ಯದ ಮುಖ್ಯಾಂಶಗಳು

- ಕತಾರ್ 1-1 ಸ್ವಿಟ್ಜರ್ಲೆಂಡ್
- 17ನೇ ನಿಮಿಷ: ಬ್ರೀಲ್ ಎಂಬೋಲೊ (ಪೆನಾಲ್ಟಿ)
- 90+4ನೇ ನಿಮಿಷ: ಬೌಲೆಮ್ ಖೌಖಿ (ಹೆಡರ್)
- ಹೆಚ್ಚುವರಿ ವೇಳೆಯಲ್ಲಿ ಕತಾರ್ ಸಮಬಲ

ಮಂಧಾನ, ಘೋಷ್ ಬ್ಯಾಟಿಂಗ್‌ಗೆ ಜಯ | ದೀಪ್ತಿಗೆ 5, ಚಾರಣಿಗೆ 3 ವಿಕೆಟ್

# ದೀಪ್ತಿ ಧಮಾಕಾ, ಪಾಕ್ ಪಂಚರ್

**ಬಿರ್ಮಿಂಗ್ಹ್ಯಾಮ್:** ಸ್ಮೃತಿ ಮಂಧಾನ, ರಿಚಾ ಘೋಷ್ ಮಾಡಿದ ಬ್ಯಾಟಿಂಗ್ ಮತ್ತು ದೀಪ್ತಿ ಶರ್ಮಾ, ಶ್ರೀ ಚಾರಣಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಮಿಂಚಿದ ಭಾರತ ತಂಡವು ಪಾಕ್ ಬೇಟೆಯಾಡಿದ್ದು, ಪ್ರತಿಷ್ಠಿತ ಮಹಿಳೆಯರ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದೆ.

ಟಿ20 ವಿಶ್ವಕಪ್‌ನ ಮೊದಲನೇ ಪಂದ್ಯದಲ್ಲೇ ಪಾಕಿಸ್ತಾನವನ್ನು ಎದುರಿಸಿದ್ದ ಭಾರತ ತಂಡವು 64ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು. ಮಂಧಾನ 68, ಕೌರ್ 36 ರನ್ ಗಳಿಸಿದರೆ, ರಿಚಾ ಘೋಷ್ 34 ರನ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಪಾಕಿಸ್ತಾನ 17 ಓವರ್‌ಗಳಲ್ಲಿ 106 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಮುಬೀನಾ ಅಲಿ 41 ರನ್ ಗಳಿಸಿದರು. ಭಾರತ ಪರ ದೀಪ್ತಿ ಶರ್ಮ ಹಾಗೂ ಶ್ರೀ ಚಾರಣಿ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು.

ಮಂಧಾನ ಮ್ಯಾಚ್ ವಿನ್ನರ್ ಅನಿಸಿಕೊಂಡರೆ, ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಬೆಸ್ಟ್ ಬ್ಯಾಟರ್ ಅನಿಸಿಕೊಂಡರು. ದೀಪ್ತಿ ಶರ್ಮ ತಮ್ಮ ಅನುಭವದಿಂದಾಗಿ ಮಿಂಚಿದರು. ಶ್ರೀ ಚಾರಣಿ ತಮ್ಮ ಸ್ಕಿಲ್‌ನೊಂದಿಗೆ ಅಬ್ಬರಿಸಿದರು.

**ಪಾಕ್ ತತ್ತರ:** ಗುರಿ ಬೆನ್ನತ್ತಿದ ಪಾಕಿಸ್ತಾನಕ್ಕೆ ಉತ್ತಮ ಆರಂಭವೇ ಸಿಕ್ಕಿತು. ಆದರೆ ದೀಪ್ತಿ ಶರ್ಮ ಎಲ್ಲಾ ಯೋಜನೆಗಳಿಗೂ ತೆರೆ ಎಳೆದರು. ಮುಬಿನಾ ಅಲಿ ನಿಧಾನವಾಗಿ ಬ್ಯಾಟಿಂಗ್ ಮಾಡಿದರೆ, ಗುಲ್ 9 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಜಾಫರ್ 12 ರನ್‌ಗಳಿಸಿದ್ದಾಗ ದೀಪ್ತಿ ಶರ್ಮಗೆ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಗೆಲುವಿಗೆ ನಾಂದಿ ಹಾಡಲಾರಂಭಿಸಿದ ದೀಪ್ತಿ ಪಾಕ್ ಪಾಲಿಗೆ ದುಃಸ್ವಪ್ನವಾದರು. ಶ್ರೀಚಾರಣಿ ಸೈರಾ ವಿಕೆಟ್ ಕಿತ್ತ ನಂತರ ಭಾರತದ ಗೆಲುವು ಬಹುತೇಕ ಖಚಿತವಾಗಿತ್ತು. ಮುಂದಿನ ಓವರ್‌ಗಳಲ್ಲಿ ಪಾಕ್ ಪೆಚ್ಚಾಯಿತು. ಆದಾಗ್ಯೂ ಮುಬೀನಾ 41 ರನ್ ಗಳಿಸಿ ಪಂದ್ಯವನ್ನು ಗೆಲ್ಲಿಸುವತ್ತ ಸಾಗಿದ್ದರು. ಆದರೆ ದೀಪ್ತಿ ಶರ್ಮ ಈ ಬಾರಿ ಫೀಲ್ಡಿಂಗ್‌ನಲ್ಲಿ ಚಮತ್ಕಾರ ಮಾಡಿದರು. ನೇರ ಹಿಟ್‌ನೊಂದಿಗೆ ರನ್‌ಔಟ್‌ಗೆ ಬಲಿಯಾದ ನಂತರ ಭಾರತ ಪಂದ್ಯ ಗೆದ್ದಾಗಿತ್ತು.





### ಸಂಕ್ಷಿಪ್ತ ಸ್ಕೋರ್

**ಭಾರತ 20 ಓವರ್‌ಗಳಲ್ಲಿ 170/6:** ಮಂಧಾನ 68, ಕೌರ್ 36, ಘೋಷ್ 34; ಫಾತೀಮಾ 33/2, ಸಾದೀಯಾ 41/2
**ಪಾಕಿಸ್ತಾನ 18 ಓವರ್‌ಗಳಲ್ಲಿ 120/10:** ಮುಬೀನಾ 41; ಚಾರಣಿ21/3, ದೀಪ್ತಿ 10/5

ಉಳಿದ ಔಪಚಾರಿಕತೆಯನ್ನು 17 ಓವರ್‌ಗಳಲ್ಲಿ ಮುಗಿಸಿತು. ದೀಪ್ತಿ ದಾಳಿಗೆ ಪಾಕ್ ತತ್ತರಿಸಿದ್ದು ಮುಬೀನಾ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ 20 ರ ಗಡಿ ದಾಟಲಿಲ್ಲ. ಭಾರತ ಪರ ದೀಪ್ತಿ 5, ಚಾರಣಿ 3, ಶೆಫಾಲಿ 1 ವಿಕೆಟ್ ಪಡೆದರು.

**ಆರಂಭಿಕ ಆಘಾತ:** ಟಾಸ್ ಸೋತ ಭಾರತ ಬ್ಯಾಟಿಂಗ್‌ಗಿಳಿಯಿತು. ಬ್ಯಾಟರ್ ಶೆಫಾಲಿ ವರ್ಮಾ ಬರುತ್ತಲೇ ಸಿಕ್ಸರ್ ಒಂದನ್ನು ಬಾರಿಸಿ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜೆಮಿಮಾ ರಾಡ್ರಿಗ್ಸ್ ಬಂದು ಹೋಗುವ ಸಂಪ್ರದಾಯ ಮುಗಿಸಿಕೊಂಡರು. ಆದಾಗ್ಯೂ ಒಂದು ಬದಿಯಲ್ಲಿ ಮಾತ್ರ ಸ್ಮೃತಿ ಮಂಧಾನ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದರು. ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಜತೆಗೂಡಿದ ನಂತರ ಭಾರತ ಲಯಕ್ಕೆ ಮರಳಿತು. ಪವರ್‌ಪ್ಲೇ ಉದ್ದಕ್ಕೂ ಇವರಿಬ್ಬರು ಉತ್ತಮ ಬ್ಯಾಟಿಂಗ್ ಮಾಡಿದರು. ಪರಿಣಾಮ ಭಾರತ 38 ರನ್ ಗಳಿಸಿತು.

**ಮಂಧಾನ ಮಿಂಚಿನಾಟ:** ಮಧ್ಯಮ ಓವರ್‌ಗಳಲ್ಲಿ ಮಂಧಾನ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡಿದ್ದೇ ತಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಪಾಕಿಗಳನ್ನು ದಂಡಿಸುತ್ತಾ ಲೀಲಾ ಜಾಲವಾಗಿ ಬ್ಯಾಟ್ ಬೀಸಿದ ಅವರು 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಅತ್ತ ಕೌರ್ ಕೇವಲ ಸಿಂಗಲ್‌ಗಳ ಮೂಲಕ ವಿಕೆಟ್ ಉಳಿಸಿದರು. 91 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಆದರೆ 44 ಬಾಲ್‌ಗಳಲ್ಲಿ 9 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದ ಮಂಧಾನ ವಿಕೆಟ್ ಒಪ್ಪಿಸಿದರು. 36 ರನ್ ಗಳಿಸಿದ್ದ ಕೌರ್ ಕೂಡ ಪೆವಿಲಿಯನ್ ಸೇರಿದರು. ಮಧ್ಯಮ ಓವರ್‌ಗಳಲ್ಲಿ ಭಾರತ 84 ರನ್ ಗಳಿಸಿತು.

**ರಿಚಾ ಘೋಷ್ ಅಬ್ಬರ:** ಅಂತಿಮ ಓವರ್‌ಗಳಲ್ಲಿ ರಿಚಾ ಘೋಷ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಬರುತ್ತಲೇ ಬೌಂಡರಿಗಳಿಂದ ಅಬ್ಬರಿಸಿದ ಅವರು, ಡೆತ್ ಓವರ್‌ನಲ್ಲಿ ತೀರಾ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಭಾರತಕ್ಕೆ ಮತ್ತೊಮ್ಮೆ ಆಸರೆಯಾದರು. ದೀಪ್ತಿ ಶರ್ಮ ಅವರ ಸಾಥ್ ಸಿಕ್ಕಂತೆ 18 ಓವರ್‌ಗಳಲ್ಲಿ ಭಾರತ 132 ರನ್ ಗಳಿಸಿತ್ತು. ಕೊನೆಯ ಎರಡು ಓವರ್‌ಗಳಲ್ಲಿ ಘೋಷ್ ಪಂದ್ಯದ ದಿಕ್ಕನ್ನೇ ಬದಲಾಯಿಸಿಬಿಟ್ಟರು. 5 ಬೌಂಡರಿ 1 ಸಿಕ್ಸರ್ ಬಾರಿಸಿದ ಅವರು, 17 ಬಾಲ್‌ಗಳಲ್ಲಿ ಮಾತ್ರ 34 ರನ್ ಬಾರಿಸಿದರು.

# ಹಾಲಿ ಚಾಂಪಿಯನ್ಸ್ ಕಿವೀಸ್‌ಗೆ ಆಘಾತ

**ಸೌತಾಂಪ್ಟನ್:** ಟಿ20 ವಿಶ್ವಕಪ್‌ನ ಹಾಲಿ ಚಾಂಪಿಯನ್ಸ್ ನ್ಯೂಜಿಲೆಂಡ್ ತಂಡಕ್ಕೆ ಮಹಿಳಾ ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲೇ ಭಾರೀ ಆಘಾತ ಎದುರಾಗಿದೆ. ವಿಂಡೀಸ್ ವಿರುದ್ಧ ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಭಾರೀ ಸೋಲನುಭವಿಸಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ಇಸ್ಬೆಲ್ಲಾ ಗಾಜ್ 39, ಬ್ರೋಕ್ ಹಾಲಿಡೆ 40, ಮ್ಯಾಡಿ ರೀನ್ 35★ ರನ್ ಗಳಿಸಿದರು. ವಿಂಡೀಸ್ ಪರ ಆಲಿಯ್ಹ ಅಲಾನೆ 4 ವಿಕೆಟ್ ಪಡೆದು ಮಿಂಚಿದರು. ಗುರಿ ಬೆನ್ನತ್ತಿದ ವಿಂಡೀಸ್ 19.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿ ಪಂದ್ಯ ಗೆದ್ದಿತು. ಶಿಮೈನ್ ಕ್ಯಾಂಪ್‌ಬೆಲ್ ಅಜೇಯ 90 ರನ್ ಗಳಿಸಿದರು. ನಾಯಕಿ ಹೈಲೀ ಮ್ಯಾಥೀವ್ಸ್ 48 ರನ್ ಗಳಿಸಿದರು. ಕಿವೀಸ್ ಪರ ಜೆಸ್ ಕೇರ್ 2 ವಿಕೆಟ್ ಕಿತ್ತರು.


**ಆಸ್ಟ್ರೇಲಿಯಾ ಶುಭಾರಂಭ:** ಬೇಗನೇ ವಿಕೆಟ್‌ಗಳನ್ನು ಕಳೆದುಕೊಂಡರೂ ಲಿಚ್ ಫೀಲ್ಡ್ 50, ಎಲ್ಲಿಸ್ ಪೆರ್ರಿ 36 ಮತ್ತು ವಾರೇಹಮ್ 32 ರನ್ ಬ್ಯಾಟಿಂಗ್‌ನೊಂದಿಗೆ 172 ರನ್ ಗಳಿಸಿದ್ದ ಆಸ್ಟ್ರೇಲಿಯಾ ಆಫ್ರಿಕಾ ತಂಡವನ್ನು 107 ರನ್‌ಗೆ ಆಲೌಟ್ ಮಾಡಿ ಪಂದ್ಯವನ್ನು ಗೆದ್ದಿದೆ.

ವಿಶ್ವಕಪ್‌ನ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶ ಮಹಿಳಾ ತಂಡವು ನೆದರ್ಲೆಂಡ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 139 ರನ್ ಗಳಿಸಿದರೆ, ಬಾಂಗ್ಲಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 141 ರನ್‌ಗಳಿಸಿ ಪಂದ್ಯ ಗೆದ್ದುಕೊಂಡಿತು.



## ಪದಬಂಧ

ರಾಜಾ ಸಂಗಮೇಶ ಹಿರೇಮಠ



**6015**

**ಎಡದಿಂದ ಬಲಕ್ಕೆ**

1.ಕಾಣದಾಗುವಿಕೆ-ಮರೆಯಾದುದು (2)
2.ನಾಲ್ಕು ಆಶ್ರಮಗಳಲ್ಲಿ ಕಡೆಯದು (3)
4.ತಣ್ಣಗಿರುವ ಅವಸ್ಥೆ-ಶೈತ್ಯ (2)
6.ಅರಸನ ಆಡಳಿತಕ್ಕೆ ವಂಚನೆ ಬಗೆಯುವಿಕೆ (4)
8.ಎಡಗಡೆಯ ವಿರುದ್ಧ ಅಂಶ (4)
11.ಕಂಡವರ ಕಣ್ಣಿಗೆ ಬೀಳದ ಚಿನ್ನ (4)
13.ನ್ಯಾಯ ಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
15.ತೆಪ್ಪಗೆ ಏರಿ ಕುಳಿತದ್ದು ಈ ನಾವೆಯಲ್ಲಿ (2)
16.ಟಿಸಿಲು-ಕುಲದ ಶಾಖೆಯಿದು (3)
17.ಬಂದವರು ಕಂಡಿರದ ಗಾಡಿ (2)

**ಮೇಲಿನಿಂದ ಕೆಳಕ್ಕೆ**

1.ಕೃಶವಾದುದು ತಲೆಕೆಳಗಾಗಿದೆ (4)
2.ಸಂಜೆಗೆಂಪು ಒಂದು ಚಲನಚಿತ್ರವಾಗಿದೆ (4)
3.ವಿಶ್ವದ ಅತಿದೊಡ್ಡ ಮರುಭೂಮಿಯ ಹೆಸರು (3)
5.ಮೂರು ಊರುಗಳನ್ನು ನಾಶ ಮಾಡಿದವನು-ಶಿವ (4)
7.ಚೇತನವಿಲ್ಲದ ಭೌತಿಕ ಶರೀರ (4)
9.ಅದೃಷ್ಟಶಾಲಿಯನ್ನು ಹೀಗೂ ಹೇಳಬಹುದು (4)
10.ಶ್ರೀಮಂತಿಕೆ-ಸಮೃದ್ಧಿಯ ಸಮಾನಪದ (4)
11.ಕಪ್ಪುಬಂಗಾರ ಎಂದು ಕರೆಯುವ ಸಂಪನ್ಮೂಲ (4)
12.ಉಗ್ರರೂಪದ ಚಾಮುಂಡಿ-ಕಾಳಿಯೀಕೆ (4)
14.ಕಲೆ-ಸಾಹಿತ್ಯ-ಸೌಂದರ್ಯ ಆಸ್ವಾದಿಸುವವನು (3)

**6014 ಉತ್ತರ**

**ಎಡದಿಂದ ಬಲಕ್ಕೆ:**
1.ಪೂರ್ವಜ 3.ಧವಳಗಿರಿ
5.ಕಟ್ಟಾಣಿ 6.ಪ್ರಭಾರಿ
7.ಮದಕರಿ 9.ರಥಬೀದಿ
12.ತಪ್ಪಲೆ 13.ಸುಜ್ಞಾನ
15.ಕಲಾಕೋವಿದ
16.ಕುಮಾರಿ

**ಮೇಲಿನಿಂದ ಕೆಳಕ್ಕೆ :**
1.ಪೂರ್ಣವಿರಾಮ
2.ಜನಕ 3.ಧರಣಿಜ
4.ರಿಪೇರಿ 6.ಪ್ರಮಥ
8.ಕಟ್ಟೋಲೆ
10.ದಿವಾನಗಿರಿ
11.ಹಸುಕಂದ 12.ತವಕ
14.ನರಕು

## ಕಿರುಸುದ್ದಿ

### ಬೆಳೆ ವಿಮೆಗೆ ಅಗತ್ಯ ದಾಖಲೆ ಸಲ್ಲಿಸಿ

**ಹಾವೇರಿ:** ಕಳೆದ 2024-25 ನೇ ಸಾಲಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಬ್ಯಾಡಗಿ ತಾಲೂಕಿನಲ್ಲಿ ಶುಂಠಿ 79 ಪ್ರಕರಣಗಳಿಗೆ ಮತ್ತು ಹಸಿ ಮೆಣಸಿನಕಾಯಿ 47 ಪ್ರಕರಣಗಳಿಗೆ ರೈತರ ಬೆಳೆ ಹೊಂದಾಣಿಕೆ ಆಗದೇ ಇರುವುದರಿಂದ ಬೆಳೆ ವಿಮೆ ಜಮೆಯಾಗಿರುವುದಿಲ್ಲ.

ಆದ್ದರಿಂದ 2024-25 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ನಮೂದು ಆಗಿರುವುದರ ಬಗ್ಗೆ, 2024-25 ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ವಿಮೆ ನೋಂದಾಯಿತ ಉತ್ಪನ್ನವನ್ನು ಬೆಳೆ ಮಾರಾಟ ಮಾಡಿದ್ದಲ್ಲಿ ಸೂಕ್ತ ದಾಖಲೆ, 2024-25 ನೇ ಸಾಲಿನಲ್ಲಿ ವಿಮೆ ನೋಂದಾಯಿತ ಬೆಳೆ ಉತ್ಪನ್ನವನ್ನು ಂಕಒಲಆ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಕಂಪ್ಯೂಟರ ರಶೀದಿ, ವಿಮೆ ನೋಂದಾಯಿತ ಬೆಳೆ ಬೆಳೆಯಲು 2024-25 ರಲ್ಲಿ ಬ್ಯಾಂಕಿನಿಂದ ಬೆಳೆ ಸಾಲ ಪಡೆದಿದ್ದಲ್ಲಿ ಬ್ಯಾಂಕಿನವರಿಂದ ದೃಢೀಕೃತ ಪ್ರತಿಗಳು, ಇವುಗಳಲ್ಲಿ ಯಾವುದಾದರೂ ಒಂದು ದಾಖಲಾತಿಯನ್ನು ಮೇಲಿನ ವರ್ಷಕ್ಕೆ ಸಂಬಂಧಿಸಿದಂತೆ ಇದ್ದಲ್ಲಿ ಸಂಬಂಽಸಿದ ರೈತರು ಈ ಪ್ರಕಟಣೆ ದಿನಾಂಕದಿಂದ 15 ದಿನಗಳೊಳಗಾಗಿ ಬ್ಯಾಡಗಿ ತೋಟಗಾರಿಕೆ ಇಲಾಖೆ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು ಎಂದು ಬ್ಯಾಡಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಾಲೆ ಮೇಲ್ದರ್ಜೆಗೇರಿಸಲು ಇಂದು ಪ್ರತಿಭಟನೆ

**ಹಾವೇರಿ:** ಇಲ್ಲಿಯ ನಾಗೇಂದ್ರನಮಟ್ಟಿ ಸರ್ಕಾರಿ ಶಾಲೆ ನಂ.8ನ್ನು ಪ್ರೌಢ ಶಾಲೆಯನ್ನಾಗಿ ಮಾರ್ಪಾಡು ಮಾಡಿ ಆದೇಶಿಸುವಂತೆ ಒತ್ತಾಯಿಸಿ ಜಯ ಕರ್ನಾಟಕ ಸಂಘಟನೆ ನೇತೃತ್ವದಲ್ಲಿ ನಾಗೇಂದ್ರನಮಟ್ಟಿ ನಿವಾಸಿಗಳು ಜೂ.15ರಂದು ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ನಿರಂತರ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಂಡಿದೆ.

ಅಂದು ನಾಗೇಂದ್ರನಮಟ್ಟಿ ನಂ.8ರ ಶಾಲೆಯಿಂದ ಮೆರವಣಿಗೆ ಮೂಲಕ ತಹಶೀಲ್ದಾರ ಕಚೇರಿಗೆ ಆಗಮಿಸಿ ತಹಶೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು. ನಂತರ ಹುಕ್ಕೇರಿಮಠ, ಎಂ.ಜಿ ರಸ್ತೆ, ಎಂ.ಜಿ ವೃತ್ತ, ಜೆ.ಪಿ ವೃತ್ತ, ಹೊಸಮನಿ ಸಿದ್ದಪ್ಪ ವೃತ್ತದ ಮಾರ್ಗವಾಗಿ ಸಂಚರಿಸಿ ಮೈಲಾರ ಮಹಾದೇವಪ್ಪ ವೃತ್ತದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಗುವುದು. ಆದ್ದರಿಂದ ಕನ್ನಡ ಪರ ಹೋರಾಟಗಾರರು, ಮಠಾಶರು, ಸಾಹಿತಿಗಳು, ದಲಿತ ಸಂಘಟನೆಗಳು, ಎಲ್ಲ ಸಂಘಟನೆಯವರು, ವಿಶೇಷವಾಗಿ ನಾಗೇಂದ್ರನಮಟ್ಟಿಯ ವಿದ್ಯಾರ್ಥಿಗಳ ಪಾಲಕರು, ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕೆಂದು ಜಯ ಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಸುಭಾಸ್ ಬೆಂಗಳೂರ, ಸ್ಥಳೀಯ ಮುಖಂಡ ಮಲ್ಲೇಶಪ್ಪ ಪಟ್ಟಣಶೆಟ್ಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಾಸ್ಟೆಲ್ ಸಾಮಗ್ರಿಗಳ ಕಳ್ಳತನ

**ಹಾವೇರಿ:** ತಾಲೂಕಿನ ಗಾಂಪುರ ಗ್ರಾಮದಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿನ ಸಾಮಗ್ರಿಗಳನ್ನು ಕಳ್ಳರು ಕಳುವು ಮಾಡಿರುವ ಘಟನೆ ನಡೆದಿದೆ.ಗಾಂಪುರದ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ಹಾಸ್ಟೆಲ್‌ನಲ್ಲಿದ್ದ ಫ್ಯಾನ್, ವಿದ್ಯುತ್ ದೀಪ, 2 ಸಾವಿರ ಲೀ. ಸಾಮರ್ಥ್ಯದ ಒಂದು ಸಿಂಟ್ಯಾಕ್ಸ್, ತಲಾ 1 ಸಾವಿರ ಲೀಟರ್ ಸಾಮರ್ಥ್ಯದ ಎರಡು ಸಿಂಟ್ಯಾಕ್ಸ್, ಎಚ್.ಪಿ.ಮೋಟಾರ್, ಐದು ಯುಪಿಎಸ್ ಬ್ಯಾಟರಿಗಳು, ಸಬ್‌ಮರ್ಸಿಬಲ್ ಮೋಟರ್‌ಗಳನ್ನು ಕಳುವು ಮಾಡಲಾಗಿದೆ.

## ನಿಧನ ಸುದ್ದಿ

### ಪ್ರೇಮಾ ಅರಕೇರಿ

**ರಾಣೇಬೆನ್ನೂರ:** ಸ್ಥಳೀಯ ಗಣ್ಯ ವರ್ತಕ ಇಲ್ಲಿನ ಅಶೋಕ ನಗರದ ನಿವಾಸಿ ಮಲ್ಲೇಶಣ್ಣ ಅರಿಕೇರಿಯವರ ಪತ್ನಿ ಪ್ರೇಮಾ ಮಲ್ಲೇಶಣ್ಣ ಅರಕೇರಿ(77) ಅವರು ನಿಧನರಾದರು. ಮೃತರಿಗೆ ಪತಿ, ಮೂವರು ಗಂಡು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.





ಹಾವೇರಿ: ತಾಲೂಕು, ಹಾವೇರಿ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಮೇಲ್ಮುರಿಯಲ್ಲಿ ನಿವೃತ್ತ ಶಿಕ್ಷಕರಾದ ಶ್ರೀ ಆರ್. ವಿ.ಗೊಲ್ಲರ ಅವರಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭವನ್ನು ನಡೆಯಿತು.

## ನಿವೃತ್ತ ಶಿಕ್ಷಕರಿಗೆ ಸನ್ಮಾನ, ಬೀಳ್ಕೊಡುಗೆ

**ಹಾವೇರಿ:** ತಾಲೂಕು, ಹಾವೇರಿ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಮೇಲ್ಮುರಿಯಲ್ಲಿ ನಿವೃತ್ತ ಶಿಕ್ಷಕರಾದ ಶ್ರೀ ಆರ್. ವಿ. ಗೊಲ್ಲರ ಅವರಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭವನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಹಲವು ವರ್ಷಗಳ ಕಾಲ ಸಲ್ಲಿಸಿದ ಅವರ ಅಮೂಲ್ಯ ಸೇವೆಯನ್ನು ಸ್ಮರಿಸಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರು ಗೌರವ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮೇಲ್ಮರಿ ಎಸ್‌ಡಿಎಂ ಅಧ್ಯಕ್ಷರಾದ ಬಾಪೂಜಿ ಆಗಿಮನಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಂಜುನಾಥ್ ಕಾಳಿ, ನಿಂಗಪ್ಪ ವಡ್ನಿಕೊಪ್ಪ, ಬಸವರಾಜ್ ಹಾವಿನಾಳ ಹಾಗೂ ಗ್ರಾಮದ ಮುಖಂಡರಾದ ಶೇಖಪ್ಪ ಕೆಂಚಣ್ಣನವರ್ ಪ್ರಸಾದ್ ಬಾರ್ಕಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಗಣ್ಯರು ಮಾತನಾಡಿ, ಶ್ರೀ ಆರ್. ವಿ. ಗೊಲ್ಲರ ಅವರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಹಾಗೂ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಶ್ರೀ ಆರ್. ವಿ. ಗೊಲ್ಲರ ಅವರನ್ನು ಸನ್ಮಾನಿಸಿ, ಅವರ ಮುಂದಿನ ನಿವೃತ್ತ ಜೀವನ ಸುಖ, ಶಾಂತಿ ಮತ್ತು ಆರೋಗ್ಯದಿಂದ ಕೂಡಿರಲೆಂದು ಶುಭ ಹಾರೈಸಲಾಯಿತು. ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.



ಹಾವೇರಿ: ತಾಲೂಕಿನ ಕೊರಡೂರು ಗ್ರಾಮದಲ್ಲಿ ಆಯೋಜಿಸಿದ್ದ ದಿ.ಪ್ರೊ.ಜಿ.ಬಿ. ಕಲಕೋಟಿ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಹೊಸರಿತ್ತಿ ಗುದ್ದಲೀ ಸ್ವಾಮಿ ಮಠದ ಗುದ್ದಲಿ ಶಿವಯೋಗಿಶ್ವರ ಸ್ವಾಮೀಜಿ ಪುಷ್ಪ ನಮನ ಸಲ್ಲಿಸಿದರು.

## ಅಡ್ಡಾದಿಡ್ಡಿ ಬೈಕ್ ನಿಲ್ಲಿಸುವವರ ವಿರುದ್ಧ ಟ್ರಾಫಿಕ್ ಪೊಲೀಸ್‌ರ ಕ್ರಮ
# ವಾಹನ ಪಾರ್ಕಿಂಗ್ ಸಮಸ್ಯೆಗೆ ಬ್ರೇಕ್

ಜಿ ವ್ಹಿ. ದೀಪಾವಳಿ

ದಿಗಂತ ವಿಶೇಷ

**ರಾಣೇಬೆನ್ನೂರ** : ನಗರದಲ್ಲಿ ಸಂಚಾರ ದಟ್ಟಣೆ ಹಾಗೂ ಅಸ್ತವ್ಯಸ್ತ ವಾಹನ ನಿಲುಗಡೆ ಸಮಸ್ಯೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಣೇಬೆನ್ನೂರ ಟ್ರಾಫಿಕ್ ಪೊಲೀಸರು ಕೈಗೊಂಡ ಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ನಗರದ ಪ್ರಮುಖ ಪ್ರದೇಶಗಳಲ್ಲಿ ಕಾರುಗಳ ಪಾರ್ಕಿಂಗ್‌ಗೆ ಅಡ್ಡಿಯಾಗುವ ರೀತಿಯಲ್ಲಿ ಬೈಕ್ ಗಳನ್ನು ನಿಲ್ಲಿಸಿದ್ದ ವಾಹನ ಸವಾರರ ವಿರುದ್ಧ ಪೊಲೀಸರು ಕಟ್ಟು ನಿಟ್ಟಿನ ಕ್ರಮ ಕೈಗೊಂಡು ವಾಹನಗಳಿಗೆ ಲಾಕ್ ಹಾಕಿ ದಂಡ ವಸೂಲಿ ಮಾಡಿ ಕಟ್ಟೆಚ್ಚರ ನೀಡಿದ್ದಾರೆ.

ನಗರದ ಜನದಟ್ಟಣೆ ಇರುವ ರಸ್ತೆಗಳಲ್ಲಿ ಹಾಗೂ ಅಂಗಡಿ ಮುಂಗಟ್ಟುಗಳ ಎದುರು ಅನೇಕ ಬೈಕ್ ಸವಾರರು ನಿಯಮ ಉಲ್ಲಂಘಿಸಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಕಾರುಗಳ ಪಾರ್ಕಿಂಗ್‌ಗೆ ತೊಂದರೆ ಉಂಟಾಗುತ್ತಿತ್ತು. ಜೊತೆಗೆ ರಸ್ತೆ ಸಂಚಾರಕ್ಕೂ ಅಡಚಣೆ ಉಂಟಾಗಿ ಸಾರ್ವಜನಿಕರು ಹಾಗೂ ವಾಹನ ಸವಾರರು ಸಮಸ್ಯೆ ಅನುಭವಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ನಗರದ ಟ್ರಾಫಿಕ್ ಪಿಎಸ್‌ಐ ಕೃಷ್ಣಪ್ಪ ತೋಪಿನ ಹಾಗೂ ಸಿಬ್ಬಂದಿಗಳಾದ ಸಚಿನ್ ಮತ್ತು ಯಲ್ಲಪ್ಪ ಚಳಗೇರಿ ಇವರುಗಳು ನಗರದಲ್ಲಿ ಕಾರ್ ಪಾರ್ಕಿಂಗ್ ಇರುವ ಸ್ಥಳದಲ್ಲಿ ಬೈಕ್ ನಿಲ್ಲಿಸಿದ ವಾಹನಗಳಿಗೆ ವ್ಹೀಲ್ ಲಾಕ್ ಮಾಡುವುದರ ಮೂಲಕ ಹಾಗೂ ದಂಡ ವಸೂಲಿ ಮಾಡಿ ಅವರಿಗೆ ಟ್ರಾಫಿಕ್ ಬಗ್ಗೆ ನಿಯಮಾವಳಿಗಳ ಬಗ್ಗೆ ಅರಿವು ಮೂಡಿಸುತ್ತಿರುವ ದೃಶ್ಯ ನಿಜಕ್ಕೂ ಶ್ಲಾಘನೀಯ ಎನಿಸಿತು.





ನಾವು ರಾಣೇಬೆನ್ನೂರ ನಗರಕ್ಕೆ ವಾರದಲ್ಲಿ ಎರಡು ಮೂರು ಬಾರಿ ಕಾರ್ ತೆಗೆದುಕೊಂಡು ಬರುತ್ತಿದ್ದೆವು ಆದರೆ ಕಾರ್ ಪಾರ್ಕಿಂಗ್ ಮಾಡುವ ಸ್ಥಳದಲ್ಲಿ ಬರೀ ಬೈಕ್‌ಗಳೆ ಇರುತ್ತಿದ್ದವು ಹೀಗಾಗಿ ನಗರವನ್ನು ಬಿಟ್ಟು ಸುಮಾರು ಒಂದು ಅಥವಾ ಎರಡು ಕಿಲೋಮೀಟರ್ ದೂರದಲ್ಲಿ ವಾಹನನಿಲ್ಲಿಸಿ ಸಿಟಿಗೆ ಬರಬೇಕಾಗಿತ್ತು. ಆದರೆ ರಾಣೇಬೆನ್ನೂರ ಟ್ರಾಫಿಕ್ ಪೊಲೀಸರು ಈಗ ಕೈಗೊಂಡಿರುವ ಕ್ರಮ ನಮಗೆ ತುಂಬಾ ಸಂತೋಷವಾಗಿದೆ.
■ **ಮೋಹನ್ ಕೆ, ಗದಗ**

ನಗರದಲ್ಲಿ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಟ್ರಾಫಿಕ್ ಇಲಾಖೆ ಮುಂದೆಯೂ ನಿಯಮ ಉಲ್ಲಂಘಿಸುವ ವಾಹನ ಸವಾರರ ವಿರುದ್ಧ ಕ್ರಮ ಮುಂದುವರಿಸಲಾಗುವುದು ಹಾಗೂ ರಸ್ತೆ ಸುರಕ್ಷತೆ ಹಾಗೂ ಸಂಚಾರ ಶಿಸ್ತಿಗೆ ಸಾರ್ವಜನಿಕರು ಸಹಕಾರ ನೀಡಬೇಕು.
■ **ಕೃಷ್ಣಪ್ಪ ತೋಪಿನ, ಟ್ರಾಫಿಕ್ ಪಿಎಸ್‌ಐ**

ಟ್ರಾಫಿಕ್ ಪೊಲೀಸರ ಈ ವಿಶೇಷ ಕಾರ್ಯಾಚರಣೆ ನಡೆಸಿ ನಿಯಮ ಬಾಹಿರವಾಗಿ ನಿಲ್ಲಿಸಿದ್ದ ಬೈಕ್‌ಗಳಿಗೆ ಲಾಕ್ ಹಾಕುವ ಮೂಲಕ ವಾಹನ ಮಾಲೀಕರಿಗೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಿ. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಿ, ಮುಂದಿನ ದಿನಗಳಲ್ಲಿ ಸಂಚಾರ ನಿಯಮಗಳನ್ನು ಪಾಲಿಸುವಂತೆ ಎಚ್ಚರಿಕೆ ನೀಡಿದ್ದು ಒಳ್ಳೆಯದು ಎನ್ನುವುದು ಸಾರ್ವಜನಿಕರ ಅಭಿಪ್ರಾಯ.

ಟ್ರಾಫಿಕ್ ಪೊಲೀಸರ ಈ ಕ್ರಮದಿಂದ ರಸ್ತೆಗಳಲ್ಲಿ ವಾಹನ ಸಂಚಾರ ಸುಗಮಗೊಂಡಿದ್ದು, ಪಾರ್ಕಿಂಗ್ ವ್ಯವಸ್ಥೆಯಲ್ಲೂ ಶಿಸ್ತು ಕಂಡುಬಂದಿದೆ. ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಪೊಲೀಸರ ಕಾರ್ಯವನ್ನು ಶ್ಲಾಘಿಸಿದ್ದು, ಇಂತಹ ಕಾರ್ಯಾಚರಣೆಗಳು ನಿರಂತರವಾಗಿ ನಡೆಯಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ಕಾಮಗಾರಿಗೆ ಶಾಸಕ ಭೂಮಿಪೂಜೆ

**ಬ್ಯಾಡಗಿ:** ಸಾರ್ವಜನಿಕರಿಗೆ ಉತ್ತಮ ರಸ್ತೆ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಸಾರಿಗೆ ವಿದ್ಯುತ್ ಶಿಕ್ಷಣ ಸೇರಿದಂತೆ ಗ್ರಾಮೀಣ ಭಾಗದ ಎಲ್ಲ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿ ಕೊಡಲು ನಿರಂತರ ಶ್ರಮಿಸುವದಾಗಿ ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ಚಿಕ್ಕಣಜಿ ಗ್ರಾಮದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ 1 ಕೋಟಿ ರೂ.ವೆಚ್ಚದಲ್ಲಿ ಬ್ಯಾಡಗಿ ತಾಲೂಕಿನ ಬೀರೂರು ಸಮ್ಮಸಗಿ ರಾಜ್ಯ ಹೆದ್ದಾರಿ ನಂಬರ್ 76 ರಸ್ತೆಯ ಚಿಕ್ಕಣಜಿ ಗ್ರಾಮ ಪರಿಮಿತಿಯಲ್ಲಿ ಒಟ್ಟು 380 ಮೀ ಉದ್ದದ 6 ಮೀ ಅಗಲದ ಸಿಸಿ ರಸ್ತೆ ನಿರ್ಮಾಣ ಮತ್ತು 247 ಮೀ ಸಿಸಿ ಗಟಾರ ಮತ್ತು ಅದರ ಮೇಲೆ ಸ್ಲ್ಯಾಬ್ ಹಾಕುವುದು 10 ಟಿ ಉದ್ದದ ಮೂರು ಕಡೆ ಅಪ್ರೋಚ್ ಸಿಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದವರು.

ಗ್ರಾಮೀಣ ಭಾಗಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದ್ದು, ಉತ್ತಮ ಗುಣಮಟ್ಟದ ರಸ್ತೆ, ಕುಡಿಯುವ ನೀರು ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ.ರಸ್ತೆ ನಿರ್ಮಾಣ ಪೂರ್ಣಗೊಂಡ ಬಳಿಕ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ವ್ಯವಸ್ಥೆ ದೊರೆಯಲಿದ್ದು, ರೈತರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಕಾಮಗಾರಿಗಳನ್ನು ಹಂತ ಹಂತವಾಗಿಅನುಷ್ಠಾನಗೊಳಿಸಲಾಗುತ್ತಿದ್ದು, ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕಾರ್ಯ ಮುಂದುವರಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ಚನ್ನಬಸಪ್ಪ ಹುಲ್ಲತ್ತಿ, ಕಾಗಿನೆಲೆ ಬ್ಲಾಕ್ ಅಧ್ಯಕ್ಷ ಶಿವನಗೌಡ ಪಾಟೀಲ, ಶಂಭನಗೌಡ ಪಾಟೀಲ, ಮಂಜನಗೌಡ್ರ ಲಿಂಗನಗೌಡ್ರ, ಮಲ್ಲೇಶಪ್ಪ ಡಂಬಳ, ಕರಬಸಣ್ಣ ವಾಳದ, ಲಿಂಗರಾಜ ಕುಮ್ಮೂರ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



## ಮೊಬೈಲ್ ಗೀಳಿನಿಂದ ದೂರವಿರಿ

**ರಟ್ಟೀಹಳ್ಳಿ:** ಮಾಸೂರು ಗ್ರಾಮದ ಶ್ರೀಮತಿ ಎಸ್.ಬಿ.ಪಾಟೀಲ ಪದವಿ ಮಹಾವಿದ್ಯಾಲಯದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಬಿಎ, ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬಿಳ್ಕೊಡುಗೆ ಸಮಾರಂಭ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಸರ್ವಜ್ಞ ವಿದ್ಯಾಪೀಠ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಶೋಕಾ ಪಾಟೀಲ ವಹಿಸಿಕೊಂಡು ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಹಾಗೂ ಟಿವಿಗಳಿಂದ ದೂರವಿದ್ದು ಸತತ ಅಧ್ಯಯನ ಮಾಡಿ ಒಳ್ಳೆಯ ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತರಬೇಕೆಂದು ಹೇಳಿದರು. ಸಮಾರಂಭದ ಉದ್ಘಾಟನೆಯನ್ನು ರಟ್ಟೀಹಳ್ಳಿ ಪ್ರಿಯದರ್ಶಿನಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಜಿ ರಾಘವೇಂದ್ರ ನೆರವೇರಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಹಾವೇರಿಯ ಜಿಎಚ್ಪ ಪದವಿ ಮಹಾ ವಿದ್ಯಾಲಯದ ಕನ್ನಡ ಭಾಗದ ಮುಖ್ಯಸ್ಥರಾದ ಡಾ.ಶಮಂತ ಕುಮಾರ ಮಾತನಾಡಿದರು.

ವಿದ್ಯಾರ್ಥಿ ಒಕ್ಕೂಟದ ಸಭಾಪತಿಗಳಾದ ಕಾಲೇಜಿನ ಭೂಗೋಳಶಾಸ್ತ್ರ ಉಪನ್ಯಾಸಕ ರಾದ ಶ್ರೀ ಪ್ರಭಾಕರ ಇಂಗಳಗೊಂದಿ ವರದಿ ವಾಚಿಸಿದರು. ಸಂಸ್ಥೆಯ ನಿರ್ದೇಶಕರಾದ ಜಿ.ಎನ್.ಪಾಟೀಲ ವಿದ್ಯಾರ್ಥಿಗಳನ್ನು ಉದ್ದೇಶಿಸಿಮಾತನಾಡಿದರು.

ಸಮಾರಂಭದಲ್ಲಿ ಸರ್ವಜ್ಞ ವಿದ್ಯಾಪೀಠ ಸಂಸ್ಥೆಯ ನಿರ್ದೇಶಕರಾದ ಎಲ್ ಜಿ ಬಣಕಾರ್ ಹಾಗೂ ಉಪನ್ಯಾಸಕರಾದ ರೂಪಾ ರಾಂಪುರೆ, ಎಸ್ ಸಿ.ದೊಡ್ಡಮನಿ, ಎನ್ ವಾಯ್ ದೊಡ್ಡಮನಿ, ಉಮೇಶ್ ನಾಯಕ್, ಸಂತೋಷ್ ಕಡಕನಹಳ್ಳಿ, ಜಗದೀಶ್ ಗಾಳೇರ, ರಾಧಾ, ಫರ್ಜಾನ ಪಟೇಲ್, ಪ್ರವೀಣ್ ಚಳಗೇರಿ, ರಟ್ಟಿಹಳ್ಳಿ, ಬಡಿಗೇರ್, ಮಣಿಕಂಠ, ಏ ಜೆದೊಡ್ಮನಿ, ಭರನಮಗೌಡ ಎಲ್ ಎಚ್, ಟಿ ಕೆ.ನಾಮದೇವ ಮಂಜುನಾಥ್ ಪುಟ್ಟತಮ್ಮನವರ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಭಾಗ್ಯ ನಿರ್ವಹಿಸಿದರು ಸತೀಶ್ ಮಡಿವಾಳರ್ ಸ್ವಾಗತಿಸಿದರು. ಹೇಮಚಂದ್ರ ದೇವಾಂಗದ ವಂದಿಸಿದರು. ಸಮಾರಂಭದಲ್ಲಿ ಸರ್ವಜ್ಞ ವಿದ್ಯಾ ಪೀಠ ಸಂಸ್ಥೆಯ ನಿರ್ದೇಶಕರಾದ ಎಲ್ಜಿಬಣಕಾಹ ರ್ಾಗೂಉಪನ್ಯಾಸಕರಾದರೂಪಾರಾಂಪ ುರೆ, ಎಸ್ಸಿದೊಡ್ಡಮನಿ, ಎನ್ವಾಯ್ದೊಡ್ಡಮನಿ, ಉಮೇಶ್ನಾಯಕ್, ಸಂತೋಷ್ಕಡಕನಹಳ್ಳಿ, ಜಗದೀಶ್ಗಾಳೇರ, ರಾಧಾ, ಫರ್ಜಾನಪಟೇಲ್, ಪ್ರವೀಣ ಳಗೇರಿ, ರಟ್ಟಿಹಳ್ಳಿ, ಬಡಿಗೇರ್, ಮಣಿಕಂಠ, ಏಜೆದೊಡ್ಮನಿ, ಭರನಮ ಗೌಡಎಲ್‌ಎಚ್, ಟಿಕೆನಾಮದೇವ 'ಮಂಜುನಾಥ್ಪುಟ್ಟತಮ್ಮನವರಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಭಾಗ್ಯನಿರ್ವಹಿಸಿದರು.ಸ ತೀಶ್ಮಡಿವಾಳರ್ಸ್ವಾಗತಿಸಿದರುಹೇಮಚಂದ್ರದೇ ವಾಂಗದವಂದಿಸಿದರು



## ಶಿಬಿರದ ಸದುಪಯೋಗ ಪಡೆದುಕೊಳ್ಳಿ: ಉಪ್ಪಾರ

**ಬ್ಯಾಡಗಿ:** ಬಹುದೃಷ್ಟಿ ದೋಷ ಇರುವಂತಹ ಗ್ರಾಮೀಣ ಭಾಗದ ಜನತೆಗೆ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸುವುದು ಉತ್ತಮ ಕಾರ್ಯವಾಗಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಮಾಜಿ ಅಸಿಸ್ಟೆಂಟ್ ಗವರ್ನರ್ ಮಂಜುನಾಥ್ ಉಪ್ಪಾರ್ ಹೇಳಿದರು.

ಪಟ್ಟಣದ ಕದರಮಂಡಲಗಿ ರಸ್ತೆಯಲ್ಲಿರುವ ಸಮಗ್ರ ಸಮಾಜ ಕಾರ್ಯ ನಿರ್ವಹಣಾ ಕೇಂದ್ರ ಸ್ನೇಹ ಸದನದಲ್ಲಿ ರೋಟರಿ ಕ್ಲಬ್ ಶಂಕರ್ ಕಣ್ಣಿನ ಆಸ್ಪತ್ರೆ ಶಿವಮೊಗ್ಗ ಇವರ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.



ಕಣ್ಣಿನ ರೋಗಿಗಳಿಗೆ ಉಚಿತ ಕಣ್ಣಿನ ಶಿಬಿರ ಏರ್ಪಡಿಸಿದ್ದು ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ಜನತೆ ದೃಷ್ಟಿ ದೋಷದಿಂದ ಬಳಲುತ್ತಿದ್ದು, ಈ ರೀತಿ ಬಿಬಿರಗಳನ್ನು ಏರ್ಪಡಿಸುವುದರ ಮುಖಾಂತರ ದೃಷ್ಟಿ ದೋಷ ಇರುವವರಿಗೆ ಸೂಕ್ತ ಚಿಕಿತ್ಸೆ ನೀಡಲು ಸಹಕಾರಿ ಆಗುವುದು. ಪ್ರತಿ ತಿಂಗಳು ಈ ರೀತಿಯ ಶಿಬಿರ ಹಮ್ಮಿಕೊಳ್ಳಲಾಗಿದ್ದು ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕಣ್ಣಿನ ಶಿಬಿರದಲ್ಲಿ 67 ಜನ ಕಣ್ಣಿನ ತಪಾಸಣೆ ಮಾಡಿಸಿಕೊಂಡರು 20 ಜನರಿಗೆ ಕನ್ನಡಕ ಶಿಫಾರಸು ಮಾಡಲಾಯಿತು ಮತ್ತು 38 ಜನ ಶಿಬಿರಾರ್ಥಿಗಳಿಗೆ ಶಸ್ತ್ರ ಚಿಕಿತ್ಸೆಗೆ ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

ಈ ಸಂದರ್ಭದಲ್ಲಿ ಸ್ನೇಹ ಸದನದ ಶಿಕ್ಷಕಿ ಸರಸ್ವತಿ ಹಾಗೂ ಸಿಬ್ಬಂದಿ ಮತ್ತು ಬೆಂಟಿ ಕಾರ್ಯದರ್ಶಿ ಕಿರಣ್ ಮಾಳೇನಹಳ್ಳಿ ಮತ್ತು ನೇತ್ರ ಪರೀಕ್ಷಕ ಡಾಕ್ಟರ್ ಗಗನ್, ಪೂಜಾ. ಸುನಿಲ್. ರವಿಕುಮಾರ್ ಮತ್ತು ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಶಾಲಾ ಸಂಸತ್ತು ಚುನಾವಣೆ : ವಿದ್ಯಾರ್ಥಿಗಳ ಆಯ್ಕೆ

**ಗುತ್ತಲ:** ಸಮೀಪದ ಕಂಚಾರಗಟ್ಟಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ನೇ ಸಾಲಿನ ಶಾಲಾ ಸಂಸತ್ತು ಚುನಾವಣೆ 2026-27 ನೇ ಸಾಲಿನ ಶಾಲಾ ಸಂಸತ್ತು ಚುನಾವಣೆ ಪದಗ್ರಹಣ ನೆರವೇರಿತು.

ಶಾಲಾ ಸಂಸತ್ತು ಚುನಾವಣಾಧಿಕಾರಿಯಾಗಿ ಶಿಕ್ಷಕ ಚಂದ್ರಪ್ಪ ಕೋಣನತಂಬಿಗೆ 12 ಸ್ಥಾನಗಳಿಗೆ ಅಧಿಸೂಚನೆ ಹೊರಡಿಸಿದರು. ಚುನಾವಣೆ ಪ್ರಕ್ರಿಯೆ ಪ್ರಕಾರ 15 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲಾಯಿತು.

ನಂತರ ನಾಮಪತ್ರ ಪರಿಶೀಲನೆ ನಾಮಪತ್ರ ಹಿಂಪಡೆಯುವ ಪ್ರಕ್ರಿಯೆ ಮುಕ್ತಾಯವಾಗಿ. ಒಟ್ಟು 93.97 % ರಷ್ಟು ಮತದಾನವಾಯಿತು. ನಂತರ ಮತ ಎಣಿಕೆ ಕಾರ್ಯ ಮುಕ್ತಾಯಗೊಂಡು ವಿದ್ಯಾರ್ಥಿಗಳು ಆಯ್ಕೆಯಾದರು.

ಅರ್ಚನಾ ಬಸಪ್ಪ ಇದಿಯಮ್ಮನವರ ಪ್ರಧಾನ ಮಂತ್ರಿ, ಯೋಗೇಶ್ ನಿಂಗಪ್ಪ ಯತ್ನಳ್ಳಿ ಉಪ ಪ್ರಧಾನಿ ಹಾಗೂ ಸಂಪುಟ ದರ್ಜೆ ಮಂತ್ರಿಗಳಾಗಿ ಅಭಿಷೇಕ್ ಶಿವಾನಂದ್ ಬನ್ನಿಮಟ್ಟಿ, ಅಮೃತಾ ಪ್ರಕಾಶ ಗಬಗಡಿ, ನೂರಿಅಪ್ಸಾ ಮನ್ಸೂರ್ ಅಲಿ ಮೆಡ್ಲೇರಿ, ಲಲಿತಾ ಪ್ರಶಾಂತ್ ಹೊಳೆಯಪ್ಪನವರ, ರಾಜೇಶ್ವರಿ ದೇವಪ್ಪ ಮರಿಧ್ಯಾವಣ್ಣನವರ, ವಿಶ್ವ ಹನುಮಂತಪ್ಪ ಗಬಗಡಿ, ಮಹೇಶ ರಾಜಪ್ಪ ಪಕ್ಕೆದ, ಸಮರ್ಥ್ ವೀರಪ್ಪ ಗಬಗಡಿ, ಮಾಂತೇಶ್ ಮಂಜಪ್ಪ ದೊಡ್ಡನಿಂಗಪ್ಪನವರ, ಚಮನಲಿ ಇಲಾಯಿಸಾಬ ಮುಜಾವರ ಈ ಅಭ್ಯರ್ಥಿಗಳು ಬಹುಮತದಿಂದ ಆಯ್ಕೆಯಾಗಿ ಪದಗ್ರಹಣ ಹಾಗೂ ಪ್ರತಿಜ್ಞಾವಿಧಿ ಸ್ವೀಕರಿಸಿದರು.



ಮುಖ್ಯೋಪಾಧ್ಯಾಯ ವೀರಪ್ಪ ಸುಣಗಾರ, ಶಿಕ್ಷಕರಾದ ಜೆ.ಎಫ್. ಆಗಸರ, ಎಂ. ಎನ್. ಸೊಪ್ಪಿನ್, ಆರ್. ಕೆ. ಕಟ್ಟಿಮನಿ, ಎಂ.ಜಿ .ಮುಷ್ಠಿಗೇರಿ, ಸುಷ್ಮಾ ಆರಿಕಟ್ಟಿ ಸೇರಿದಂತೆ ಶಾಲೆಯ ಎಸ್ಡಿಎಂಸಿ ಹಾಗೂ ಗ್ರಾಮದ ಗಣ್ಯರು ಮತ್ತಿತರರು ಉಪಸ್ಥಿತರಿದ್ದರು.

## ಶಿಕ್ಷಣದಿಂದ ಸಮಾಜ ಅಭಿವೃದ್ಧಿ: ಸಲೀಂ

**ಹಾವೇರಿ:** ಶಿಕ್ಷಣದಿಂದ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಹೀಗಾಗಿ ಶಿಕ್ಷಣ, ಶಾಂತಿ, ನೆಮ್ಮದಿ, ಸಹಬಾಳ್ವೆ ಹಾಗೂ ಮಾನವೀಯತೆ ಬಗ್ಗೆ ಮಕ್ಕಳಿಗೆ ಜಾಗೃತಿ ಮೂಡಿಸಬೇಕು ಎಂಬ ಸಂದೇಶವನ್ನು ಪಾಲಕರಿಗೆ ಮೌಲಾನಾಗಳು ನೀಡಬೇಕು ಎಂದು ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯಸಚೇತಕ ಸಲೀಂ ಅಹ್ಮದ್ ಹೇಳಿದರು.

ಇಲ್ಲಿನ ರಜನಿ ಕನ್ವೆನ್ಷನ್ ಹಾಲ್‌ನಲ್ಲಿ ರಾಜ್ಯಮಟ್ಟದ ಮೌಲಾನಾಗಳ ಧಾರ್ಮಿಕ ಮತ್ತು ಸಾಮಾಜಿಕ ಸೇವೆಗಳ ಕುರಿತು ಬೃಹತ್ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲ ಬಾರಿಗೆ ಹಾವೇರಿಯಲ್ಲಿ ಉಲಮಾ ಅವರನ್ನು ಕರೆದು ಕಾರ್ಯಕ್ರಮ ಮಾಡುತ್ತಿರುವುದು ಶ್ಲಾಘನೀಯ. ಉಲಮಾದವರ ಸಮಸ್ಯೆಗಳು ಹಾಗೂ ಬೇಡಿಕೆಗಳ ಪಟ್ಟಿ ಕೊಟ್ಟಿದ್ದೀರಿ. ಅವುಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಮ್ಮ ಸಮುದಾಯಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದರು.

ಶಾಸಕ ಶ್ರೀನಿವಾಸ ಮಾನೆ, ಹೆಸ್ಕಾಂ ಅಧ್ಯಕ್ಷ ಅಜ್ಜಂಫೀರ್ ಖಾದ್ರಿ, ಶಾಸಕ ಯಾಸೀರ್‌ಖಾನ್ ಪಠಾಣ ಮಾತನಾಡಿದರು. ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯ ವಕ್ಫ ಮಂಡಳಿಯ ಅಧ್ಯಕ್ಷ, ಕಲುಬುರಗಿಯ ಹಜರತ್ ಖ್ವಾಜಾ ಬಂದೇನವಾಜಾ ದರ್ಗಾದ ಉಲಮಾ ಸೈಯದ್ ಮೊಹಮ್ಮದ ಅಲಿ ಅಲ್‌ಹುಸೇನಿ ಮಾತನಾಡಿದರು.



ರಾಜ್ಯ ಉಲಮಾ ಸೊಸೈಟಿ ಅಧ್ಯಕ್ಷರಾದ ಮೌಲಾನಾ ಸೈಯದ್ ಮೊಯಿನುದ್ದೀನ ಅಧ್ಯಕ್ಷತೆ ವಹಿಸಿದ್ದರು. ಸಮಾವೇಶದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ, ಮೌಲಾನಾ ಫಾಝಿಲ್, ಸೈಯದ್‌ಷಾ ಹೈದರ್‌ವಲಿವುಲ್ಲಾ ನಬೀರಾ ಖಾದ್ರಿ, ಮಾಜಿ ಶಾಸಕ ವಿ.ಎಸ್. ಪಾಟೀಲ, ಹಜರತ್‌ಅಲಿ ಸುಳ್ಳ, ಹಜರತ್ ಸೈಯದ್ ಮೈನುದ್ದೀನ್ ಸರಖಾಜಿ, ಮೌಲಾನಾ ಅಬ್ದುಲ್ ಅಲೀಮ್‌ಸಾಬ್, ಸೈಯದ್ ದಾದಾಪೀರ್, ಮೌಲಾನಾ ಇಬ್ರಾಹಿಂಸಾಬ್, ಹಾಫೀಜ್ ಸಾಕಮುಲ್ಲಾ, ಜಾಫರ್‌ರಜಾ, ಮಹ್ಮದ್ ರಿಜ್ವಾನ್, ಗುಲಾಮ್ ಮುಸ್ತಫಾ, ಇನಾಯತ್ ಉಲ್ಲಾ, ರಹಮತ್‌ರಜಾ, ಜಹಿಮುದ್ದೀನ, ಅಂಜುಮನ್ ಕಮೀಟಿ ಸದಸ್ಯ ಜಮೀರ್ ಅಹ್ಮದ್ ಜಿಗರಿ ಸೇರಿದಂತೆ ಇತರರು ಇದ್ದರು.

## ರೇವಂತ ಉಜನಿಗೆ ಬೆಳ್ಳಿ ಪದಕ

**ಹಾವೇರಿ:** ಜಿಲ್ಲೆಯ ಬ್ಯಾಡಗಿ ಪಟ್ಟಣದ 9 ವರ್ಷದ ಬಾಲಕ ರಾಷ್ಟ್ರ ಮಟ್ಟದ ಸಬ್ ಜ್ಯೂನಿಯರ್ ಕಾಟಾ ವಿಭಾಗದ ಕರಾಟೆ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕವನ್ನು ಪಡೆಯುವ ಮೂಲಕ ರಾಜ್ಯ ಹಾಗೂ ಹಾವೇರಿ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಹಾವೇರಿ ಜಿಲ್ಲಾ ಕ್ರೀಡಾ ಸಂಸ್ಥೆಯ ಅಧ್ಯಕ್ಷ ನಾರಾಯಣ ಪೂಜಾರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಬ್ಯಾಡಗಿ ಪಟ್ಟಣದಲ್ಲಿ ವಾಸವಿರುವ ಆಟೋ ಚಾಲಕ ರಘು ಹಾಗೂ ತಾಯಿ ರೇಖಾ ಅವರ ಮಗ ರೇವಂತ್ ಉಜನಿ ಎಂಬ ಒಂಭತ್ತು ವರ್ಷದ ಬಾಲಕನೇ ಈ ಸಾಧನೆ ಮಾಡಿದ್ದಾರೆ. ಕಳೆದ ಜೂನ್ 5 ಹಾಗೂ 6ರಂದು ಉತ್ತರಾಖಂಡ ರಾಜ್ಯದ ಡೆಹ್ರಾಡೂನ್‌ನಲ್ಲಿ ನಡೆದ ಕೆ.ಐ.ಓ ಸಬ್ ಜ್ಯೂನಿಯರ್-ಕೆಡೆಟ್- ಜ್ಯೂನಿಯರ್ ಕರಾಟೆ ನ್ಯಾಷನಲ್ ಲೆವೆಲ್ ಚಾಂಪಿಯನ್‌ಶಿಪ್ ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಸಿದ್ದರು. 9 ವರ್ಷದ ಸಬ್ ಜ್ಯೂನಿಯರ್ ಕಾಟಾ ವಿಭಾಗದಲ್ಲಿ ರೇವಂತ ಉಜನಿ ಬೆಳ್ಳಿ ಪದಕವನ್ನು ಪಡೆದುಕೊಂಡು ಜಿಲ್ಲೆ ಹಾಗೂ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅಲ್ಲದೇ ಈ ಬಾಲಕ ಸತತ ಎರಡನೇ ಬಾರಿ ರಾಷ್ಟ್ರ ಮಟ್ಟದಲ್ಲಿ ಬೆಳ್ಳಿ ಪದಕ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕ್ರೀಡಾ ಸಂಸ್ಥೆಯ ಉಪಾಧ್ಯಕ್ಷೆ ಮನಿಷಾ ಕಬ್ಬೂರ ಮಾತನಾಡಿದರು. ರಫ್ರಿ ಕಮಿಷನ್ ಚೆರ್‌ಮೆನ್ ಪ್ರಕಾಶ ಉಜನಿಕೊಪ್ಪ ಮಾತನಾಡಿ,ರಾಷ್ಟ್ರ ಮಟ್ಟದ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾ ಕ್ರೀಡಾ ಕರಾಟೆ ಸಂಸ್ಥೆಯಿಂದ ಗೌರವಿಸಿ, ಪ್ರೋತ್ಸಾಹಧನ ನೀಡಲಾಗಿದೆ ಎಂದು ತಿಳಿಸಿದರು.ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಸಂಸ್ಥೆಯ ಕಾರ್ಯದರ್ಶಿ ಪವನ್‌ಕುಮಾರ ವಿ.ಜೆ., ಚೆರ್‌ಮೆನ್ ದಿಳ್ಳೆಪ್ಪ ಅಂಬಿಗೇರ, ಸ್ಪೋರ್ಟ್ಸ್ ಕಮಿಷನ್ ಚೆರಮೆನ್ ಸಲೀಂ ಪಾಟಿವೇಗಾರ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಶಾಸಕರಿಂದ ಸಂಘಟನೆ ಹತ್ತಿಕ್ಕುವ ಪ್ರಯತ್ನ: ಪಾಟೀಲ

**ಹಾನಗಲ್ಲ:** ಎಫ್‌ಐಆರ್ ತಂತ್ರ ಬಳಸಿ ನಮ್ಮೂರು ನಮ್ಮವರ ಹೋರಾಟದ ಸಂಘಟನೆಯನ್ನು ಹತ್ತಿಕ್ಕುವ ಮೂಲಕ ಹಾನಗಲ್ಲ ಶಾಸಕರು ನಮ್ಮನ್ನು ಕೆಣಕಿದ್ದಾರೆ ಎಂದು ಬೆಂಗಳೂರ ಹೈಕೋರ್ಟ್ ನ್ಯಾಯವಾದಿ ಹಾಗೂ ಸಂಘಟನೆಯ ಸಂಸ್ಥಾಪಕ ಸಂದೀಪ್ ಪಾಟೀಲ ಕಿಡಿಕಾರಿದರು.

ಪಟ್ಟಣದ ಅವರ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತಚೇಗೆ ಹಾನಗಲ್ಲ ತಾಲೂಕು ಆಸ್ಪತ್ರೆಯಲ್ಲಿ ಜನಜಾಗೃತಿ ಮೂಡಿಸುವ ಹಾಡೊಂದನ್ನು ಮಾಡಲಾಗಿತ್ತು ಆ ಕಿರುಚಿತ್ರದ ಹಾಡಿನ ಜವಾಬ್ದಾರಿ ಹೊತ್ತವರ ಮೇಲೆ ಎಫ್‌ಐಆರ್ ದಾಖಲಿಸುವ ಬದಲು ನಟಿಸಿದ ಕಾಲೇಜ್ ವಿದ್ಯಾರ್ಥಿಗಳಿಗೆ ನೋಟಿಸ್ ನೀಡಿರುವುದು ಖೇಧದ ಸಂಗತಿ. ನಾವು ಸ್ವಾಭಿಮಾನಿಗಳು, ಹೊರಗಿನಿಂದ ಬಂದ ಶಾಸಕರಿಗೆ ಈ ತಾಲೂಕಿನ ಜನರ ಬಗ್ಗೆ ಕಾಳಜಿ ಪ್ರೀತಿ ಇಲ್ಲ, ಇನ್ನು ನಾವು ಯಾವುದೇ ಷಡ್ಯಂತ್ರಕ್ಕೆ ಜಗ್ಗುವುದಿಲ್ಲ, ಅಲ್ಲದೇ ಇತ್ತಿಚೇಗೆ ಕಿರುಚಿತ್ರದ ಹಾಡು ಬಿಡುಗಡೆಯನ್ನು

ಶೇಷಗಿರಿಯ ಸಿ.ಎಂ. ಉದಾಸಿ ಕಲಾಕ್ಷೇತ್ರದಲ್ಲಿ ಮಾಡಲಾಗಿತ್ತು ಅಲ್ಲಿಯೂ ಸಹಿತ ಶಾಸಕರು ಹರಿಹಾಯಿದ್ದಾರೆಂದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಾನಗಲ್ಲ ಆಸ್ಪತ್ರೆಯಲ್ಲಿ ವೈದ್ಯರಿಲ್ಲ, ಔಷಧ ಇಲ್ಲ, ಕೊಠಡಿ ದುರಸ್ತಿ ಮಾಡಲಾಗುತ್ತಿಲ್ಲ. ಇದೆಲ್ಲವನ್ನೂ ಬಿಟ್ಟು ಯಾರದೋ ಮೇಲೆ ಎಫ್ ಐಆರ್ ಹಾಕಲು ಆಸ್ಪತ್ರೆ ಸಿಬ್ಬಂದಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ.

ಹಾನಗಲ್ಲ ತಾಲೂಕಿನಲ್ಲಿ ಯಾರದೇ ಮೇಲೆ ಇಂತಹ ಎಫ್ ಐಆರ್ ದಾಖಲಾದರೆ ನಾನೇ ಮುಂದೆ ನಿಂತು ಅವರಿಗೆ ಸಹಾಯ ಮಾಡುತ್ತೇನೆ ಎಂದು ಸಂದೀಪ ಪಾಟೀಲ ಭರವಸೆ ನೀಡಿದರು.

ಜೆಡಿಎಸ್ ತಾಲೂಕು ಅಧ್ಯಕ್ಷ ರಾಮನಗೌಡ ಪಾಟೀಲ, ಸಿದ್ದನಗೌಡ ಪಾಟೀಲ, ವಾಸಣ್ಣ ಮೂಡಿ ಮಾತನಾಡಿದರು. ಮಲ್ಲನಗೌಡ ಪಾಟೀಲ, ವಾಸುದೇವ ಮೂಡಿ, ಅಣ್ಣಪ್ಪ ಚಾಕಾಪುರ, ಡಿ.ಸಿ.ಪಾಟೀಲ, ಮಾಲತೇಶ ಗಂಟೇರ, ನಾಗನಗೌಡ ಪಾಟೀಲ, ಸಿದ್ದಲಿಂಗಪ್ಪ ಶಂಕ್ರಿಕೊಪ್ಪ, ಎಸ್.ಪಿ. ಸಂಗೂರಮಠ, ವಿಜಯೇಂದ್ರ ಕನವಳ್ಳಿ ಇದ್ದರು.



# ಪಾರಂಪರಿಕ ಕೃಷಿಯಿಂದ ಆದಾಯ ದ್ವಿಗುಣ: ಡಿವಿಎಸ್

• **ಶಿರಹಟ್ಟಿ:** ಐಟಿಬಿಟಿ ಕಂಪನಿಯಲ್ಲಿ ಉದ್ಯೋಗ ಮಾಡಿ, ಕೈ ತುಂಬಾ ಸಂಬಳ ಪಡೆದು ಐಷಾರಾಮಿ ಜೀವನ ನಡೆಸಬಹುದು ಎಂದು ಕನಸ್ಸು ಕಾಣುತ್ತಿರುವ ಇಂದಿನ ಯುವಕರು, ನಗರದಲ್ಲಿ ಮಿತಿ ಮೀರಿದ ಅಶುದ್ಧ ಗಾಳಿ, ಫ್ಲೋರೈಡ್ ನೀರು, ಕಲುಷಿತ ಆಹಾರ ಸೇವನೆಗೆ ಬೇಸತ್ತು ಅಲ್ಲಿಯ ಜನ ಮರಳಿ ಗ್ರಾಮಕ್ಕೆ ಬಂದು ಪಾರಂಪರಿಕ ಕೃಷಿಯಿಂದ ಆದಾಯ ದ್ವಿಗುಣಗೊಳಿಸಿ ನೆಮ್ಮದಿ ಜೀವನ ನಡೆಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹೇಳಿದರು.

ತಾಲೂಕಿನ ಕಡಕೋಳ ಗ್ರಾಮದ ಹತ್ತಿರ ಕಪ್ಪತ್ತಗುಡ್ಡದ ತಪ್ಪಲಿನಲ್ಲಿ ಜಿಲ್ಲಾ ಬಿಜೆಪಿ ರೈತ ಮೋರ್ಚಾ ವತಿಯಿಂದ ನೈಸರ್ಗಿಕ ಕೃಷಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಯುವಕರು ನಗರದ ವ್ಯಾಮೋಹ ಬಿಡಬೇಕು. ದುಡ್ಡಿನಿಂದ ನೆಮ್ಮದಿ, ಸಂತಸ, ಶಾಂತಿ ಕೊಂಡುಕೊಳ್ಳಲು ಸಾಧ್ಯವಿಲ್ಲ. ಕೃಷಿ ಇಲ್ಲದಿದ್ದರೆ ಮಾನವ ಜೀವನ ಶೂನ್ಯ. ರೈತರು ಮಣ್ಣಿನ ಫಲವತ್ತತೆ ರಕ್ಷಿಸಬೇಕು. ಕ್ರಿಮಿನಾಶಕ ಗೊಬ್ಬರ ಕಡಿಮೆ ಬಳಸಬೇಕು. ಸಗಣಿ, ಎರೆಹುಳು ಗೊಬ್ಬರ, ತಿಪ್ಪೆಯ ಸಾವಯವ ಗೊಬ್ಬರ ಹೆಚ್ಚು ಬಳಸಿ ಮಣ್ಣಿನ ಫಲವತ್ತತೆ ರಕ್ಷಣೆಯ ಜೊತೆ ಉತ್ತಮ ಇಳುವರಿ ಪಡೆಯಬಹುದು. ರೈತರು ದಿಢೀರ್ ಆದಾಯ ದ್ವಿಗುಣಗೊಳಿಸುವ ಭರದಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರ ಬಳಸಿ ತಿನ್ನುವ ಆಹಾರವನ್ನು ವಿಷಯುಕ್ತವಾಗಿ ಮಾಡುತ್ತಿದ್ದಾರೆ. ಆದ್ದರಿಂದ ರೈತರು ನೈಸರ್ಗಿಕವಾಗಿ ಸಿಗುವ ಗೊಬ್ಬರ ಬಳಸಿ ಅತ್ಯುತ್ತಮ ಫಸಲು ಬೆಳೆಯಬೇಕು ಎಂದು ಹೇಳಿದರು. ಈ ವೇಳೆ ಮಾಜಿ ಸಚಿವ ಸಿ.ಸಿ.ಪಾಟೀಲ ಮತ್ತು ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ. ಏಷ್ಯಾ ಖಂಡದಲ್ಲೇ ಅತ್ಯಂತ ಪರಿಶುದ್ಧವಾದ ಗಾಳಿ ಸಿಗುವುದು ಕಪ್ಪತ್ತಗುಡ್ಡದ ತಪ್ಪಲಿನಲ್ಲಿ. ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ.




> ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಕೃಷಿ ಉತ್ಪಷ್ಟತೆಗೆ 3 ಲಕ್ಷ ಸಾವಿರ ಕೋಟಿಗೂ ಅಧಿಕ ಅನುದಾನ ಬಿಡುಗಡೆ ಮಾಡುತ್ತಿದ್ದಾರೆ. ಎಲ್ಲ ರೈತರು ಸಬ್ಸಿಡಿ ದರದಲ್ಲಿ ಕೃಷಿ ಯಂತ್ರ, ಬೀಜ ಗೊಬ್ಬರ ಸೇರಿ ಇನ್ನಿತರ ಸಾಮಗ್ರಿಗಳನ್ನು ಪಡೆದು ಸುಲಭ ಕೃಷಿ ವಿಧಾನ ಮಾಡುವ ಮೂಲಕ ಆರ್ಥಿಕವಾಗಿ ಸದೃಢರಾಗಬೇಕು.
> ■ **ಡಿ.ವಿ.ಸದಾನಂದಗೌಡ,** ಮಾಜಿ ಮುಖ್ಯಮಂತ್ರಿ

ಹೀಗಾಗಿ ರೈತರು ರಾಸಾಯನಿಕ ಗೊಬ್ಬರ ಕಡಿಮೆ ಪ್ರಮಾಣದಲ್ಲಿ ಬಳಸಿ, ಸಾವಯವ ಗೊಬ್ಬರ ಹೆಚ್ಚು ಬಳಸಿ ಸಮೃದ್ಧ ಬೆಳೆ ಬೆಳೆಯಬೇಕು. ರೈತರು ಸಮಗ್ರ ಕೃಷಿ ಕಡೆ ಹೆಚ್ಚು ಗಮನಹರಿಸಬೇಕು. ಒಂದು ಬೆಳೆ ನಷ್ಟವಾದರೆ ಇನ್ನೊಂದು ಬೆಳೆ ಕೈ ಹಿಡಿಯುತ್ತದೆ. ನೌಕರರಿಗಿಂತ ಹೆಚ್ಚು ಆದಾಯ ಪಡೆಯಬಹುದು ಎಂದು ಹೇಳಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಡಿ.ವೈ. ಹುನಗುಂದ, ಶಿರಹಟ್ಟಿ ಮಂಡಲ ಅಧ್ಯಕ್ಷ ಸುನೀಲ್ ಮಹಾಂತಶೆಟ್ಟರ, ಜಾನು ಲಮಾಣಿ, ಭೀಮಸಿಂಗ ರಾಠೋಡ, ಶಿವಪ್ರಕಾಶ ಮಹಾಜನಶೆಟ್ಟರ, ಫಕೀರೇಶ ರಟ್ಟಿಹಳ್ಳಿ, ಸುರೇಶ ಕುಂಬಾರ, ದೇವರೆಡ್ಡಿ ಅಗಸನಕೊಪ್ಪ, ಸರೋಜಮ್ಮ ಅಗಸನಕೊಪ್ಪ, ಶಂಕರ ಮರಾಠಿ, ಬಸವರಾಜ ನಾವಿ ಸೇರಿದಂತೆ ನೂರಾರು ರೈತರು, ಮುಖಂಡರು ಇದ್ದರು.

# ಜೂ.17ರಂದು ಬೆಳ್ಳಿರಥ ಸಮರ್ಪಣೆ

• **ಬಾದಾಮಿ:** 106 ಕೆಜಿ ಮೌಲ್ಯದ ನೂತನ ಬೆಳ್ಳಿರಥವನ್ನು ಜೂ.17ರಂದು ಬುಧವಾರ ಬನಶಂಕರಿದೇವಿಗೆ ಸಮರ್ಪಣೆ ಮಾಡಲಾಗುತ್ತಿದೆ ಎಂದು ಶ್ರೀ ಬನಶಂಕರಿದೇವಸ್ಥಾನ ಟ್ರಸ್ಟ್ ಕಮಿಟಿ ಚೇರಮನ್ ವೆಂಕಟೇಶ ಪೂಜಾರ ತಿಳಿಸಿದರು.

ಅವರು ಭಾನುವಾರ ಸಂಜೆ ಸಮೀಪದ ಬನಶಂಕರಿದೇವಸ್ಥಾನ ಟ್ರಸ್ಟ್ ಕಚೇರಿಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಭಕ್ತರ ಹಾಗೂ ಅರ್ಚಕರ ಬಹುದಿನಗಳ ಆಶಯದಂತೆ ದೇವಸ್ಥಾನದಲ್ಲಿ ಭಕ್ತರ ಸಹಕಾರ ಮತ್ತು ಪ್ರೇರಣೆಯಿಂದ ಭಕ್ತರ ದೇಣಿಗೆಯಿಂದ ಒಂದು ವರ್ಷದ ಒಳಗೆ ಬೆಳ್ಳಿ ಲೇಪನ ರಥವನ್ನು ನಿಪ್ಪಾಣಿಯ ಸುರೇಶ ಶೆಟ್ಟಿಯವರು ನಿರ್ಮಾಣ ಮಾಡಿದ್ದಾರೆ.

ಜೂ.16ರಂದು ಮತ್ತು ಜೂ.17ರಂದು ಎರಡು ದಿನ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಪೂಜೆ ಮುಗಿದ ನಂತರ ಜೂನ್ 17ರಂದು ಮಧ್ಯಾಹ್ನ 12.45 ಕ್ಕೆ ಸಮರ್ಪಣೆ ಮಾಡಲಾಗುವುದು. ಕುಮಟಾದಲ್ಲಿ ಸಾಗವಾನಿ ರಥ ಮಾಡಿಸಿ ಅದರ ಮೇಲೆ 106 ಕೆಜಿಯ ಶುದ್ಧ ಬೆಳ್ಳಿಯ ಲೇಪನ ಮಾಡಲಾಗಿದೆ.



ಸುಮಾರು 15 ಲಕ್ಷ ತಯಾರಿಕೆ ಮಜೂರಿ ನೀಡಿ ನೂತನ ಬೆಳ್ಳಿ ರಥದ ದೇವಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಸ್ಥಾಪಿಸಿ ರಥೋತ್ಸವವನ್ನು ಸ್ಥಾಪಿಸಲಾಗುವುದು. ಸಿಂಹದ ಲಾಂಛನ ಮತ್ತು ಅಷ್ಟಲಕ್ಷ್ಮೀಯರ ಚಿತ್ರ ರಚಿಸಲಾಗಿದೆ. ಸುಮಾರು 5ರಿಂದ 6 ಕೋಟಿ ರೂ. ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ. ವಿವಿಧ ರಾಜ್ಯಗಳ ಸುಮಾರು 25 ಜನ ಅಕ್ಕಸಾಲಿಗರು ಸುಮಾರು 6 ತಿಂಗಳಿನಿಂದ ಬೆಳ್ಳಿ ರಥ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು.

ಜೂ.16ರಂದು ವಿವಿಧಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಜೂ.17ರಂದು ಬೆಳಗ್ಗೆ 10 ಗಂಟೆಗೆ ವಿವಿಧ ಪೂಜಾ ಕಾರ್ಯಕ್ರಮಗಳ ನಂತರ ಮಧ್ಯಾಹ್ನ 12.45 ಗಂಟೆಗೆ ನಡೆಯುವ ದೇವಿ ರಥ ಸಮರ್ಪಣೆ ಬೃಹತ್ ಕಾರ್ಯಕ್ರಮದಲ್ಲಿ ಭಕ್ತಾಧಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಪೂಜಾರ ಮನೆತನ ಕುಟುಂಬಸ್ಥರಾದ ಮಹೇಶ, ಮಹಾಂತೇಶ, ವಿದ್ಯಾನಂದ, ಶಂಕರ, ಲಕ್ಷ್ಮಣ, ಚಿದಂಬರ, ಕಿರಣ, ರಮೇಶ, ಶ್ರೀನಿವಾಸ, ಶ್ರೀರಂಗ, ಉದಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೃತಕ ಬುದ್ಧಿಮತ್ತೆ ಸಂಶೋಧನೆ: ಬಿವಿವಿಎಸ್ ಕಾಲೇಜಿನ ಸಾಧನೆ

• **ಬಾಗಲಕೋಟೆ:** ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ (ಬಿವಿವಿಎಸ್) ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯು ರಾಷ್ಟ್ರಮಟ್ಟದಲ್ಲಿ ಮತ್ತೊಂದು ಮಹತ್ವದ ಸಾಧನೆ ಮಾಡಿದೆ.



ಕಾಲೇಜಿನ ಕಲಿಕಾ ವೈದ್ಯೆಯಾದ ಡಾ. ಸೃಷ್ಟಿತೋಟದ ಮಂಡಿಸಿದ 'ಹೋಮಿಯೋಪಥಿ ವೈದ್ಯ ಪದ್ಧತಿಯಲ್ಲಿ ಕೃತಕ ಬುದ್ಧಿಮತ್ತೆ' ಎಂಬ ವೈದ್ಯಕೀಯ ಸಂಶೋಧನಾ ಪ್ರಬಂಧವು ಅಂತಾರಾಷ್ಟ್ರೀಯ ಮಟ್ಟದ ವೈದ್ಯಕೀಯ ಸಂಶೋಧನಾ ಪತ್ರಿಕೆಯಾದ ಇಂಟರ್ ನ್ಯಾಷನಲ್ ಜರ್ನಲ್ ಆಫ್ ಇನೋವೇಟಿವ್ ರಿಸರ್ಚ್ ಇನ್ ಟೆಕ್ನಾಲಜಿಯಲ್ಲಿ ಪ್ರಕಟಗೊಂಡಿದೆ.

ಈಸಂಶೋಧನಾಕಾರ್ಯಕ್ಕೆಕಾಲೇಜಿನಪ್ರಾಧ್ಯಾಪಕಿಡಾ.ಫಾತಿಮಾ ಬಾಲಸಿಂಗ ಅವರು ಮಾರ್ಗದರ್ಶನ ನೀಡಿದ್ದು, ಹೋಮಿಯೋಪಥಿ ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಅದರ ಸಾಧ್ಯತೆಗಳ ಕುರಿತು ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಈ ಸಾಧನೆಯು ಬಿವಿವಿಎಸ್ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯದ ಶೈಕ್ಷಣಿಕ ಹಾಗೂ ಸಂಶೋಧನಾ ಕ್ಷೇತ್ರದ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಪ್ರಾಚಾರ್ಯ ಡಾ. ಅರುಣ ಹೂಲಿ ತಿಳಿಸಿದ್ದಾರೆ.



## ಕಿರುಸುದ್ದಿ

### ಮಕ್ಕಳ ಕಳ್ಳನೆಂದು ಥಳಿಸಿದ ಗ್ರಾಮಸ್ಥರು

• **ಹಾವೇರಿ/ರಾಣೇಬೆನ್ನೂರ:** ಸಂಶಯಾಸ್ಪದವಾಗಿ ತಿರುಗಾಡುವುದರ ಜೊತೆಗೆ ಎರಡು ಮಕ್ಕಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೋರ್ವನನ್ನು ಗ್ರಾಮಸ್ಥರು ತಡೆದು ಮಕ್ಕಳ ಕಳ್ಳನೆಂದು ಥಳಿಸಿದ ಘಟನೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರ ತಾಲೂಕಿನ ಚೌಡಯ್ಯದಾನಪುರ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದ ವ್ಯಕ್ತಿ ಹುಬ್ಬಳ್ಳಿ ತಾಲೂಕಿನ ತಾರಿಹಾಳ ಗ್ರಾಮದ ವಿರೇಶ ಬಡಿಗೇರ ಎಂದು ತಿಳಿದು ಬಂದಿದೆ.ಈತನನು ಚೌಡಯ್ಯದಾನಪುರ ಗ್ರಾಮದಲ್ಲಿ ಅನ್ನಸಂತರ್ಪಣೆ ಮಾಡಲು ಬಂದಿರುವೆ ನನ್ನ ಬರ್ಥಡೆ ಇದೆ ಎಂದು ಅನುಮಾನಾಸ್ಪದ ಹೇಳಿಕೆ ನೀಡುತ್ತಿದ್ದನು. ಹೀಗಾಗಿ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ತಿಳಿಸಿದ್ದಾರೆ. ಪೊಲೀಸರು ಸ್ಥಳಕ್ಕಾಗಮಿಸಿ ಅವನನ್ನು ವಿಚಾರಿಸಿದಾಗ ಸರಿಯಾಗಿ ಮಾಹಿತಿ ಸಮರ್ಪಕ ಉತ್ತರ ನೀಡದೆ ಇರುವುದನ್ನ ಅರಿತು ಪೊಲೀಸರು ಠಾಣೆಗೆ ಕರೆದೊಯ್ದಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.



### ಹೊಸಪೇಟೆಯಲ್ಲಿ ವ್ಯಕ್ತಿಯ ಭೀಕರ ಕೊಲೆ

• **ವಿಜಯನಗರ:** ಹೊಪಸಪೇಟೆಯ ಎಂ.ಪಿ.ಪ್ರಕಾಶ್ ನಗರದಲ್ಲಿ ಯುವಕನೋರ್ವನನ್ನು ಅಟ್ಟಾಡಿಸಿ, ಚಾಕುವಿನಿಂದ ಇರಿದು ಭೀಕರವಾಗಿ ಕೊಲೆ ಮಾಡಿರುವ ಘಟನೆ ನಡೆದಿದೆ ಶನಿವಾರ ತಡ ರಾತ್ರಿ ನಡೆದಿದೆ.



ಕೊಲೆಗೀಡಾದ ಯುವಕನನ್ನು ಹಾರ್ಡ್‌ವೇರ್ ಅಂಗಡಿ ಮಾಲೀಕ ಯೂನೂಸ್ ಎಂದು ಗುರುತಿಸಲಾಗಿದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಕೃತ್ಯ ಎಸಗಿದ ಇಬ್ಬರು ಆರೋಪಿಗಳು ಬಳಸಿದ ಚಾಕು ಸಮೇತ ನೇರವಾಗಿ ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾರೆ.

**ಠಾಣೆಗೆ ತೆರಳಿ ಶರಣಾದ ಆರೋಪಿಗಳು**

ಹೊಸಪೇಟೆಯ ಖಾಜಾ ಮತ್ತು ಇರ್ಫಾನ್ ಎಂಬ ಆರೋಪಿಗಳು 'ನಾವು ಕೊಲೆ ಮಾಡಿ ಬಂದಿದ್ದೇವೆ' ಎಂದು ಪೊಲೀಸರ ಮುಂದೆ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ.

ಯೂನುಸ್ ಕೊಲೆಯಾಗಿರುವ ಬಗ್ಗೆ ಸುದ್ದಿ ತಿಳಿಯುತ್ತಿದ್ದಂತೆ ಸಂಬಂಧಿಕರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಯೂನುಸ್ ಅವರ ತಂದೆ ನಜೀರ್ ಅಹಮ್ಮದ್, ನನ್ನ ಮಗ ತಾನಾಯ್ತು, ತನ್ನ ಕೆಲಸವಾಯ್ತು ಎಂದು ಹಾಡ್ ವೇರ್ ಅಂಗಡಿ ನಡೆಸಿಕೊಂಡಿದ್ದ. ಅವನಿಗೆ ಈಗಾಗಲೇ ಒಂದು ಮಗುವಿದ್ದು, ಪತ್ನಿ ಈಗ ಗರ್ಭಿಣಿಯಾಗಿದ್ದಾಳೆ. ರಾತ್ರಿ 9:45ಕ್ಕೆ ಕರೆ ಮಾಡಿ ಊಟಕ್ಕೆ ಬರ್ತಿಯಾ ಎಂದು ಕೇಳಿದ್ದಕ್ಕೆ, ಇನ್ನೊಂದು ಹತ್ತು ನಿಮಿಷದಲ್ಲಿ ಬರುತ್ತೇನೆ ಅಪ್ಪ ಎಂದಿದ್ದ. ಅಷ್ಟರಲ್ಲೇ ಈ ದುರಂತ ಸಂಭವಿಸಿದೆ. ಕೊಲೆಗೆ ನಿಖರ ಕಾರಣ ಏನೆಂಬುದು ನಮಗೆ ತಿಳಿಯುತ್ತಿಲ್ಲ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಅವರು ಕಣ್ಣೀರು ಹಾಕುತ್ತಲೇ ಆಗ್ರಹಿಸಿದರು. ಈ ಕುರಿತು ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಜೆ ಹಿನ್ನೆಲೆ ತಪ್ಪಿದ ಭಾರೀ ಅನಾಹುತ

# ಸರ್ಕಾರಿ ಶಾಲೆಯ ಕಟ್ಟಡದ ಮೇಲ್ಛಾವಣಿ ಕುಸಿತ

• **ಕಲಬುರಗಿ:** ನಗರದ ಸರ್ಕಾರಿ ಪಿಯು ಕಾಲೇಜು ದುರಂತದ ಆಘಾತ ಮಾಸುವ ಮುನ್ನವೇ ಜಿಲ್ಲೆಯಲ್ಲಿ ಮತ್ತೊಂದು ಶಾಲಾ ಕಟ್ಟಡದ ಅವಘಡ ಸಂಭವಿಸಿದೆ.

ಆಳಂದ ತಾಲೂಕಿನ ಸಂಗೋಳಗಿ (ಸಿ) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ಕಟ್ಟಡದ ಮೇಲ್ಛಾವಣಿ ಸಿಮೆಂಟ್ ಪದರವು ಇಂದು ಮುಂಜಾನೆ ಏಕಾಏಕಿ ಕುಸಿದು ಬಿದ್ದಿದೆ. ಭಾನುವಾರ ಶಾಲಾ ರಜೆ ಇದ್ದ ಕಾರಣ ಭಾರೀ ಪ್ರಾಣಾಪಾಯವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ.

ಇತ್ತೀಚಿನ ಕಾಲೇಜು ದುರಂತದ ಬೆನ್ನಲ್ಲೇ ಈ ಘಟನೆ ನಡೆದಿರುವುದು ಪೋಷಕರಲ್ಲಿ ತೀವ್ರ ಆತಂಕ ಹಾಗೂ ಶಿಕ್ಷಣ ಇಲಾಖೆಯ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಆದರೆ, ಘಟನೆಗೆ ಸಂಬಂಧಿಸಿದಂತೆ ಶಾಲಾ ಆಡಳಿತ ಮಂಡಳಿಯು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ನೀಡಿ ಸ್ಪಷ್ಟನೆ ನೀಡಿದೆ.

ಕುಸಿದು ಬಿದ್ದಿರುವುದು ಸುಮಾರು 60ರಿಂದ 70 ವರ್ಷದ ಅತ್ಯಂತ ಹಳೆಯ ಕೋಣೆಯಾಗಿದ್ದು, ಸುರಕ್ಷತೆಯ ದೃಷ್ಟಿಯಿಂದ ಇಲ್ಲಿ ಯಾವುದೇ ತರಗತಿಗಳನ್ನು ನಡೆಸುತ್ತಿರಲಿಲ್ಲ ಎಂದು ಶಾಲೆಯ ಮುಖ್ಯ ಶಿಕ್ಷಕರು ಸ್ಪಷ್ಟಪಡಿಸಿದ್ದಾರೆ.



ಘಟನೆ ತಿಳಿಯುತ್ತಿದ್ದಂತೆ ಬಿಇಓ ಆದೇಶದಂತೆ ಸಿಆರ್‌ಪಿ ಧರ್ಮರಾವ್, ಮುಖ್ಯಾಧ್ಯಾಪಕಿ ಪುಷ್ಪಾ ಹಾಗೂ ಸಹ ಶಿಕ್ಷಕರು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಆ ಭಾಗಕ್ಕೆ ಹೋಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

**ಹಳೆಯ ಕಟ್ಟಡ ನೆಲಸಮ ಮಾಡಿ**

ಶಾಲೆಯಲ್ಲಿ 200ಕ್ಕೂ ಹೆಚ್ಚು ಮಕ್ಕಳಿದ್ದಾರೆ. ಅದೃಷ್ಟವಶಾತ್ ಭಾನುವಾರ ರಜೆ ಇದ್ದಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ಶಿಕ್ಷಣ ಇಲಾಖೆಯು ಇನ್ನು ಮುಂದಾದರೂ ಎಚ್ಚೆತ್ತುಕೊಂಡು, ಶಾಲೆಯಲ್ಲಿ ನೆಲಸಮ ಮಾಡಬೇಕೆಂದು ಗುರುತಿಸಲಾಗಿರುವ ಮೂರು ಶಿಥಿಲಗೊಂಡ ಕೋಣೆಗಳನ್ನು ತಕ್ಷಣವೇ ತೆರವುಗೊಳಿಸಿ ಮಕ್ಕಳ ಪ್ರಾಣ ರಕ್ಷಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಶಾಲೆಯಲ್ಲಿ ಒಟ್ಟು 11 ಕೋಣೆಗಳಿದ್ದು, 6 ಕೋಣೆಗಳಲ್ಲಿ ಸುರಕ್ಷಿತವಾಗಿ ತರಗತಿಗಳು ನಡೆಯುತ್ತಿವೆ. ಆದರೆ, 204 ವಿದ್ಯಾರ್ಥಿಗಳು ಕಲಿಯುತ್ತಿರುವ ಈ ಶಾಲೆಯಲ್ಲಿ ಇಂದಿಗೂ 3 ಶಿಥಿಲಗೊಂಡ ಕೋಣೆಗಳನ್ನು ತುರ್ತಾಗಿ ನೆಲಸಮ ಮಾಡಬೇಕಾಗಿದೆ ಎಂದು ವರದಿಯಿಂದ ತಿಳಿದುಬಂದಿದೆ. ಜಿಲ್ಲಾದ್ಯಂತ ಇರುವ ಇಂತಹ ಹಳೆಯ ಕಟ್ಟಡಗಳನ್ನು ತಕ್ಷಣವೇ ತೆರವುಗೊಳಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಮತದಾರರ ಹಕ್ಕು ಕಸಿಯಲು ಅವಕಾಶ ನೀಡಲ್ಲ: ಸಲೀಂ ಅಹ್ಮದ್

• **ಹಾವೇರಿ:** ಚುನಾವಣಾ ಆಯೋಗವು ಮತದಾರರನ್ನು ಸೇರಿಸುವುದನ್ನು ಬಿಟ್ಟು ತೆಗೆಯುವ ಕೆಲಸ ಮಾಡುತ್ತಿದೆ. ಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸುತ್ತಿದೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕುವ ಮೂಲಕ ಜನರ ಮೂಲಭೂತ ಹಕ್ಕು ಕಸಿಯುವ ಯಾವುದೇ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷ ಸಹಿಸುವುದಿಲ್ಲ, ಅಗತ್ಯವಿದ್ದರೆ ಬೀದಿಗಿಳಿದು ಹೋರಾಟನಡೆಸಲು ಸಿದ್ಧವಿದ್ದೇವೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಎಚ್ಚರಿಕೆ ನೀಡಿದರು.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಚುನಾವಣಾ ಆಯೋಗ ಮತದಾರರ ಪಟ್ಟಿಗೆ ಹೊಸ ಮತದಾರರನ್ನು ಸೇರ್ಪಡೆ ಮಾಡುವ ಕೆಲಸ ಮಾಡುತ್ತಿತ್ತು. ಆದರೆ, ಈಗ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕುವ ಕೆಲಸ ನಡೆಯುತ್ತಿದ್ದು, ಕೇಂದ್ರ ಸರ್ಕಾರದ ಒತ್ತಡದಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಹಾರ ಹಾಗೂ ಪಶ್ಚಿಮ ಬಂಗಾಳ ಚುನಾವಣೆ ವೇಳೆ ಅನುಸರಿಸಿದ ಮಾದರಿಯನ್ನು ಕರ್ನಾಟಕದಲ್ಲೂ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಕಾಂಗ್ರೆಸ್‌ನ ಬಿಎಲ್‌ಎಗಳು ಮತ್ತು ಕಾರ್ಯಕರ್ತರು ಅದಕ್ಕೆ ಅವಕಾಶ ನೀಡುವುದಿಲ್ಲ. ಬಿಹಾರ, ಪಶ್ಚಿಮ ಬಂಗಾಳದಂತೆ ಆಗಲು ಬಿಡುವುದಿಲ್ಲ ಎಂದು ಹೇಳಿದರು.

ಯುವಕರ ಕಲ್ಯಾಣಕ್ಕೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡಿದ್ದು, ಡಿ.ಕೆ.ಶಿವಕುಮಾರ ಸಿಎಂ ಆದ ಮೊದಲ ಸಂಪುಟದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆ ಜಾರಿಗೊಳಿಸಿದ್ದಾರೆ. ಭಾರತ ಜೋಡೋ ಯುವಸಂಘಗಳಿಗೆಅನುದಾನಸೇರಿದಂತೆ 10 ಸಾವಿರ ಯುವ ಸಂಘಗಳ ಸ್ಥಾಪನೆಗೆ ಉತ್ತೇಜನ ನೀಡಲಾಗಿದೆ. ಈಚೆಗೆ ನಡೆದ ನೀತಿ ಆಯೋಗದ ಸಭೆಯಲ್ಲಿ ಸಿಎಂ ಶಿವಕುಮಾರ್ ಪಾಲ್ಗೊಂಡು ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಹೇಳಿದ್ದಾರೆ. ಕೇಂದ್ರ ಸರ್ಕಾರದ ಮುಂದೆ 18 ಪ್ರಮುಖ ಬೇಡಿಕೆಗಳನ್ನು ಇಟ್ಟಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷಅಜ್ಜಂಪೀರ್ ಖಾದ್ರಿ, ಸೋಮಣ್ಣ ಬೇವಿನಮರದ, ಎಸ್.ಎಫ್.ಎನ್. ಗಾಜಿಗೌಡ್ರ, ಎಂ.ಎಂ. ಹಿರೇಮಠ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವ ಕುಮಾರ ನೀರಲಗಿ, ಎಸ್.ವಿ.ಪಾಟೀಲ, ಕೊಟ್ರೇಶಪ್ಪ ಬಸೇಗಣ್ಣಿ, ಆನಂದಸ್ವಾಮಿ ಗಡ್ಡದೇವರಮಠ, ಎಂ.ಎಂ. ಮೈದೂರ ಇತರರು ಇದ್ದರು.

**ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ**

ಜೂ.21ರಂದು ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ ಪದಗ್ರಹಣ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷರು, ಪಕ್ಷದ ಉಸ್ತುವಾರಿಗಳು ಸೇರಿದಂತೆ ಹಿರಿಯ ನಾಯಕರು ಮತ್ತು ಪದಾಧಿಕಾರಿಗಳು ಸೇರಿದಂತೆ ಒಂದು ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಸಲೀಂ ಅಹ್ಮದ್ ತಿಳಿಸಿದರು.

> ಪರಿಷತ್ ಚುನಾವಣೆ, ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭದ ಬಳಿಕ ಸಚಿವ ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಹಾವೇರಿ ಜಿಲ್ಲೆಗೆ ಸಚಿವ ಸ್ಥಾನ ಸಿಗುವ ಬಗ್ಗೆ ಆಗ ಗೊತ್ತಾಗಲಿದೆ.
> ■ **ಸಲೀಂ ಅಹ್ಮದ್,** ವಿಧಾನ ಪರಿಷತ್ ಮುಖ್ಯ ಸಚೇತಕ

# ಆಸ್ತಿ ವಿವಾದ: ಕಲ್ಲಿನಿಂದ ಜಜ್ಜಿ ವ್ಯಕ್ತಿಯ ಬರ್ಬರ ಹತ್ಯೆ

• **ಕಲಬುರಗಿ:** ಜಿಲ್ಲೆಯ ಶಹಾಬಾದ್ ಪಟ್ಟಣದ ಬೀರಲಿಗೇಶ್ವರ ದೇವಸ್ಥಾನದ ಮುಂಭಾಗ ಆಸ್ತಿ ವಿವಾದದ ಹಿನ್ನೆಲೆ ವ್ಯಕ್ತಿಯೊಬ್ಬರನ್ನು ಕಲ್ಲಿನಿಂದ ಹೊಡೆದು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಡರಾತ್ರಿ ನಡೆದಿದೆ.



ನಾಗರಾಜ ಯಲ್ಲಪ್ಪ (40) ಕೊಲೆಯಾದ ದುರ್ದೈವಿ ಎಂದು ಗುರುತಿಸಲಾಗಿದೆ. ಮೃತ ನಾಗರಾಜ ಹಾಗೂ ಅವರ ಸೋದರತ್ತೆಯ ಮಗ ತಿರುಪತಿ ದೇವಕರ್ ನಡುವೆ ಆಸ್ತಿ ವಿಚಾರವಾಗಿ ಬಹುಕಾಲದಿಂದ ವಿವಾದ ನಡೆಯುತ್ತಿತ್ತು. ಇದೇ ಸಂಬಂಧ ನಾಗರಾಜ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದ ಎನ್ನಲಾಗಿದೆ.ಇದರಿಂದ ಅಸಮಾಧಾನಗೊಂಡಿದ್ದ ತಿರುಪತಿ, ನಾಗರಾಜನನ್ನು ಪ್ರಶ್ನಿಸಿ ಜಗಳಕ್ಕೆ ಮುಂದಾಗಿದ್ದಾನೆ ಎಂದು ತಿಳಿದುಬಂದಿದೆ.

ತಡರಾತ್ರಿ ನಡೆದ ವಾಗ್ವಾದದ ವೇಳೆ ತಿರುಪತಿ ದೇವಕರ್ ನಾಗರಾಜನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿ ಪರಾರಿಯಾಗಿದ್ದಾನೆ ಎನ್ನಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಶಹಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ತನಿಖೆ ಮುಂದುವರಿಸಿದ್ದಾರೆ.

## ಬಾಲಕನಿಗೆ ಬ್ಲ್ಯಾಕ್‌ಮೇಲ್: ಇಬ್ಬರ ಬಂಧನ

• **ಕೊಪ್ಪಳ:** ಅಪ್ರಾಪ್ತ ಬಾಲಕನಿಗೆ ಸಿಗರೇಟ್ ಸೇದುವುದನ್ನು ಕಲಿಸಿ, ಅದರ ವಿಡಿಯೋ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿ ಸುಮಾರು 120 ಗ್ರಾಂ ಚಿನ್ನ ದೋಚಿದ ಘಟನೆ ಜಿಲ್ಲೆಯ ಕುಷ್ಟಗಿ ಪಟ್ಟಣದಲ್ಲಿ ನಡೆದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕುಷ್ಟಗಿ ಪೊಲೀಸರು ಬಸವರಾಜ್ ಅಂಗಡಿ ಮತ್ತು ನವೀನ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 120 ಗ್ರಾಂ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳು ಮೊದಲು ಅಪ್ರಾಪ್ತ ಬಾಲಕನಿಗೆ ಸಿಗರೇಟ್ ಸೇದುವುದನ್ನು ಕಲಿಸಿದ್ದರು. ಬಳಿಕ ಅದನ್ನು ವಿಡಿಯೋ ಮಾಡಿ ಇಟ್ಟುಕೊಂಡು ಈ ವಿಡಿಯೋವನ್ನು ನಿನ್ನ ತಂದೆ-ತಾಯಿಗೆ ತೋರಿಸುತ್ತೇವೆ ಎಂದು ಬೆದರಿಕೆ ಹಾಕಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ.



ಆರೋಪಿಗಳ ಬೆದರಿಕೆಗೆ ಹೆದರಿದ ಬಾಲಕ, ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಒಂದೊಂದಾಗಿ ತೆಗೆದುಕೊಂಡು ಹೋಗಿ ಆರೋಪಿಗಳಿಗೆ ನೀಡಿದ್ದಾನೆ. ಈ ರೀತಿ ಒಟ್ಟು ಸುಮಾರು 120 ಗ್ರಾಂ ಚಿನ್ನವನ್ನು ಬಾಲಕ ಆರೋಪಿಗಳಿಗೆ ನೀಡಿರುವುದು ತನಿಖೆಯಿಂದ ತಿಳಿದುಬಂದಿದೆ.

## ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿರುದ್ಧ ಅಸಮಾಧಾನ

# ಬಸ್‌ಗಳಲ್ಲಿ ಟೈರ್ ಟೂಲ್ ಕಿಟ್ ಇಲ್ಲ

▸ **ಸಿದ್ದಯ್ಯ ಹೆಸರೂರು**

ದಿಗಂತ ವಿಶೇಷ

• **ಮಸ್ಕಿ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೆಕೆಆರ್‌ಟಿಸಿ ಬಸ್‌ಗಳಲ್ಲಿ ಟೈರ್ ಪಂಚರ್ ಆದಾಗ ಅಥವಾ ಬದಲಾಯಿಸಬೇಕಾದಾಗ ಅಗತ್ಯವಿರುವ ಟೂಲ್ ಕಿಟ್ ಇಲ್ಲದೆ ಚಾಲಕರು ಮತ್ತು ಪ್ರಯಾಣಿಕರು ರಸ್ತೆಯ ಮಧ್ಯದಲ್ಲಿ ಬಸ್ ಕೈಕೊಟ್ಟಾಗ ಸರಿಯಾದ ಪರಿಕರಗಳಿಲ್ಲದೆ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಕೆಲವೊಂದು ಕೆಕೆಆರ್‌ಟಿಸಿ ಬಸ್‌ಗಳಲ್ಲಿ ಸ್ಟೆಪ್ನಿ (ಖಾಲಿ ಟೈರ್) ಬದಲಾಯಿಸಲು ಬೇಕಾದ ಕೀಲಿಗಳು ಜ್ಯಾಕ್ ಅಥವಾ ಕಟಿಂಗ್, ಪ್ಲೇಯರ್‌ಗಳಂತಹ ಕನಿಷ್ಠ ಟೂಲ್ ಕಿಟ್‌ಗಳು ಇರುವುದಿಲ್ಲ. ದೂರದ ಊರುಗಳಿಗೆ ರಾತ್ರಿ ವೇಳೆ ಪ್ರಯಾಣಿಸುವ ಬಸ್‌ಗಳಿಗೆ ಮಾತ್ರ ಟೂಲ್ ಕಿಟ್‌ಗಳು ಇದ್ದು, ಗ್ರಾಮೀಣ ಪ್ರದೇಶಗಳಲ್ಲಿ ಓಡಾಡುವ ಕೆಲವು ಬಸ್‌ಗಳಲ್ಲಿ ಮಾತ್ರ ಟೂಲ್ ಕಿಟ್ ಇಲ್ಲದಂತಾಗಿದೆ. ಸಂಸ್ಥೆಯ ನಿಯಮಾವಳಿಗಳ ಪ್ರಕಾರ ಪ್ರತಿ ಬಸ್ ಡಿಪೋದಿಂದ ಹೊರಡುವ ಮುನ್ನ ಟೈರ್ ಸುಸ್ಥಿತಿಯಲ್ಲಿದೆಯೇ ಮತ್ತು ಟೂಲ್ ಕಿಟ್ ಇದೆಯೇ ಎಂದು ಪರಿಶೀಲಿಸಬೇಕು. ಆದರೆ, ಹಳೆಯ ಬಸ್‌ಗಳ ನಿರ್ವಹಣೆ ಸರಿಯಾಗಿ ಆಗದಿರುವುದು ಮತ್ತು ಹೊಸ ಟೂಲ್ ಕಿಟ್‌ಗಳನ್ನು ಸಕಾಲಕ್ಕೆ ಪೂರೈಸದೆ ಇರುವುದು ಈ ಸಮಸ್ಯೆಗೆ ಮುಖ್ಯ ಕಾರಣ ಎಂದು ಸಾರ್ವಜನಿಕರು ಹಾಗೂ ಸಿಬ್ಬಂದಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



> ನಾವು ದೂರದ ಊರಿಗೆ ತೆರಳುವ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ಕಾಡ್ಡಾಯವಾಗಿ ಟೈರ್ ಟೂಲ್ ಕಿಟ್ ಅಳವಡಿಸಿದ್ದೇವೆ. ಆದರೆ, ಗ್ರಾಮೀಣ ಪ್ರದೇಶಗಳಿಗೆ ತೆರಳುವ ಕೆಲವೊಂದು ಬಸ್‌ಗಳಲ್ಲಿ ಟೈರ್ ಟೂಲ್ ಕಿಟ್ ಇದ್ದು, ಇಲ್ಲದೇ ಇರುವ ಬಸ್‌ಗಳಿಗೆ ಟೈರ್ ಟೂಲ್ ಕಿಟ್ ಅಳವಡಿಸುವ ವ್ಯವಸ್ಥೆ ಮಾಡುತ್ತೇವೆ.
> ■ **ಎ.ಐ.ಕಂದಗಲ್,** ಕೆಕೆಆರ್‌ಟಿಸಿ ಡಿಸಿ, ರಾಯಚೂರು

**ಬಸ್‌ನಲ್ಲಿಲ್ಲ 'ಪ್ರಥಮ ಚಿಕಿತ್ಸಾ ಕಿಟ್'**

ಕೋಟಿ ಕೋಟಿ ರೂಪಾಯಿ ಲಾಭ-ನಷ್ಟದ ಲೆಕ್ಕಾಚಾರ ಹಾಕುವ ಸಾರಿಗೆ ಸಂಸ್ಥೆಗಳು, ಪ್ರಯಾಣಿಕರ ಜೀವದ ರಕ್ಷಣೆಗೆ ಕನಿಷ್ಠ 100 ರೂಪಾಯಿಯ ಪ್ರಥಮ ಚಿಕಿತ್ಸಾ ಾಮಗ್ರಿಗಳನ್ನು ಒದಗಿಸದಿರುವುದು ದುರ್ದೈವದ 'ಂಗತಿಯಾಗಿದೆ. ಇನ್ನುಂದೆಯಾದರೂ ಸಾರಿಗೆ ಇಲಾಖೆ ಎಚ್ಚೆತ್ತುಕೊಂಡು ಪ್ರತಿ ಸರ್ಕಾರಿ ಬಸ್‌ನಲ್ಲೂ ಸುಸಜ್ಜಿತ 'ಪ್ರಥಮ ಚಿಕಿತ್ಸಾ ಕಿಟ್' ಇರುವಂತೆ ನೋಡಿಕೊಳ್ಳಬೇಕಿದೆ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

## ಗಾಂಜಾ ಸೇವನೆ: ಪ್ರಕರಣ ದಾಖಲು

• **ಬೆಳಗಾವಿ** : ನಗರದಲ್ಲಿ ಪೊಲೀಸರು ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಿದ್ದಾರೆ. ಮೊದಲ ಪ್ರಕರಣದಲ್ಲಿ ಉದ್ಯಮಬಾಗ್ ಪೊಲೀಸ್ ಠಾಣೆಯ ಪಿಎಸ್‌ಐ ಪ್ರವೀಣ ಬಿರಾದಾರ ಹಾಗೂ ಸಿಬ್ಬಂದಿ ಅರುಣಾ ಫ್ಯಾಕ್ಟರಿ ಸಮೀಪ ದಾಳಿ ನಡೆಸಿದರು. ಈ ವೇಳೆ ಯಾವುದೇ ಪರವಾನಗಿ ಇಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಗೋವಾ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಬಾಲಕುರ ಗ್ರಾಮದ ನಿವಾಸಿ ದೇವೇಂದ್ರ ನಾರಾಯಣ ನಾಯಕ (41) ಎಂಬಾತನನ್ನು ಬಂಧಿಸಿದರು. ಆರೋಪಿಯಿಂದ 4,520 ರೂ. ಮೌಲ್ಯದ 11.5 ಲೀಟರ್ ಅಕ್ರಮ ಮದ್ಯವನ್ನು ವಶಪಡಿಸಿಕೊಳ್ಳಲಾಗಿದ್ದು, ಆತನ ವಿರುದ್ಧ ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಖಡೇಬಜಾರ್ ಪೊಲೀಸ್ ಠಾಣೆಯ ಪಿಎಸ್‌ಐ ಎಸ್.ಆರ್. ಮುತ್ತತ್ತಿ ಹಾಗೂ ಸಿಬ್ಬಂದಿ ಸರ್ದಾರ್ ಗೌಂಡ್ ಗ್ಯಾಲರಿ ಸಮೀಪ ಅಸಭ್ಯವಾಗಿ ವರ್ತಿಸುತ್ತಿದ್ದ ಬಸವನ ಗಲ್ಲಿಯ ನಿವಾಸಿ ಸುಧೀರ ನಂದಕುಮಾರ ಸಾಲಗುಡೆ (38) ಎಂಬಾತನನ್ನು ವಶಕ್ಕೆ ಪಡೆದುಕೊಂಡರು. ಬಳಿಕ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಆತ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಆತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

## ಕಿರುಸುದ್ದಿ

### ಅಧಿಕ ಮಾಸದ ಮಂಗಲ ಕಾರ್ಯಕ್ರಮ

**ಮೂಡಲಗಿ:** ಪೊಲೀಸ್ ಠಾಣಾ ಆವರಣದಲ್ಲಿರುವ ಶ್ರೀ ಹನುಮಾನ ಮಂದಿರದಲ್ಲಿ ಅಧಿಕ (ಪುರುಷೊತ್ತಮ)ಮಾಸದ ಮಂಗಲ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.ಸತತ 7 ದಿನಗಳ ಕಾಲ ವಿವಿಧ ಪ್ರವಚನಕಾರರಿಂದ ಪ್ರವಚನ, ಮಹಾಮಂಗಳಾರತಿಯನ್ನು ಸದ್ಭಕ್ತರು ಪಡೆದು ಪುಣಿತರಾದರು.

ಹಭಪ ಅನ್ನಪ್ಪ, ಬಂಡೊಪಂತ ಮುತಾಲಿಕದೇಸಾಯಿ, ಅರುಣ ಬಣಗಾರ, ರವಿ ಕಾಂಬಳೆ ಮತ್ತು ಕೃಷ್ಣಪ್ಪ ಮಹಾರಾಜರ ಅಧಿಕ ತಿಂಗಳ ಮಹತ್ವ, ರಾಮಾಯಣ, ಮಹಾಭಾರತ, ಭಾಗವತ, ಶಾಸ್ತ್ರ, ಪುರಾಣ, ಉಪನಿಷತ್ತುಗಳ, ತಿರುಳಿನ ಜ್ಞಾನವನ್ನು ಅನೇಕ ಚಿಕ್ಕ ಕತೆಗಳು ಮತ್ತು ಹಾಸ್ಯಗಳ ಮೂಲಕ ಭಕ್ತರಿಗೆ ಪ್ರವಚನ ನೀಡಿದರು. ಭಗವಂತನ ಸಾಕ್ಷಾತ್ಕಾರಕ್ಕೆ ಮುಗ್ಧ ಭಕ್ತಿ, ಲೋಕ ಕಲ್ಯಾಣದ ಜ್ಞಾನ ಅವಶ್ಯಕ ಎಂದು ತಿಳಿಸಿದರು. ಕೊನೆಯ ದಿನ ಪ್ರವಚನಕಾರರಿಗೆ ಕಾಣಿಕೆ ನೀಡಿ ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.ಅರ್ಚಕ ವೆಂಕಟೇಶ ಬಡಿಗೇರ ನಿತ್ಯ ಪೂಜಾ ಕಾರ್ಯವನ್ನು ಪ್ರವಚನ ಉಸ್ತುವಾರಿ ನೋಡಿಕೊಂಡರು.

### 2.44 ಲಕ್ಷ ರೂ. ವಂಚನೆ

**ಬೆಳಗಾವಿ:** ಆರ್‌ಟಿಒ ಚಲನ್ ಪಾವತಿಯ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಮೂಲಕ ಎಪಿಕೆ ಫೈಲ್ ಕಳುಹಿಸಿ ಮೊಬೈಲ್ ಹ್ಯಾಕ್ ಮಾಡಿ ಬ್ಯಾಂಕ್ ಖಾತೆಯಿಂದ ರೂ.2,44,791 ಹಣ ದೋಚಿರುವ ಸೈಬರ್ ವಂಚನೆ ಪ್ರಕರಣ ಬೆಳಗಾವಿ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಬೊರಗಾವಿ ಗ್ರಾಮದ ನಿವಾಸಿ ಗಜಾನನ ಉಮರಾಣಿ ಅವರು ವಂಚನೆಗೆ ಒಳಗಾದವರು. ಅವರ ಮೊಬೈಲ್‌ನ್ನು ವಾಟ್ಸ್‌ಆ್ಯಪ್‌ಗೆ ಆರ್‌ಟಿಒ ಚಲನ್ ಪಾವತಿಗೆ ಸಂಬಂಧಿಸಿದ ಸಂದೇಶವೊಂದು ಬಂದಿದ್ದು, ವಾಹನದ ಚಲನ್ ವಿವರಗಳನ್ನು ಪರಿಶೀಲಿಸುವಂತೆ ಸೂಚಿಸಿ ಸೈಬರ್ ಖದೀಮರು ಎಪಿಕೆ ಫೈಲ್ ಕಳುಹಿಸಿದ್ದರು.

ಇದು ನಿಜವೆಂದು ನಂಬಿದ ಗಜಾನನ ಅವರು ಡೌನ್ಲೋಡ್ ಮಾಡಿ ಇನ್‌ಸ್ಟಾಲ್ ಮಾಡಿದ್ದಾರೆ. ತಕ್ಷಣ ಸೈಬರ್ ಕಳ್ಳರು ಮೊಬೈಲ್ ಹ್ಯಾಕ್ ಮಾಡಿ, ಬ್ಯಾಂಕ್ ಖಾತೆಯ ಗೌಪ್ಯ ಮಾಹಿತಿ ಹಾಗೂ ಒಟಿಪಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ.

ಈ ಕುರಿತು ಅವರು ಜಿಲ್ಲಾ ಸೈಬರ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಬೆಳಗಾವಿ ಜಿಲ್ಲಾ ಸೈಬರ್ ಅಪರಾಧ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

### ವೇಶ್ಯಾವಾಟಿಕೆ: ಮಹಿಳೆ ಬಂಧನ

**ಬೆಳಗಾವಿ:** ಇಲ್ಲಿನ ಟಿಳಕವಾಡಿ ಪ್ರದೇಶದ ನೆಹರು ರಸ್ತೆಯಲ್ಲಿರುವ ಬಹುಮಹಡಿ ಅಪಾರ್ಟ್‌ಮೆಂಟ್‌ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವ ಖಚಿತ ಮಾಹಿತಿ ಮೇರೆಗೆ ಟಿಳಕವಾಡಿ ಠಾಣೆ ಪೊಲೀಸರು ದಾಳಿ ನಡೆಸಿ, ತೆಲಂಗಾಣ ಮೂಲದ ಯುವತಿಯನ್ನು ರಕ್ಷಿಸಿ, ದಂಧೆ ನಡೆಸುತ್ತಿದ್ದ ಮಹಿಳೆಯನ್ನು ಬಂಧಿಸಿದ್ದಾರೆ.

ಬಂಧಿತೆಯನ್ನು ಆಯೇಶಾ ಶಬ್ಬಿರ್ ಶೇಖ್ ಅಲಿಯಾಸ್ ರೇಷ್ಮಾ ಅಂಕಲೆವಾಲೆ (31) ಎಂದು ಗುರುತಿಸಲಾಗಿದೆ. ಆರೋಪಿತೆ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಬಾಡಿಗೆಗೆ ಪಡೆದು, ತೆಲಂಗಾಣ ರಾಜ್ಯದ ಯುವತಿಯನ್ನು ಅಲ್ಲೇ ಇರಿಸಿಕೊಂಡು ಗಿರಾಕಿಗಳನ್ನು ಮನೆಗೆ ಕರೆಯಿಸಿ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದಳು ಎಂದು ತಿಳಿದು ಬಂದಿದೆ.

ವೇಶ್ಯಾವಾಟಿಕೆ ನಡೆಸುತ್ತಿರುವ ದೊರೆತ ಮಾಹಿತಿ ಮೇರೆಗೆ ಸಿಪಿಐ ಪರಶುರಾಮ ಪೂಜೇರಿ ನೇತೃತ್ವದಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡ ವಿಶೇಷ ತಂಡ ಕಾರ್ಯಾಚರಣೆ ನಡೆಸಿತು. ದಾಳಿ ವೇಳೆ ಯುವತಿಯನ್ನು ರಕ್ಷಿಸಿ ಆರೋಪಿತೆಯಳನ್ನು ವಶಪಡೆದುಕೊಳ್ಳಲಾಗಿದೆ.

ಪ್ರಾಥಮಿಕ ತನಿಖೆಯಲ್ಲಿ ಗಿರಾಕಿಗಳಿಂದ ಪಡೆಯುತ್ತಿದ್ದ ಹಣದಲ್ಲಿ ಯುವತಿಗೆ ಅಲ್ಪ ಪ್ರಮಾಣದ ಹಣ ನೀಡಿ, ಉಳಿದ ಹಣವನ್ನು ಆರೋಪಿತೆ ಲಾಭಾಂಶವಾಗಿ ಇಟ್ಟುಕೊಳ್ಳುತ್ತಿದ್ದಳು ಎಂಬುವುದರ ಬಗ್ಗೆ ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾರ್ಯ ಪೊಲೀಸರು ಕೈಗೊಂಡಿದ್ದಾರೆ.

## ನಿಧನ ಸುದ್ದಿ

### ಹಾಲಪ್ಪ ಸುಲ್ತಾನ ನಾಯಿಕ

**ರಾಯಬಾಗ:** ಪಟ್ಟಣದ ಹಿರಿಯರಾದ ಹಾಲಪ್ಪ ಸುಲ್ತಾನ ನಾಯಿಕ (90) ಅವರು ಶನಿವಾರ ನಿಧನರಾದರು. ನಾಲ್ವರು ಪುತ್ರರು,ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಬಳಗ ಇದ್ದಾರೆ.





ಮೂಡಲಗಿ: ಪೊಲೀಸ್ ಠಾಣಾ ಆವರಣದಲ್ಲಿರುವ ಶ್ರೀ ಹನುಮಾನ ಮಂದಿರದಲ್ಲಿ ಅಧಿಕ (ಪುರುಷೊತ್ತಮ)ಮಾಸದ ಮಂಗಲ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

## ಉಚಿತ ಯೋಗ ಶಿಬಿರದ ಸಮಾರೋಪ

**ತೆಲಸಂಗ:** ಯೋಗ ಶಿಬಿರಗಳು ಕೇವಲ ತಿಂಗಳುಗಳಿಗೆ ಸೀಮಿತವಾಗಬಾರದು. ಇಲ್ಲಿ ಕಲಿತ ಯೋಗಾಸನಗಳನ್ನು ಸಾರ್ವಜನಿಕರು ತಮ್ಮ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಯೋಗ ಗುರು ಡಾ. ವಿನಾಯಕ ಎಮ್. ಚಿಂಚೋಳಿಮಠ ಹೇಳಿದರು.

ಗ್ರಾಮದ ಎಸ್.ಎಸ್.ಎಂ.ಕೆ. ಶಿಕ್ಷಣ ಪ್ರತಿಷ್ಠಾನದ ಬಸವ ಅಂತರರಾಷ್ಟ್ರೀಯ ಶಾಲೆಯ ಆವರಣದಲ್ಲಿ ಪತಂಜಲಿ ಯೋಗ ಸಮಿತಿ ಹಾಗೂ ಭಾರತೀಯ ಸಂಸ್ಕೃತಿ ಸಂಸ್ಥೆ ಅಥಣಿ ಸಹಯೋಗದಲ್ಲಿ ನಡೆದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಇಂದಿನ ಜಂಜಾಟದ ಜೀವನದಲ್ಲಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿ ಅತ್ಯಗತ್ಯವಾಗಿದೆ. ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸನ್ನು ನಿಯಂತ್ರಿಸುವ ಶಕ್ತಿ ಹೊಂದಿದೆ. ದೈನಂದಿನ ಕೆಲಸಗಳ ನಡುವೆಯೂ ಕನಿಷ್ಠ ಅರ್ಧ ಗಂಟೆ ಯೋಗಕ್ಕಾಗಿ ಮುಡಿಪಾಗಿಡಬೇಕು. ಆಧುನಿಕ ಆಹಾರ ಪದ್ಧತಿ ಹಾಗೂ ಬದಲಾದ ಜೀವನಶೈಲಿಯಿಂದಾಗಿ ಸಣ್ಣ ವಯಸ್ಸಿನಲ್ಲೇ ಅನೇಕರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಯೋಗ ಮತ್ತು ಪ್ರಾಣಾಯಾಮಗಳನ್ನು ನಿರಂತರವಾಗಿ ಅಭ್ಯಾಸ ಮಾಡುವುದರಿಂದ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಆಸ್ಪತ್ರೆ ಹಾಗೂ ಔಷಧಿಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು ಯೋಗ ನಮಗೆ ಪ್ರಕೃತಿ ನೀಡಿರುವ ಅತ್ಯುತ್ತಮ ಕೊಡುಗೆಯಾಗಿದೆ ಎಂದರು.

ಡಾ. ಬಿ. ಎಸ್. ಕಾಮನ್, ಡಾ. ಆರ್. ಡಿ. ಪೂಜಾರಿ, ಗಡಿನಾಡು ಕನ್ನಡ ಬಳಗದ ಅಧ್ಯಕ್ಷ ಗುರುರಾಜ್ ಕುಂಬಾರ, ನ್ಯಾಯವಾದಿ ಅಮೋಘ ಖೊಬ್ರಿ ಉಪಸ್ಥಿತರಿದ್ದರು.



ತೆಲಸಂಗ: ಗ್ರಾಮದ ಎಸ್.ಎಸ್.ಎಂ.ಕೆ. ಶಿಕ್ಷಣ ಪ್ರತಿಷ್ಠಾನದ ಬಸವ ಅಂತರರಾಷ್ಟ್ರೀಯ ಶಾಲೆಯ ಆವರಣದಲ್ಲಿ ಪತಂಜಲಿ ಯೋಗ ಸಮಿತಿ ಹಾಗೂ ಭಾರತೀಯ ಸಂಸ್ಕೃತಿ ಸಂಸ್ಥೆ ಅಥಣಿ ಸಹಯೋಗದಲ್ಲಿ ನಡೆದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಯೋಗ ಗುರು ಡಾ. ವಿನಾಯಕ ಎಮ್. ಚಿಂಚೋಳಿಮಠ,ಡಾ. ಬಿ. ಎಸ್. ಕಾಮನ್, ಡಾ. ಆರ್. ಡಿ. ಪೂಜಾರಿ, ಗಡಿನಾಡು ಕನ್ನಡ ಬಳಗದ ಅಧ್ಯಕ್ಷ ಗುರುರಾಜ್ ಕುಂಬಾರ, ನ್ಯಾಯವಾದಿ ಅಮೋಘ ಖೊಬ್ರಿ ಉಪಸ್ಥಿತರಿದ್ದರು.

### ಮುಗಳಖೋಡ ಶ್ರೀಮಠದಲ್ಲಿ ಸ್ವಚ್ಛತಾ ಕಾರ್ಯಕ್ರಮ

## ಗ್ರಾಮ ಸ್ವಚ್ಛತೆಗೆ ಮೊದಲ ಆದ್ಯತೆ: ಶ್ರೀಗಳು

**ಮುಗಳಖೋಡ:** ಮಠ ಮಂದಿರಗಳಲ್ಲಿ ಭಕ್ತಿಯಿಂದಕಸಗುಡಿಸಿದರೆ ನಮ್ಮ ಮನಸ್ಸು ಸ್ವಚ್ಛಗೊಳ್ಳುತ್ತವೆ. ಅಧಿಕಮಾಸದ ಪ್ರಯುಕ್ತ ಭಕ್ತರು ಪೂಜೆ, ಜಪ, ತಪ ಧಾರ್ಮಿಕತೆ ಅಷ್ಟೇ ಅಲ್ಲದೆ ಗುರುಗಳಲ್ಲಿರುವ ಭಕ್ತಿಯ ಜೊತೆಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ತಿಳಿಸಲು ಇವತ್ತು ಗುರುಗಳು ಭಕ್ತರೊಂದಿಗೆ ಕಸಬರಿಗೆ ಹಿಡಿದು ಕಸಗೂಡಿಸಿ ಎಲ್ಲರಿಗೂ ಸ್ವಚ್ಛತಾ ಮನೋಭಾವ ಮೂಡಿಸುವ ಸಲುವಾಗಿ ಶ್ರೀಮಠದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ವಚ್ಛತೆಯಲ್ಲಿ ಪಾಲ್ಗೊಂಡರೆ ಭಗವಂತನ ಕೃಪೆ ತಾನಾಗಿಯೇ ಆಗುತ್ತದೆ ಎಂದು ಮುಗಳಖೋಡ-ಜಿಡಗಾ ಮಠದ ಪೀಠಾಧ್ಯಕ್ಷರಾದಶ್ರೀ ಮುರುಘರಾಜೇಂದ್ರ ಶ್ರೀಗಳು ಹೇಳಿದರು.

ಅವರು ರವಿವಾರ ಶ್ರೀ ಯಲ್ಲಾಲಿಂಗೇಶ್ವರ ಬ್ರಹನ್ಮಠದ ಭಕ್ತಾದಿಗಳ ಸಮ್ಮುಖದಲ್ಲಿ ಹಾಕಿಕೊಂಡ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ಶ್ರೀಮಠದ ಸ್ವಚ್ಛತಾ ಕಾರ್ಯಗಳಲ್ಲಿ ತನ್ನನ್ನು ತಾನು ಅರ್ಪಿಸಿಕೊಂಡವನೇ ನಿಜವಾದ ಸೇವಕ. ಮಠವನ್ನಷ್ಟೇ ಅಲ್ಲದೆ ಗ್ರಾಮವನ್ನು ಸ್ವಚ್ಛವಾಗಿಡುವುದು ಎಲ್ಲರ ಆದ್ಯ ಕರ್ತವ್ಯ ಪಟ್ಟಣದ ರಸ್ತೆಗಳು, ಚರಂಡಿ ಗಳು ಸೇರಿದಂತೆ ಎಲ್ಲ ಓಣಿಗಳನ್ನು ಸ್ವಚ್ಛವಾಗಿಟ್ಟು ಸ್ವಚ್ಛತೆಗೆ ಇನ್ನೊಂದು ಹೆಸರೇ ಮುಗಳಖೋಡ ಎಂಬಂತೆ ತಾವೆಲ್ಲರೂ ಶ್ರಮವಹಿಸಬೇಕು. ಬೀದಿ ದೀಪಗಳು, ರಸ್ತೆ ಸುಧಾರಣೆ, ಶೌಚಾಲಯ ವ್ಯವಸ್ಥೆ ಎಲ್ಲದಕ್ಕೂ ಪುರಸಭೆ ಸದಸ್ಯರು ಹೆಚ್ಚಿನ ಗಮನಹರಿಸಿ, ಗ್ರಾಮ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಏನೇ ಸಮಸ್ಯೆಗಳಿದ್ದರೂ ಒಂದು ವಾರದೊಳಗೆ ಎಲ್ಲವೂ ಸರಿಯಾಗುವಂತೆ ನೋಡಿಕೊಳ್ಳಲು ಸೂಚಿಸಿದರು.

ಬೆಳಿಗ್ಗೆ 6 ಗಂಟೆಗೆ ಶ್ರೀಮಠಕ್ಕೆ ನೂರಾರು ಭಕ್ತರು ಆಗಮಿಸಿ, ಪುರಸಭೆ ಪೌರ ಕಾರ್ಮಿಕರೊಂದಿಗೆ ಕಸಬರಿಗೆ ಬುಟ್ಟಿಗಳನ್ನು ಹಿಡಿದುಕೊಂಡು ಶ್ರೀಮಠದ ವಿಶಾಲವಾದ ಅಂಗಳ, ಮುಖ್ಯರಸ್ತೆ, ಚರಂಡಿಗಳನ್ನು ಸ್ವಚ್ಛಗೊಳಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಕಾರ್ಯಕ್ರಮವನ್ನು ಸೋಮು ಹೊರಟ್ಟಿ ನಿರೂಪಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷರಾದ ಶಶಿಕಾಂತ್ ಪಡಸಲಗಿ, ಪುರಸಭೆ ಸದಸ್ಯರು, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಸದಸ್ಯರು, ಊರಿನ ಪ್ರಮುಖರು, ಮುಖಂಡರು, ಶ್ರೀಮಠದ ಕಾರ್ಯಕರ್ತರು, ಸಿದ್ದಶ್ರೀ ಆಡಳಿತ ಮಂಡಳಿಯ ಸರ್ವ ಸದಸ್ಯರು, ಸಿಬ್ಬಂದಿ ವರ್ಗ ಸೇರಿದಂತೆ ನೂರಾರು ಭಕ್ತರು, ಪುರಸಭೆ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



**ಕರ್ನಾಟಕಕ್ಕೆ ಮಾದರಿಯಾಗುವಂತೆ ಮುಕ್ತಿ ಮಂದಿರ ಮುಗಳಖೋಡ ಸ್ವಚ್ಛ ಗ್ರಾಮ ಎಂದೆನಿಸಿಕೊಳ್ಳಬೇಕು. ವಿವಿಧ ಜಾಥಾಗಳ ಮೂಲಕ ಪ್ರತಿ ಮನೆಯಿಂದಲೇ ಒಬ್ಬೊಬ್ಬರು ಸದಸ್ಯರು ಕಸಬರಿಗೆ ಹಿಡಿದು ಕಸಗೂಡಿಸಿ ಸ್ವಚ್ಛತಾ ಕ್ರಮಗಳನ್ನು ಅನುಸರಿಸಬೇಕು ಮತ್ತು ಗಿಡಗಳನ್ನು ನೆಟ್ಟು ಬರುವ ದಿನಗಳಲ್ಲಿ ಹಸಿರು ಮತ್ತು ಸ್ವಚ್ಛ ಗ್ರಾಮ ಎಂದರೆ ಅದು ಮುಗಳಖೋಡ ಎನ್ನಬೇಕು.**

■ ಶಶಿಕಾಂತ್ ಪಡಸಲಗಿ. ಗೌರವಾಧ್ಯಕ್ಷರು. ಕರ್ನಾಟಕ ರಾಜ್ಯ ರೈತ ಸಂಘ.

**ಮುಗಳಖೋಡ ಶ್ರೀಮಠದಿಂದ ಪ್ರಾರಂಭಗೊಂಡ ಈ ಸ್ವಚ್ಛತಾ ಕಾರ್ಯಕ್ರಮ ಇಡೀ ಪಟ್ಟಣದಕ್ಕೂ ಸ್ವಚ್ಛತೆಯ ಮೆರಗು ತರಲಿದೆ. ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೆ ಪುರಸಭೆ ಸದಸ್ಯರೆಲ್ಲರೂ ಪಟ್ಟಣದ ಸಾರ್ವಜನಿಕರೊಂದಿಗೆ ಸೇರಿ ವಾರಕ್ಕೊಂದು ದಿನ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇವೆ. ಗುರುಗಳ ಸೂಚನೆಯಂತೆ ಪಟ್ಟಣದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ.**

■ ಪರಪ್ಪ ಖೇತಗೌಡರ. ಪುರಸಭೆ ಸದಸ್ಯರು. ಮುಗಳಖೋಡ

## ಜು. 8ರಿಂದ ಪಂಢರಪುರ ಪಾದಯಾತ್ರೆ

**ಬೆಳಗಾವಿ:** ಬೆಳಗಾವಿ ಹಾಗೂ ಗಡಿ ಭಾಗದ ಭಕ್ತರ ಆರಾಧ್ಯ ದೈವ ವಿಠ್ಠಲನ ದರ್ಶನಕ್ಕಾಗಿ ವಾರಕರಿ ಮಹಾಸಂಘದ ವತಿಯಿಂದ ಪ್ರತಿವರ್ಷ ಹಮ್ಮಿಕೊಳ್ಳಲಾಗುವ ಐತಿಹಾಸಿಕ ಪಂಢರಪುರ ಪಾದಯಾತ್ರೆಯ (ದಿಂಡಿ) ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಸಂತ ಜ್ಞಾನೇಶ್ವರ ಮಹಾರಾಜ್ ಪಾಲ್ಕಿ ಸೋಹಳಾ ಅವರ ಪಾದಯಾತ್ರೆಯ ಅಧಿಕೃತ ಮಾಹಿತಿ ಕೈಪಿಡಿಯನ್ನು ಬಿಡುಗಡೆಗೊಳಿಸಲಾಗಿದ್ದು, ಜು. 8ರಿಂದ ಯಾತ್ರೆ ಆರಂಭವಾಗಲಿದೆ.

1993ರಲ್ಲಿ ಬೆಳಗಾವಿ ಮತ್ತು ಗಡಿ ಭಾಗದ ಭಕ್ತರ ಅನುಕೂಲಕ್ಕಾಗಿ ಆರಂಭಗೊಂಡ ಈ ಪಾದಯಾತ್ರೆಯು ಇದೀಗ 33ನೇ ವರ್ಷಕ್ಕೆ ಕಾಲಿಟ್ಟಿದೆ. ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭವಾದ ಯಾತ್ರೆಯು ವರ್ಷದಿಂದ ವರ್ಷಕ್ಕೆ ವಿಸ್ತರಿಸಿಕೊಂಡು, ಕಳೆದ 10ರಿಂದ 15 ವರ್ಷಗಳಿಂದ ನಿರಂತರವಾಗಿ 700ರಿಂದ 800 ವಾರಕರಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಗಿದೆ.

ಬೆಳಗಾವಿ,ಕೊಲ್ಲಾಪುರ,ಚಂದಗಡಹಾಗೂ ಗೋವಾ ಭಾಗದ ದಾನಿಗಳು ಮತ್ತು ಭಕ್ತರ ಉದಾರ ಸಹಕಾರದಿಂದ ಪಾದಯಾತ್ರೆಯಲ್ಲಿ ಭಾಗವಹಿಸುವ ವಾರಕರಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಅತ್ಯಂತ ವ್ಯವಸ್ಥಿತವಾಗಿ ಕಲ್ಪಿಸಲಾಗುತ್ತಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಜು. 8ರಂದು ಆಳಂದಿಯ ಚಿಂಚಘಾಟಾ ದಿಂದ ಪಾದಯಾತ್ರೆ ಅಧಿಕೃತವಾಗಿ ಆರಂಭಗೊಳ್ಳಲಿದ್ದು, ಜು. 25ರಂದು ಪಂಢರಪುರ ತಲುಪಲಿದೆ. ಜು.26ರಂದು ಮಹಾಪ್ರಸಾದ ವಿತರಣೆ ಯೊಂದಿಗೆ ಸುದೀರ್ಘ ಪಾದಯಾತ್ರೆ ಸಮಾರೋಪಗೊಳ್ಳಲಿದೆ. ಬಿಡುಗಡೆಯಾದ ಮಾಹಿತಿ ಕೈಪಿಡಿಯಲ್ಲಿ ಯಾತ್ರೆಗೆ ದೇಣಿಗೆ ನೀಡಿದ ದಾನಿಗಳ ವಿವರ, ದಿನನಿತ್ಯದ ದಿಂಡಿ ತಂಗುವಸ್ಥಳಗಳಮಾಹಿತಿಹಾಗೂಕಳೆದಸಾಲಿನ (2024-25) ಜಮೆ-ಖರ್ಚಿನ ಸಂಪೂರ್ಣ ಲೆಕ್ಕಾಚಾರವನ್ನು ಪ್ರಕಟಿಸಲಾಗಿದೆ. ಈ ವರ್ಷ ಕೃಷಿ ಚಟುವಟಿಕೆಗಳು ಬೇಗನೆ ಪೂರ್ಣಗೊಳ್ಳುವ ನಿರೀಕ್ಷೆಯಿರುವುದರಿಂದ ಸುಮಾರು 800ರಿಂದ 900 ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಸಂಘಟಕರು ತಿಳಿಸಿದ್ದಾರೆ. ಆಸಕ್ತ ಭಕ್ತರು ತಮ್ಮ ಹೆಸರನ್ನು ಮುಂಚಿತವಾಗಿ ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಲಾಗಿದೆ.



## ಅಂತಾರಾಷ್ಟ್ರೀಯ ಯೋಗ ದಿನಾಚರಣೆ

**ಬೆಳಗಾವಿ:** ಇಲ್ಲಿನ ಶಹಾಪುರದಲ್ಲಿರುವ ಶ್ರೀ ಬಿಎಂ ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯದಲ್ಲಿ, 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ಕೆಎಲ್‌ಇ ಮಯೂರ ಯೋಗಾಸನ ಸ್ಪರ್ಧೆ ಯಶಸ್ವಿಯಾಗಿ ನಡೆಯಿತು.

ಕಾಲೇಜಿನ ಸಭಾಂಗಣ ಹಾಗೂ ಯೋಗ ಹಾಲ್‌ನಲ್ಲಿ ನಡೆದ ಸ್ಪರ್ಧೆಯನ್ನು ಪ್ರಾಂಶುಪಾಲರಾದ ಡಾ. ಸುಹಾಸ್ ಕುಮಾರ್ ಶೆಟ್ಟಿ, ಉಪಪ್ರಾಂಶುಪಾಲರಾದ ಡಾ. ಪಿ.ಜಿ. ಜಾದರ್, ಡೀನ್ ಡಾ. ಬಸವರಾಜ್ ಟುಬಾಕಿ, ಸ್ವಸ್ಥವೃತ್ತ ಮತ್ತು ಯೋಗ ವಿಭಾಗದ ಮುಖ್ಯಸ್ಥರಾದ ಡಾ. ಸಂದೀಪ್ ಸಾಗರೆ, ಡಾ. ಸಂಜೀವ್ ತೋನ್ನಿ ಹಾಗೂ ಯೋಗ ಶಿಕ್ಷಕರಾದ ರಶ್ಮಿ ಚೌಹಾಣ್ ಮತ್ತು ಕಿಶನ್ ಘೋರಟ್ ಅವರು ಜಂಟಿಯಾಗಿ ಉದ್ಘಾಟಿಸಿದರು.

ಬೆಳಗಾವಿ, ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಂದ ಆಗಮಿಸಿದ್ದ 6 ರಿಂದ 70 ವರ್ಷದೊಳಗಿನ ಒಟ್ಟು 182 ಸ್ಪರ್ಧಿಗಳು 24 ವಿವಿಧ ವಿಭಾಗಗಳಲ್ಲಿ ಭಾಗವಹಿಸಿ ತಮ್ಮ ಯೋಗಾಸನ ಕೌಶಲ್ಯವನ್ನು ಪ್ರದರ್ಶಿಸಿದರು.

ಪುರುಷರ 6-9, 10-14, 15-17, 18-25, 26-40 ಹಾಗೂ 40 ವರ್ಷ ಮೇಲ್ಪಟ್ಟ ವಯೋಮಾನದ ವಿಭಾಗಗಳೊಂದಿಗೆ ರಿದಮಿಕ್ ಯೋಗ (ಸೋಲೋ ಮತ್ತು ಪೇರ್) ಸ್ಪರ್ಧೆಗಳು ವಿಶೇಷ ಆಕರ್ಷಣೆಯಾಗಿದ್ದವು. ಪ್ರತಿ ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿಜೇತರಿಗೆ ಕ್ರಮವಾಗಿ 1,500ರೂ., 1,000ರೂ. ಮತ್ತು 750ರೂ. ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಜೊತೆಗೆ ಎಲ್ಲಾ ಸ್ಪರ್ಧಿಗಳಿಗೆ ಭಾಗವಹಿಸುವಿಕೆಯ ಪ್ರಮಾಣಪತ್ರ ವಿತರಿಸಲಾಯಿತು.

ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮಹತ್ವವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮವನ್ನು ಸಂಘಟನಾ ಕಾರ್ಯದರ್ಶಿ ಡಾ. ಸಂದೀಪ್ ಸಾಗರೆ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಸಂಯೋಜಿಸಲಾಯಿತು. ಕಾರ್ಯಕ್ರಮವು ಯೋಗದ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ನೆರವಾಯಿತು.



## ಶಿಷ್ಯಂದಿರ ಒಳ್ಳೆಯ ಸಾಧನೆಯೇ ಶಿಕ್ಷಕರಿಗೆ ಗುರುದಕ್ಷಿಣೆ: ದಂಡಗಿ

**ಗೋಕಾಕ:** ಶಿಷ್ಯಂದಿರ ಒಳ್ಳೆಯ ಸಾಧನೆಯೆ ಗುರುದಕ್ಷಿಣೆಯಾಗಿದ್ದು ಇದರಿಂದ ಗುರುಗಳು ಸಂತುಷ್ಟಗೊಳ್ಳುತ್ತಾರೆಂದು ನಿವೃತ್ತ ಶಿಕ್ಷಕಿ ಹಾಗೂ ಸಾಹಿತಿ ಶಕುಂತಲಾ ದಂಡಗಿ ಹೇಳಿದರು.

ಅವರು, ಭಾನುವಾರದಂದು ನಗರದ ಶುಭಂ ಗಾರ್ಡನ್‌ನಲ್ಲಿ 1979-80ನೇ ಸಾಲಿನ ಎಮ್‌ಎಚ್‌ಎಸ್, ಎಮ್‌ಎನ್‌ಎಸ್, ಎಮ್‌ಇಎಸ್, ಜೆವ್ಹಿಎಸ್ ಶಾಲೆಗಳ ಹತ್ತನೇ ತರಗತಿ ವಿದ್ಯಾರ್ಥಿಗಳ ಪುನರ ಮೀಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಶಿಷ್ಯಂದಿರ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವ ವೃತ್ತಿ ಶಿಕ್ಷಕ ವೃತ್ತಿಯಾಗಿದೆ. ಇಂದು ಗುರುಗಳ ಪಾದ ಪೂಜೆ ಮಾಡಿ ಸತ್ಕರಿಸಿ ಸಂಸ್ಕಾರಯುತ ಕಾರ್ಯವನ್ನು ನೀವೆಲ್ಲ ನೀಡುತ್ತಿರುವುದು ಮುಂದಿನ ಪೀಳಿಗೆಗೆ ಮಾದರಿಯಾಗಿದೆ. ಹುಟ್ಟು ಸಾವಿನ ನಡುವೆ ಒಳ್ಳೆಯ ಸಾಧನೆ ಮಾಡಬೇಕು. ಅಂತಹ ಸಾಧನೆ ಮಾಡಿದ ಶಿಷ್ಯಂದಿರನ್ನು ಪಡೆದ ನಾವೆಲ್ಲರೂ ಧನ್ಯರು ಎಂದರು.

ಈ ಸಂದರ್ಭದಲ್ಲಿ ಅಂದಿನ ಶಿಕ್ಷಕರಾದ ಫಕೀರಪ್ಪ ತೇರದಾಳ, ಮಹ್ಮದಿಸಾಕ್ ಕುಂಬಾರಿ, ಪಾಂಡುರಂಗ ಕದಮ, ಗುರುಪಾದಯ್ಯ ಹಿರೇಮಠ, ಮಲ್ಲಿಕಾರ್ಜುನ ಗಾಣಗಿ, ಮಹಾದೇವ ಹಾದಿಮನಿ, ಚಂದ್ರಶೇಖರ ಮೇಗಲಮನಿ, ಮಹ್ಮದಸುಲ್ತಾನ ಕೋತವಾಲ, ಭೀಮಪ್ಪ ಪಟಗುಂದಿ, ರತ್ನಕ್ಕ ವರದಾಯಿ, ವಿಜಯಲಕ್ಷ್ಮೀ ಅಂಗಡಿ, ಉಪಪ್ರಚಾರ್ಯ ಎಮ್.ಬಿ. ಬಳಗಾರ, ಹಳೆಯ ವಿದ್ಯಾರ್ಥಿಗಳಾದ ನಾಗಲಿಂಗ ಪೋತದಾರ, ಸೋಮಶೇಖರ ಮಗದುಮ, ನಿಜಾನಂದ ಅರಭಾಂವಿ, ಸುನೀಲ ಅಂಕದವರ ಸೇರಿದಂತೆ ಅನೇಕರು ಇದ್ದರು.



## ನೀರಿನ ವಿಷಯದಲ್ಲಿ ರಾಜಕೀಯ ಬೇಡ: ಪ್ರಣಯ ಪಾಟೀಲ

**ರಾಯಬಾಗ:** ತಾಲೂಕಿನ ಶಾಹುಪಾರ್ಕ್ ಗ್ರಾಮದಲ್ಲಿ ಉಂಟಾದ ಕುಡಿಯುವ ನೀರಿನ ತೀವ್ರ ಸಮಸ್ಯೆಗೆ ಸ್ಪಂದಿಸಿದ ಮಾಜಿ ಜಿಪಂ ಸದಸ್ಯ ಪ್ರಣಯ ಪಾಟೀಲ, ನೀರಿನ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಗ್ರಾಮದಲ್ಲಿ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದ್ದ ಕುಡಿಯುವ ನೀರಿನ ಸಮಸ್ಯೆಯನ್ನು ಮನಗಂಡು ತಕ್ಷಣವೇ ಬೋರವೆಲ್ ಕೊರೆಸಿ ಪರಿಹಾರ ಕಲ್ಪಿಸಿದ ಬಳಿಕ ಮಾತನಾಡಿದ ಅವರು,

'ನೀರು ಜೀವನ ಆಧಾರ. ಇದರ ಮೇಲೆ ಯಾವುದೇ ಜಾತಿ, ಮತ ಅಥವಾ ಪಕ್ಷದ ಮುದ್ರೆ ಇರುವುದಿಲ್ಲ. ಪ್ರತಿಯೊಬ್ಬರಿಗೂ ಸಮಾನವಾಗಿ ಅಗತ್ಯವಿರುವ ಇದರಲ್ಲಿ ಯಾರೂ ರಾಜಕೀಯ ಮಿಶ್ರಣ ಮಾಡಬಾರದು' ಎಂದು ಅವರು ತಿಳಿಸಿದರು. ರಮೇಶ ಗಾಯಕವಾಡ ಕಿಶೋರ್ ಗಾಯಕವಾದ ರಾಜು ತಳದಮನಿ, ಸರದಾರ ಚವ್ಹಾಣ, ರಾಮು ಚವ್ಹಾಣ, ವಿಜಯ ಗಾಯಕವಾಡ, ಅಶೋಕ ಶಿಂಗೆ, ದಿಲೀಪ ಜಾಧವ, ವಿಜಯ ಚವ್ಹಾಣ, ರಾಜು ಕಾಳೆ, ಅಭಿಷೇಕ ನರಸಗೌಡರ, ಯುವರಾಜ ಮನ್ನಿಕೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಪ್ರಧಾನಿ ಮೋದಿ ಸುದೀರ್ಘಾವಧಿ ಆಡಳಿತ: ಬಿಜೆಪಿ ಸಂಭ್ರಮಾಚರಣೆ

**ಚಿಕ್ಕೋಡಿ:** ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತವು ದೇಶದ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದ್ದು, ಅವರು ಇಂದು ವಿಶ್ವನಾಯಕರಾಗಿ ಹೊರಹೊಮ್ಮಿದ್ದಾರೆ ಎಂದು ಮಾಜಿ ಸಚಿವೆ ಶಶಿಕಲಾ ಜೊಲ್ಲೆ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತ ಪೂರ್ಣಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಂಭ್ರಮಾಚರಣೆ ಹಾಗೂ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸೇವೆಯೇ ಆಡಳಿತದ ಮೂಲಮಂತ್ರ ಎಂಬುದನ್ನು ಮೋದಿ ಅವರು ತಮ್ಮ ಕಾರ್ಯಶೈಲಿಯ ಮೂಲಕ ದೇಶಕ್ಕೆ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳ ಮೂಲಕ ಕೋಟ್ಯಂತರ ಜನರ ಬದುಕಿನಲ್ಲಿ ಬದಲಾವಣೆ ತರಲಾಗಿದೆ. ಗರೀಬ್ ಕಲ್ಯಾಣ ಯೋಜನೆಯಡಿ 81 ಕೋಟಿ ಜನರಿಗೆ ನೆರವು, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 4 ಕೋಟಿ ಮನೆಗಳ ನಿರ್ಮಾಣ, ಜನಧನ್ ಯೋಜನೆಯ ಮೂಲಕ ಬ್ಯಾಂಕಿಂಗ್ ಸೇವೆಯನ್ನು ಸಾಮಾನ್ಯ ಜನರಿಗೆ ತಲುಪಿಸಲಾಗಿದೆ ಎಂದು ತಿಳಿಸಿದರು.

ರೈತರಿಗಾಗಿ ಪಿಎಂ ಕಿಸಾನ್, ಪಿಎಂ ಫಸಲ್ ಬಿಮಾ, ಪಿಎಂ ಕುಸುಮ್ ಹಾಗೂ ಹನಿ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಜಲಜೀವನ ಮಿಷನ್ ಮೂಲಕ ಗ್ರಾಮೀಣ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗಿದೆ. ಮಹಿಳಾ ಸಬಲೀಕರಣಕ್ಕಾಗಿ 12 ಕೋಟಿ ಶೌಚಾಲಯಗಳ ನಿರ್ಮಾಣ, ಸುಕನ್ಯ ಸಮೃದ್ಧಿ, ಮಾತೃವಂದನಾ ಹಾಗೂ ಮುದ್ರಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂದು ಹೇಳಿದರು.

ಆಯುಷ್ಮಾನ್ ಭಾರತ ಯೋಜನೆಯಡಿ ಕೋಟ್ಯಂತರ ಜನರಿಗೆ ಆರೋಗ್ಯ ಭದ್ರತೆ ಒದಗಿಸಲಾಗಿದೆ. ವಿದೇಶಾಂಗ ನೀತಿಯಲ್ಲಿ ಭಾರತಕ್ಕೆ ಹೊಸ ಗೌರವ ದೊರೆತಿದ್ದು, ದೇಶದ ಭದ್ರತೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ಥಾನಮಾನ ಮತ್ತಷ್ಟು ಬಲಗೊಂಡಿದೆ ಎಂದು ಅಭಿಪ್ರಾಯಪಟ್ಟರು.

2014ರ ಬಳಿಕ ದೇಶದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದ್ದು, ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದರೆ, ಮೋದಿ ನೇತೃತ್ವದ ಸರ್ಕಾರದಲ್ಲಿ ಪಾರದರ್ಶಕ ಆಡಳಿತಕ್ಕೆ ಆದ್ಯತೆ ನೀಡಲಾಗಿದೆ ಎಂದು ಆರೋಪಿಸಿದರು. ವಿಶ್ವ ಆರ್ಥಿಕತೆಯಲ್ಲಿ ಭಾರತದ ಸ್ಥಾನಮಾನವೂ ಗಣನೀಯವಾಗಿ ಏರಿಕೆಯಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ದುರ್ಯೋಧನ ಐಹೊಳೆ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ಮಾಜಿ ಶಾಸಕ ಮಹೇಶ ಕುಮಠಳ್ಳಿ, ಮಹೇಶ ಭಾತೆ, ಶಾಂಭವಿ ಅಶ್ವಥಪೂರ, ದುಂಡಪ್ಪ ಬೆಂಡವಾಡೆ, ಸದಾಶಿವ ಹಳಗಂಳಿ, ರಾಜು ಹರಗನ್ನವರ, ದೀಪಕ ಪಾಟೀಲ, ಶಕುಂತಲಾ ಡೋಣವಾಡೆ ಸೇರಿದಂತೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.




## ಬಿಜೆಪಿ ಮಂಡಲದಿಂದ ಎಸ್‌ಐಆರ್ ಜನಜಾಗೃತಿ ಅಭಿಯಾನ

**ಯರಗಟ್ಟಿ:** ಭಾರತೀಯ ಚುನಾವಣಾ ಆಯೋಗದ (ಇಸಿಐ) ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್.ಐ.ಆರ್) ಪ್ರಕ್ರಿಯೆಯ ಬಗ್ಗೆ ಭಾರತೀಯ ಜನತಾ ಪಕ್ಷವು ತನ್ನ ಮಂಡಲ ಮತ್ತು ಬೂತ್ ಮಟ್ಟದ ಘಟಕಗಳ ಮೂಲಕ ವ್ಯಾಪಕ ಜನಜಾಗೃತಿ ಅಭಿಯಾನಗಳನ್ನು ನಡೆಸುತ್ತಿದೆ.

ಸವದತ್ತಿ ಬಿಜೆಪಿ ಮಂಡಲಗಳಿಂದ ತಾಲೂಕಿನ ರೈನಾಪೂರ, ಕೊರಕೊಪ್ಪ, ಸೊಪ್ಪಡ್ಲ ಗ್ರಾಮದಲ್ಲಿ ಕೈಗೊಳ್ಳಲಾಗುವ ಜಾಗೃತಿ ಕಾರ್ಯಕ್ರಮಗಳ ಕೈಗೊಂಡಿದೆ ಎಂದು ಜಿಲ್ಲಾ ಕಾರ್ಯದರ್ಶಿ ಹಾಗೂ ಸವದತ್ತಿ ತಾಲೂಕಿನ ಎಸ್.ಐ.ಆರ್. ಉಸ್ತುವಾರಿ ಮಂಜುನಾಥ ಪಮ್ಮಾರ ಹೇಳಿದರು.

ಮಂಡಳ ಅಧ್ಯಕ್ಷ ವೀರೂಪಾಕ್ಷ ಮಾಮನಿ ಮಾತನಾಡಿ, ಬೂತ್ ಮಟ್ಟದ ಜಾಗೃತಿ (ಬಿ.ಎಲ್.ಎ) ಬೂತ್ ಮಟ್ಟದ ಏಜೆಂಟರಿಗೆ ತರಬೇತಿ ನೀಡಿ, ಅವರು ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯಲ್ಲಿ ಅರ್ಹರ ಹೆಸರು ಸೇರ್ಪಡೆ ಮಾಡಲು ಮತ್ತು ಅನರ್ಹರ ಹೆಸರುಗಳನ್ನು ತೆಗೆದುಹಾಕಲು ಜಾಗೃತಿ ಮೂಡಿಸಲಾಗುತ್ತದೆ. ಅಕ್ರಮ ಮತದಾರರ ಪರಿಶೀಲನೆ ಮತ್ತು ಅಕ್ರಮ ವಿದೇಶಿಯರು ಅಥವಾ ನಕಲಿ ಮತದಾರರು ಪಟ್ಟಿಗೆ ಸೇರ್ಪಡೆಯಾಗುವುದನ್ನು ತಡೆಗಟ್ಟಿ, ಸ್ವಚ್ಛ ಮತದಾರರ ಪಟ್ಟಿಯನ್ನು ಹೊಂದುವುದರ ಮಹತ್ವವನ್ನು ಜನರಿಗೆ ತಿಳಿಸಲಾಗುತ್ತಿದೆ ಎಂದು ಗ್ರಾಮಸ್ಥರಿಗೆ ಹೇಳಿದರು.

ವಿರೋಧ ಪಕ್ಷಗಳು ಎಸ್.ಐ.ಆರ್ ಪ್ರಕ್ರಿಯೆಯ ಬಗ್ಗೆ ಸೃಷ್ಟಿಸುತ್ತಿರುವ ಗೊಂದಲ ಮತ್ತು ಸುಳ್ಳು ಮಾಹಿತಿಗಳಿಗೆ ವಾಸ್ತವಿಕ ಮಾಹಿತಿ ಹಾಗೂ ಅಂಕಿ-ಅಂಶಗಳ ಮೂಲಕ ಜನರಿಗೆ ಸ್ಪಷ್ಟನೆ ನೀಡಲಾಗಿದೆ ಎಂದರು.

ಈ ವೇಳೆ ಬಿಎಲ್‌ಓ ಈರಣ್ಣಾ ಚಂದರಗಿ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಕಾಶ ನರಿ, ಮಾಜಿ ಗ್ರಾಪಂ ಅಧ್ಯಕ್ಷ ಗೌಡಪ್ಪ ಸವದತ್ತಿ, ಮಾಜಿ ರೈತ ಮೋರ್ಚಾ ಅಧ್ಯಕ್ಷ ವೆಂಕಟೇಶ ದೇವರಡ್ಡಿ, ಮಾಜಿ ಎಪಿಎಂಸಿ ಅಧ್ಯಕ್ಷ ಬಸಯ್ಯ ಹಿರೇಮಠ, ಯರಗಟ್ಟಿ ಮಹಾಶಕ್ತಿ ಅಧ್ಯಕ್ಷ ಚೇತನ ಜಕಾತಿ, ಯುವ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ತೊರಗಲ್ಲ, ಮಲ್ಲೇಶ್ವರ ಸುಳೇಬಾವಿ, ಈರಣ್ಣಾ ವೀರಶೆಟ್ಟಿ, ಮಹಾದೇವ ಮುರಗೋಡ, ಆನಂದ ಬಾಗೋಡಿ, ಗ್ರಾಪಂ ಮಾಜಿ ಸದಸ್ಯ ನಂದಗೋಪಾಲ ಕಡೆಮನಿ, ಸದಾನಂದ ಪಾಟೀಲ, ಮಹಾದೇವ ಯಡ್ರಾಂವಿ, ಭೀಮರಡ್ಡಿ ಸಿದ್ನಾಳ, ಮಲ್ಲಪ್ಪ ಹೂಗಾರ, ಮಂಜುನಾಥ ನೀಲಪ್ಪನವರ, ವಿಠ್ಠಲ ಬಂಟನೂರ, ಭೀಮಶಿ ಕಳ್ಳಿಗುದ್ದಿ, ಗಂಗಪ್ಪ ಶಿದ್ನಾಳ, ಲಕ್ಷ್ಮಣ ಬಾಗೋಡಿ, ಆರ್. ಆರ್. ಗಂಗರಡ್ಡಿ, ಪುಂಡಲೀಕ ಪೂಜೇರ, ಮೈತ್ರಾ ಹೊಂಗಲ, ಜಯಶ್ರೀ ಗಾಣಗಿ, ಯಶೋಧಾ ಕಾಶಪ್ಪನ್ನವರ, ಸಕ್ಕುಬಾಯಿ ಕುಂಬಾರ, ಚುಳಕಿ, ಮಹಾಂತೇಶ ಅಡಕಿ, ಶ್ರೀನಿವಾಸ ಕಡೇಮನಿ, ಬಸವರಾಜ ತೋರಣಗಟ್ಟಿ, ಉಮೇಶ ದಾಸರ, ವೆಂಕಣ್ಣ ಹುರಕನವರ ಮುತಾಂದ ಗಣ್ಯರು ಯುವಕರು ಇದ್ದರು.



## ಕಿರುಸುದ್ದಿ

### ಪರಿಸರ ದಿನಾಚರಣೆ ನಾಳೆ

• **ಮೂಡಲಗಿ:** ನಗರದ ಪ್ರತಿಷ್ಠಿತ ಹಣಕಾಸು ಸಂಸ್ಥೆಯಾದ ಜ್ಯೋತಿ ಅರ್ಬನ್ ಕೋ-ಆಪ್. ಕ್ರೆಡಿಟ್ ಸೊಸೈಟಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಮಂಗಳವಾರ ಬೆಳಗ್ಗೆ 9 ಗಂಟೆಗೆ ಜರುಗುವುದು ಎಂದು ಪ್ರಧಾನ ಕಾರ್ಯದರ್ಶಿ ಪ್ರಕಾಶ ರಡೆರಟ್ಟಿ ತಿಳಿಸಿದ್ದಾರೆ.

ತಹಶೀಲ್ದಾರ್ ಶ್ರೀಶೈಲ ಗುಡುಮೆ, ಪುರಸಭೆ ಮುಖ್ಯಾಧಿಕಾರಿ ತುಕಾರಾಮ ಮಾದರ ಉದ್ಘಾಟಕರಾಗಿ ಆಗಮಿಸುವರು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಮಲ್ಲಪ್ಪ ಪ. ಮದಗುಣಕಿ ವಹಿಸುವರು.

ಮುಖ್ಯಾತಿಥಿಗಳಾಗಿ ಅರಣ್ಯ ಅಧಿಕಾರಿಗಳಾದ ರಾಜು ಕೆ. ಅಮರಾಗೋಳ, ಮಹಾಂತೇಶ ಹಿಪ್ಪರಗಿ, ಮಾಜಿ ಪುರಸಭೆ ಸದಸ್ಯ ಈರಣ್ಣ ಕೊಣ್ಣೂರ, ಪರಿಸರ ಸ್ನೇಹಿ ಈರಪ್ಪ ಡವಳೇಶ್ವರ ಆಗಮಿಸುವರು.

### ಜೂ. 17ರಿಂದ ಯೋಗ ತರಬೇತಿ ಶಿಬಿರ

• **ಸಿದ್ದಾಪುರ:** ಪತಂಜಲಿ ಯೋಗ ಪೀಠ ಟ್ರಸ್ಟ ಹರಿದ್ವಾರ, ಪತಂಜಲಿ ಯೋಗ ಸಮಿತಿ, ಮಹಿಳಾ ಪತಂಜಲಿ ಯೋಗ ಸಮಿತಿ ಸಿದ್ದಾಪುರ ಇವರುಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಯೋಗ ಗುರು ಭವರಲಾಲ್ ಆರ್ಯ ಅವರ ಮಾರ್ಗದರ್ಶನದಲ್ಲಿ ಅಡ್ವಾನ್ಸ ಯೋಗ ತರಬೇತಿ ಶಿಬಿರವನ್ನು ಪಟ್ಟಣದ ರಾಘವೇಂದ್ರ ಮಠದಲ್ಲಿ ಜೂನ್ 17ರಿಂದ ಜುಲೈ 14 ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಪ್ರಕಟಣೆಯಲ್ಲಿ ತಿಳಿಸಿದೆ.

### ಅಕ್ರಮ ಮದ್ಯ, ಗಾಂಜಾ ದಂಧೆಗೆ ಪೊಲೀಸ್ ಬ್ರೇಕ್

• **ಬೆಳಗಾವಿ:** ನಗರ ಪೊಲೀಸ್ ಆಯುಕ್ತರ ಕಚೇರಿ ಬಿಡುಗಡೆ ಮಾಡಿದ ಪ್ರಕಟಣೆ ಪ್ರಕಾರ, ಅಕ್ರಮ ಸಾರಾಯಿ ಮಾರಾಟ ಮತ್ತು ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ ಪ್ರಕರಣಗಳಲ್ಲಿ ಉದ್ಯಮಬಾಗ್ ಹಾಗೂ ಖಡೇಬಜಾರ್ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಉದ್ಯಮಬಾಗ್ ಪೊಲೀಸ್ ಠಾಣಾ ವ್ಯಾಪ್ತಿಯ ಅರುಣಾ ಫ್ಯಾಕ್ಟರಿ ಹತ್ತಿರ ಯಾವುದೇ ಪರವಾನಗಿ ಇಲ್ಲದೆ ಗೋವಾ ರಾಜ್ಯದ ಮದ್ಯ ಮಾರಾಟ ಮಾಡುತ್ತಿದ್ದ ಹೊನ್ನಾವರ ತಾಲೂಕು ಬಾಲಕುರದ ನಿವಾಸಿ ದೇವೇಂದ್ರ ನಾರಾಯಣ ನಾಯಕ(41) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಆತನಿಂದ 11.5 ಲೀಟರ್ ಗೋವಾ ಮದ್ಯ - ಮೌಲ್ಯ 4,520 ರೂ., ಮೊಬೈಲ್ - 2,500 ರೂ., ಖಾಲಿ ಬಾಟಲಿ 4 - 200 ರೂ., ಕಪ್ 4 - 200 ರೂ. ಒಟ್ಟು 7,420 ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ಉದ್ಯಮಬಾಗ್ ಠಾಣೆಯಲ್ಲಿ ಕ್ರೈಂ ಸಂಖ್ಯೆ 64/2026 ಕಲಂ 34(1), 38 ಕೆ ಅಬಕಾರಿ ಕಾಯ್ದೆ-1965ರ ಅಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ : ಖಡೇಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯ ಬಂದಾಳ್ ಚೌಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಹಚ್ಚಿ ಸೇವಿಸುತ್ತಿದ್ದ ಶಂಕರ್ ಸದಾನಂದ ಸಾವಂತ(36) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.ಆತನ ವಿರುದ್ಧ ಖಡೇಬಜಾರ್ ಠಾಣೆಯಲ್ಲಿ ಕ್ರೈಂ ಸಂಖ್ಯೆ 65/2026 ಕಲಂ 27(ಎ) ಎನ್.ಡಿ.ಪಿ.ಎಸ್ ಕಾಯ್ದೆ-1985 ಅಡಿ ಪ್ರಕರಣ ದಾಖಲಾಗಿದೆ.

ಪೊಲೀಸ್ ಆಯುಕ್ತರು ಕಾರ್ಯಾಚರಣೆ ನಡೆಸಿದ ತಂಡವನ್ನು ಶ್ಲಾಘಿಸಿದ್ದಾರೆ. ನಗರದಲ್ಲಿ ಮಾದಕ ದ್ರವ್ಯ ಹಾಗೂ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ನಿರಂತರ ದಾಳಿ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ.

### ಜೂಜಾಟ: 1.60 ಲಕ್ಷ ರೂ. ಜಪ್ತಿ

• **ಬೆಳಗಾವಿ:** ಮಹಾನಗರ ಹಾಗೂ ಉಪನಗರ ಪ್ರದೇಶಗಳಲ್ಲಿ ಅಕ್ರಮ ಜೂಜಾಟ ದಂಧೆ ವಿರುದ್ಧ ಬೆಳಗಾವಿ ಪೊಲೀಸರು ಸರಣಿ ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ. ಕಾಕತಿ ಮತ್ತು ಎಪಿಎಂಸಿ ಪೊಲೀಸ್ ಠಾಣಾ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಇಸ್ಪೀಟ್ ಆಟವಾಡುತ್ತಿದ್ದ 26 ಮಂದಿ ಜೂಜುಕೋರರನ್ನು ಬಂಧಿಸಿ 1,60,465 ರೂ. ನಗದು ಜಪ್ತಿ ಮಾಡಲಾಗಿದೆ.ಕಾಕತಿ ಠಾಣೆ ಪಿಎಸ್ಐ ಮೃತ್ಯುಂಜಯ ಮುಳವಾದ ನೇತೃತ್ವದ ತಂಡ ಜೂ.13 ಶುಕ್ರವಾರ ಹೊನಗಾ ಇಂಡಸ್ಟ್ರಿಯಲ್ ಏರಿಯಾದ ಸಾರ್ವಜನಿಕ ಸ್ಥಳದಲ್ಲಿ ದಾಳಿ ನಡೆಸಿತು. ಇಸ್ಪೀಟ್ ಜೂಜಾಟದಲ್ಲಿ ತೊಡಗಿದ್ದ 20 ಮಂದಿ ಆರೋಪಿಗಳನ್ನು ಬಂಧಿಸಲಾಯಿತು.

**ಬಂಧಿತ ಆರೋಪಿಗಳು:**

ಯಾಸೀನ್ ಮಹಮ್ಮದ್ ಹುಸೇನ್ ತಹಶೀಲ್ದಾರ್, ಆರೀಫ್ ಮಹಮ್ಮದಗೌಸ್ ಶಹಾಪುರಿ, ಮಹಮ್ಮದ್ ತಯ್ಯುಮ್ ಜತ್ರಿ, ಮನ್ಸೂರ್ ದಾವೂದಸಾಬ್ ಬಾಗವಾನ, ಸಹೇರಾಜ ಸ ಮಹಮ್ಮದಗೌಸ್ ಶಹಾಪುರಿ, ಫೈಜಾನ್ ಅಲ್ತಾಫ್ ಮುಜಾವರ, ಶಾನೂರ ಬಾಳಪ್ಪ ಮುಚ್ಚಂದಿ, ಆರೀಫ್ ಅಜುರುದ್ದೀನ ಮುಲ್ಲಾ, ಸುನೀಲ ಅಷ್ಟೇಕರ, ದಸ್ತಗೀರಸಾಬ ನೂರಅಹ್ಮದ್ ದೇಸಾಯಿ, ವಾಸಿಮ್ ಕಾಸಿಮ್ ಮುಜಾವರ, ಅಲ್ತಾಫ್ ರಾಸಿಂಸಾಬ ಮುಜಾವರ, ದಸ್ತಗಿರ ಅಜಮುದ್ದೀನ ಮುಲ್ಲಾ, ಆರೀಫ್ ಮಹಮ್ಮದಶಫಿ ರಾಕತೀಕರ, ಸಕಲನ ಹರೂನ ತಂಬಾಕವಾಲೆ, ಸಿರಾಜು ಅಬುಲಗಣಿ ಖಾಜಿ, ಆತಿಫ್ ರಫೀಕ್ ಸೋದಾಗರ, ಪ್ರಕಾಶ ಶಂಕರ ಬನ್ನೆ, ಗಣಪತಿ ರಾಮಪ್ಪ ಕೆಂಚವ್ವಗೋಳ, ಜಹಾಂಗೀರ ಅಬ್ದುಲ ನಾಯಕ.



ಬೆಳಗಾವಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಬೆಳಗಾವಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ನಿರ್ಮಿಸಲಾದ ಸುಸಜ್ಜಿತ ಕೊಠಡಿಯಲ್ಲಿ 'ನಮ್ಮ ಕ್ಲಿನಿಕ್'ನ್ನು ಶಾಸಕ ಆಸೀಫ್ ಸೇಠ್ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ವಾಕರಸಾ ಸಂಸ್ಥೆಯ ಉಪಾಧ್ಯಕ್ಷ ಸುನೀಲ್ ಹನಮನ್ನವರ, ವಿಭಾಗೀಯ ನಿಯಂತ್ರಣಾಧಿಕಾರಿ ಕೆ.ಎಲ್. ಗುಡೆನ್ನವರ, ತಾಲೂಕು ಆರೋಗ್ಯ ಅಧಿಕಾರಿ, ರಮೇಶ್ ದಂಡಗಿ , ಆರೋಗ್ಯ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಇತರರು ಇದ್ದರು.

## ಭಾವೈಕ್ಯತೆ ಬೆಸೆಯುವ ಜಾತ್ರೆ, ಉರುಸು

• **ಯರಗಟ್ಟಿ:** ಹಬ್ಬ ಹರಿದಿನ, ಜಾತ್ರೆ ಮತ್ತು ಉರುಸುಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಪರಸ್ಪರರಲ್ಲಿ ಸೌಹಾರ್ದತೆ, ಭಾವೈಕ್ಯತೆ ಬೆಸೆಯುತ್ತದೆ ಎಂದು ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ ಹೇಳಿದರು.

ಅವರು ಇತ್ತೀಚೆಗೆ ಪಟ್ಟಣದ ಹಜರತ್ ಬಾಬಾಬುಡನ್ ಶಾವಲಿ ಸಂದಲ್ ಹಾಗೂ ಉರುಸು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಾಲೂಕಿನ ಜನರು ಜಾತಿ ಧರ್ಮ ಭೇದಭಾವ ಮಾಡದೆ ಪರಸ್ಪರರು ಸಹೋದರರಂತೆ ಭಾವೈಕ್ಯತೆಯಿಂದ ಬದುಕುತ್ತಿದ್ದಾರೆ ಎಂದರು.

ಪಟ್ಟಣ ಪಂಚಾಯತ ಸದಸ್ಯ ನಿಖಿಲ ಪಾಟೀಲ ಮಾತನಾಡಿ, ಪಟ್ಟಣದಲ್ಲಿ ಭಾವೈಕ್ಯತೆ ಸಂಕೇತವಾಗಿದೆ ಎಂದರು. ಈ ವೇಳೆ ಸಲೀಂಬೇಗ ಜಮಾದಾರ, ಮೌಲಾಸಾಬ ಮುಲ್ಲಾ, ಫೀರೋಜ ಖಾದ್ರಿ, ಅಲ್ತಾಫ್ ಮುಲ್ಲಾ, ಹುಸೇನ ದಿಲಾವರನಾಯಕ, ಫೀರೋಜ ಖಾದ್ರಿ, ಚೇತನ ಜಕಾತಿ, ಹನಮಂತ ಹಳ್ಳಂಡಿ, ರವಿ ದೇವರಡ್ಡಿ, ರವಿ ಉದಪುಡಿ, ಪ್ರದೀಪ ಮಠಪತಿ, ದಿವಾನಸಾಬ ಶಿಕಲಗಿ, ನಜೀರ ನದಾಫ್, ಶಕೀಲ ಜಮಾದಾರ, ಶರೀಫ್ ಹುಸೇನಾಯಕ, ರಫೀಕ ಜಂಗುನ್ನವರ, ತಹಶೀಲ್ದಾರ್ ಎಂ.ವ್ಹಿ. ಗುಂಡಪ್ಪಗೋಳ, ಪಪಂ ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಪಿಎಸ್ಐ ಎಲ್.ಬಿ. ಮಾಳಿ, ಎಎಸ್ಐ ಬಿ.ಎಸ್. ರಂಗಣ್ಣವರ, ಪಪಂ ಸದಸ್ಯ ಹನಮಂತ ಹಾರೂಗೊಪ್ಪ, ಪ್ರಕಾಶ ವಾಲಿ, ರಫೀಕ ಡಿ.ಕೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಯರಗಟ್ಟಿ:ಇತ್ತೀಚೆಗೆ ಪಟ್ಟಣದ ಹಜರತ್ ಬಾಬಾಬುಡನ್ ಶಾವಲಿ ಸಂದಲ್ ಹಾಗೂ ಉರುಸು ಕಾರ್ಯಕ್ರಮ ನಡೆಯಿತು. ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ, ಪಟ್ಟಣ ಪಂಚಾಯತ ಸದಸ್ಯ ನಿಖಿಲ ಪಾಟೀಲ, ಈ ವೇಳೆ ಸಲೀಂಬೇಗ ಜಮಾದಾರ, ಮೌಲಾಸಾಬ ಮುಲ್ಲಾ, ಫೀರೋಜ ಖಾದ್ರಿ, ಅಲ್ತಾಫ್ ಮುಲ್ಲಾ, ಹುಸೇನ ದಿಲಾವರನಾಯಕ, ಫೀರೋಜ ಖಾದ್ರಿ, ಚೇತನ ಜಕಾತಿ, ಹನಮಂತ ಹಳ್ಳಂಡಿ, ರವಿ ದೇವರಡ್ಡಿ ಇತರರು ಇದ್ದರು.

### ಸವಣೂರಿನ ಉಪನ್ಯಾಸಕ ಡಾ. ನೀಲಪ್ಪ ವಾಲಿಕಾರ್ ಅಭಿಮತ

# ಜಾನಪದವೇ ಕಿತ್ತೂರು ಇತಿಹಾಸದ ಮೂಲ ದಾಖಲೆ

• **ಬೆಳಗಾವಿ:** ಕಿತ್ತೂರು ಸೇರಿದಂತೆ ಬಹುತೇಕ ರಾಜಮನೆತನಗಳು, ಸಂಸ್ಥಾನಗಳ ಇತಿಹಾಸಕ್ಕೆ ಮೂಲ ದಾಖಲೆ ಜಾನಪದವೇ ಆಗಿದೆ ಎಂದು ಸವಣೂರಿನ ಉಪನ್ಯಾಸಕ ಡಾ. ನೀಲಪ್ಪ ವಾಲಿಕಾರ್ ಹೇಳಿದರು.

ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲಾ ಘಟಕ ಏರ್ಪಡಿಸಿದ್ದ ದಿವಂಗತ ಮರಿಕಲಪ್ಪ ಮಲಶೆಟ್ಟಿ ಮತ್ತು ಬೆಟಗೇರಿ ಕೃಷ್ಣ ಶರ್ಮ ದತ್ತಿ ಉಪನ್ಯಾಸ ಹಾಗೂ ಜಾನಪದ ಗೀತ ಗಾಯನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಣ್ಣಿನ ಸೊಗಡು, ಹಳ್ಳಿಗಾಡಿನ ಬದುಕಿನ ಚಿತ್ರಣ ತಿಳಿಸುವ, ಇತಿಹಾಸ ಅನಾವರಣಗೊಳಿಸುವ ತೊಂಡಿ ಸಂಪ್ರದಾಯದ ಜಾನಪದ ಒಬ್ಬರಿಂದ ಇನ್ನೊಬ್ಬರಿಗೆ ತಿಳಿಸುವ, ಪ್ರಚಾರಗೊಳಿಸುವ ಸಾಹಿತ್ಯವೇ ಜಾನಪದ ಸಾಹಿತ್ಯ. ಇಂದಿಗೂ ಹಳ್ಳಿಗಳಲ್ಲಿ ಮಾತ್ರ ಇದು ಕಂಡುಬರುತ್ತದೆ ಎಂದು ಡಾ. ವಾಲಿಕಾರ್ ನುಡಿದರು.

ಸೋಬಾನೆ ಪದಗಳು, ಗೀಗಿ ಪದಗಳು, ಬೀಸು ಕಲ್ಲಿನ ಪದಗಳು, ಭಜನೆಗಳು, ಬಯಲಾಟ, ದೊಡ್ಡಾಟ, ಕೃಷಿ ಕೆಲಸದ ಹಾಡುಗಳು, ಪುರಾಣ ಕಥೆ, ದೇವರ ನಾಮ, ದೇವರ ಸ್ತುತಿ, ಅನುಭವದ ಮಾತು, ಅಜ್ಜಿ ಕಥೆ, ಒಗಟು, ಒಡಪು, ಗಾದೆ ಮಾತು, ಸಂಗ್ಯಾ-ಬಾಳ್ಯಾ ನಾಟಕ, ತಾಯಿ-ಮಗಳ ಸಂಬಂಧದ ಹಾಡುಗಳು, ಮನಸ್ಸಿಗೆ ನೆಮ್ಮದಿ ನೀಡುವ ಹಾಡುಗಳು - ಇವೆಲ್ಲವೂ ಜಾನಪದ ಸಾಹಿತ್ಯದ ಗಟ್ಟಿ ಪ್ರಕಾರಗಳು. ಇವೆಲ್ಲ ನಮ್ಮ ಸಂಸ್ಕೃತಿ ಉಳಿಸುವಂತಹವು ಎಂದು ಅವರು ತಿಳಿಸಿದರು.



ಜನಪದರ ಬಾಯಿಯಿಂದ ಬಾಯಿಗೆ ಹಬ್ಬುವ ಈ ಸಾಹಿತ್ಯದ ನಿರ್ಮಾತೃರ ಹೆಸರು ಎಲ್ಲಿಯೂ ಕಾಣುವುದಿಲ್ಲ. ಇವೆಲ್ಲ ಇಂದು ಮರೆಯಾಗುತ್ತಿರುವುದು ಖೇದಕರ. ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾದರೂ ನಿರೀಕ್ಷಿಸಿದ ಕಾರ್ಯ ಆಗುತ್ತಿಲ್ಲ ಎಂದು ಅವರು ವಿಷಾದಿಸಿದರು.

ಹಿರಿಯ ಸಾಹಿತಿ ಯು.ರು.ಪಾಟೀಲ ಮಾತನಾಡಿ, ಸಾಹಿತ್ಯದ ಎಲ್ಲ ಪ್ರಕಾರಗಳು ಜಾನಪದ ಸಾಹಿತ್ಯದ ವಿಭಾಗಗಳೇ. ನಮ್ಮ ದೇಶದ ಜಾನಪದ ಗುಂಗು ವಿದೇಶಿಯರನ್ನು ಬಿಟ್ಟಿಲ್ಲ. ಕಸೂತಿ ಕಲೆ ಸೇರಿದಂತೆ ಬೇರೆ ಕ್ಷೇತ್ರಗಳಲ್ಲೂ ಜಾನಪದ ಸೊಗಡು ಕಂಡುಬರುತ್ತದೆ. ಮಹಿಳೆಯರ ಬೈಗುಳ, ಉತ್ತರ ಕರ್ನಾಟಕದ ಬೈಗುಳಗಳ ಕುರಿತೇ ಸಂಶೋಧನಾ ಗ್ರಂಥಗಳು ಪ್ರಕಟವಾಗಿವೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷೆ ಮಂಗಳ ಮೆಟಗುಡ್ಡ ಅಧ್ಯಕ್ಷತೆ ವಹಿಸಿದ್ದರು. ಮುರುಗೇಶ ಶಿವಪೂಜಿ, ರತ್ನಪ್ರಭಾ ಬೆಲ್ಲದ ವೇದಿಕೆಯ ಮೇಲಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ವಾಯ್. ಮೆಣಸಿನಕಾಯಿ ಸ್ವಾಗತಿಸಿದರು. ಸುಮಾ ಬೇವಿನಕೊಪ್ಪ ಮಠ ಅತಿಥಿ ಪರಿಚಯ, ಮಹಾದೇವಿ ಅಜವಾನ ನಿರೂಪಣೆ, ಹೇಮಾವತಿ ಸುನೋಳಿ ವಂದಿಸಿದರು.

ಗೌರವ ಕಾರ್ಯದರ್ಶಿ ವೀರಭದ್ರ ಅಂಗಡಿ, ರತ್ನಪ್ರಭಾ ಬೆಲ್ಲದ, ಸುರೇಶ್ ಸಕ್ಕರೆನ್ನವರ್, ಆರ್.ವಿ. ಬನಶಂಕರಿ, ಶೋಭಾ ಬೇವಿನ ಕೊಪ್ಪ, ಆಶಾ ಸಂಸದ್ದಿ, ಖುಷಿ ಬಿರಾದ, ಲಲಿತಾ ಪರ್ವತ್ ರಾವ್, ಶೋಭಾ ಶಿವಳ್ಳಿ, ಪಾರ್ವತಿ ತುಪ್ಪದ, ಇಂದಿರಾ ಮೋಟೆಬೆನ್ನೂರು, ಬಾಳಗೌಡ ದೊಡ್ಡಬಂಗಿ ಸೇರಿ ಹಲವರು ಜಾನಪದ ಹಾಡುಗಳನ್ನು ಹಾಡಿದರು.

## ಸ್ವ-ಉದ್ಯೋಗದಿಂದ ಸ್ವಾವಲಂಬನೆ ಬದುಕು

• **ನೇಸರಗಿ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ ಟ್ರಸ್ಟ್ (ರಿ) ಇದರ ಸಹಯೋಗದಲ್ಲಿ ಸಮೀಪದ ಹಣಬರಹಟ್ಟಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಿ ಜ್ಞಾನವಿಕಾಸ ಕೇಂದ್ರದಲ್ಲಿ ಮತ್ತು ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಶ್ರೀ ಗ್ರಾಮದೇವತೆ ದೇವಸ್ಥಾನದಲ್ಲಿ ಉಚಿತ ಹೊಲಿಗೆ ತರಬೇತಿ ಕಾರ್ಯಕ್ರಮ ಉದ್ಘಾಟನೆ ಹಮ್ಮಿಕೊಳ್ಳಲಾಗಿತ್ತು.

ಅತಿಥಿಗಳಾದ ಶ್ರೀಧರ ಯರಡಾಲ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಹಾಗೂ ಅದರ ಸದುಪಯೋಗ ಸ್ವ-ಉದ್ಯೋಗ ಆಧಾರಿತ ತರಬೇತಿಗಳು ಸಣ್ಣ ಪ್ರಮಾಣದ ಕೈ ಕೆಲಸ ಟೈಲರಿಂಗ್ ತರಬೇತಿ ಇಂತಹ ಹತ್ತಾರು ಕಾರ್ಯಕ್ರಮಗಳನ್ನು ಕೈಗೊಂಡ ವೀರೇಂದ್ರ ಹೆಗ್ಗಡೆ, ಹೇಮಾವತಿ ಅಮ್ಮನವರು ಬಡವರಿಗೆಂದೇ ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು ನಿಮ್ಮೆಲ್ಲರ ಭಾಗ್ಯ ಕಾರ್ಯಕ್ರಮಗಳ ಉಪಯೋಗ ಎಲ್ಲರೂ ಪಡೆದುಕೊಳ್ಳಬೇಕು ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದುದರೊಂದಿಗೆ ಕುಟುಂಬ ನಿರ್ವಹಣೆಯನ್ನು ಜಾಣ್ಮೆಯಿಂದ ನಿರ್ವಹಿಸುವುದು ಅಗತ್ಯವಾಗಿದೆ ಎಂದರು.

ಪ್ರಾಸ್ತಾವಿಕವಾಗಿ ವಲಯದ ಮೇಲ್ವಿಚಾರಕರಾದ ಪರಶುರಾಮ್ ಅವರು ಯೋಜನೆ ಕಾರ್ಯಕ್ರಮಗಳ ಬಗ್ಗೆ ಸಮುದಾಯ ಅಭಿವೃದ್ಧಿ ಮಾಶಾಸನ ವಾತ್ಸಲ್ಯ, ಸುಜ್ಞಾನಿಧಿ ಶಿಷ್ಯವೇತನ ಜಲಮಂಗಳ ಆರೋಗ್ಯ ರಕ್ಷಾ ಸಂಪೂರ್ಣ ಸುರಕ್ಷಾ ಆರೋಗ್ಯ ವಿಮೆ ಬಗ್ಗೆ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷೆ ಶಶಿಕಲಾ ದೇವಲಾಪುರ, ಉದ್ಘಾಟಕರಾಗಿ ಶಾಂತಿನಾಥ, ಕಮಿಟಿ ಅಧ್ಯಕ್ಷ ಭೀಮಶಿ ಗೋವಿ, ತರಬೇತಿ ಶಿಕ್ಷಕರಾದ ಇಂದ್ರವ್ವ ಬನ್ನೂರ, ತಾಲೂಕಿನ ಜ್ಞಾನವಿಕಾಸ ಸಮನ್ವೇಧಿಕಾರಿ ಶೈಲಾಜೆ, ವಲಯದ ಮೇಲ್ವಿಚಾರಕರಾದ ನಿರೂಪಣೆ ಸೇವಾ ಪ್ರತಿನಿಧಿ ಗೀತಾ ಬನ್ನೂರು ಸ್ವಾಗತ ವಲಯದ ಮೇಲ್ವಿಚಾರಕರು ಪರಶುರಾಮ,ವಂದನೆಯನ್ನು ತಾಲೂಕಿನ ಜ್ಞಾನವಿಕಾಸ ಸಮನ್ವೇದಿಕಾರಿ ಶೈಲಾ, ಜ್ಞಾನ ವಿಕಾಸ ಕೇಂದ್ರದ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



## ಕನ್ನಡ ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ

• **ಸಂಕೇಶ್ವರ:** ಕನ್ನಡ ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದ್ದು, ಪಂಪ-ಪೊನ್ನ-ರನ್ನ ಕನ್ನಡ ಸಾಹಿತ್ಯದ ಮೂಲ ಕವಿಗಳು, ಅವರು ರಚಿಸಿದ ಕೃತಿಗಳು ಇಂದಿಗೂ ಪ್ರಸ್ತುತ ಎಂದು ಸಾಹಿತಿ ಶಿವಾನಂದ ಗುಂಡಾಳಿ ಅಭಿಪ್ರಾಯಪಟ್ಟರು.

ಪಟ್ಟಣದ ಆದ್ಯ ಶ್ರೀ ನಿಜಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಭಾರತ ರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಬಿಇಡಿ ಮಹಾವಿದ್ಯಾಲಯ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಮತ್ತು ಚಕೋರ ಸಾಹಿತ್ಯ ವಿಚಾರ ವೇದಿಕೆ ಬೆಳಗಾವಿ ಇವರ ಸಹಯೋಗದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯವನ್ನು ಪೂರ್ವ ಹಳಗನ್ನಡ, ನಡುಗನ್ನಡ ಹಾಗೂ ಆಧುನಿಕ ಸಾಹಿತ್ಯ ಎಂದು ವರ್ಗಿಕರಿಸುತ್ತೇವೆ. ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ನವ್ಯೋತ್ತರ ಸಾಹಿತ್ಯಗಳು ತುಂಬಾ ಪ್ರಭಾವ ಬೀರುತ್ತವೆ. ಕಾಲಕಾಲಕ್ಕೆ ಸಾಹಿತ್ಯ ಬದಲಾವಣೆ ಕಂಡರೂ ಮೌಲ್ಯಗಳು, ಆದರ್ಶಗಳ ಆಧಾರಿತ ಸಾಹಿತ್ಯ ರಚನೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯರಾದ ಹಮೀದಾ ಬೇಗಂ ದೇಸಾಯಿ ಅವರು ಕನ್ನಡ ಸಾಹಿತ್ಯ, ಪರಂಪರೆಯ ಕುರಿತು ವಿಚಾರ ಹಂಚಿಕೊಂಡರು. ಜೊತೆಗೆ ಚಕೋರ ಸಾಹಿತ್ಯ ವೇದಿಕೆಯ ಕಾರ್ಯ ಚಟುವಟಿಕೆಗಳ ಕುರಿತು ಅಭಿಮಾನದ ನುಡಿಗಳನ್ನಾಡಿದರು.

ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಸಿ.ಎಸ್. ಪಾಟೀಲ ಅವರು ಮಾತನಾಡಿ, ಸಾಹಿತ್ಯ ವಲಯದ ವಿಚಾರಗಳು ಚರ್ಚೆಯಾಗಬೇಕು. ಅಂದಾಗ ವಿದ್ಯಾರ್ಥಿಗಳು ಹಾಗೂ ಸಾಹಿತ್ಯಮುಖಾಮುಖಿಯಾಗಲಿಕ್ಕೆ ಸಾಧ್ಯ ಎಂದು ಹೇಳಿದರು.

ಶಿವಗೌಡ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದರು, ಗೌರವ ಉಪಸ್ಥಿತಿಯಲ್ಲಿ ಡಾ. ಮೈತ್ರೇಯಣಿ ಗದಿಗೆಪ್ಪಗೌಡರ, ಸದಸ್ಯರು ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಗಣೇಶ ನಡಗದಲ್ಲಿ, ಚಂದ್ರಕಾಂತ ಕೆಂಪದಾಣಿ, ಎಸ್. ಡಿ. ಯಕನೆ ಇದ್ದರು. ಪ್ರೇಮಾ ಖೇಮಾವಿ ನಿರೂಪಿಸಿದರು. ಅನುಜಾ ಮಗದುಮ್ಮ ಸ್ವಾಗತಿಸಿದರು. ರಂಜಿತಾ ಹುದ್ದಾರ ವಂದಿಸಿದರು.



## ಆಯುಷ್ಮಾನ್ ಆರೋಗ್ಯ ಮಂದಿರ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಚಾಲನೆ



• **ಕಾಗವಾಡ:** ಶಾಸಕ ರಾಜು ಕಾಗೆ, ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಇವರ ವಿಶೇಷ ಪ್ರಯತ್ನದಿಂದ ಜುಗೂಳ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಯ ಗ್ರಾಮಸ್ಥರು ಬಹುದಿನಗಳ ಬೇಡಿಕೆ ಈಗ ಈಡೇರಿದ್ದು, 65 ಲಕ್ಷ ರೂ. ಶಾಸಕರ ಅನುದಾನದಲ್ಲಿ ನೂತನ ಆಯುಷ್ಮಾನ್ ಆರೋಗ್ಯ ಮಂದಿರ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಕಾಗವಾಡ ಯುವ ಕಾಂಗ್ರೆಸ್ ಅಧ್ಯಕ್ಷ ಉಮೇಶ ಪಾಟೀಲ ತಿಳಿಸಿದ್ದಾರೆ.

ನಂತರ ಮಾತನಾಡಿದ ಅವರು, ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿರುವ ಶಾಸಕರು, ಜುಗೂಳ ಗ್ರಾಮದ ಅಭಿವೃದ್ಧಿಗೆ ಅನುದಾನದ ಹೊಳೆಯನ್ನೇ ಹರಿಸಿದ್ದಾರೆ. ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಿಸುವ ಮೂಲಕ ಈಗ ಗ್ರಾಮಸ್ಥರ ಬಹುದಿನಗಳ ಕನಸನ್ನು ಈಡೇರಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿಪರ ಮತ್ತು ಜನಪರ ಕಾರ್ಯಗಳಿಂದಾಗಿ 2028 ರ ಚುನಾವಣೆಯಲ್ಲಿಯೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು.

ಈ ಸಮಯದಲ್ಲಿ ಮಾಜಿ ಗ್ರಾ.ಪಂ. ಅಧ್ಯಕ್ಷ ಕಾಕಾಸಾಬ ಪಾಟೀಲ, ಅನಿಲ ಕರೋಲೆ, ಅಕ್ಷಯ ಪಾಟೀಲ, ಅಮೀನ ನಂದಗಾವೆ, ಬಸವರಾಜ ನಂದಾಳೆ, ಮಹಾದೇವಕಾಂಬಳೆ, ಚಿದಾನಂದ ತಾರದಾಳೆ, ಸುರೇಶ ಪಾಟೀಲ, ದಯಾನಂದ ಮಿನಚೆ, ಶಿವಾನಂದ ಅಮ್ಮಣಗೆ, ಬಿಂದು ಅಧೋಕೆ, ಫಾರೂಖ ಕಳಾವಂತ, ಗುತ್ತಿಗೆದಾರ ವಿಜಯ ಚಿಂಚಲೆ ಸೇರಿದಂತೆ ಗ್ರಾಮಸ್ಥರು ಇತರರು ಇದ್ದರು.

## ಶಿಕ್ಷಣ ಸಂಸ್ಥೆ ಬೆಳವಣಿಗೆಗೆ ಶಿಕ್ಷಕರ ಪಾತ್ರ ದೊಡ್ಡದು

• **ಕಾಗವಾಡ:** ಶಿಕ್ಷಣ ಕೊರತೆಯಿಂದ ಕತ್ತಲೆ ಆಗಿದ್ದ ಬ್ರಿಟಿಷರ ಕಾಲದಲ್ಲಿ ಬೆಳಕಾಗಿ ಜನ್ಮ ತಾಳಿದ್ದು ಕೆಆರ್ಇಎಸ್ ಶಿಕ್ಷಣ ಸಂಸ್ಥೆ. ಜಮೀನ್ದಾರರು, ಸರದಾರರು, ಅಧಿಕಾರಿಗಳ ಮಕ್ಕಳಿಗೆ ಮಾತ್ರ ಶಿಕ್ಷಣ ಸೀಮಿತ ಎನ್ನುವ ಪರಿಸ್ಥಿಯಲ್ಲಿ ಕೆಆರ್ ಇಎಸ್ ಶಿಕ್ಷಣ ಸಂಸ್ಥೆ ಜನಸಾಮಾನ್ಯರಿಗೂ ಶಿಕ್ಷಣ ಧಾರೆ ಎಳೆಯಲು ಜನ್ಮತಾಳಿದ್ದು ಇಂದು ಶತಮಾನ ದಾಟಿ ಬೆಳೆದು ನಿಂತಿದೆ ಎಂದು ಶಿಕ್ಷಣ ಪ್ರೇಮಿ ಮೋಹನ ಮುತಾಲಿಕ ಹೇಳಿದರು.

ಅವರು ತಾಲೂಕಿನ ಐನಾಪುರ ಪಟ್ಟಣದಲ್ಲಿ ಜೂ.12ರಂದು ಸಂಸ್ಥೆಯ ಸಭಾಭವನದಲ್ಲಿ ಆಯೋಜಿಸಿದ ಕೆಆರ್ ಇಎಸ್ ಶಿಕ್ಷಣ ಸಂಸ್ಥೆಯ102ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭವನ್ನು ಶ್ರೀ ಸರಸ್ವತಿ ದೇವಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿದೆ. ಎಲ್ಲಾ ವೃತ್ತಿಗೂ ಮೂಲ ಆಗಿರುವುದರೊಂದಿಗೆ ಉತ್ತಮ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಶಕ್ತಿ ಇರುವುದು ಈ ವೃತ್ತಿಗೆ ಮಾತ್ರ. ಒಂದು ಶಿಕ್ಷಣ ಸಂಸ್ಥೆಯ ಬೆಳವಣಿಗೆಯಲ್ಲಿ ಶಿಕ್ಷಕ ಪಾತ್ರ ಬಹುದೊಡ್ಡದು ಎಂದ ಅವರು ಜ್ಞಾನಕ್ಕಿಂತ ಉದ್ಯೋಗಕ್ಕಾಗಿಯೇ ಶಿಕ್ಷಣ ಬೇಕು ಎನ್ನುವ ಸನ್ನಿವೇಶದಲ್ಲಿ ಕೆಆರ್ಇಎಸ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಜಿ.ಎಂ. ದೇಶಪಾಂಡೆ ಗುರುಗಳ ಉನ್ನತ ಹುದ್ದೆಗಳನ್ನು ತ್ಯಜಿಸಿ ಸ್ವತಃ ಶಿಕ್ಷಕರಾಗಿ ಹಳ್ಳಿಗಳಿಂದ ಮಕ್ಕಳನ್ನು ಕರೆತಂದು ಶಿಕ್ಷಣ ನೀಡಲಾರಂಭಿಸಿ ಕೆಆರ್ಇಎಸ್ ಸಂಸ್ಥೆ ಸ್ಥಾಪಿಸಿ ಬಡಮಕ್ಕಳಿಗೆ ಶಿಕ್ಷಣ ನೀಡದ ಮಹಾನ ಚೇತನರು ಎಂದರು.

ಸಂಸ್ಥೆಯ ಮಾಜಿ ಅಧ್ಯಕ್ಷ ದಾದಾಗೌಡಾ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಜಯ ಭಿರಡಿ ಗೌರವ ಅಧ್ಯಕ್ಷತೆ ವಹಿಸಿದ್ದರು.

ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಉದಯ ನಿಡಗುಂದಿ, ಸುರೇಶ ಗಾಣಿಗೇರ, ಪ್ರವೀಣ ಕುಲಕರ್ಣಿ, ತಮ್ಮಣ್ಣಾ ಪಾರಶೆಟ್ಟಿ, ಪುಷ್ಪಾ ದೇಶಪಾಂಡೆ, ಆಡಳಿತ ಅಧಿಕಾರಿ ಮಯೂರೇಶ ಪಟವರ್ಧನ, ಮದುಸೂದನ ಮೌಲಿ, ಪುಷ್ಪಾ ದೇಶಪಾಂಡೆ, ಗುರುದೇಶಪಾಂಡೆ, ಸಂಸ್ಥೆಯ ಎಲ್ಲ ಆಡಳಿತ ಮಂಡಳಿಯ ಸದಸ್ಯರು ಶಿಕ್ಷಕರು ವಿದ್ಯಾರ್ಥಿಗಳು ಇದ್ದರು. ಉಪಪ್ರಾಚಾರ್ಯರಾದ ಎ.ಎಂ. ಹುಲ್ಲೆನ್ನವರ ಸ್ವಾಗತಿಸಿದರು. ಶಿಕ್ಷಕಿ ಎಸ್.ಬಿ. ಬನ್ನೇನವರ ನಿರೂಪಿಸಿದರು. ಪ್ರಾಸ್ತಾವಿಕವಾಗಿ ರಾಜೇಂದ್ರ ಪೋತದಾರ ಮಾತನಾಡಿದರು. ಪ್ರಾಚಾರ್ಯ ಡಾ.ಬಿ.ಪ್ರೇಮಾನಂದ ವಂದಿಸಿದರು.



## ತಾಂತ್ರಿಕ ಸಮಸ್ಯೆಗಳಿಂದ ಆಸ್ತಿ ನೋಂದಣಿ ಕಗ್ಗಂಟು: ಸಿಎಂಗೆ ಮನವಿ

• **ಬೆಳಗಾವಿ:** ಇ-ಖಾತಾ ಮತ್ತು ಕಾವೇರಿ-2 ತಂತ್ರಾಂಶದಲ್ಲಿ ಇತ್ತೀಚೆಗೆ ಮಾಡಲಾಗಿರುವ ಬದಲಾವಣೆಗಳಿಂದ ಬೆಳಗಾವಿಯ ಕೆಲವು ಪ್ರದೇಶಗಳ ರಿಯಲ್ ಎಸ್ಟೇಟ್ ಮತ್ತು ನಿರ್ಮಾಣ ಕ್ಷೇತ್ರ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಈ ಕುರಿತು ತುರ್ತು ಮಧ್ಯಪ್ರವೇಶ ಮಾಡುವಂತೆ ಸಿಎಂ ಡಿ.ಕೆ. ಶಿವಕುಮಾರ ಅವರಿಗೆ ಬೆಳಗಾವಿ ಕ್ರೆಡೈ ಮನವಿ ಮಾಡಿದೆ.

ಬೆಳಗಾವಿ ಕ್ರೆಡೈ ಅಧ್ಯಕ್ಷ ಯುವರಾಜ ಹುಲಜಿ ಹಾಗೂ ಕಾರ್ಯದರ್ಶಿ ಪ್ರಶಾಂತ ವಾಂಡ್ಕರ್ ನೇತೃತ್ವದಲ್ಲಿ ಈ ಕುರಿತು ಮುಖ್ಯಮಂತ್ರಿಗಳು ಸೇರಿದಂತೆ ಸಂಬಂಧಿಸಿದ ಮಂತ್ರಿಗಳು ಹಾಗೂ ಅಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ, ಇ-ಖಾತಾ ಮತ್ತು ಕಾವೇರಿ-2 ವ್ಯವಸ್ಥೆಯಲ್ಲಿನ ತಾಂತ್ರಿಕ ಹಾಗೂ ಕಾರ್ಯನಿರ್ವಹಣಾ ಸಮಸ್ಯೆಗಳಿಂದ ಬೆಳಗಾವಿಯ ಟಿಳಕವಾಡಿ, ಸಂಕೇಶ್ವರ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ಬಹುತೇಕ ಸ್ಥಗಿತಗೊಂಡಿದ್ದು, ನಾಗರಿಕರು, ಬಿಲ್ಡರ್‌ಗಳು, ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ತಿಳಿಸಿದ್ದಾರೆ.



**ಜಿಪಿಎ ವ್ಯವಹಾರಗಳಿಗೆ ಲೈಫ್ ಸರ್ಟಿಫಿಕೇಟ್ ನಿಯಮಕ್ಕೆ ವಿರೋಧ:** ಸರ್ಕಾರದ ಹೊಸ ಅಧಿಸೂಚನೆಯ ಪ್ರಕಾರ, ಸಾಮಾನ್ಯ ಅಧಿಕಾರ ಪತ್ರ ಆಧಾರದ ಮೇಲೆ ನಡೆಯುವ ವ್ಯವಹಾರಗಳಿಗೆ ಕೇವಲ ಏಳು ದಿನಗಳ ಅವಧಿಗೆ ಮಾನ್ಯವಾಗುವ ಲೈಫ್ ಸರ್ಟಿಫಿಕೇಟ್ ಕಡ್ಡಾಯಗೊಳಿಸಲಾಗಿದೆ.

ಈ ನಿಯಮದಿಂದ ವಿದೇಶದಲ್ಲಿರುವವರು, ಹಿರಿಯ ನಾಗರಿಕರು ಹಾಗೂ ಅನಾರೋಗ್ಯ ಪೀಡಿತರು ತೀವ್ರ ತೊಂದರೆ ಅನುಭವಿಸುತ್ತಿದ್ದು, ಜಂಟಿ ಅಭಿವೃದ್ಧಿ ಒಪ್ಪಂದ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿಯೂ ಪದೇ ಪದೇ ಲೈಫ್ ಸರ್ಟಿಫಿಕೇಟ್ ಪಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಲಾಗಿದೆ.

**5,000 ಕೋಟಿ ಆದಾಯ ನಷ್ಟದ ಆತಂಕ:** ಈ ಎಲ್ಲಾ ಸಮಸ್ಯೆಗಳಿಂದಾಗಿ 2025-26ನೇ ಹಣಕಾಸು ವರ್ಷದಲ್ಲಿ, ವಿಶೇಷವಾಗಿ ಕೊನೆಯ ತ್ರೈಮಾಸಿಕದಲ್ಲಿ ಸರ್ಕಾರಕ್ಕೆ ಸುಮಾರು 5,000 ಕೋಟಿ ಆದಾಯ ನಷ್ಟ ಉಂಟಾಗಿರಬಹುದು ಎಂದು ಮನವಿಯಲ್ಲಿ ಅಂದಾಜಿಸಲಾಗಿದೆ.

ಆಸ್ತಿ ನೋಂದಣಿಗಳು ಕುಸಿದಿರುವುದರಿಂದ ಬಿಲ್ಡರ್‌ಗಳು ಹಣಕಾಸಿನ ಒತ್ತಡ ಎದುರಿಸುತ್ತಿದ್ದು, ಮನೆ ಖರೀದಿದಾರರು ಮಾಲೀಕತ್ವ ಪಡೆಯಲು ಸಾಧ್ಯವಾಗುತ್ತಿಲ್ಲ. ದಾಖಲೆಗಳಲ್ಲಿನ ವ್ಯತ್ಯಾಸದಿಂದ ಬ್ಯಾಂಕುಗಳೂ ಸಾಲ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಯುವರಾಜ ಹುಲಜಿ, ಪ್ರಶಾಂತ ವಾಂಡ್ಕರ್ ಮತ್ತು ಅಮರ್ ಅಕ್ನೋಜಿ ಇದ್ದರು.

## ಬೀರೇಶ್ವರ ಸಂಸ್ಥೆಯಿಂದ ಮಹಿಳೆಯರಿಗೆ ಕಿರು ಸಾಲ ವಿತರಣೆ

• **ಕೋಳಿಗುಡ್ಡ:** ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸೈಟಿ ಲಿ., ಯಕ್ಸಂಬಾ (ಬಹುರಾಜ್ಯ) ಕೋಳಿಗುಡ್ಡ ಶಾಖೆಯಲ್ಲಿ ಜೊಲ್ಲೆ ಗ್ರೂಪ್ ಸಂಸ್ಥಾಪಕ ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹ ಸಂಸ್ಥಾಪಕರಾದ ಶಶಿಕಲಾ ಜೊಲ್ಲೆ ಅವರ ಮಾರ್ಗದರ್ಶನದಲ್ಲಿ ಶಾಖೆಯು 5.45ಕೋಟಿ ಠೇವು ಸಂಗ್ರಹಿಸಿ 2.11 ಕೋಟಿ ಸಾಲ ವಿತರಿಸಿದೆ.

ಒಂದೇ ಸೂರಿನಡಿ ಹಲವಾರು ಯೋಜನೆಗಳ ಸೌಲಭ್ಯವನ್ನು ಶಾಖೆಯಲ್ಲಿ ಸದಸ್ಯರು ಪಡೆದುಕೊಳ್ಳಬಹುದು. ಮಹಿಳೆಯರು ಆರ್ಥಿಕವಾಗಿ ಸದೃಢವಾಗಲು ಸಣ್ಣ ಉದ್ಯಮಿಗಳು ಸ್ವಾವಲಂಬಿ ಜೀವನ ನಡೆಸಲು ಅಮೂಲ್ಯ ಕಿರು ಸಾಲ ಸೌಲಭ್ಯ ಶಾಖೆಯಲ್ಲಿ ನೀಡಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಫಲಾನುಭವಿಗಳು ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸಲು ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತೇವೆ.

ಬೀರೇಶ್ವರ ಸಹಕಾರಿಯು ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಒಟ್ಟು 233 ಶಾಖೆಗಳನ್ನು ಹೊಂದಿ 5200 ಕೋಟಿ ರೂ.ಗಳಿಗೂ ಹೆಚ್ಚಿನ ಠೇವಣಿಗಳನ್ನು ಹೊಂದಿರುವ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್., ಯಕ್ಸಂಬಾ (ಬಹುರಾಜ್ಯ) ಕೋಳಿಗುಡ್ಡ ಶಾಖೆಯು ಮಾಸಿಕ ಸಭೆಯ ನಂತರ 10 ಮಹಿಳಾ ಸದಸ್ಯರಿಗೆ ಕಿರುಸಾಲ ನೀಡುವುದರ ಮುಖಾಂತರ 3 ಜನ ಸದಸ್ಯರಿಗೆ ವಿವಿಧ ಸಾಲಗಳ ಮುಕಾಂತರ ಒಟ್ಟು 22 ಲಕ್ಷ ರೂ ಸಾಲ ಸಹಕಾರಿಯ ಸಲಹಾ ಸಮೀತಿ ಸದಸ್ಯರ ಮೂಲಕ ನೀಡಲಾಯಿತು.



ಈ ಸಂದರ್ಭದಲ್ಲಿ ಶಾಖೆಯ ಅಧ್ಯಕ್ಷ ಈಶ್ವರಗೌಡ ಪಾಟೀಲ ಮಾತನಾಡಿ, ಕಳೆದ ಒಂದು ವರೆ ವರ್ಷದಲ್ಲಿ ಶಾಖೆಯ ಠೇವಣಿದಾರರು, ಸದಸ್ಯರು ಮತ್ತು ಗ್ರಾಹಕರ ಉತ್ತಮ ಸಹಕಾರದಿಂದಾಗಿ ಸಂಸ್ಥೆಯ ಠೇವಣಿಯಲ್ಲಿ ಏರಿಕೆಯಾಗಿದೆ ಎಂದು ಹೇಳಿದರು.

ಮಾಜಿ ಸಂಸದರು, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಮಾಜಿ ಸಚಿವರು ಮತ್ತು ಹಾಲಿ ಶಾಸಕರಾದ ಶಶಿಕಲಾತಾಯಿ ಜೊಲ್ಲೆ ಅವರ ಮಾರ್ಗದರ್ಶನದಲ್ಲಿ ಸಂಸ್ಥೆ ಉತ್ತಮವಾಗಿ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಶಾಖಾ ಸಲಹಾ ಸಮೀತಿಯ ಸದಸ್ಯರಾದ ಶ್ರೀಶೈಲ ಚೌಗಲಾ, ತಮ್ಮಣಪ್ಪಾ ತೇಲಿ, ಶಿವರಾಯ ಯಲಡಗಿ, ಬಸಪ್ಪಾ ಹಲಕಿ, ಶ್ರೀನಿವಾಸ ಅಮ್ಮಲಝುರಿ, ಸುಭಾಸ ಬಿರಾದರ, ಮಲ್ಲಪ್ಪಾ ಮಂಟೂರ, ಮಹಾದೇವ ಬೆಳ್ಳಂಕಿ, ಪರಗೊಂಡ ಶಿರಗುಪ್ಪಿ, ಪರಪ್ಪಾ ಹಲಕಿ, ಕುಮಾರಗೌಡ ಪಾಟೀಲ, ಮಹಾವೀರ ನಂದಗಾಂವಿ, ರವಿ ಮುಳ್ಳೂರ, ಗುಂಡು ರಡ್ರಟ್ಟಿ, ಬೈರಪ್ಪಾ ಬಿಳ್ಳೂರ, ಸೋಮಯ್ಯಾ ಮಠಪತಿ ಮತ್ತು ಶಾಖಾ ವ್ಯವಸ್ಥಾಪಕ ರಮೇಶ ಪಾಟೀಲ ಹಾಗೂ ಗ್ರಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕಿರುಸುದ್ದಿ

### ಅಧಿಕ ಮಾಸದ ಕಾರ್ಯಕ್ರಮ ಸಂಪನ್ನ

**ಕಲಾದಗಿ:** ಅಧಿಕಮಾಸದ ನಿಮಿತ್ಯ ಕಳೆದೊಂದು ತಿಂಗಳಿಂದ ಇಲ್ಲಿನ ಶ್ರೀ ಶಿವಚಿಂದಬರೇಶ್ವರ ಸೇವಾ ಸಮಿತಿ ಮಹಿಳಾ ಮಂಡಳದ ವತಿಯಿಂದ ನಡೆದಿದ್ದ ದೇವರ 33 ಹಾಡುಗಳನ್ನು ಹಾಡುವ ಕಾರ್ಯಕ್ರಮ ವಿವಿಧ ಧಾರ್ಮಿಕ ಕಾರ್ಯಗಳೊಂದಿಗೆ ಸಂಪನ್ನವಾಯಿತು. ಈ ನಿಮಿತ್ತ ಇಲ್ಲಿನ ಶ್ರೀ ಚಿದಂಬರೇಶ್ವರ ಸಭಾಭವನದಲ್ಲಿ ಶ್ರೀವೆಂಕಟೇಶ ಸಹಿತಿ ಶ್ರೀಲಕ್ಷ್ಮೀದೇವಿಯನ್ನು, ಶ್ರೀ ಚಿದಂಬರೇಶ್ವರ ಭಾವಚಿತ್ರವನ್ನು ಅಲಂಕಾರಗೊಳಿಸಿ ವಿವಿಧ ರೀತಿ ಪೂಜೆ ಸಲ್ಲಿಸಿ ನಿತ್ಯ ಹಾಡುವ 33 ದಾಸರಪದಗಳನ್ನು ಹಾಡಿದ ಮಾತೆಯರು ಪರಸ್ಪರ ಉಡಿ ತುಂಬಿಕೊಂಡು ಸಂಭ್ರಮಿಸಿದರು, ಸುಪ್ರೀತ ಆಚಾರ್ಯ ಅವರಿಂದ ಶ್ರೀ ಸತ್ಯನಾರಾಯಣ ಪೂಜೆಯನ್ನು ಸಹ ಆಯೋಜನೆ ಮಾಡಲಾಗಿತ್ತು. ಗ್ರಾಮ ಸೇರಿದಂತೆ ಆಸುಪಾಸಿನ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

### ಭಗವಾನ್ ವಿರುದ್ಧ ಉಗ್ರಪ್ಪ ಕಿಡಿ

**ಬಾಗಲಕೋಟೆ:** ಮಹರ್ಷಿ ವಾಲ್ಮೀಕಿಯಾಗಲಿ, ರಾಮಾಯಣ ಬಗ್ಗೆ ಮನಸೋ ಇಚ್ಛೆ ಮಾತಾಡಿದ್ರೆ ಬರುವ ದಿನಗಳಲ್ಲಿ ಅದರ ಪರಿಣಾಮ ಎದುರಿಸಬೇಕಾಗುತ್ತೆ. ಸರ್ಕಾರ ಈ ರೀತಿ ಉಡಾಫೆ ಹೇಳಿಕೆ ಕೊಡುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಸರ್ಕಾರವನ್ನು ಒತ್ತಾಯಿಸಿದರು. ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಾಯಣ ಎಷ್ಟು ಬಾರಿ ಓದಿದ್ದೀಯಾ ಅಂತ ಏಕವಚನದಲ್ಲೇ ಪ್ರಶ್ನಿಸಿದರು. ಮಿಸ್ಟರ್ ಭಗವಾನ್, ಈ ದೇಶಕ್ಕೆ ಮತ್ತು ರಾಜ್ಯಕ್ಕೆ ನಿನ್ನ ಕೊಡುಗೆ ಏನು ಎಂದು ಖಾರವಾಗಿ ಕೇಳಿದರು. ಗಾಂಧಿ ಏಕೆ ರಾಮರಾಜ್ಯ ಬಯಸಿದ್ದರು.ರಾಮಾಯಣದಲ್ಲಿರುವ ಸಂದೇಶ ಭಗವಾನ್‌ಗೆ ಗೊತ್ತಿಲ್ಲ. ಸಮಾಜಮುಖಿ ಸಂದೇಶ ರಾಮಾಯಣದಲ್ಲಿದೆ. ಜಾತಿ ರಹಿತ, ವರ್ಗ ರಹಿತ, ಶೋಷಣೆ ರಹಿತ, ಸಮ ಸಮಾಜದ ರಾಮಾಯಣದಲ್ಲಿ ಬಯಸಿರೋದು. ಮಹರ್ಷಿ ವಾಲ್ಮೀಕಿ ಯವರು ರಾಮಾಯಣದಲ್ಲಿ ಕೊಟ್ಟಿರೋದ್ರ ಅರಿವು ಇದೆಯಾ ಎಂದು ಪ್ರಶ್ನಿಸಿದರು. ಈಗ ನಮ್ಮ ದದೇಶದಲ್ಲಿ ರಾಮನ ಜಪ ಮಾಡೋರು ಕಳೆದ ಹತ್ತು ವರ್ಷದಲ್ಲಿ 160ಕ್ಕೂ ಅಧಿಕ ಕೋಟಿ ಸಾಲ ಮಾಡಿದ್ದಾರೆ. 1947 ರಿಂದ 2014 ರವರೆಗೆ ಇದ್ದ ದೇಶದ ಸಾಲ 52 ಲಕ್ಷ ಕೋಟಿ ಇದರ ಬಗ್ಗೆ ಕೇಳುವುದನ್ನು ಬಿಟ್ಟು ರಾಮಾಯಣ, ವಾಲ್ಮೀಕಿ ಕುರಿತು ಹೇಳೋದಾ ಎಂದು ಕಿಡಿಕಾರಿದರು.

### ಬಿತ್ತನೆ ಬೀಜ ವಿತರಣೆ



**ಬಾದಾಮಿ:** ಇಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ ರವಿವಾರವೂ ಸಹಿತ ರೈತರಿಗೆ ಬಿತ್ತನೆ ಬೀಜಗಳನ್ನು ವಿತರಿಸಲಾಯಿತು. ಮುಂಗಾರು ಬಿತ್ತನೆ ಮಾಡಲು ರೈತರ ಬೇಡಿಕೆಗೆ ಅಗತ್ಯಕ್ಕೆ ತಕ್ಕಂತೆ ಎಫ್.ಐ.ಡಿ. ಮೂಲಕ ಬೀಜಗಳನ್ನು ವಿತರಿಸಲಾಗುತ್ತಿದೆ ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಹಾಂತೇಶ ಲಕ್ಷ್ಮಣ ಹಟ್ಟಿ ತಿಳಿಸಿದರು. ಅವರು ಭಾನುವಾರ ಪಟ್ಟಣದ ಎಪಿಎಂಸಿ ಎದುರಿಗಿರುವ ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಣೆ ಮಾಡಿ ಮಾತನಾಡಿದರು. ರೈತ ಸಂಪರ್ಕ ಕೇಂದ್ರದಲ್ಲಿ ಇಲ್ಲಿವರೆಗೆ 1125 ರೈತರಿಗೆ ಬೀಜಗಳನ್ನು ವಿತರಣೆ ಮಾಡಲಾಗಿದೆ. ಎಲ್ಲ ರೈತರಿಗೂ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ ಎಲ್ಲ ರೈತರು ಸಹಕರಿಸಬೇಕು ಎಂದು ಮನವಿ ಮಾಡಿದರು.

### ಅರ್ಜಿ ಆಹ್ವಾನ

**ವಿಜಯಪುರ:** 2026-27ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂನಡಿ ನೇರವಾಗಿ ದ್ವಿತೀಯ ವರ್ಷ 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಇಲಾಖೆ ಅಧಿಕೃತ ವೆಬ್‌ಸೈಟ್‌ನಿಂದ ಅರ್ಜಿ ನಮೂನೆ ಡೌನ್ ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ತಾವು ಪ್ರವೇಶ ಪಡೆಯಲು ಬಯಸುವ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಂಶುಪಾಲರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು. ಆಸಕ್ತರು ಜೂ.20ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಪ್ರಾಂಶುಪಾಲರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ವಿಜಯಪುರ ಇವರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆರೂರ: ಇಲ್ಲಿನ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ವಿಶೇಷ ಅಲಂಕಾರ ಪೂಜೆ, ಹೋಮ, ಹವನ ಇತ್ಯಾದಿಗಳು ನೆರವೇರಿದವು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಸುಧೀಂದ್ರ ದಂಪತಿಗಳಿಂದ ಹೋಮಕ್ಕೆ ಪೂರ್ಣಾಹುತಿ ಕಾರ್ಯಕ್ರಮ ನೆರವೇರಿತು. ತನಜಾ ದೇಸಾಯಿ, ವಾಣಿ ದೇಸಾಯಿ, ವಂದನಾ ನಿಂಬರಗಿ, ಸವಿತಾ ಕುಲಕರ್ಣಿ, ಭಜನಾ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ಜೆ.ಕೆ. ಸಿಮೆಂಟ್ಸ್ ವಿರುದ್ಧ ನಾಳೆಯಿಂದ ಸತ್ಯಾಗ್ರಹ

**ಲೋಕಾಪುರ:** ಸಮೀಪದ ಮುದ್ದಾಪುರದಲ್ಲಿರುವ ಜೆ.ಕೆ. ಸಿಮೆಂಟ್ಸ್ ಕಾರ್ಖಾನೆಯ ನಿಯಮಬಾಹಿರ ಚಟುವಟಿಕೆಗಳು ಮತ್ತು ಪರಿಸರ ಮಾಲಿನ್ಯವನ್ನು ಖಂಡಿಸಿ ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಮಿತಿ ಜೂ, 15ರಿಂದ ಕಾರ್ಖಾನೆಯ ಎದುರು ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದೆ.

ಉತ್ತರ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಶಂಕರ ಗೌಡ ಹಿರೇಗೌಡ ನೇತೃತ್ವದಲ್ಲಿ ನಡೆಯುವ ಈ ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಸುರೇಶ ಕಿವಡಿ, ರಂಗಪ್ಪ ತುಳಸಿಗೇರಿ, ಶೈಲೂ ಹಂಪಿಹೊಳಿ ಸೇರಿದಂತೆ ನೂರಾರು ರೈತರು ಭಾಗವಹಿಸಲಿದ್ದಾರೆ ಎಂದು ಸಂಘಟನೆ ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಅಕ್ರಮ ಗಣಿಗಾರಿಕೆ ಮತ್ತು ಬ್ಲಾಸ್ಟಿಂಗ್ ಕಾರ್ಖಾನೆಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಮತ್ತು ಅಕ್ರಮ ಬ್ಲಾಸ್ಟಿಂಗ್‌ನಿಂದ ಸುತ್ತಮುತ್ತಲಿನ ಮನೆ ಮತ್ತು ಕಟ್ಟಡಗಳಲ್ಲಿ ಬಿರುಕು ಉಂಟಾಗಿ ಕುಸಿತದ ಭೀತಿ ಎದುರಾಗಿದೆ.

ಭ್ರಷ್ಟ ಜೆ.ಕೆ. ಸಿಮೆಂಟ್ ಕಾರ್ಖಾನೆಯ ವಿರುದ್ಧ ನ್ಯಾಯ ಸಿಗುವವರೆಗೂ ಹೋರಾಟ ಕೈಬಿಡುವುದಿಲ್ಲ ಎಂದು ರೈತ ಮುಖಂಡರು ಎಚ್ಚರಿಸಿದ್ದಾರೆ.

ಸ್ಥಳೀಯ ಪರಿಸರ ಮತ್ತು ರೈತರ ಹಿತರಕ್ಷಣೆಗಾಗಿ ಹಮ್ಮಿಕೊಂಡಿರುವ ಈ ಅಹೋರಾತ್ರಿ ಧರಣಿ ಸತ್ಯಾಗ್ರಹಕ್ಕೆ ಸುತ್ತಮುತ್ತಲಿನ ಗ್ರಾಮಸ್ಥರು, ಸಂಘ-ಸಂಸ್ಥೆಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲ ನೀಡಬೇಕೆಂದು ರೈತ ಮುಖಂಡರು ಮನವಿ ಮಾಡಿದ್ದಾರೆ.



ಲೋಕಾಪುರ : ಶಾಸಕ ಆರ್.ಬಿ.ತಿಮ್ಮಾಪುರ ಅವರಿಗೆ ಸಚಿವ ಸ್ಥಾನ ಸಿಗಲೆಂದು ಕಾಂಗ್ರೇಸ್ ಕಾರ್ಯಕರ್ತರು ಕೋಲ್ಹಾಪುರ ಮಹಾಲಕ್ಷ್ಮೀ ದೇವಿಗೆ ವಿಶೇಷ ಪೂಜೆ ನೇರವೇರಿಸಿದರು. ಈ ವೇಳೆ ಕಾಂಗ್ರೇಸ್ ಕಾರ್ಯಕರ್ತರಾದ ಶಂಕರ ಪೂಜಾರ, ರವಿ ರೊಡ್ಡಪ್ಪನವರ, ಸುರೇಶ ಪೂಜಾರ, ಲಂಕೇಶ ಮಾದರ, ವಿಠ್ಠಲ ವರ್ಚಗಲ್, ಯಶವಂತ ಹರಿಜನ ಇದ್ದರು.

## ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ | ಶಾಸಕ ಸವದಿ ಸೂಚನೆ

# ಗುಣಮಟ್ಟದ ರಸ್ತೆ ನಿರ್ಮಿಸಿ

**ಮಹಾಲಿಂಗಪುರ:** ಶಾಸಕ ಸಿದ್ದು ಸವದಿ ಸ್ಥಳೀಯ ಬುದ್ನಿ ಪಿಡಿ ಗ್ರಾಮದ ರಸ್ತೆ ಸುಧಾರಣಾ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಸಿದ್ದು ಸವದಿ ಅವರು, ರೈತರ ಮತ್ತು ಸಾರ್ವಜನಿಕರ ದೈನಂದಿನ ಸಂಚಾರಕ್ಕೆ ಅನುಕೂಲವಾಗುವಂತೆ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನಿಗದಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ, ಬಿಜೆಪಿ ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಮುಖಂಡರಾದ ಈರಪ್ಪ ದಿನ್ನಿಮನಿ, ಶೇಖರ ಅಂಗಡಿ, ಶಿವಾನಂದ ಅಂಗಡಿ, ಆನಂದ ಖೋತ, ನಾಗಪ್ಪ ಖೋತ, ವಕೀಲ ರವಿ ಬಾಗಿ, ಲಕ್ಷ್ಮಣ ಖೋತ , ಶಾನೂರ ತೇರದಾಳ , ಮಾರುತಿ ಹಂದಿಗುಂದ, ಮಲ್ಲಿಕ ಸನದಿ, ಮಲ್ಲಿಕಾರ್ಜುನ ಹಂದಿಗುಂದ, ಬಸವರಾಜ ಹಂದಿಗುಂದ, ಮಲ್ಲಪ್ಪ ಹಂದಿಗುಂದ, ರಜಾಕ ಸನದಿ, ರಫೀಕ್ ಸನದಿ, ಹನಮಂತ ಕಾರಜೋಳ, ಮಹಾದೇವ ಕಾರಜೋಳ, ಮಹಾಲಿಂಗ ಖೋತ, ಮಹೇಶ ಖೋತ ಉಪಸ್ಥಿತರಿದ್ದು, ರಸ್ತೆ ಸುಧಾರಣೆಯಿಂದ ಕೃಷಿಕರಿಗೆ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಅನುಕೂಲವಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.



**ಕಾಮಗಾರಿಗೆ 5 ಲಕ್ಷ ರೂ.ಅನುದಾನ**

2025-26ನೇ ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಾದ 5 ಲಕ್ಷ ರೂ.ಅನುದಾನದ ಕಾಮಗಾರಿಯು ಬುದ್ನಿ ಪಿಡಿ ಗ್ರಾಮದ ಹುಲ್ಯಾಳ ಮತ್ತು ಕಲ್ಲಟ್ಟಿ ತೋಟದಿಂದ ಆರಂಭಗೊಂಡು ಶಾಲೆಯ ಮಾರ್ಗವಾಗಿ ಪರಪ್ಪ ಮಲ್ಲಪ್ಪ ಖೋತ ಅವರ ತೋಟದವರೆಗೆ ಸಂಪರ್ಕ ಕಲ್ಪಿಸಲಿದೆ.

## ಜೂ.17ರಿಂದ ಉಚಿತ ಯೋಗ ಶಿಬಿರ

**ಗುಳೇದಗುಡ್ಡ:** ವಿಶ್ವ ಯೋಗ ದಿನಾಚರಣೆ ಅಂಗವಾಗಿ ಜೂ.17ರಿಂದ 24ರ ವರೆಗೆ ಡಾ.ದೀಪಕ ಹಡಗಲಿ ಗುರೂಜಿಯವರ ಸಾರಥ್ಯದಲ್ಲಿ ಉಚಿತ ಅಷ್ಟಾಂಗ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶ್ರೀ ಕೃಷ್ಣ ಯೋಗಾಶ್ರಮದ ಪಿರಾಮಿಡ್ ಧ್ಯಾನ ಮಂದಿರದಲ್ಲಿ ನಿತ್ಯ ಬೆಳಗ್ಗೆ 6ರಿಂದ 7 ಗಂಟೆಯ ವರೆಗೆ ಉಚಿತವಾಗಿ ಯೋಗ ಶಿಬಿರ ನಡೆಸಲಾಗುತ್ತಿದ್ದು, ಯೋಗಾಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ಸಂಗಮೇಶ ಚಿಕ್ಕಾಡಿ (ಮೊ 99862 81919) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂತ್ರಸ್ತರಿಗೆ ಪರಿಹಾರ ಒದಗಿಸಿ: ಹಿರೇಮಠ

**ಬೀಳಗಿ:** ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾದ ಫಲವತ್ತಾದ ಜಮೀನು ಕಳೆದುಕೊಂಡ ಸಂತ್ರಸ್ತರ ನೀರಾವರಿ 40 ಲಕ್ಷ, ಒಣಬೇಸಾಯ ಭೂಮಿಗೆ 30 ಲಕ್ಷ ರೂ. ಪರಿಹಾರ ಕೊಟ್ಟಿದ್ದು, ಬಿಡದಿ ಟೌನ್‌ಶಿಪ್‌ಗೆ ನಿಗದಿ ಮಾಡಿದ 2.07 ರಿಂದ 2.5 ಕೋಟಿ ರೂ. ಪರಿಹಾರವನ್ನು ನಮ್ಮ ಸಂತ್ರಸ್ತರಿಗೂ ಕೊಡಬೇಕೆಂದು ಎಂದು ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ಉತ್ತರ ಪ್ರಾಂತ ಜಿಲ್ಲಾಧ್ಯಕ್ಷ ವಿರೂಪಾಕ್ಷಯ್ಯ ಪ.ಹಿರೇಮಠ ಆಗ್ರಹಿಸಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿ, ರಾಷ್ಟ್ರಕ್ಕಾಗಿ ಸರ್ವಸ್ವವನ್ನೇ ಧಾರೆ ಎರೆದ ಸಂತ್ರಸ್ತರಿಗೆ ಪ್ರತಿ ಎಕರೆಗೆ 30 ರಿಂದ 40 ಲಕ್ಷ ಪರಿಹಾರ ನೀಡಲು ಹಿಂದೇಟು ಹಾಕಿ, ಈಗ ಬಿಡದಿ ಟೌನ್ಶಿಪ್‌ಗೆ ಜಮೀನು ನೀಡುವ ಸಂತ್ರಸ್ತರಿಗೆ ಪ್ರತಿ ಎಕರೆಗೆ 2 ಕೋಟಿ 7 ಲಕ್ಷದಿಂದ 2.5 ಕೋಟಿ ರೂ.ವರೆಗೆ ಭೂ ಪರಿಹಾರ ನೀಡಲು ಮುಂದಾಗಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರವರು ಒಂದು ಕಣ್ಣಿಗೆ ಬೆಣ್ಣಿ ಇನ್ನೊಂದು ಕಣ್ಣಿಗೆ ಸುಣ್ಣ ಬಳಿದು ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತಳೆದಿರುವದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯ ಜನರು ಸಾವಿರಾರು ತಲೆಮಾರುಗಳು ಜನರಿಗೆ ಆಹಾರ ಉತ್ಪಾದಿಸುವ ಕೋಟ್ಯಾಂತರ ರೂ. ಬೆಲೆ ಬಾಳುವ ಫಲವತ್ತಾದ ಜಮೀನುಗಳ ಬಗ್ಗೆ ರಾಜ್ಯ ಸರಕಾರ ನಿರ್ಲಕ್ಷ್ಯ ಧೋರಣೆಯಿಂದಾಗಿ ಇಲ್ಲಿಯ ಸಂತ್ರಸ್ತರಿಗೆ ಬಿಕ್ಷುಕರಿಗೆ ಭಿಕ್ಷೆ ನೀಡಿದಂತೆ ಬರಿ 30 ರಿಂದ 40 ಲಕ್ಷ ಪರಿಹಾರ ನೀಡಲು ಮುಂದೆ ಬಂದಿರುವದು ಸಂತ್ರಸ್ತರ ತ್ಯಾಗಕ್ಕೆ ಅನ್ಯಾಯ ಮಾಡಲು ಹೊರಟಿರುವದು ಖಂಡನೀಯ ಎಂದರು.

ಕೆಲವು ಜನಪ್ರತಿನಿಧಿಗಳು ಮುಳಗಡೆ ಸಂತ್ರಸ್ತರಿಗೆ ನಮ್ಮ ಸರ್ಕಾರದಿಂದ ಹೆಚ್ಚಿನ ಪರಿಹಾರ ಕೊಡಿಸಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಿದ್ದಾರೆ. ನಾವು ಒಂದೇ ರೀತಿಯ ತೆರಿಗೆ ನೀಡಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಜನಪ್ರತಿನಿಧಿಗಳಿಗೆ ಎಲ್ಲರಿಗೂ ಒಂದೇ ರೀತಿಯ ಸಂಬಳ, ಎಲ್ಲ ಮೂಲಭೂತ ಸೌಲಭ್ಯಗಳನ್ನು ನೀಡುತ್ತೇವೆ. ಆದರೂ ವಿಧಾನ ಸೌಧದ ಅಧಿವೇಶನದಲ್ಲಿ ಯಾವುದೇ ರೀತಿಯ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಗಮನ ಹರಿಸದೇ ಕಾಲಹರಣ ಮಾಡುತ್ತಾರೆ ಹೊರತು ಉತ್ತರ ಕರ್ನಾಟಕಕ್ಕೆ ಆಗುವ ಅನ್ಯಾಯದ ಬಗ್ಗೆ ಪ್ರಶ್ನೆ ಎತ್ತುವವರು ಯಾರು ಇಲ್ಲ ಎಂದು ಕಿಡಿಕಾರಿದರು.



> ಬಿಡದಿ ಟೌನ್ಶಿಪ್‌ಗೆ ರೂ. 2.07 ಕೋಟಿಯಿಂದ 2.5 ಕೋಟಿ ಪ್ರತಿ ಎಕರೆ ಭೂಮಿಗೆ ದರ ಮಂಜೂರು ನೀಡಲು ಉತ್ತರ ಕರ್ನಾಟಕದ ಜನಪ್ರತಿನಿಧಿಗಳ ಒಪ್ಪಿಗೆ ಪಡೆಯದೆ ಏಕ ಪಕ್ಷೀಯವಾಗಿ ನಿರ್ಧಾರ ಮಾಡಿ ಒಪ್ಪಿಗೆ ಐ ತೀಪು೯ ರಚಿಸಿದ್ದಾರೋ, ಇಲ್ಲವೋ ತಮ್ಮ ಒಪ್ಪಿಗೆ ಪಡೆದು ಐ ತೀರ್ಪು ರಚಿಸಿದ್ದಾರೋ ಎಂಬುದನ್ನು ಉತ್ತರ ಕರ್ನಾಟಕದ ಜನಪ್ರತಿನಿಧಿಗಳು ಜನರಿಗೆ ತಿಳಿಸಬೇಕು.
> ■ ವಿರೂಪಾಕ್ಷಯ್ಯ ಪ.ಹಿರೇಮಠ, ಜಿಲ್ಲಾಧ್ಯಕ್ಷರು

## ಶಿಕ್ಷಣದಿಂದ ಅಭಿವೃದ್ಧಿ ಸಾಧ್ಯ: ಬಸವರಾಜ

**ಮಹಾಲಿಂಗಪುರ:** ಭಾರತದಲ್ಲಿ ಒಬ್ಬನೇ ಒಬ್ಬ ಕಳ್ಳನಿಲ್ಲ, ಸುಳ್ಳನಿಲ್ಲ, ಈ ದೇಶ ಸತ್ಯವಂತರ ಮತ್ತು ದೇಶಪ್ರೇಮಿಗಳ ನೆಲೆವೀಡು ಎಂದು ಇದಕ್ಕೆ ಕಾರಣ ಅಂದಿನ ಗುರುಕುಲ ಶಿಕ್ಷಣ ಪದ್ಧತಿ. ಜಗತ್ತಿನ ವಿವಿಧ ದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳು ಬಂದು ನಳಂದಾ, ತಕ್ಷಶಿಲಾ ಮುಂತಾದ ಗುರುಕುಲಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಶಿಕ್ಷಣದ ಪ್ರಭಾವದಿಂದ ಮಕ್ಕಳಲ್ಲಿ ದೇಶಾಭಿಮಾನ ಮತ್ತು ಸಂಸ್ಕಾರ ಕಡಿಮೆಯಾಗಿರುವುದು ವಿಷಾದನೀಯ ಅದನ್ನು ಪುನರ್ ನಿರ್ಮಿಸುವುದು ಶಿಕ್ಷಕರು ಮತ್ತು ಸಮಾಜದ ಜವಾಬ್ದಾರಿ ಎಂದು ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತ ರಾಜ್ಯ ಸಂಚಾಲಕ ಬಸವರಾಜ ಟಿ. ಹೇಳಿದರು.

ಸ್ಥಳೀಯ ಜ್ಞಾನಜ್ಯೋತಿ ಶಾಲೆಯಲ್ಲಿ ಜರುಗಿದ ಶಿಕ್ಷಕರ ತರಬೇತಿ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿದ ಅವರು, ಭಾರತೀಯ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿ ನಿರ್ಮಾಣವಾಗಿದೆ. ನಮ್ಮ ಸನಾತನ ಭಾರತೀಯ ಶಿಕ್ಷಣದಿಂದ ಪ್ರಾಣಮಯ ಕೋಶ, ಅನ್ನಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಹೀಗೆ ಪಂಚ ಕೋಶಗಳನ್ನು ಜಾಗೃತಗೊಳಿಸುವ ಪಂಚಮುಖಿ ಶಿಕ್ಷಣದಿಂದ ಶರೀರ, ಬುದ್ಧಿ, ಮನಸ್ಸು, ಆತ್ಮ ವಿಕಾಸಗೊಳ್ಳುತ್ತಿದ್ದವು, ಕಾಯ ಶುದ್ಧಿ ಮೂಲಕ ಮಗುವಿನಲ್ಲಿ ಸಂಸ್ಕಾರ ಬೆಳೆದು ಮಗು ದೇಶಕ್ಕೆ ಶಕ್ತಿಯಾಗುತ್ತಿತ್ತು. ಸ್ವಸ್ಥ ಸಮಾಜ ಸುಭದ್ರ ರಾಷ್ಟ್ರ ನಿರ್ಮಾಣವಾಗುತ್ತದೆ. ಸ್ವಸ್ಥ ಸಮಾಜ ಸದೃಢ ಸಮೃದ್ಧ ರಾಷ್ಟ್ರ ನಿರ್ಮಾಣಕ್ಕಾಗಿ ಭಾರತೀಯ ಶಿಕ್ಷಣ ಅಥವಾ ಶಿಕ್ಷಣದಲ್ಲಿ ಭಾರತೀಯತೆ ಅತ್ಯಗತ್ಯ ಎಂದರು.

ಶಿಕ್ಷಕಿ ಸಪನಾ ಅನಿಗೋಳ, ಮಧುರಖಂಡಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕ ಡಿ.ವಿ.ಹಿರೇಮಠ, ಪ್ರೀತಿ ಕಲ್ಯಾಣಿ ಉಪನ್ಯಾಸ ನೀಡಿದರು.

ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿಜಯಕುಮಾರ ಕುಳಲಿ ಉದ್ಘಾಟಿಸಿ ಮಾತನಾಡಿದರು. ರಾಷ್ಟ್ರೋತ್ಥಾನ ಪರಿಷತ್ ಜಿಲ್ಲಾ ಸಹ ಸಂಚಾಲಕ ನಾರನಗೌಡ ಉತ್ತಂಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಶಿಕ್ಷಣ ಭಾರತಿ ವಿಭಾಗ ಸಂಯೋಜಕ ಶ್ರೀನಿವಾಸ ಪಾಟೀಲ, ಜಿಲ್ಲಾ ಸಂಯೋಜಕ ಹನಮಂತ ನಾಗರಾಳ, ಮುಖ್ಯೋಪಾಧ್ಯಾಯ ವಿ.ಆರ್.ಬಿರನಗಡ್ಡಿ ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.




## ರಕ್ತದಾನವು ಜೀವದಾನಕ್ಕೆ ಸಮಾನ: ಮೇಟಿ



**ಬಾಗಲಕೋಟೆ:** ರಕ್ತದಾನವು ಜೀವದಾನಕ್ಕೆ ಸಮಾನವಾಗಿದೆ. ನಮ್ಮಿಂದ ನೀಡುವ ರಕ್ತವು ಅಪಾಯದ ಸಂದರ್ಭದಲ್ಲಿ ಅನೇಕ ಜೀವಗಳನ್ನು ಉಳಿಸಬಲ್ಲದು. ಸಮಾಜದ ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯೂ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಮಾನವೀಯ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಶಿಬಿರಗಳಲ್ಲಿ ಭಾಗವಹಿಸಿ ಸಮಾಜಕ್ಕೆ ಮಾದರಿಯಾಗಬೇಕು ಎಂದು ಶಾಸಕ ಉಮೇಶ್ ಮೇಟಿ ಹೇಳಿದರು.

ಈ ವೇಳೆ ನವನಗರದ ಸೆಕ್ಟರ್-26ರಲ್ಲಿ ಖಿದ್ಮಾಟ್ ಈ ಇಸನೀಯಟ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಶಾಸಕ ಉಮೇಶ್ ಮೇಟಿ ಚಾಲನೆ ನೀಡಿದರು

ಬಳಿಕ ಶಾಸಕ ಉಮೇಶ್ ಮೇಟಿ, ಮಲ್ಲಿಕಾರ್ಜುನ ಚರಂತಿಮಠ, ರಜಾಕ ಬೆನ್ನೂರ್ ಹಾಗೂ ಅಕ್ಬರ್ ಮುಲ್ಲಾ ಅವರು ರಕ್ತದಾನ ಮಾಡಿ ಶಿಬಿರದ ಯಶಸ್ಸಿಗೆ ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಸಂತೋಷ ಹೊಕ್ರಾಣಿ, ಜಾಫರ್ ಬೇಪಾರಿ, ಅನಿಲಕುಮಾರ ದಡ್ಡಿ, ರಾಜು ಮನಿಕೇರಿ ಪಕ್ಷದ ಹಲವಾರು ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

## ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ



**ಕಲಾದಗಿ:** ಗ್ರಾಮದ ಹಣ್ಣು ಬೆಳೆಗಾರರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ಎಲ್‌ಕೆಜಿ ತರಗತಿಗೆ ಪಾದಾರ್ಪಣೆ ಗೈಯುತ್ತಿರುವ 45ಕ್ಕೂ ಹೆಚ್ಚು ಮಕ್ಕಳು, ಪಾಲಕರಿಗೆ ಪುಷ್ಪವೃಷ್ಟಿ ಗೈದು, ಸರಸ್ವತಿ ಪೂಜೆ ನಂತರ ಅಕ್ಷತೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಶಾಲೆ ಅಧ್ಯಕ್ಷ ಕೆ.ಟಿ.ಪಾಟೀಲ, ಕಾರ್ಯದರ್ಶಿ ವಿ.ಜಿ.ದೇಶಪಾಂಡೆ,ಮುಖ್ಯಶಿಕ್ಷಕರು ಶ್ರೀಕಾಂತ ಕೆರಕಲ್‌ಮಟ್ಟಿ, ಆರ್ .ವಿ.ಜಾಧವ, ಪಾಲಕರು ಹಾಗೂ ಶಾಲಾ ಶಿಕ್ಷಕ ಬಳಗ ಹಾಜರಿದ್ದರು.

## ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ

**ಬಾದಾಮಿ:** ಇಲ್ಲಿನ ಜಯನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ದಾಖಲಾದ ಐದು ವಿದ್ಯಾರ್ಥಿಗಳಿಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಚಂದ್ರು ಕರಿಗಾರ ಅವರು ಕಲಿಕಾ ಸಾಮಗ್ರಿಗಳನ್ನು ವಿತರಿಸಿದರು. ಬರುವ ದಿನಮಾನಗಳಲ್ಲಿ ಶಾಲೆಯಲ್ಲಿ ದಾಖಲಾಗಿರುವ ಎಲ್ಲ ಮಕ್ಕಳಿಗೆ ದತ್ತು ಮಕ್ಕಳಿಗೆ ಸಹಾಯ ಮಾಡಲಾಗುವುದು ಎಂದು ಭರವಸೆ ನೀಡಿದರು. ಬಾದಾಮಿ ಸಮೂಹ ಸಂಪನ್ಮೂಲ ವ್ಯಕ್ತಿ ಎಂ.ಕೆ.ಬಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಳಕ್ಕೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಚಂದ್ರು ಕರಿಗಾರ, ಪತ್ನಿ ಸವಿತಾ ಕರಿಗಾರ, ತಾಯಿ ಚನ್ನಮ್ಮ ತಲ್ಲೂರ, ಮುಖ್ಯಶಿಕ್ಷಕಿ ಎಸ್.ಬಿ.ಕರನಂದಿ, ಮುಖ್ಯಶಿಕ್ಷಕ ಬಿ.ಎಸ್.ಕರಡಿ, ಸಹಶಿಕ್ಷಕಿ ಎಲ್. ಎನ್.ಗೌಡರ ಸೇರಿಂತೆ ಇತರರು ಹಾಜರಿದ್ದರು.



## ಪ್ರತಿಯೊಂದು ಸಾಹಿತ್ಯವು ಸಂಸ್ಕಾರ ಕಲಿಸುತ್ತದೆ: ಕೋಟೆ



**ತೇರದಾಳ:** ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮಾತೃಭಾಷೆಯ ಮೊದಲ ಆದ್ಯತೆಯೊಂದಿಗೆ ದೇಶದ ಇತರ ಭಾಷೆಗಳು ಸಹ ನಮ್ಮ ದೇಶದ ಭಾಷೆಗಳೇ ಕಾರಣ. ಅವುಗಳನ್ನು ಸಹ ನಾವು ಗೌರವಿಸಬೇಕು. ದೇಶದಲ್ಲಿ ಹಲವಾರು ಭಾಷೆಗಳಿವೆ, ಶ್ರೇಷ್ಠ ಸಾಹಿತ್ಯವಿದೆ ಪ್ರತಿಯೊಂದು ಸಾಹಿತ್ಯವು ನಮಗೆ ಸಂಸ್ಕಾರವನ್ನೇ ಕಲಿಸುತ್ತದೆ. ಭಾಷೆ ಯಾವುದಾದರೇನು ಅದರಲ್ಲಿ ಮಾನವೀಯತೆ ಮೌಲ್ಯಗಳಿದ್ದಲ್ಲಿ ಅದನ್ನು ನಾವು ಗೌರವಿಸಲೇಬೇಕು. ಸಾಹಿತ್ಯವು ಮನುಷ್ಯನ ಹೃದಯವನ್ನು ಸುಸಂಸ್ಕೃತಗೊಳಿಸುತ್ತದೆ ಎಂದು ಅಖೀಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕದ ರಾಜ್ಯಾಧ್ಯಕ್ಷ ಎಸ್.ಜಿ.ಕೋಟೆ ಹೇಳಿದರು.

ರವಿವಾರ ಪಟ್ಟಣದ ಶ್ರೀಪ್ರಭುಲಿಂಗೇಶ್ವರ ಅನ್ನಪ್ರಸಾದಸಮಿತಿ ಸಭಾಭವನದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ಬಾಗಲಕೋಟೆಯವರು ಹಮ್ಮಿಕೊಂಡಿದ್ದ ತಾಲೂಕಿನ ನೂತನ ಸಮಿತಿ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿ, ನಾವೆಲ್ಲ ಭಾರತಿಯರು ಭಾರತದಲ್ಲಿರುವ ಎಲ್ಲ ಭಾಷೆ, ಸಾಹಿತ್ಯಗಳು ನಮ್ಮ ಆಸ್ತಿಗಳು, ಕಾರಣ ಸಕಲ ಭಾರತೀಯ ಭಾಷೆ, ಸಾಹಿತ್ಯಕ್ಕೆ ಜೀವ ಕೊಡುವ ಕೆಲಸ ಮಾಡಬೇಕಾಗಿರುವುದು ಈ ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಸಾಹಿತ್ಯದಿಂದ ಮಕ್ಕಳು ಸುಸಂಸ್ಕೃತರಾಗುತ್ತಾರೆ. ಪುಸ್ತಕವನ್ನು ಪ್ರೀತಿಸಿದರೆ ಇಡೀ ಜಗತ್ತನ್ನೇ ಗೆಲ್ಲಬಹುದು ಎಂದರು.

ಅಭಾಸಾಪ ಬಾಗಲಕೋಟೆ ಜಿಲ್ಲಾಧ್ಯಕ್ಷೆ ಡಾ.ಗೀತಾ ದಾನಶೆಟ್ಟಿ ಮಾತನಾಡಿ, ಶ್ರೇಷ್ಠ ಸಾಹಿತ್ಯವು ನಮ್ಮ ಬದುಕಿಗೆ, ನಮ್ಮ ಸಮಾಜಕ್ಕೆ ಹೊಸ ಬೆಳಕು ನೀಡುತ್ತದೆ. ಪ್ರತಿ ಮಗುವು ಓದಬೇಕು ಅದಕ್ಕಾಗಿ ಅನ್ನದಾಸೋಹದ ರೀತಿಯಲ್ಲಿ ಅಕ್ಷರ ದಾಸೋಹ ಪ್ರಾರಂಭಿಸಬೇಕಾಗಿದೆ ಎಂದರು. ಪ್ರವೀಣ ನಾಡಗೌಡ, ಮ.ಕೃ. ಮೇಗಾಡಿ, ಅಶೋಕ ಮಾಹಾಲಿಂಗಪೂರ, ಡಾ.ವಿಕ್ರಮ ಬಸನಗೌಡರ, ಶಿವಾನಂದ ನೇಗಿನಾಳ ಮಾತನಾಡಿದರು. ಈ ವೇಳೆ ಪ್ರಭುದೇವರ ಅರ್ಚಕ ಬಸಪರಯ್ಯ ಭಾಂವಿ, ಮಲ್ಲಪ್ಪ ಜಮಖಂಡಿ, ನಿಂಗಪ್ಪ ಮಾಲಗಾವಿ, ಅಶೋಕ ಆಳಗೊಂಡ, ನಿರ್ಮಲಾ ಲೋಕಿಮಠ, ಅಭಾಸಾಪ ತಾಲೂಕ ಘಟಕದ ಅಧ್ಯಕ್ಷ ಎಂ.ಸಿ.ಕುಂಚಗನೂರ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪರಯ್ಯ ತೆಳಗಿನಮನಿ ಸ್ವಾಗತಿಸಿದರು. ಎಂ.ಬಿ.ಮಾಳೇದ ನಿರೂಪಿಸಿದರು. ಈಶ್ವರ ಯಲ್ಲಟ್ಟಿ ವಂದಿಸಿದರು. ಸತ್ಯಪ್ಪ ಸುಣಗಾರ ಪ್ರಾರ್ಥಿಸಿದರು. ಪ್ರಭು ಜೈನರ ಶುಭಾಷಯ ಓದಿದರು.

## ಶ್ರದ್ಧೆಯಿಂದ ಓದಿದರೆ ಯಶಸ್ಸು ಸಾಧ್ಯ

**ಗುಳೇದಗುಡ್ಡ:** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ಸಹಾಯದಿಂದ ಅವರ ಪ್ರತಿಭೆಗೆ ಪ್ರೋತ್ಸಹ ದೊರೆತು ಅವರು ಸಾಧನೆ ಮಾಡಲು ಪ್ರೇರಣೆಯಾಗುತ್ತದೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ನಿರಂತರವಾಗಿ ಅಧ್ಯಯನ ಮಾಡಿದರೆ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಉದ್ಯಮಿ ಪರಶುರಾಮ ಪವಾರ ಹೇಳಿದರು. ಅವರು ಪಟ್ಟಣದ ಸರಹಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಪ್ರವೇಶ ಶುಲ್ಕ ವಿತರಿಸಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ಪರೀಕ್ಷೆಯಶೇ.95ಕ್ಕಿಂತ ಹೆಚ್ಚು ಅಂಕ ಪಡೆಯುವ ಸರಕಾರಿ ಪಪೂ ಕಾಲೇಜಿನ ಎಲ್ಲ ವಿದ್ಯಾರ್ಥಿಗಳಿಗೆ ತಲಾ 10,000 ರೂ. ನೀಡುವುದಾಗಿ ಇದೇ ಸಂದರ್ಭದಲ್ಲಿ ವಾಗ್ದಾನ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ವಿಠ್ಠಲ ಕಳಸಾ ಮಾತನಾಡಿ, ಪರಶುರಾಮ ಪವಾರ ಅವರು ಸರಕಾರಿ ಶಾಲಾಕಾಲೇಜಿನ ಬಡಮಕ್ಕಳಿಗೆ ಕಲಿಕೆ ನೋಟ್ ಪುಸ್ತಕ, ಪ್ರವೇಶ ಶುಲ್ಕ ಸೇರಿದಂತೆ ಸಾಕಷ್ಟು ಸಹಾಯ ನೀಡಿದ್ದು, ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಸಾಧನೆ ಮಾಡಬೇಕೆಂದು ಹೇಳಿದರು. ನಿವೃತ್ತ ಮುಖ್ಯೋಪಾಧ್ಯಾಯ ಪಿ. ಆರ್. ಬಂತಲ, ಎಸ್. ಎಚ್. ಮಡಿವಾಳರ, ಬಿ.ವೈ.ಗೌಡರ, ಡಿ.ವಾಯ್. ಹಾದಿಕಾರ, ಈರಣ್ಣ ದೊಡಮನಿ, ಎಸ್.ಬಿ. ಕೊಳ್ಳಿ ಜೆ,ಬಿ. ಯಡವಣ್ಣವರ ಮತ್ತಿತರರು ಇದ್ದರು.



## ರೈತರ ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ ಅನಿವಾರ್ಯ

**ಮುಧೋಳ:** ಸಸಾಲಟ್ಟಿ ಏತ ನೀರಾವರಿ ವಿಳಂಬ ಹಾಗೂ ವಿದ್ಯುತ್ ವಲಯದ ಖಾಸಗೀಕರಣ ವಿರೋಧಿಸಿ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿ, ಇವರು ಮೂರು ದಿನಗಳ ಒಳಗಾಗಿ ಜಿಲ್ಲಾಧಿಕಾರಿಗಳು ಮುಧೋಳ ನಗರಕ್ಕೆ ಆಗಮಿಸಿದ ರೈತರ ಸಭೆ ಕರೆದು ರೈತರ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಹೋರಾಟ ಅನಿವಾರ್ಯವಾಗಿದೆ ಎಂದು ರೈತ ಮುಖಂಡರು ತಿಳಿಸಿದರು.

ರೈತ ಮುಖಂಡ ಬಸವಂತಪ್ಪ ಕಾಂಬಳೆ ಮಾತನಾಡಿ, ಇಂದಿನ ಬಿಜೆಪಿ ಸರ್ಕಾರ ಸಸಾಲಟ್ಟಿ ಏತ ನೀರಾವರಿ ಮಾಡುವುದಾಗಿ ಭರವಸೆ ನೀಡಿದ್ದು ಆದರೆ ಎಂಬಿ.ಪಾಟೀಲ ಜಲಸಂಪನ್ಮೂಲ ಸಚಿವರಾಗಿದ್ದಾಗ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ ಮಾಡಿದ್ದರಿಂದ ತೀವ್ರ ಹಿನ್ನಡೆಯಾಗಿದೆ. ಸಚಿವ ಆರ್.ಬಿ.ತಿಮ್ಮಾಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಸಮಯದಲ್ಲಿ ನೂರಾರು ಕೋಟಿ ಹಣ ಖರ್ಚಾಗಿದ್ದು, ಆದರೂ ಈ ಯೋಜನೆ ಪೂರ್ಣಗೊಂಡಿಲ್ಲ, ಆದ್ದರಿಂದ ರೈತರ ಬದುಕು ದುಸ್ತರವಾಗಿದೆ ಎಂದರು.

ವಿದ್ಯುತ್ ಸಂಪರ್ಕ ಕೊರತೆ ನೆಪವಡ್ಡಿ ಪ್ರಸ್ತುತ ಸರ್ಕಾರ ಯೋಜನೆಯ ಪ್ರಗತಿ ನಡೆಯುತ್ತಿಲ್ಲ ಎಂದು ಆರೋಪಿಸಿರು. ರೈತ ಮುಖಂಡ ಸುರೇಶ ಚಿಂಚಲಿ ಮಾತನಾಡಿದರು.



ಕಬ್ಬು ಬೆಳೆಗಾರರ ತಾಲೂಕ ಅಧ್ಯಕ್ಷ ದುಂಡಪ್ಪ ಎರಗಟ್ಟಿ ಮಾತನಾಡಿ, ರಾಸಾಯನಿಕ ಗೊಬ್ಬರದ ಬೆಲೆ ಏರಿಕೆಯಾಗಿದೆ ಡಿಎಪಿ ಕಳೆದ ವರ್ಷಗಳಿಂದಲೂ ಸಮರ್ಪಕವಾಗಿ ಸಿಗುತ್ತಿಲ್ಲ ವಿದೇಶದಿಂದ ಆಮದು ಮಾಡಿಕೊಳ್ಳುವ ಡಿಸೈನ್ ಮತ್ತು ಪೆಟ್ರೋಲ್ ಕಡಿಮೆ ಬಳಸಲು ಪ್ರಧಾನಿ ಕರೆ ನೀಡಿದ್ದಾರೆ ಆದರೆ ದೇಶದ ರೈತ ಬೆಳೆಯುವ ಶೇಂಗಾ ಸೂರ್ಯಕಾಂತಿಯಿಂದ ಇಂಧನ ಉತ್ಪಾದನೆ ಮಾಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಹೋರಾಟಗಾರ ಸುಭಾಷ್ ಶಿರೂರ್, ದುಂಡಪ್ಪ ಯೆರಗಟ್ಟಿ, ಕರಿಯಪ್ಪ ರಾಗ, ಅಶೋಕ ಪಡಸಲಗಿ,ರಾಕೇಶ್ ಗಡದನವರ್, ರಮೇಶ್ ಜಂಬಗಿ, ಮಂಜುನಾಥ್ ಅರಕೇರಿ, ನಾಗರಾಜ್ ಪೂಜಾರಿ, ಭೀಮಸಿ ನಗರೆಡ್ಡಿ, ಮಲ್ಲು ದೇಸಾಯಿ, ಗುರಪ್ಪ ವಜ್ರಮಟ್ಟಿ, ಅಲ್ಲಪ್ಪ ಉತ್ತೂರು ಇತರ ರೈತ ಮುಖಂಡರು ಇದ್ದರು.

## ಕಿರುಸುದ್ದಿ

### ತಾಲೂಕಾ ಶಸಾಪ ಪದಗ್ರಹಣ ಕಾರ್ಯಕ್ರಮ

**ಮುದ್ದೇಬಿಹಾಳ:** ನಗರದ ನೌಕರರ ಭವನದಲ್ಲಿ ನಡೆದ ತಾಲೂಕಾ ಶರಣ ಸಾಹಿತ್ಯ ಪರಿಷತ್‌ನ ಪದಗ್ರಹಣ ಕಾರ್ಯಕ್ರಮ ನಡೆಯಿತು. ಸಾಹಿತಿ ಗಳಾದ ಬಿ ಎಂ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು ಸಾಹಿತಿ ಗಳಾದ ಬಿ. ಎಂ ಹಿರೇಮಠ. ನೂತನ ಅಧ್ಯಕ್ಷ ಶ್ರೀ ಸಿ. ಜಿ ನಾಗರಾಳ ಆಯ್ಕೆಯಾದ ಎಲ್ಲ ಪದಾಧಿಕಾರಿಗಳಿಗೆ ಹಾಗೂ ನಿಕಟ ಪೂರ್ವ ಪದಾಧಿಕಾರಿಗಳಿಗೆ ಸನ್ಮಾನ ಸಲಾಯಿತು. ಸಂಘಟನೆಯ ನಿಕಟಪೂರ್ವ ಅಧ್ಯಕ್ಷ ಬಸವರಾಜ ನಾಲಾತವಾದ ಮಾತನಾಡಿ, ಶರಣರು ನಡೆದ ಹಾದಿಯಲ್ಲಿ, ತತ್ವ ಚಿಂತನೆ ಆಚಾರಗಳನ್ನು ಸಮಾಜಕ್ಕೆ ಬಿತ್ತುವಂತೆ ಮುಂದಿನ ದಿನಗಳಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು, ಒಳ್ಳೆಯ ಸಂಘಟನೆ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿಕೊಂಡು ಹೋಗಬೇಕೆಂದು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ನೌಕರರ ಸಂಘದ ಅಧ್ಯಕ್ಷರು ಅರವಿಂದ ಹೂಗಾರ, ಅಶೋಕ ಮಣಿ. ಸಿ.ಬಿ.ಇಟಗಿ, ಬಿ.ಪಿ.ಪಾಟೀಲ ವೇದಿಕೆಯಲ್ಲಿ ಇದ್ದರು. ಮನೆಯಲ್ಲಿ ಮಹಾಮನೆ ಘಟಕದ ಸದಸ್ಯರು. ನಿವೃತ್ತಿ ನೌಕರರ ಪದಾಧಿಕಾರಿಗಳು ಭಾಗವಹಿಸಿದ್ದರು.

### ಹೋರಿ ಪ್ರಾಣ ರಕ್ಷಿಸಿದ ಸಾರ್ವಜನಿಕರು



**ಬಸವನಬಾಗೇವಾಡಿ:** ಪಟ್ಟಣದ ಅಂಬಾ ಭವಾನಿ ದೇವಸ್ಥಾನದ ಹೋರಿ(ಗುಳ್ಳಿ) ಒಂದು ಅಂಬಿಗೇರ ಚೌಡಯ್ಯ ಗುಡಿ (ವೃತ್ತ) ಹತ್ತಿರ ಚರಂಡಿಯಲ್ಲಿ ಶನಿವಾರ ರಾತ್ರಿ ಆಯಾ ತಪ್ಪಿ ಕಾಲು ಮೇಲೆ ಮಾಡಿ ಬಿದ್ದ ಹೋರಿಯ (ಗುಳ್ಳಿ) ಪ್ರಾಣವನ್ನು ಅಲ್ಲಿನ ಯುವಕರು ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಪ್ರಾಣ ರಕ್ಷಿಸಿ ಮಾನವೀಯತೆಯಿಂದ ಮೆರೆದಿದ್ದಾರೆ. ಹೋರಿ ಚರಂಡಿಯಲ್ಲಿ ಬಿದ್ದಿರುವುದನ್ನು ಅರಿತ ಯುವಕರು ಕೂಡಲೇ ಜೆಸಿಬಿ ತರಿಸಿ, ಅಗ್ನಿ ಶಾಮಕ ದಳದ ಠಾಣೆಗೆ ಕರೆ ಪುರಸಭೆ ಪೌರ ಸಿಬ್ಬಂದಿ ಕಿರಣ ಕೋಲಕಾರಮಾಡಿ ಸಿಬ್ಬಂದಿಗಳ ಸಹಾಯದಿಂದ ಹಾಗೂ ಜೆಸಿಬಿ ಮುಖಾಂತರ ನಿಧಾನವಾಗಿ ಮೇಲೆತ್ತಿ ಇನ್ನೇನು ಹೋರಿಯ ಪ್ರಾಣವೇ ಹೋಯಿತು ಎನ್ನುವಷ್ಟರಲ್ಲಿ ಬಕೆಟ್ ನಿಂದ ನೀರನ್ನು ತಂದು ಹಾಕಿ ಹೋರಿಯ ಪ್ರಾಣವನ್ನು ರಕ್ಷಣೆ ಮಾಡಿದ್ದಾರೆ. ಪ್ರಭಾರ ಅಗ್ನಿ ಠಾಣಾ ಅಧಿಕಾರಿ ಬಿ.ಟಿ. ಜಾಲಗೇರಿ ರವರು ರಕ್ಷಣಾ ಕಾರ್ಯಾಚರಣೆ ತಂಡದೊಂದಿಗೆ ಸಿಬಂದಿಗಳಾದ ಶ್ರೀಶೈಲ ಮುಕಾರ್ತಿಹಾಳ, ಶಿವಪ್ಪ ಎ.ಜೆ., ಯಲ್ಲಾಲಿಂಗ ಆರಳಗುಂಡಗಿ, ಅನಿಲ ದೊಡ್ಡಮನಿ, ಶಿವರಾಜ ಬಿರಾದಾರ, ಕೆ.ಟಿ.ಡಿ.ಎ ಜಿಲ್ಲಾಧ್ಯಕ್ಷ ಹಣಮಂತ ಕಾಮನಕೇರಿ, ಶ್ರೀಶೈಲ ಹಿರೇಮಠ, ಶಂಬು ಇಂಗಳೇಶ್ವರ, ಯಲ್ಲಪ್ಪ ಇಂಗಳೇಶ್ವರ, ವಿರುಪಾಕ್ಷಿ ಯರನಾಳ, ಮುದಕಪ್ಪ ಅಂಬಿಗೇರ, ಮುತ್ತು ಚಟ್ಟೆರ, ಸೇರಿ ಇತರರು ಇದ್ದರು.

### ಅರ್ಜಿ ಆಹ್ವಾನ

**ವಿಜಯಪುರ:** 2026-27ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂನಡಿ ನೇರವಾಗಿ ದ್ವಿತೀಯ ವರ್ಷ 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಇಲಾಖೆ ಅಧಿಕೃತ ವೆಬ್‌ಸೈಟ್‌ನಿಂದ ಅರ್ಜಿ ನಮೂನೆ ಡೌನ್ ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ತಾವು ಪ್ರವೇಶ ಪಡೆಯಲು ಬಯಸುವ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಂಶುಪಾಲರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು. ಆಸಕ್ತರು ಜೂ.20ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಪ್ರಾಂಶುಪಾಲರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ವಿಜಯಪುರ ಇವರಿಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮೊಹರಂ: ಶಾಂತಿ ಸಭೆ



**ಮುದ್ದೇಬಿಹಾಳ:** ಮುಂಬರುವ ಮೊಹರಂ ಹಬ್ಬದ ಹಬ್ಬದ ಪ್ರಯುಕ್ತ ಪೊಲೀಸ್ ಠಾಣೆ ವತಿಯಿಂದ ಶಾಂತಿ ಸಭೆ ಉದ್ದೇಶಿಸಿ ಮಾತನಾಡಿದ ಪಿಎಸ್‌ಐ ಸಂಜಯ ತಿಪ್ಪಾರೆಡ್ಡಿ ಮಾತನಾಡಿದರು. ಕ್ರೈಂ ಪಿಎಸ್‌ಐ ಆರ್.ಎಸ್.ಭಂಗಿ, ಮುಖಂಡರಾದ ಸದ್ದಾಂ ಕುಂಟೋಜಿ, ರಫೀಕ್ ಶಿರೋಳ. ರಾಜಶೇಖರ ಹೋಳಿ. ಶ್ರೀಕಾಂತ ಹಿರೇಮಠ, ಬಸನಗೌಡ ಪಾಟೀಲ್, ಮಾಗಿ, ಪೊಲೀಸ್ ಠಾಣೆಯ ಸಿಬ್ಬಂದಿಗಳಾದ ಪ್ರಕಾಶ ಪೂಜಾರಿ, ಸಂಗಮೇಶ ಚಲವಾದಿ ಉಪಸ್ಥಿತರಿದ್ದರು.




ಮುದ್ದೇಬಿಹಾಳ: ನಗರದ ನೌಕರರ ಭವನದಲ್ಲಿ ನಡೆದ ತಾಲೂಕಾ ಶರಣ ಸಾಹಿತ್ಯ ಪರಿಷತ್‌ನ ಪದಗ್ರಹಣ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ನೌಕರರ ಸಂಘದ ಅಧ್ಯಕ್ಷರು ಅರವಿಂದ ಹೂಗಾರ, ಅಶೋಕ ಮಣಿ, ಸಿ.ಬಿ.ಇಟಗಿ, ಬಿ ಪಿ ಪಾಟೀಲ ವೇದಿಕೆಯಲ್ಲಿ ಇದ್ದರು. ಮನೆಯಲ್ಲಿ ಮಹಾಮನೆ ಘಟಕದ ಸದಸ್ಯರು. ನಿವೃತ್ತಿ ನೌಕರರ ಪದಾಧಿಕಾರಿಗಳು ಭಾಗವಹಿಸಿದ್ದರು.

## ನೂತನ ಅಧ್ಯಕ್ಷ-ಉಪಾಧ್ಯಕ್ಷರ ಪದಗ್ರಹಣ

**ವಿಜಯಪುರ:** ಸನಾತನ ಕಾಲದಿಂದಲೂ ಬಂದಿರುವ ಕಾಲಗಣನೆಯ ಶಾಸ್ತ್ರ ಮಾನವನ ಅಭ್ಯುದಯಕ್ಕೆ ಪೂರಕವಾದ ವೇಧಾಂಗ, ಜ್ಯೋತಿಷ್ಯಶಾಸ್ತ್ರ ಕೆಲವೊಮ್ಮೆ ಜ್ಯೋತಿಷಿ ಸುಳ್ಳು ಹೇಳಬಹುದು ಆದರೆ ಜ್ಯೋತಿಷ್ಯ ಶಾಸ್ತ್ರ ಸುಳ್ಳಲ್ಲ' ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು. ಇಲ್ಲಿನ ಗಣೇಶನಗರದಲ್ಲಿ ನಡೆದ ಕರ್ನಾಟಕ ಜ್ಯೋತಿಷಿಗಳ ಒಕ್ಕೂಟದ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ನಿವೃತ್ತ ಡಿವಾಯ್‌ಎಸ್ಪಿ ಚೌಕಿಮಠ ಮಾತನಾಡಿದರು. ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಡಾ.ಆನಂದ ಹಂದಿಗೋಳ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ವಿದ್ವಾನ್ ಗುರುರಾಜ ಆಚಾರ್ಯ ಹೆರಕಲ್ಲ ಹಾಗೂ ನೂತನ ಉಪಾಧ್ಯಕ್ಷ ಭುಜಂಗಶರ್ಮಾ ವಿ.ಜೋಶಿ ಅವರನ್ನು ಸನ್ಮಾನಿಸಲಾಯಿತು. ಸುರೇಶ ಕೊಪ್ಪರ, ಶ್ರೀಕಾಂತ ಮಂಗಸುಳಿ, ನಾರಾಯಣ ಮಂಗಳೂರ, ರಮೇಶ ಬಡಂಕರ್, ಶಿವಪುತ್ರಯ್ಯ ಹಿರೇಮಠ, ವೆಂಕಟೇಶ ಕುಲಕರ್ಣಿ ಮಾತನಾಡಿದರು. ಖ್ಯಾತ ಜ್ಯೋತಿಷಿಗಳಾದ ಉದಯ ದೌಲತರಾವ್ ಮುದ್ದೆಬಿಹಾಳ, ಎಸ್.ಆರ್.ಪಟ್ಟಣಶೆಟ್ಟಿ, ಗೋವಿಂದಭಟ್ಟ ಜೋಶಿ, ನೀಲಕಂಠಯ್ಯ ಹಿರೇಮಠ, ನಾರಾಯಣ ಘೋರ್ಪಡೆ, ಸಂಜೀವಭಟ್ಟ ಬಿಳಗಿ, ಕಲ್ಯಾಣ ಆಚಾರ್ಯ ಸಂಗಮ, ಅನೀಲ ಶರ್ಮಾ ಜೋಶಿ, ಗುರುಬಸಯ್ಯ ಶೀಲವಂತ ಸೇರಿದಂತೆ ನೂರಾರು ಜ್ಯೋತಿಷಿಗಳು ಉಪಸ್ಥಿತರಿದ್ದರು. ಅಚ್ಯುತ್ ಪುರೋಹಿತ ಸ್ವಾಗತಿಸಿದರು. ಮಹಾದೇವಿ ದೊಡಮನಿ ಕಾರ್ಯಕ್ರಮ ನಿರೂಪಿಸಿದರು, ಶ್ರೀಕಾಂತ ಆಚಾರ್ಯ ವಂದಿಸಿದರು.



ವಿಜಯಪುರ: ನಗರದಲ್ಲಿ ನಡೆದ ಅಖಿಲ ಕರ್ನಾಟಕ ಜ್ಯೋತಿಷಿಗಳ ಒಕ್ಕೂಟದ ಸಭೆಯಲ್ಲಿ ನೂತನ ರಾಜ್ಯಾಧ್ಯಕ್ಷ ವಿದ್ವಾನ್ ಗುರುರಾಜ ಆಚಾರ್ಯ ಹೆರಕಲ್ಲ ಅವರನ್ನು ಸನ್ಮಾನಿಸಲಾಯಿತು. ಖ್ಯಾತ ಜ್ಯೋತಿಷಿಗಳಾದ ಉದಯ ದೌಲತರಾವ್ ಮುದ್ದೆಬಿಹಾಳ, ಎಸ್. ಆರ್.ಪಟ್ಟಣಶೆಟ್ಟಿ, ಗೋವಿಂದಭಟ್ಟ ಜೋಶಿ, ನೀಲಕಂಠಯ್ಯ ಹಿರೇಮಠ, ನಾರಾಯಣ ಘೋರ್ಪಡೆ, ಸಂಜೀವಭಟ್ಟ ಬಿಳಗಿ, ಕಲ್ಯಾಣ ಆಚಾರ್ಯ ಸಂಗಮ, ಅನೀಲ ಶರ್ಮಾ ಜೋಶಿ, ಗುರುಬಸಯ್ಯ ಶೀಲವಂತ ಸೇರಿದಂತೆ ನೂರಾರು ಜ್ಯೋತಿಷಿಗಳು ಉಪಸ್ಥಿತರಿದ್ದರು

# ವಚನ ವಿಚಾರ ಬದುಕಿನಲ್ಲಿ ಅಳವಡಿಸಿಕೊಳ್ಳಿ: ಭಾರತಿ

**ವಿಜಯಪುರ:** ಕನ್ನಡ ಸಾರಸ್ವತ ಲೋಕಕ್ಕೆ ಅನುಪಮ ಕೊಡುಗೆ ನೀಡಿದ ದಿ.ಕೋ ಚೆನ್ನಬಸಪ್ಪ ಅವರ ಹೆಸರಿನಲ್ಲಿ ನೀಡಲಾಗುವ ದತ್ತಿ ಪ್ರಶಸ್ತಿಯನ್ನು ರೂಪಾ ರಜಪೂತ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಕಸಾಪ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ರಜಪೂತ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭ ಉದ್ಘಾಟಿಸಿದ ಕಸಾಪ ಜಿಲ್ಲಾ ಗೌರವಾಧ್ಯಕ್ಷೆ ಭಾರತಿ ಪಾಟೀಲ ಮಾತನಾಡಿ, ವಚನ ಸಾಹಿತ್ಯವನ್ನು ಬೋಧನೆ ಮತ್ತು ಅಧ್ಯಯನಕ್ಕೆ ಮಾತ್ರ ಸೀಮಿತಗೊಳಿಸದೇ ಅದರ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ನಮ್ಮ ಜೀವನ ಸಾರ್ಥಕವಾಗುತ್ತದೆ. ಗ್ರಾಮೀಣ ಮಹಿಳೆಯರೂ ಸಹ ಇಂದು ಸಾಹಿತ್ಯದ ಸಾಧಕರಾಗಿ ಹೊರಹೊಮ್ಮಿದ್ದು ನಾವೆಲ್ಲ ಹೆಮ್ಮೆಪಡುವ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಸ್.ಎಂ.ಆರ್.ಕೆ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ ರವಿಶಂಕರ ಹೂಗಾರ ಮಾತನಾಡಿ ಯುವಜನರ ಮನಸ್ಸಿನಲ್ಲಿ ಶರಣರ ತತ್ವಗಳನ್ನು ಬಿತ್ತುವಲ್ಲಿ ಇದೊಂದು ಮೌಲಿಕವಾದ ಕಾರ್ಯಕ್ರಮ. ಇಂತಹ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ನಾಡಿಗೆ ನೀಡುವ ಮೂಲಕ ಜಿಲ್ಲಾ ಕಸಾಪ ಅತ್ಯುತ್ತಮ ಕಾರ್ಯ ಮಾಡುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿ ಎಂದರು.



'ವಚನ ಸಾಹಿತ್ಯದ ಅತ್ಯಗತ್ಯ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಡಾ.ಮಾಧವ ಗುಡಿ ಮಾತನಾಡಿ, ಮಾನವೀಯ ಮೌಲ್ಯಗಳು ಹಾಗೂ ನೈತಿಕ ತಳಹದಿಯ ಮೇಲೆ ರೂಪಗೊಂಡ ವಚನ ಸಾಹಿತ್ಯ ಇಂದು ನಮ್ಮೆಲ್ಲರ ಬದುಕಿಗೆ ಆಧಾರಸ್ತಂಭವಾಗಿದ್ದು, ಆರೋಗ್ಯಕರ ಸಮಾಜದಲ್ಲಿ ಮಾನವೀಯ ಮೌಲ್ಯವನ್ನು ಒಳಗೊಂಡಿರುವ ಬದುಕನ್ನು ಕಟ್ಟಿಕೊಳ್ಳಲು ಹಾಗೂ ಆಡಳಿತಗಾರನಾಗಿರಲು ವಚನ ಸಾಹಿತ್ಯದ ಅಧ್ಯಯನ ಹಾಗೂ ಅದರ ಪಾಲನೆಯು ಇಂದು ತುಂಬಾ ಅಗತ್ಯವಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಬಂದೇನವಾಜ ಅವಟಿ ಮಾತನಾಡಿದರು. ರಮೇಶ ದೇಸಾಯಿ, ವಿಜಯಲಕ್ಷ್ಮೀ ಹಳಕಟ್ಟಿ ಉಪಸ್ಥಿತರಿದ್ದರು. ಸುನಂದಾ ಕೋರಿ ಪ್ರಾರ್ಥಿಸಿದರು. ಪರವೀನಬಾನು ಶೇಖ ಸ್ವಾಗತಿಸಿ ಗೌರವಿಸಿದರು. ರಿಯಾಜ ಪಿಂಜಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗೌರವ ಕಾರ್ಯದರ್ಶಿ ಶಿಲ್ಪಾ ಭಸ್ಮೆ ನಿರೂಪಿಸಿದರು. ಸುಖದೇವಿ ಅಲಬಾಳಮಠ ವಂದಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಜಿ.ಎಸ್. ಬಳ್ಳೂರ, ಶ್ರೀಕಾಂತ ನಾಡಗೌಡ, ಕೆ. ಎಸ್. ಹಣಮಾಣಿ, ಟಿ.ಆರ್.ಹಾವಿನಾಳ, ರುದ್ರಮ್ಮ ಗಿಡ್ಡಪ್ಪಗೋಳ, ಶ್ರೀಕಾಂತ ನಾಡಗೌಡ, ಬಸನಗೌಡ ಬಿರಾದಾರ, ಶಾಂತಾ ವಿಭೂತಿ, ಭಾಗೀರಥಿ ಸಿಂಧೆ, ಲತಾ ವಾಲೀಕಾರ, ಗಂಗಮ್ಮ ರೆಡ್ಡಿ, ಬಾಬು ಲಮಾಣಿ, ಬಸವರಾಜ ಕೋನರೆಡ್ಡಿ, ಫಕ್ರುದ್ದೀನ ಅಲಿಅಹ್ಮದ ಹಿರೇಕೊಪ್ಪ, ಮಹಾದೇವಿ ತೆಲಗಿ, ಯಲಗೂರಪ್ಪ ಬೂದಿಹಾಳ, ಎಸ್. ಕೆ. ಪಾಟೀಲ, ಆರ್. ಎಂ.ದೊಡಮನಿ ಉಪಸ್ಥಿತರಿದ್ದರು.

## ಅಂತರಂಗ ಶುದ್ಧಿಗೆ ಸತ್ಸಂಗವೇ ಮಾರ್ಗ

**ವಿಜಯಪುರ:** ಜೀವನದಲ್ಲಿ ಅತೀಯಾದ ಆಸೆಗಳನ್ನು ತ್ಯಜಿಸಿ, ಸಾತ್ವಿಕ ಚಿಂತನೆ, ಭಕ್ತಿ ಮತ್ತು ಧ್ಯಾನದ ಮೂಲಕ ನಮ್ಮ ಮನಸನ್ನು ಹತೋಟಿಯಲ್ಲಿಡಬೇಕು. ಭಗವದ್ಗೀತೆ ಮತ್ತು ಶರಣರ ವಚನಗಳ ಸಾರ-ಸಂದೇಶವು ನಮಲ್ಲಿರುವ ಅರಿಷಡ್ವರ್ಗಗಳನ್ನು ತ್ಯಜಿಸುತ್ತಾ, ಅಂಧಕಾರವೆಂಬ ಅಜ್ಞಾನವನ್ನು ತೊಲಗಿಸಿ ಸುಜ್ಞಾನದ ಸುಧೆ ಬೆಳಗುವಂತೆ ಮತ್ತು ಸಮಚಿತ್ತತೆಯಿಂದ ಬದುಕಲು ಮಾರ್ಗದರ್ಶನ ನೀಡುತ್ತವೆ ಎಂದು ಸನಾತನ ಸಾಧಕರಾದ ದ್ರುವ ಕುಲಕರ್ಣಿ ಅವರು ಅಭಿಪ್ರಾಯಪಟ್ಟರು.



ನಗರದ ಅಲ್-ಅಮೀನ್ ಎದುರಿಗೆ ಎನ್‌ಜಿಓ ಕಾಲನಿಯ ಆಂಜನೇಯ ದೇವಸ್ಥಾನದಲ್ಲಿ ಜರುಗಿದ ಸತ್ಸಂಗದಲ್ಲಿ ಪಾಲ್ಗೊಂಡು ಮಾತನಾಡಿ, ಲೌಕಿಕ ಜಂಜಾಟದಿಂದ ಮುಕ್ತಿ ಪಡೆದು ಜೀವನದ ಕೊನೆಯ ಉಸಿರಿರುವರೆಗೂ ಸದಾ ಸಹಾಯ, ಸಹಕಾರ, ಸಮತಾಭಾವ, ಸಮನ್ವಯತೆ ಮತ್ತು ಸಮಷ್ಠಿಭಾವಗಳೆಂಬ ಪಂಚ ಸದ್ಗುಣಗಳನ್ನು ಅನುಪಾಲಿಸಬೇಕು. ನಮ್ಮ ಬದುಕಿನ ನಿಜವಾದ ಅಸ್ತಿತ್ವನ್ನು ಅರಿತುಕೊಂಡು ಅಧ್ಯಾತ್ಮ, ಸತ್ಸಂಗ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಮಾಜದ ಒಳಿತಿಗಾಗಿ ದುಡಿಯುವುದೇ ಜೀವನದ ಸಾರ್ಥಕ್ಯವನ್ನು ಮನಗಾಣಬೇಕು. ಸತ್ಸಂಗವು ವ್ಯಕ್ತಿಯ ಆಲೋಚನೆ, ನಡುವಳಿಕೆ ಮತ್ತು ಜೀವನದ ದೃಷ್ಟಿಕೋನವನ್ನು ಧನಾತ್ಮಕವಾಗಿ ಬದಲಿಸುವ ಶಕ್ತಿಯನ್ನು ಹೊಂದಿವೆ ಎಂದರು.

ಪ್ರೊ.ಎಂ.ಎಸ್. ಖೊದ್ನಾಪೂರ ಮಾತನಾಡಿ, ವಚನ ಸಾಹಿತ್ಯ ಪ್ರತಿಯೊಬ್ಬರ ಬದುಕಿಗೆ ಹಾಸುಹೊಕ್ಕಾಗಿದೆ. ವಚನ ಮಾತಿನ ಮೂಲವಾಗಿದ್ದು, ಸಮಾಜದಲ್ಲಿ ಸಾಮಾಜಿಕ ಮೌಲ್ಯ ಎತ್ತಿ ಹಿಡಿಯುವ ಶಕ್ತಿಯನ್ನು ಹೊಂದಿದೆ. ನಾವೆಲ್ಲರೂ ಶರಣರ ವಚನಗಳಲ್ಲಿ ತಿಳಿಸಿರುವ ಸಂದೇಶದಂತೆ, ಪ್ರತಿಯೊಬ್ಬರೂ ಭಕ್ತಿ ಮಾರ್ಗ, ಜ್ಞಾನ ಮಾರ್ಗ ಮತ್ತು ಕಾಯಕ ಮಾರ್ಗದಲ್ಲಿ ಪ್ರಾಮಾಣಿಕವಾಗಿ ನಡೆದು ಜೀವನದಲ್ಲಿ ಸಾರ್ಥಕತೆ ಹೊಂದಬೇಕು ಎಂದರು.

ದೇವಸ್ಥಾನದ ಅಧ್ಯಕ್ಷ ಸಂತೋಷ ಪಾಟೀಲ, ಭೀಮರಾಯ ಬಿರಾದಾರ, ಬಾಬು ಕೋಲಕಾರ, ನಾನಾಸಾಬ ಕೂಟನೂರ, ಶಿವಾನಂದ ಬಿಜ್ಜರಗಿ, ಶ್ರಿರಾಂ ದೇಶಪಾಂಡೆ, ರಮೇಶ ಕುಮಟಗಿ, ವೆಂಕಟೇಶ ಹೊಸಮನಿ, ಎಸ್.ಎಸ್.ಬಶೆಟ್ಟಿ ಆರ್.ಬಿ.ಪೂಜಾರಿ, ಗಂಗಾಧರ ಚಾಬೂಕಸವಾರ, ಬಿ.ಆರ್. ಬಿರಾದಾರ, ಎಸ್.ಬಿ.ಪೂಜಾರಿ, ವಿನಾಯಕ ಕಿಚಡಿ, ಆರ್.ಎಸ್.ತಳವಾರ ಇನ್ನಿತರು ಸಹ ಉಪಸ್ಥಿತರಿದ್ದರು.

ಈ ಸತ್ಸಂಗದಲ್ಲಿ ನವರಸಪುರದ ನೂರಾರು ಮಕ್ಕಳು, ಮಹಿಳೆಯರು, ಹಿರಿಯರು ಸೇರಿದಂತೆ ಭಾಗವಹಿಸಿದ್ದರು. ನಂತರ ಸಾಮೂಹಿಕ ಹನುಮಾನ ಚಾಲೀಸ್ ಪಠಣ ಮತ್ತು ಮಹಾಮಂಗಳಾರತಿ ನೆರವೇರಿತು.

## ವೈದ್ಯಕೀಯ ಕಾಲೇಜ್ ಸ್ಥಾಪನೆ: ಸಮಗ್ರ ಪರಿಶೀಲನೆ

**ವಿಜಯಪುರ:** ಜಿಲ್ಲೆಯ ಜನರ ಬಹುಕಾಲದ ಕನಸಾಗಿರುವ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆ ನಡೆದಿದ್ದು, ರಾಜ್ಯ ಸರ್ಕಾರದ ವಿಶೇಷಾಧಿಕಾರಿ ಡಾ. ರಾಜಶೇಖರ್ ದ್ಯಾಬೇರಿ ಇಲ್ಲಿನ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ಅಗತ್ಯವಿರುವ ಮೂಲಸೌಕರ್ಯ, ಆಸ್ಪತ್ರೆಯ ಸೌಲಭ್ಯಗಳು ಹಾಗೂ ಲಭ್ಯವಿರುವ ಸಂಪನ್ಮೂಲಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು.

ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿಯ ಸದಸ್ಯರು ವಿಶೇಷಾಧಿಕಾರಿಗಳನ್ನು ಭೇಟಿ ಮಾಡಿ ಜಿಲ್ಲೆಯ ಜನರ ಬಹುವರ್ಷಗಳ ಬೇಡಿಕೆ, ವೈದ್ಯಕೀಯ ಶಿಕ್ಷಣದ ಅಗತ್ಯತೆ ಹಾಗೂ ಜಿಲ್ಲೆಯ ಆರೋಗ್ಯ ಕ್ಷೇತ್ರದ ಸವಾಲುಗಳ ಕುರಿತು ವಿವರವಾದ ಮಾಹಿತಿ ನೀಡಿದರು.

ಸಮಿತಿಯ ಸದಸ್ಯರು, ವಿಜಯಪುರವು ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಯಾಗಿದ್ದರೂ ಇಲ್ಲಿಯವರೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗದಿರುವುದು ಜಿಲ್ಲೆಯ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಅನ್ಯಾಯವಾಗಿದೆ ಎಂದರು.

ವೈದ್ಯಕೀಯ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ದೂರದ ಜಿಲ್ಲೆಗಳಿಗೆ ತೆರಳಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುತ್ತಿದೆ. ಇದಲ್ಲದೆ, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಯಾದಲ್ಲಿ ಜಿಲ್ಲೆಯ ಆರೋಗ್ಯ ಸೇವೆಗಳ ಗುಣಮಟ್ಟ ಹೆಚ್ಚುವುದರ ಜೊತೆಗೆ ತಜ್ಞ ವೈದ್ಯರ ಲಭ್ಯತೆ, ಆಧುನಿಕ ಚಿಕಿತ್ಸಾ ಸೌಲಭ್ಯಗಳು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಎಂದರು.

ವಿಶೇಷಾಧಿಕಾರಿ ಡಾ. ರಾಜಶೇಖರ್ ದ್ಯಾಬೇರಿ, ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಪರಿಶೀಲಿಸಿ, ಅಗತ್ಯ ಮಾಹಿತಿಯನ್ನು ಸಂಗ್ರಹಿಸಿದರು. ಪರಿಶೀಲನೆ ವರದಿಯನ್ನು ಶೀಘ್ರದಲ್ಲೇ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಈ ವೇಳೆ ಡಾ.ರಾಜಶೇಖರ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಶಸ್ತ್ರಚಿಕಿತ್ಸಕ ಶಿವಾನಂದ ಮಾಸ್ತಿಹೋಳಿ, ಹೋರಾಟ ಸಮಿತಿಯ ಸದಸ್ಯರಾದ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಬಿ.ಭಾಗವಾನ ರೆಡ್ಡಿ, ಅಕ್ರಮ ಮಾಶಾಲ್ಕರ್, ಸುರೇಶ ಜೀಬಿ, ಸಂಗನಬಸವ ಸ್ವಾಮೀಜಿ, ಲಲಿತಾ ಬಿಜ್ಜರಗಿ, ಎಲ್. ಎಚ್.ಲೆಂಡಿ, ಸಿದ್ದಲಿಂಗ ಬಾಗೇವಾಡಿ, ಡಾ.ಗುರಿಕರ, ಗಿರೀಶ ಕಲಘಟಗಿ, ಲಕ್ಷ್ಮಣ ಕಂಬಾಗಿ, ಸಿದ್ರಾಮ್ ಹಿರೇಮಠ, ಮಲ್ಲು ಕಾಮನಕೇರಿ, ಶಿವರಂಜನಿ ಇದ್ದರು.



## ಪರಿಸರ ಸಂರಕ್ಷಣೆಗೆ ವಿದ್ಯಾರ್ಥಿಗೆ ಒಂದು ಮರ ದತ್ತು ನೀಡಿ: ನಡುಗಡ್ಡಿ

**ಇಂಡಿ:** ಮಾನವನ ಬದುಕು ಹಸನಾಗಿಸಬೇಕಾದರೆ ಪರಿಸರವನ್ನು ಪ್ರೀತಿಸಬೇಕು. ಆಧುನಿಕ ತಂತ್ರಜ್ಞಾನದ ಕಾಲದಲ್ಲಿ ಮನುಷ್ಯ ನಿಸರ್ಗ ನಾಶ ಮಾಡುತ್ತಿದ್ದಾನೆ. ಸುಂದರ ಪರಿಸರ ನಿರ್ಮಾಣವಾಗಬೇಕಾದರೆ ಶಾಲೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಮರ ಪೋಷಣೆ ಮಾಡುವ ಅರು ಅರಿವು ಮೂಡಿಸಿ ಒಂದು ಮರ ದತ್ತು ನೀಡಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಆರ್.ನಡುಗಡ್ಡಿ ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಇಂಡಿ ಘಟಕ ಬೆಂಗಳೂರು ಮತ್ತು ಸಹಕಾರಿ ನೌಕರರ ಬ್ಯಾಂಕಿನ ನಿರ್ದೇಶಕ ಅಲ್ಲಾಭಕ್ಷ ವಾಲಿಕಾರ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿದ ಶಾಲೆಗೊಂದು ಸಸಿ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಕಾಂತು ಇಂಡಿ ಮಾತನಾಡಿ, ಪರಿಸರ ಇದ್ದರೆ ಸಂಸಾರ ಅದೇ ಸೃಷ್ಟಿಯ ಸಾರ ಪರಿಸರ ಉಳಿಸುವುದೇಂದರೆ ಮಾನವನ ಬದುಕುಳಿದಂತೆ ಪ್ರಕೃತಿ ಕೊಟ್ಟಿರುವ ಗ್ಯಾರಂಟಿಗಳೆಂದರೆ ಗಾಳಿ ನೀರು ಮಣ್ಣು ಬೆಳಕು ಸ್ವಚ್ಛಂದ ಪರಿಸರ ಇವೆಲ್ಲವೂ ಪ್ರೀತಿಸಬೇಕು ಎಂದರು.



ತಾಲೂಕಿನ ಎಲ್ಲ ಶಾಲೆಗಳಿಗೆ ಸಸಿ ಕೊಟ್ಟಂತಹ ಅಲ್ಲಾಭಕ್ಷ್ ವಾಲಿಕಾರ ಮಾತನಾಡಿದರು.

ಈ ವೇಳೆ ಎಂ.ಎಂ.ವಾಲಿಕಾರ, ವೈ.ಟಿ.ಪಾಟೀಲ, ಎಸ್.ವಿ.ಹರಳಯ್ಯ, ಅಲ್ತಾಫ್ ಬೋರಾಮಣಿ, ಜಗದೀಶ ಚವಡಿಹಾಳ, ಆನಂದ್ ಕೆಂಭಾವಿ, ಉಮರ ಶೇಕ್, ಎ.ಎಂ.ಹೊಸೂರ, ಡಿ.ಎಸ್.ಕಣ್ಮಸ, ಎಚ್.ಎಂ.ಮುಜಾವರ್, ಎಂ.ಡಿ.ಕಂಠಿಕಾರ, ಟಿ.ಕೆ.ಪೂಜಾರಿ, ಎ.ಸಿ.ಬಡಿಗೇರ, ಎ.ಎಸ್.ಬಡಿಗೇರ, ಎಫ್.ಲಮಾಣಿ, ಬಿ.ಎಸ್.ಸೋನ್ನದ, ತಾನಾಜಿ ಕಟಕದಂಡ, ಬಂಗಾರಪ್ಪ ಜಮಾದಾರ್, ಪಿಜಿ ಕಲ್ಮನಿ, ಸುರೇಶ್ ಚೌಹಾನ, ವೇಣು ಚೌಹಾನ, ಮೋಹನ್ ಕಟಟತದೊಂಡ, ರವಿ ಬಿರಾದಾರ್, ಎಸ್.ಎನ್.ನಾವಿ, ಮಲ್ಲಿಕಾರ್ಜುನ ಟೆಂಗಳೆ, ತಿಪ್ಪಣ್ಣ ಜಂಬಗಿ, ಎಲ್ಲ ಶಾಲೆಯ ಮುಖ್ಯೋಪಾಧ್ಯರು ಭಾಗವಹಿಸಿದ್ದರು.

## ಶಿಕ್ಷಣದಲ್ಲಿ ರಾಜಕಾರಣ ಬೇಡ: ನಾರಾಯಣ ಜಹಾಗೀರದಾರ

**ಝಳಕಿ:** ಶಿಕ್ಷಣದಲ್ಲಿ ರಾಜಕಾರಣ ಬೇಡ ಮಕ್ಕಳಿಗೆ ಮಹತ್ವ ಶಿಕ್ಷಣ ನೀಡಿ ಎಂದು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ನಾರಾಯಣ ಜಹಾಗೀರದಾರ ಹೇಳಿದರು.

ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಎಸ್. ಕೆ.ಸೊನಕನಳ್ಳಿಯವರ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿ, ಎಸ್. ಕೆ.ಸೊನಕನಳ್ಳಿ ಗುರುಗಳು ಅವರ ಸರಳ ಜೀವಿ. ಸಹಕಾರ ಜೀವಿ ಅವರ ಪ್ರೀತಿ ಹೃದಯವಂತಿಕೆ ಶಾಲೆಯನ್ನು ಎತ್ತರದ ಮಟ್ಟಕ್ಕೆ ಬೆಳಸಿದ್ದಾರೆ. ಅವರ ಶಾಲೆಗೆ ಕೊಡುಗೆ ಅಪಾರವಾದ್ದು. ಎಲ್ಲ ಶಿಕ್ಷಕರಿಗೆ ಒಂದು ಕಿವಿ ಮಾತು ಮಕ್ಕಳನ್ನು ತಿದ್ದಿ ತಿಡಿ ಶಿಕ್ಷಣ ಜೋತೆ ಒಳ್ಳೆಯ ಸಂಸ್ಕಾರವನ್ನು ಕಲಿಸಿ ಶಿಕ್ಷಣದಲ್ಲಿ ರಾಜಕೀಯ ಮಾಡಬೇಡಿ ಮಕ್ಕಳಿಗೆ ಮಹತ್ವದ ಶಿಕ್ಷಣ ನೀಡಿ ಎಂದರು.

ಸಿ ಆರ್ ಪಿ ಆರ್ ಪಿ ಬಾಲಗಾಂವ ಮಾತನಾಡಿ, ಎಸ್.ಕೆ.ಸೊನಕನಳ್ಳಿ ಗುರುಗಳ ಒಳ್ಳೆಯ ಮನೋಭಾವುಳ್ಳ ವ್ಯಕ್ತಿಯವರು ದಾರಿಯಿಂದ ದೂರವಾದರೂ ಆವರ ಹೃದಯವಂತಿಕೆಯಿಂದ ಹತ್ತಿರ ಇರುವ ವ್ಯಕ್ತಿ ಅವರ ಶಾಲೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಈ ವೇಳೆ ಎಸ್ಡಿಎಂಸಿ ಅದ್ಯಕ್ಷ ನಿಂಬಣ್ಣ ವಾಲಿಕಾರ, ಮುಖ್ಯ ಗುರುಗಳಾದ ಪಿ.ಡಿ.ಕಾಸರ, ಸಣ್ಣಪ್ಪ ತಳವಾರ, ಹಣಮಂತ ಕೋಳಿ, ರಾಘವೇಂದ್ರ ಕಾಗರ, ಎಂ.ಎ.ಕಂಬಾರ, ಸಂಜು ಜಹಾಗೀರದಾರ, ಜಿ.ಡಿ.ಹೂಗಾರ, ರವಿ ತೇಲಿ, ಮಲಿಕಾರಿ ಕಾಗರ, ಅಶೋಕ ಕಾಸರ, ಪೀರಪ್ಪ ಕಂಬಾರ, ಭೀಮರಾಯ ಚಟ್ಟರಕಿ, ಮಲ್ಲಿಕಾರ್ಜುನ ಝಳಕಿ, ಎಂ.ಎ.ಇಂಡಿಕಾರ ಎ.ಎಸ್.ಹೂನ್ನುಂಗರೆ, ಎಸ್. ಎಂ.ಕುಲಕರ್ಣಿ, ಬಿ.ಎಸ್.ಮಧಭಾವಿ, ಎಸ್.ಎಚ್.ಬಜಂತ್ರಿ, ಹಾಗೂ ಗ್ರಾ.ಪಂ ಸದಸ್ಯರು, ಎಸ್‌ಡಿಎಂಸಿ ಸದಸ್ಯರು, ಮಕ್ಕಳು ಉಪಸ್ಥಿತರಿದ್ದರು.



## ನಾಡಗೌಡರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

**ನಾಲತವಾಡ:** ಕಾಂಗ್ರೆಸ್ ಪಕ್ಷದಿಂದ 6 ಬಾರೀ ಶಾಸಕರಾಗಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಲ್ಲದೇ ಪಕ್ಷದ ಶಿಸ್ತಿಗೆ ಒತ್ತು ಕೊಟ್ಟ ಹಿರಿಯ ಶಾಸಕ ಸಿ.ಎಸ್.ನಾಡಗೌಡ ಅವರಿಗೆ ಉದ್ದೇಶಪೂರ್ವಕವಾಗಿ ಸಚಿವ ಸ್ಥಾನ ನೀಡುತ್ತಿಲ್ಲ, ಪಕ್ಷದಲ್ಲಿ ನಿಷ್ಠುರತೆಗೆ ಬೆಲೆ ಇಲ್ಲವೇ ಎಂದು ಸ್ಥಳಿಯ ಅಂಜುಮನ್ ಸಮೀತಿ ಅಧ್ಯಕ್ಷ ಎಲ್.ಎಚ್.ಅವಟಿ ಕಾಂಗ್ರೆಸ್ ಹೈಕಮಾಂಡ್‌ಗೆ ಪ್ರಶ್ನಿಸಿದ್ದಾರೆ.



ಸ್ಥಳಿಯ ಅಂಜುಮನ್ ಕಚೇರಿಯಲ್ಲಿ ಶಾಸಕ ನಾಡಗೌಡ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಕರೆದ ಸಭೆಯಲ್ಲಿ ಅವರು ಮಾತನಾಡಿದರು. ಸುಮಾರು ಸಲ ಹಲವು ಸ್ಥಾನಗಳನ್ನು ಅಲಂಕರಿಸಿದ್ದಾರೆ, ಅಲ್ಲದೇ ಮುಳಗುತ್ತಿದ್ದ ಕೆಎಸ್‌ಡಿಎಲ್‌ಗೆ ನಿರೀಕ್ಷೆಗೂ ಮೀರಿ ಲಾಭ ಕೊಟ್ಟಿದ್ದಾರೆ ಎನ್ನುವುದು ಹೈಕಮಾಂಡ್ ಮರೆತಿದೆ. ಕಳೆದ ಹಲವು ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಚಾರ ಭಾಷಣದಲ್ಲಿ ಸಿದ್ದರಾಮಯ್ಯನವರು ನಾಡಗೌಡ ಅವರಿಗೆ ಸಚಿವ ಸ್ಥಾನ ಸಿಗುವ ಎಲ್ಲಾ ಅವಕಾಶಗಳಿವೆ ಎಂದು ಭರವಸೆ ನೀಡಿದ್ದು ನೆನಪಿಸಿಕೊಳ್ಳಲಿ ಎಂದ ಅವರು 2 ಪಟ್ಟಿಯಲ್ಲಿ ಸಚಿವ ಸ್ಥಾನದ ಹೆಸರು ಘೋಷಣೆಯಾಗದಿದ್ದರೆ ಮುದ್ದೇಬಿಹಾಳ ಮತಕ್ಷೇತ್ರದಲ್ಲಿ ಉಗ್ರ ಹೋರಾಟ ಹಮ್ಮಿಕೊಂಡು, ಜೊತೆಗೆ ನಾಲತವಾಡ ಪಟ್ಟಣವನ್ನು ಬಂದ್ ಮಾಡಿ ಕಾಂಗ್ರೆಸ್ ನಾಯಕರಿಗೆ ಬಿಸಿ ತಟ್ಟಿಸುತ್ತೇವೆ ಹಾಗೂ ಸಚಿವ ಸ್ಥಾನ ನೀಡದಿದ್ದರೆ ಪಕ್ಷಕ್ಕೆ ಹಾನಿ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದರು.

ಬಿಲಾಲ್ ಮಸೀದಿಯ ಅಧ್ಯಕ್ಷರಾದ ರಜಾಕಸಾಬ್ ನಾಯ್ಕೋಡಿ, ಬುಡ್ಡೇಸಾಬ ತಂಗಡಗಿ, ಬಾಬು ನಾಯ್ಕೋಡಿ ಹಾಗೂ ಅಬ್ದುಗನಿಸಾಬ ಖಾಜಿ ಮಾತನಾಡಿ, ಕ್ಷೇತ್ರದ ಜನತೆಯ ಸಹನೆಯನ್ನು ಹೈಕಮಾಂಡ್ ಪರೀಕ್ಷೆ ಮಾಡದೇ ತಕ್ಷಣವೇ ಸಚಿವ ಸ್ಥಾನ ನೀಡಬೇಕು. ಒಂದು ವೇಳೆ ಇದೇ ಧೋರಣೆ ಮುಂದುವರೆದರೆ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಕ್ಷೇತ್ರದ ಜನತೆ ಉತ್ತರ ನೀಡುತ್ತಾರೆ ಎಂದ ಅವರು 2ನೇ ಪಟ್ಟಿಯಲ್ಲಿ ನಾಡಗೌಡ ಅವರಿಗೆ ಸ್ಥಾನ ಮಾನ ಕಲ್ಪಿಸಿ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಮುಖಂಡರಾದ ಇಬ್ರಾಯಿಂ ಮುಲ್ಲಾ, ಉಮರ ಫಾರೂಕ್ ಮೂಲಿಮನಿ, ದಸ್ತಗೀರಸಾಬ್ ಆರೇಶಂಕರ, ಯುವ ಮುಖಂಡರಾದ ಜಾಕೀರ್ ಮೂಲಿಮನಿ, ಜಾಫರ್ ಮಕಾಂದಾರ, ಮಯಬೂಬ ಮಲಿಕಸಾ ಹಳ್ಳೂರ ಇದ್ದರು.

## ಉತ್ತಮ ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳಿ: ಉಪ್ಪಾರ

**ದೇವರಹಿಪ್ಪರಗಿ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಜೀವನೋಪಾಯ ರೂಪಿಸಿಕೊಳ್ಳುವ ಕಲಿಕೆಯಾಗಬೇಕೆಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನೂತನ ಉಪ ನಿರ್ದೇಶಕ ಕೆ.ಎ.ಉಪ್ಪಾರ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಮಹಾತ್ಮಾ ಗಾಂದೀಜಿ ಪದವಿ ಪೂರ್ವಕಾಲೇಜಿಗೆ ಭೇಟಿ ನೀಡಿ, ಮಾತನಾಡಿ, ಸೌಲಭ್ಯಗಳು ಸಿಗುತ್ತಿದ್ದರೂ, ಶಿಕ್ಷಣ ಪಡೆಯುವವರ ಸಂಖ್ಯೆ ಕಡಿಮೆಯಿದೆ. ಅದಕ್ಕಾಗಿ ಗ್ರಾಮೀಣ ಭಾಗದ ಪ್ರತಿಯೊಬ್ಬ ವಿದ್ಯಾರ್ಥಿ ಎಸ್ಸೆಸ್ಸೆಲ್ಸಿ ಮುಗಿದ ತಕ್ಷಣ ಪಿಯುಸಿಗೆ ದಾಖಲಾಗಿ, ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಬೇಕು. ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ವಾತಾವರಣ ನಿರ್ಮಿಸಿ ಸಮಾಜದಲ್ಲಿ ಪ್ರತಿಯೊಬ್ಬರೂ ಶಿಕ್ಷಣವಂತರಾಗಲು ಶಿಕ್ಷಣ ಸಂಸ್ಥೆಯವರು ಸಹಕರಿಸಬೇಕೆಂದರು.

ಸಂಸ್ಥೆಯ ಅಧ್ಯಕ್ಷ, ನ್ಯಾಯವಾದಿ ಎ.ಎಂ. ತಾಂಬೋಳಿ ಮಾತನಾಡಿ, ಗ್ರಾಮೀಣ ಬಡ ಮಕ್ಕಳ ಸಲುವಾಗಿ ಕಳೆದ 12 ವರ್ಷಗಳಿಂದ ನಮ್ಮ ಸಂಸ್ಥೆ ಫಲಾಪೇಕ್ಷೆಯಿಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಕಳೆದ ವರ್ಷದಿಂದ ಪದವಿವರೆಗೆ ನಡೆಯುತ್ತಿದ್ದು, ಈ ಸಲದಿಂದ ಪ್ರಾಥಮಿಕ ಪ್ರೌಡಶಾಲೆ ಪ್ರಾರಂಭಿಸಲಾಗುವುದು. ಮಕ್ಕಳ ಹಿತದೃಷ್ಠಿಯಿಂದ ಸುಸಜ್ಜಿತ ಕಟ್ಟಡ, ಅಗತ್ಯ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ ಸಿದ್ಧಪಡಿಸಲಾಗುತ್ತಿದೆ. ಜೊತೆಗೆ ಬಂದು ಹೋಗಲು ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದರು.



ಸಂಸ್ಥೆಯ ವತಿಯಿಂದ ಅಧ್ಯಕ್ಷ ಎ.ಎಂ. ತಾಂಬೋಳಿ, ಪ್ರಾಚಾರ್ಯ ಪ್ರೊ.ನೌಶದ್ ವಾಲೀಕಾರ ಪ್ರಥಮ ಬಾರಿಗೆ ಆಗಮಿಸಿದ ಉಪನಿರ್ದೇಶಕರಿಗೆ ಸನ್ಮಾನ ಮಾಡಿ ಗೌರವಿಸಿದರು. ಮಹಮ್ಮದ ರಫೀಕ್ ಪಾನಪರೋಷ, ರೆಹಮಾನ ವಡ್ಡೋಡಗಿ, ಡಾ.ಎಚ್.ಎಂ.ಕಮತಗಿ, ಡಾ.ಎ.ಎನ್.ಚಟ್ಟರಕಿ, ಹಿದಾಯತ್ ಮಾಶಾಳಕರ ಮತ್ತೀತರರಿದ್ದರು.

## ಅಧಿಕ ಮಾಸದ ಕಾರ್ಯಕ್ರಮ ಸಂಪನ್ನ

**ವಿಜಯಪುರ:** ಇಲ್ಲಿಯ ನಂಜನಗೂಡು ರಾಯರ ಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ಅವ್ಯಾಹತವಾಗಿ ಹಮ್ಮಿಕೊಂಡಿದ್ದ 33 ಭಜನಾ ಹಾಡುಗಳು ಗೌರಿ ಪೂಜೆ ಭಾಗವತ ಪ್ರವಚನದ ಸಮಾರೋಪ ಭಾನುವಾರ ನಡೆಯಿತು.

ಶ್ರೀಮದ್ಭಾಗವತದ ಮಂಗಳವನ್ನು ನೆರವೇರಿಸಿದ ಪಂಡಿತ ಮಧ್ವೇಶಾಚಾರ್ಯ ಮುತ್ತಗಿ ಅವರು, ಭಗವಂತನನ್ನು ಶ್ರದ್ಧಾ ಭಕ್ತಿಯಿಂದ ಸ್ಮರಿಸಿದರೆ ಖಂಡಿತ ಆತ ಕರುಣೆ ತೋರುತ್ತಾನೆ ಎಂದರಲ್ಲದೇ, ಭಗವಂತನಿಗೆ ಗಂಧ ಸಮರ್ಪಿಸಿದರೇ ಆತ ಸೌಂದರ್ಯ ನೀಡುತ್ತಾ ನೀಡುತ್ತಾನೆ ಎಂದರು.

ಅಧಿಕ ಮಾಸ ಪರಮಾತ್ಮನ ಮಾಸ. ಈ ಮಾಸದಲ್ಲಿ ನಡೆಯುವ ಎಲ್ಲ ಧಾರ್ಮಿಕ ಕಾರ್ಯಗಳು ಜೀವನವನ್ನು ಪಾವನಗೊಳಿಸುತ್ತವೆ. ದಾನ ಧರ್ಮ ಸಂಕೀರ್ತನೆಗಳು ಪರಮಾತ್ಮನಿಗೆ ಸಂತೃಪ್ತಗೊಳಿಸುತ್ತವೆ ಎಂದು ಬಣ್ಣಿಸಿದರು.

ಶ್ರೀಮಠದ ವಿಚಾರಣಕರ್ತ ಗೋಪಾಲ ನಾಯಕ ಮಾತನಾಡಿ, ಮಂತ್ರಾಲಯ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಮಠದಲ್ಲಿ ಹತ್ತು ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.



ಶ್ರೀ ಮಠದ ವ್ಯವಸ್ಥಾಪಕ ಪ್ರಧಾನ ಅರ್ಚಕ ರವಿ ಆಚಾರ್ಯ, ಅರ್ಚಕ ಶ್ರೀಧರಾಚಾರ್ಯ, ದಾಮೋದರಾಚಾರ್ಯ ವಾಮನರಾವ ದೇಶಪಾಂಡೆ, ಡಿ.ಆರ್ .ನಾಡಿಗ, ಅಶೋಕ ತಾವರಗೇರಿ ಮುಂತಾದವರು ಇದ್ದರು.

ಭಜನಾ ಮಂಡಳಿಯ ಬ್ರಾಹ್ಮಣ ಸುವಾಸಿನಿಯರು ಅಧಿಕ ಮಾಸದ ಗೌರಿಯನ್ನು ಸುಂದರವಾಗಿ ಅಲಂಕರಿಸಿದ್ದು, ಎಲ್ಲರ ಗಮನ ಸೆಳೆಯಿತು. ಮಂಗಳಕ್ಕೂ ಮುಂಚೆ ಸುಶ್ರಾವ್ಯವಾಗಿ 33 ಹಾಡುಗಳನ್ನು ಹಾಡುವ ಮೂಲಕ ತಮ್ಮ ಭಕ್ತಿ ಸೇವೆಯನ್ನು ಸಮರ್ಪಿಸಿದರು.

## ಕಿರುಸುದ್ದಿ

### ಅಂಚೆ ಕಚೇರಿಯಲ್ಲಿ ಆಸನದ ಕೊರತೆ: ಪರದಾಟ



**ಮಸ್ಕಿ:** ದೈನಂದಿನ ಅಂಚೆ ಸೇವೆಗಳಿಗಾಗಿ ಪಟ್ಟಣದ ಅಂಚೆ ಕಚೇರಿಯನ್ನು ನಂಬಿರುವ ನೂರಾರು ಸಾರ್ವಜನಿಕರು, ಕುಳಿತುಕೊಳ್ಳಲು ಸೂಕ್ತ ಆಸನದ ವ್ಯವಸ್ಥೆಯಿಲ್ಲದೆ. ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕಚೇರಿಯ ಆವರಣದಲ್ಲಿ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದ್ದು, ಗ್ರಾಹಕರು ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಮಸ್ಕಿಯ ಅಂಚೆ ಕಚೇರಿಗೆ ಪಿಂಚಣಿ ಪಡೆಯಲು, ಉಳಿತಾಯ ಯೋಜನೆಗಳಿಗಾಗಿ ಮತ್ತು ವಿವಿಧ ಹಣಕಾಸು ವಹಿವಾಟುಗಳಿಗಾಗಿ ಆಗಮಿಸುವ ಹಿರಿಯ ನಾಗರಿಕರು ನಿಂತುಕೊಂಡೇ ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಚೇರಿಯ ಆವರಣದಲ್ಲಿ ಆಸನಗಳಿಲ್ಲದ ಕಾರಣ, ಜನಸಂದಣಿ ಹೆಚ್ಚಾದಾಗ ಕಚೇರಿಯ ಒಳಗೆ ಕಿಕ್ಕಿರಿದು ತುಂಬಿ, ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿದೆ. ಮಸ್ಕಿಯಂತಹ ಪ್ರಮುಖ ಪಟ್ಟಣದ ಅಂಚೆ ಕಚೇರಿಯಲ್ಲಿ ಕನಿಷ್ಟ ಪಕ್ಷ ಕೆಲವು ಆಸನಗಳ ವ್ಯವಸ್ಥೆಯನ್ನು ಮಾಡುವುದು ಅಸಾಧ್ಯವೇ? ಎಂಬುದು ಇಲ್ಲಿನ ನಿವಾಸಿಗಳ ಪ್ರಶ್ನೆ. ಸರ್ಕಾರಿ ಸೇವೆಗಳನ್ನು ಪಡೆಯಲು ಬರುವ ನಾಗರಿಕರಿಗೆ ಕನಿಷ್ಠ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಅಂಚೆ ಇಲಾಖೆಯ ಜವಾಬ್ದಾರಿಯಾಗಿದೆ. ಈ ಸಮಸ್ಯೆಯನ್ನು ತಕ್ಷಣವೇ ಗಂಭೀರವಾಗಿ ಪರಿಗಣಿಸಬೇಕಾದ ಸ್ಥಳೀಯ ಅಂಚೆ ಅಧಿಕಾರಿಗಳು, ಕಚೇರಿಯ ಆವರಣದಲ್ಲಿ ಆಸನಗಳ ವ್ಯವಸ್ಥೆ ಮಾಡಬೇಕು ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರಿನಂತಹ ಮೂಲಭೂತ ಸೌಕರ್ಯಗಳನ್ನೂ ಒದಗಿಸಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

### ಇಂದು ಲಾಂಛನ ಬಿಡುಗಡೆ, ಸಮ್ಮೇಳನಾಧ್ಯಕ್ಷರಿಗೆ ಆಹ್ವಾನ

**ಕುಷ್ಟಗಿ:** ತಾಲೂಕಿನ ಕಲಾವಿದರ ತವರೂರೆಂದೆ ಖ್ಯಾತಿಯಾದ ಹಿರೇಮನ್ನಾಪುರ ಗ್ರಾಮದಲ್ಲಿ ಜುಲೈ ತಿಂಗಳ ಕೊನೆ ವಾರದಲ್ಲಿ ನಡೆಯುವ ಕೊಪ್ಪಳ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ ಹಾಗೂ ಸಮ್ಮೇಳನಾಧ್ಯಕ್ಷರಿಗೆ ಅಧಿಕೃತ ಆಹ್ವಾನ ನೀಡುವ ಕಾರ್ಯಕ್ರಮ ಜೂ.15 ಮಧ್ಯಾಹ್ನ 12.30ಕ್ಕೆ ನಡೆಯಲಿದೆ. ಶಾಸಕ ದೊಡ್ಡನಗೌಡ ಪಾಟೀಲ ಅವರು ಶಾಸಕರ ಕಾರ್ಯಾಲಯದಲ್ಲಿ ಕೊಪ್ಪಳ ಜಿಲ್ಲಾ 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ ಮಾಡಲಿದ್ದು, ನಂತರದಲ್ಲಿ ತಾಲೂಕಿನ ಗುಮಗೇರಾ ಗ್ರಾಮಕ್ಕೆ ತೆರಳಿ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿರುವ ಶೇಖರಗೌಡ ಮಾಲಿಪಾಟೀಲ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷ ಶಾಸಕ ದೊಡ್ಡನಗೌಡ ಪಾಟೀಲ, ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಕುಷ್ಟಗಿ ತಾಲೂಕಿನ ಕಸಾಪ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸುವ ಮೂಲಕ ಸಮ್ಮೇಳನದ ಸ್ವಾಗತ ಸಮಿತಿ ವತಿಯಿಂದ ಅಧಿಕೃತ ಆಹ್ವಾನ ನೀಡಿ ಸಮ್ಮೇಳನದ ಕಾರ್ಯ ಚಟುವಟಿಕೆಗಳಿಗೆ ಅಧಿಕೃತವಾಗಿ ಚಾಲನೆ ದೊರೆಯಲಿದೆ.

ಕೊಪ್ಪಳ ಜಿಲ್ಲಾ ಕಸಾಪ ಅಧ್ಯಕ್ಷ ಶರಣೇಗೌಡ ಪೊಲೀಸಪಾಟೀಲ, ಹಾಗೂ ಪದಾಧಿಕಾರಿಗಳು, ಕುಷ್ಟಗಿ ಕಸಾಪ ಅಧ್ಯಕ್ಷ ಹಾಗೂ ಪದಾಧಿಕಾರಿಗಳು, ಹೊಬಳಿ ಕಸಾಪ ಪದಾಧಿಕಾರಿಗಳು, ಹಿರಿಯ ಸಾಹಿತಿಗಳು, ಮತ್ತಿತರ ಗಣ್ಯರು ಭಾಗವಹಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕುಷ್ಟಗಿ ಕಸಾಪ ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಕೊಪ್ಪಳ ಜಿಲ್ಲಾ ಕಸಾಪ ಅಧ್ಯಕ್ಷ ಶರಣೇಗೌಡ ಪೋಲಿಸಪಾಟೀಲ ಗೌರವ ಕಾರ್ಯದರ್ಶಿಗಳಾದ ಶರಣಪ್ಪ ಲೈನದ ದೇವರಾಜ್ ವಿಶ್ವಕರ್ಮ ಹಾಗೂ ಹಿರೇಮನ್ನಾಪುರ ಹೋಬಳಿ ಘಟಕದ ಅಧ್ಯಕ್ಷ ಶಿವಾನಂದ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಬಳ್ಳಾರಿ: ಗ್ರಾಮೀಣ ಶಾಸಕ, ಮಾಜಿ ಸಚಿವ ಬಿ.ನಾಗೇಂದ್ರ ಅವರು, ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಕೆ.ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಿದರು.**



**ಯಲಬುರ್ಗಾ: ತಾಲೂಕಿನ ಹೊಸಳ್ಳಿ ಗ್ರಾಮದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಭಾನುವಾರ ದೈಹಿಕ ಶಿಕ್ಷಣ ಶಿಕ್ಷಕರ ಬಳಗ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ವೃತ್ತಿಯಿಂದ ಸೇವಾ ವಯೋನಿವೃತ್ತಿ ಹೊಂದಿರುವ ನಿವೃತ್ತ ದೈಹಿಕ ಶಿಕ್ಷಣಾಧಿಕಾರಿಯಾಗಿ ವೀರಭದ್ರಪ್ಪ ಅಂಗಡಿ ಅವರನ್ನು ಅಭಿನಂದಿಸಲಾಯಿತು.**

## ವಿಶ್ವ ರಕ್ತದಾನಿಗಳ ದಿನಾಚರಣೆ

**ಕಲಬುರಗಿ:** ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ನಗರದ ಶರಣಬಸವ ವಿಶ್ವವಿದ್ಯಾಲಯ ಹಾಗೂ ಜೀವನ ಆಧಾರ ರಕ್ತ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಭಾನುವಾರ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ಎನ್‌ಎಸ್‌ಎಸ್ ಸ್ವಯಂಸೇವಕರು, ಎನ್‌ಸಿಸಿ ಕೆಡೆಟ್‌ಗಳು ಸೇರಿದಂತೆ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಕರು ರಕ್ತದಾನ ಮಾಡಿ ಮಾನವೀಯತೆ ಮೆರೆದರು.

ವಿದ್ಯಾರ್ಥಿಗಳು ಉತ್ಸಾಹದಿಂದ ಶಿಬಿರದಲ್ಲಿ ಭಾಗವಹಿಸಿ ರಕ್ತದಾನದ ಮಹತ್ವವನ್ನು ಅರಿತು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು.ನಗರದ ಶರಣಬಸವ ಆಯುರ್ವೇದ ಆಸ್ಪತ್ರೆಯಲ್ಲಿ ನಡೆದ ಶಿಬಿರವನ್ನು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಖ್ಯಾತ ಮೂತ್ರಪಿಂಡ ತಜ್ಞ ಡಾ. ಮಂಜುನಾಥ ದೊಶೆಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಕ್ತದಾನವು ಜೀವ ಉಳಿಸುವ ಮಹಾದಾನವಾಗಿದ್ದು, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಚಳವಳಿಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲ್ ಕುಮಾರ ಬಿಡವೆ, ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ ಮಕಾ, ಕುಲಸಚಿವ (ಮೌಲ್ಯಮಾಪನ) ಡಾ. ಎಸ್.ಎಚ್. ಹೊನ್ನಳ್ಳಿ, ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಪ್ರೊ. ನೀರಜ್ ತಡಕಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.




**ಕಲಬುರಗಿ: ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ನಗರದ ಶರಣಬಸವ ವಿಶ್ವವಿ ದ್ಯಾಲಯ ಹಾಗೂ ಜೀವನ ಆಧಾರ ರಕ್ತ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಭಾನುವಾರ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಕರು ರಕ್ತದಾನ ಮಾಡಿ ಮಾನವೀಯತೆ ಮೆರೆದರು.**

### ಮಾಜಿ ಸಚಿವ ವೆಂಕಟರಾವ್ ನಾಡಗೌಡ ಎಚ್ಚರಿಕೆ

## ಜೋಳದ ಹಣ ಪಾವತಿಸದಿದ್ದರೆ ಹೋರಾಟ

**ಸಿಂಧನೂರು:** ಹೈಬ್ರಿಡ್ ಜೋಳ ಮಾರಾಟ ಮಾಡಿ ಮೂರು ತಿಂಗಳು ಕಳೆದರೂ ಇಲ್ಲಿಯವರೆಗೂ ಸಮರ್ಪಕವಾಗಿ ರೈತರ ಖಾತೆಗಳಿಗೆ ಹಣ ಜಮಾ ಮಾಡಿಲ್ಲ, ಇನ್ನೂ ಎರಡ್ಮೂರು ದಿನಗಳಲ್ಲಿ ರೈತರಿಗೆ ಹಣ ಪಾವತಿಸದೇ ಹೋದರೆ ಜೆಡಿಎಸ್‌ನಿಂದ ಬೀದಿಗಿಳಿದು ಹೋರಾಟ ಮಾಡಲಾಗುವುದು ಎಂದು ಮಾಜಿ ಸಚಿವ ಹಾಗೂ ಕೆಒಎಫ್ ಅಧ್ಯಕ್ಷ ವೆಂಕಟರಾವ್ ನಾಡಗೌಡ ತಿಳಿಸಿದರು.




ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಈ ಹಿಂದೆ ಜೋಳ ಖರೀದಿ ಪ್ರಕ್ರಿಯೆಯಲ್ಲೂ ಮರ್ನಾಲ್ಕು ತಿಂಗಳ ವಿಳಂಬ ಮಾಡಲಾಯಿತು. ಈಗ ಹಣ ಪಾವತಿಸದೇ ಸತಾಯಿಸಲಾಗುತ್ತಿದೆ. ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಆರಂಭವಾಗಿದ್ದು, ಹಣವಿಲ್ಲದೇ ರೈತರು ಹೇಗೆ ಉಳುಮೆ ಕಾರ್ಯದಲ್ಲಿ ತೊಡಗಬೇಕು. ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳು ರೈತರನ್ನು ಸಂಪೂರ್ಣ ಕಡೆಗಣಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭೆ ಮತ್ತು ವಿಧಾನಪರಿಷತ್‌ನ ಇಬ್ಬರು ಶಾಸಕರಿದ್ದು,ಸಚಿವ ಸ್ಥಾನಕ್ಕಾಗಿ ಪೈಪೋಟಿಗಿಳಿದಿದ್ದಾರೆ. ಒಬ್ಬರು ಕಡೆಯವರು ಪಾದಯಾತ್ರೆ ಮಾಡಿದರೆ,ಇನ್ನೊಬ್ಬರ ಕಡೆಯವರು ಬೈಕ್ ರ‍್ಯಾಲಿ ನಡೆಸುತ್ತಿದ್ದಾರೆ. ತಮ್ಮ ತಮ್ಮ ಹಿತಾಸಕ್ತಿಗಾಗಿ ನಾ ಮುಂದೆ ತಾ ಮುಂದೆ ಎಂದು ವರ್ತಿಸುತ್ತಿದ್ದು, ರೈತರು ಹಾಗೂ ಕ್ಷೇತ್ರದ ಜನರನ್ನು ಮರೆತಿದ್ದಾರೆ. ಹೀಗಾದರೆ ರೈತರ ಕಷ್ಟವನ್ನು ಕೇಳುವವರು ಯಾರು ಎಂದು ನಾಡಗೌಡ ಪ್ರಶ್ನಿಸಿದರು.

ಕಳೆದ ಹಲವು ದಿನಗಳಿಂದ ಶಾಸಕ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ಮಂತ್ರಿ ಸ್ಥಾನಕ್ಕಾಗಿ ಬೆಂಗಳೂರು, ದೆಹಲಿ ಓಡಾಟ ನಡೆಸುತ್ತಿದ್ದಾರೆ. ಯಾರಿಗಾದರೂ ಮಂತ್ರಿ ಸ್ಥಾನ ಸಿಗಲಿ, ಒಂದು ವೇಳೆ ಇಬ್ಬ್ರು ಮಂತ್ರಿಯಾದರೂ ಡಬಲ್ ಸ್ವಾಗತ. ಮಂತ್ರಿಗಿರಿ ಓಡಾಟದಲ್ಲಿ ಜನರ ಕೆಲಸಗಳನ್ನು ಮಾಡುವವರು ಯಾರು ಎಂದು ನಾಡಗೌಡ ವ್ಯಂಗ್ಯ ವಾಡಿದರು.

ಈ ಸರ್ಕಾರ ಕಳೆದ ಐದಾರು ತಿಂಗಳಿಂದ ಗಲಾಟೆಯಲ್ಲೆ ನಡೆದಿದೆ. ಇವು ಏನು ಮಾಡುತ್ತಿದ್ದಾರೆ ಎಂಬುದು ಅಧಿಕಾರಿಗಳಿಗೆ ಗೊತ್ತಿಲ್ಲ, ಮಂತ್ರಿಗಳಿಗೂ ತಿಳಿಯುತ್ತಿಲ್ಲ, ಬಹಳಷ್ಟು ಆಕಾಂಕ್ಷಿಗಳು ಖುರ್ಚಿ ಮತ್ತು ಖಾತೆಗೆ ತಗಾದೆ ತೆಗೆಯುತ್ತಿದ್ದಾರೆ. ನಾನು ಕೇಳಿದ ಖಾತೆ ಕೊಟ್ಟಿಲ್ಲ ಎಂದು ಸಚಿವರೊಬ್ಬರು 24 ಗಂಟೆಯಲ್ಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ. ಇನ್ನೊಬ್ಬ ಮಂತ್ರಿ ನನಗೆ ಪೂರ್ಣ ಖಾತೆ ಕೊಟ್ಟಿಲ್ಲ, ಪೂರ್ಣ ಖಾತೆ ಕೊಟ್ಟರೆ ಮಾತ್ರ ನಾನು ಆ ಸಚಿವ ಸ್ಥಾನ ಪಡೆಯುತ್ತೇನೆ ಇಲ್ಲದಿದ್ದರೆ ಇಲ್ಲ ಎನ್ನುತ್ತಾರೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು.

ಇನ್ನೂ ನನ್ನ ಆಡಳಿತಾವಧಿಯಲ್ಲಿ ಜೋಳ ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ಹಿನ್ನೆಲೆಯಲ್ಲಿ ಕಟಾವು ಆದ 15 ದಿನದಲ್ಲೇ ಖರೀದಿ ಕೇಂದ್ರ ಆರಂಭಿಸಿ,ಆದಷ್ಟು ಶೀಘ್ರ ರೈತರ ಖಾತೆಗೆ ಹಣ ಪಾವತಿ ಮಾಡಲಾಗುತ್ತಿತ್ತು. ಆದರೆ ಖರೀದಿ ಕೇಂದ್ರಕ್ಕೆ ಜೋಳ ಕೊಟ್ಟು ಮರ್ನಾಲ್ಕು ತಿಂಗಳಾದರೂ ಹಣ ಬರದೇ ಇದ್ದರೆ ಬಡ ರೈತರು ಹೇಗೆ ಜೀವನ ನಡೆಸಬೇಕು, ಬಿತ್ತನೆ ಕಾರ್ಯಕ್ಕೆ ಮುಂದಾಗಬೇಕು ಎಂದು ನಾಡಗೌಡ ಅವರು ಪ್ರಶ್ನಿಸಿದರು. ಮುಖಂಡರಾದ ಚಂದ್ರಶೇಖರ ಮೈಲಾರ, ದಾಸರಿ ಸತ್ಯನಾರಾಯಣ, ಅಲ್ಲಮಪ್ರಭು ಪೂಜಾರ್ ಸೇರಿದಂತೆ ಇನ್ನಿತರರಿದ್ದರು.

### ಸಚಿವ ಸ್ಥಾನಕ್ಕೆ 50 ಮಂದಿ ಕ್ಯೂನಲ್ಲಿದ್ದಾರೆ

**ಸಚಿವ ಸ್ಥಾನಕ್ಕಾಗಿ ಇನ್ನೂ 50 ಮಂದಿ ಕ್ಯೂನಲ್ಲಿದ್ದಾರೆ. ಸಚಿವ ಸ್ಥಾನ ದೊರೆತ ಕೆಲವರು ಯಾವ ದಿಕ್ಕಿಗೆ ಖುರ್ಚಿ ಇಡಬೇಕು. ಯಾವ ಕಡೆ ಬಾಗಿಲು ಇಡಬೇಕು ಎಂದು ಆಲೋಚಿಸುತ್ತಿದ್ದಾರೆ. ಕೆಲ ಸಚಿವರು ಐತಿಹಾಸಿಕ ಕಟ್ಟಡ ಕುಮಾರ ಕೃಪಾದಲ್ಲಿ ಯಾವ್ಯಾವ ಕಡೆ ಗೋಡೆ ಒಡೆದು,ಯಾವ ಕಡೆ ಬಾಗಿಲು ಇಡುತ್ತಾರೆನ್ನುವುದು ಯಕ್ಷ ಪ್ರಶ್ನೆಯಾಗಿದೆ. ಜನಸಾಮಾನ್ಯರು ಸಂಕಷ್ಟ ಅನುಭವಿಸುತ್ತಿದ್ದರೆ, ಈ ಸರ್ಕಾರ ಖಾತೆ ಕಲಹದಲ್ಲೇ ಮುಳುಗಿದೆ ಎಂದು ಕಿಡಿಕಾರಿದರು.**

## ವೀರಭದ್ರಪ್ಪರ ನಿವೃತ್ತಿ ಜೀವನ ಅಮೂಲ್ಯವಾಗಿರಲಿ: ಗಾಂಜಿ

**ಯಲಬುರ್ಗಾ:** ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ದೈಹಿಕ ಶಿಕ್ಷಣಾಧಿಕಾರಿಯಾಗಿ ವೀರಭದ್ರಪ್ಪ ಅಂಗಡಿ ಅವರು ನಾಲ್ಕು ವರ್ಷಗಳ ಕಾಲ ಸುಧೀರ್ಘವಾಗಿ ಸೇವೆ ಸಲ್ಲಿಸಿ ತಮ್ಮ ಸೇವಾ ವಯೋನಿವೃತ್ತಿ ಹೊಂದಿರುವುದು ಶಿಕ್ಷಕರ ವರ್ಗಕ್ಕೆ ನೋವು ತರಿಸಿದೆ ಆದರೆ ನಿವೃತ್ತ ಜೀವನ ಅಮೂಲ್ಯವಾಗಿರಲಿ ಎಂದು ನಿವೃತ್ತ ಡಿಡಿಪಿಐ ಎಸ್.ಡಿ.ಗಾಂಜಿ ಹೇಳಿದರು.

ತಾಲೂಕಿನ ಹೊಸಳ್ಳಿ ಗ್ರಾಮದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಭಾನುವಾರ ದೈಹಿಕ ಶಿಕ್ಷಣ ಶಿಕ್ಷಕರ ಬಳಗ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ವೃತ್ತಿಯಿಂದ ಸೇವಾ ವಯೋನಿವೃತ್ತಿ ಹೊಂದಿರುವ ನಿವೃತ್ತ ದೈಹಿಕ ಶಿಕ್ಷಣಾಧಿಕಾರಿಯಾಗಿ ವೀರಭದ್ರಪ್ಪ ಅಂಗಡಿ ಅವರು ಅಭಿಮಾನದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವೀರಭದ್ರಪ್ಪನವರು ತಮ್ಮ ವೃತ್ತಿ ಬದುಕಿನೊಂದಿಗೆ ಸ್ನೇಹ ಜೀವಿಯಾಗಿ ಎಲ್ಲರ ಪ್ರೀತಿ, ವಿಶ್ವಾಸ ಗಳಿಸಿಕೊಂಡು ಎಲ್ಲ ಶಿಕ್ಷಕರಿಗೂ ಸ್ಫೂರ್ತಿದಾಯಕರಾಗಿದ್ದಾರೆ ಎಂದರು.

ಸರ್ಕಾರಿ ನೌಕರರು ತಮ್ಮ ಸೇವಾ ವೃತ್ತಿಯಲ್ಲಿದ್ದಾಗ ಎಷ್ಟೇ ಒಳ್ಳೆಯ ಕಾರ್ಯಗಳನ್ನು ಕಾರ್ಯಗಳನ್ನು ಮಾಡಿದರೂ ಅವರನ್ನು ನೆನೆಯುವರ ಸಂಖ್ಯೆ ಕಡಿಮೆ ಆದರೆ ಅದೇ ವ್ಯಕ್ತಿ ಸೇವೆಯಿಂದ ನಿವೃತ್ತಿ ಹೊಂದಿದಾಗ ಅವರ ಕಾರ್ಯ ವೈಖರಿ, ಸೇವಾ ಮನೋಭಾವವನ್ನು ಹಾಡಿ ಹೊಗಳುವವರ ಅತೀ ಹೆಚ್ಚು, ಆದರೆ ವೀರಭದ್ರಪ್ಪನವರು ಯಾವತ್ತು ವೃತ್ತಿ ಜೀವನದಲ್ಲಿ ಅಹಂ,ಗಿಮ್ಮುಯಿಲ್ಲದೆ ಸರಳ ಸಜ್ಜನತೆಯಿಂದ ಸೇವೆಯನ್ನು ಪೂರ್ಣಗೊಳಿಸಿ ಎಲ್ಲರ ವಿಶ್ವಾಸ ಗಳಿಸಿಕೊಂಡ ಒಬ್ಬ ದಕ್ಷ ಅಧಿಯಾಗಿದ್ದರು ಎಂದು ಗುಣಗಾನ ಮಾಡಿದರು. ನಿವೃತ್ತ ಬಿಇಒ ಪದ್ಮನಾಭ ಕರ್ಣಂ, ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ವಿ.ಧರಣಾ,ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಮಹೇಶ ಸಬರದ, ಸಿದ್ದಲಿಂಗಪ್ಪ ಶ್ಯಾಗೋಟಿ ಮಾತನಾಡಿ ವೀರಭದ್ರಪ್ಪನವರು ಎಲ್ಲ ಶಿಕ್ಷಕರಿಗೂ ಅಚ್ಚುಮೆಚ್ಚಿನ ಶಿಕ್ಷಕರಾಗಿ ಇತರ ಅಧಿಕಾರಿಗಳಿಗೆ ಮಾದರಿಯಾಗುವ ರೀತಿಯಲ್ಲಿ ಸೇವೆ ನೀಡಿದ್ದಾರೆಂದರು.

ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ವೀರಭದ್ರಪ್ಪ ಅಂಗಡಿ ಹಾಗೂ ಅವರ ಧರ್ಮ ಪತ್ನಿ ನೀಲಮ್ಮನವರು ಸನ್ಮಾನ ಸ್ವೀಕರಿಸಿ ಮಾತನಾಡಿ ನನ್ನ ಸೇವಾವಧಿಯಲ್ಲಿ ಇದುವರೆಗೂ ಶ್ರದ್ದೆ, ನಿಷ್ಠೆ, ಪ್ರಾಮಾಕತೆಯಿಂದ ಕೆಲಸ ನಿರ್ವಹಿಸಲು ಈ ತಾಲೂಕಿನ ಶಿಕ್ಷಕರ ಬಳಗ ನನಗೆ ಸಾಕಷ್ಟು ಸಹಾಯ ಸಹಕಾರ ನೀಡಿ ತಮ್ಮ ಮನೆಯ ಮಗನಂತೆ ನನ್ನನ್ನು ಕಂಡಿದ್ದಾರೆ ಎಂದು ಭಾವುಕರಾಗಿ ನುಡಿದರು.ವಸತಿ ಶಾಲೆಯ ಪ್ರಾಂಶುಪಾಲ ವಿ.ಬಿ.ಹನುಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಳಿಕ ಸನ್ಮಾನ ಕಾರ್ಯಕ್ರಮ ನಡೆಯಿತು. ಶರಣಪ್ಪ ವೀರಾಪೂರ, ಬಸವರಾಜ ಮುಳಗುಂದ, ಸುರೇಶ ಹೊಸ್ಮನಿ, ಎಂ.ಎನ್. ಜನಾದ್ರಿ, ಬಸವರಾಜ ಮಾಸ್ತಿ, ಮೈಹಬೂಬ ಬಾದಶಾಹ, ಸಂಗಯ್ಯ ಹಿರೇಮಠ, ಭೀಮನಗೌಡ ಮಾಸಗಟ್ಟಿ, ಗಂಗಮ್ಮ ಸೋಬಗಿನ್, ಮತ್ತಿತರರು ಇದ್ದರು.

## ಶಿಕ್ಷಣದಿಂದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ: ಡಿಸಿ

**ಕೊಪ್ಪಳ:** ಕಡ್ಡಾಯ ಶಿಕ್ಷಣ ಪ್ರತಿಯೊಬ್ಬ ಮಗುವಿನ ಕಾನೂನುಬದ್ಧವಾದ ಹಕ್ಕಾಗಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದರಿಂದ ಮಾತ್ರ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಕೊಪ್ಪಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಅಧ್ಯಕ್ಷರಾದ ಡಾ.ಸುರೇಶ ಬಿ. ಇಟ್ನಾಳ ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಯೋಜಿಸಲಾಗಿದ್ದ 'ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ' ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಸುಧಾ ಗರಗ ಪ್ರಾಸ್ತಾವಿಕವಾಗಿ ಮಾತನಾಡಿ, ಬಾಲಕಾರ್ಮಿ ಪದ್ಧತಿಯಿಂದ ದೇಶದ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ ಕುಂಠಿತವಾಗುತ್ತದೆ. ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು ಕಟ್ಟುನಿಟ್ಟಾಗಿ ಕೊನೆಗೊಳಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಕೃಷ್ಣಮೂರ್ತಿ ದೇಸಾಯಿ ಪ್ರಮಾಣ ವಚನ ಬೋಧಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಪರ ಉಪನಿರ್ದೇಶಕ ಅಮರೇಶ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ, ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ-ಯುನಿಸೆಫ್ ಕೊಪ್ಪಳಸಂಯೋಜಕ ಹರೀಶ ಜೋಗಿ ಮಾತನಾಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಸೋಮಶೇಖರಗೌಡ ಬಸನಗೌಡ ಪಾಟೀಲ, ಜಿಲ್ಲಾ ವಾರ್ತಾಧಿಕಾರಿಗಳಾದ ಗವಿಸಿದ್ದಪ್ಪ ಹೊಸಮನಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪ್ರಕಾಶ ಕಡಗದ, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡ್ರ, ಕೊಪ್ಪಳ ವೃತ್ತದ ಕಾರ್ಮಿಕ ನಿರೀಕ್ಷಕರಾದ ಮಂಜುಳಾ ಇತರರಿದ್ದರು.



## ಸಕಾಲದಲ್ಲಿ ರಸಗೊಬ್ಬರ ಒದಗಿಸಿ: ಶಾಸಕ ಬಸನಗೌಡ ದದ್ದಲ

**ರಾಯಚೂರು:** ಗ್ರಾಮೀಣ ಕ್ಷೇತ್ರದಲ್ಲಿ ಮುಂಗಾರು ಬಿತ್ತನೆ ಪ್ರಾರಂಭವಾಗಲಿದ್ದು, ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ಸಕಾಲದಲ್ಲಿ ನಿಗದಿತ ಬೆಲೆಯಲ್ಲಿ ಒದಗಿಸಬೇಕು. ರೈತರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಿ ರಸಗೊಬ್ಬರ ಪೂರೈಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ತಾಪಂ ಸಭಾಂಗಣದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕ್ಷೇತ್ರದಲ್ಲಿ ಅಗತ್ಯ ಪ್ರಮಾಣದ ರಸಗೊಬ್ಬರವನ್ನು ಕಾಯ್ದಿರಿಸಲು ಮತ್ತು ಅದರ ಸಕಾಲಿಕ ವಿತರಣೆಗೆ ಕ್ರಮ ಕೈಗೊಳ್ಳಬೇಕು. ರೈತರಿಗೆ ಸಕಾಲದಲ್ಲಿ ಗೊಬ್ಬರ ಸಿಗುವಂತೆ ವ್ಯವಸ್ಥೆ ಮಾಡಬೇಕು. ರಸಗೊಬ್ಬರ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಅಧಿಕಾರಿಗಳು ನಿರಂತರ ನಿಗಾವಹಿಸಬೇಕು ಎಂದರು.

ರಾಯಚೂರು ತಾಲೂಕಿನ ಬಹುತೇಕ ಗ್ರಾಮಗಳು ನೆರೆ ರಾಜ್ಯಗಳಿಗೆ ಸಂಪರ್ಕಿಸುವುದರಿಂದ ಇಲ್ಲಿನ ರಸಗೊಬ್ಬರ ಬೇರೆ ರಾಜ್ಯಗಳಿಗೆ ಹೋಗುತ್ತದೆ. ಇದರಿಂದ ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಹೆಚ್ಚುತ್ತದೆ. ಆದ್ದರಿಂದ ಚೆಕ್ ಪೋಸ್ಟ್‌ಗಳಲ್ಲಿ ಸರಿಯಾಗಿ ತಪಾಸಣೆ ನಡೆಸಬೇಕು. ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಮಾದಕ ವಸ್ತುಗಳ ಚಟುವಟಿಕೆ ಆಗದಂತೆ ಗಮನಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಆರ್‌ಎಪಿಎಂಸಿ ಅಧ್ಯಕ್ಷ ಜಯಂತರಾವ ಪತಂಗೆ, ಪವನ್ ಕಿಶೋರ ಪಾಟೀಲ, ಈರೇಶ, ತಿಮ್ಮಪ್ಪ ನಾಯಕ, ಜಿಂದಪ್ಪ, ಚನ್ನಬಸವ, ಬಸೀರ್ ಅಹ್ಮದ್ ಸೇರಿದಂತೆ ಇತರರಿದ್ದರು.

## ಬ್ಯಾನರ್‌ನಲ್ಲಿ ಫೋಟೋ ಇಲ್ಲದೇ ಕಾರ್ಯಕರ್ತರ ಅಸಮಾಧಾನ

**ಮಸ್ಕಿ:** ಪಟ್ಟಣದ ಶ್ರೀಭ್ರಮರಾಂಭ ಕಲ್ಯಾಣ ಮಂಟಪದಲ್ಲಿ ಶನಿವಾರ ನಗರ ಬ್ಲಾಕ್ ಕಾಂಗ್ರೆಸ್ ಮಸ್ಕಿ ವತಿಯಿಂದ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಏಜೆಂಟರಗಳ ತರಬೇತಿ ಕಾರ್ಯಾಗಾರ ನಡೆಯಿತು.




ಈ ಕಾರ್ಯಕ್ರಮದ ವೇದಿಕೆ ಮೇಲೆ ಹಾಕಲಾದ ಬ್ಯಾನರ್ ನಲ್ಲಿ ಉಪಮುಖ್ಯಮಂತ್ರಿ ಜಿ.ಪರಮೇಶ್ವರ ಹಾಗೂ ಕೆಲವು ಪ್ರಮುಖರಫೋಟೋಇಲ್ಲದಕಾರಣ ಕಾಂಗ್ರೆಸ್ ಪ್ರಮುಖ ಮುಖಂಡ ಮೌನೇಶ ದೊಡ್ಡಮನಿ ಆಮೀನಗಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾವುದೇ ಸಭೆ ಸಮಾರಂಭದಲ್ಲಿ ಪ್ರೋಟೋಕಾಲ್ ಪ್ರಕಾರ ಹಾಗೂ ಪಕ್ಷದ ಸಿದ್ಧಾಂತದ ಅನ್ವಯ ಯಾರ ಫೋಟೋ ಅಳವಡಿಸಬೇಕು ಎಂಬ ನಿಯಮ ಮತ್ತು ಪದ್ಧತಿ ಪಕ್ಷದಲ್ಲಿರುವ ಎಲ್ಲರಿಗೂ ತಿಳಿದಿರುವ ವಿಷಯವೇ, ಆದರೆ ಅವರು ನಿಯಮ ಮತ್ತು ಸಿದ್ಧಾಂತವನ್ನು ಮೀರಿ ಬ್ಯಾನರ್‌ನಲ್ಲಿ ಪ್ರಮುಖರ ಫೋಟೋ ಅಳವಡಿಕೆ ವಿಷಯದಲ್ಲಿ ಗೊಂದಲಕ್ಕಿಡಾಗೋದು ಪಕ್ಷದ ಕಾರ್ಯಕರ್ತರಿಗೆ ನೋವಿನ ಸಂಗತಿಯಾಗಿದೆ ಎಂಬುದು ಮೌನೇಶ ದೊಡ್ಡಮನಿ ಸೇರಿದಂತೆ ಕೆಲವು ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಅಳಲಾಗಿದೆ.

ಇನ್ನು ಮುಂದಾದರೂ ಕಾರ್ಯಕರ್ತರ ನೋವಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಿ ಸಣ್ಣಪುಟ್ಟ ಗೊಂದಲಗಳನ್ನು ಸರಿಪಡಿಸುವ ಕಾರ್ಯ ಕಾಂಗ್ರೆಸ್ ಪಕ್ಷ ಮಾಡುವಲ್ಲಿ ನಿಸ್ಸೀಮವಾಗಿದ್ದು, ಇದನ್ನು ಸರಿಪಡಿಸಿ ಕಾರ್ಯಕರ್ತರಿಗೆ ನೋವಾಗದಂತೆ ಪಕ್ಷದ ಕೆಲಸ ನಿರ್ವಹಿಸಲಿ ಎಂಬುದೇ ಕಾಂಗ್ರೆಸ್ ಕಾರ್ಯಕರ್ತರ ಆಸೆಯಾಗಿದೆ.

## ಪ್ರಾಚಾರ್ಯ ಹನುಮಶೆಟ್ಟಿ ಯುವಸ್ಫೂರ್ತಿ ಸೇವಾ ಪ್ರಶಸ್ತಿಗೆ ಭಾಜನ

**ಶಿವಮೂರ್ತಿ ಇಟಗಿ**

**ಯಲಬುರ್ಗಾ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಸರ್ಕಾರಿ ವಸತಿ ಶಾಲೆಯನ್ನು ಜಿಲ್ಲಾಮಟ್ಟದಲ್ಲಿ ಮಾದರಿ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಿದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಪ್ರಾಚಾರ್ಯ ವಿ.ಬಿ.ಹನುಮಶೆಟ್ಟಿ ಅವರಿಗೆ ಸಲ್ಲುತ್ತದೆ ಅವರು ಪ್ರತಿಷ್ಠಿತ ಯುವಸ್ಫೂರ್ತಿ ಸೇವಾ ಪ್ರಶಸ್ತಿಗೆ ಭಾಜನವಾಗಿರುವುದು ತಾಲೂಕಿಗೆ ಹೆಮ್ಮೆಯ ತರುವಂಥ ವಿಷಯಾವಾಗಿದೆ.

ಧಾರವಾಡದ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಶನಿವಾರ ರಂದು ನಡೆದ ಸನ್ಮಾನ ಸಮಾರಂಭದಲ್ಲಿ ಅವರು ಪ್ರಶಸ್ತಿ ಸ್ವೀಕರಿಸಿದ್ದಾರೆ. ಚಿಕ್ಕಮಗಳೂರು ಸ್ಫೂರ್ತಿ ಅಕಾಡೆಮಿ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಹಯೋಗದಲ್ಲಿ ಆಯೋಜಿಸಿರುವ ಆಡಳಿತ ಮತ್ತು ಶೈಕ್ಷಣಿಕ ಕಾರ್ಯಾಗಾರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

ಹನುಮಶೆಟ್ಟಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಶಿಸ್ತು, ಪರಿಶ್ರಮ ಮತ್ತು ಬದ್ಧತೆಯ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹೊಸಳ್ಳಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಜವಾಬ್ದಾರಿ ವಹಿಸಿಕೊಂಡ ನಂತರ ಶಾಲೆಯ ಶೈಕ್ಷಣಿಕ ಮಟ್ಟದಲ್ಲಿ ಗಣನೀಯ ಬದಲಾವಣೆ ತಂದಿದ್ದಾರೆ ಇದಕ್ಕೆ ಕಾರಣ ಕಳೆದ ಐದು ವರ್ಷಗಳಿಂದ ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಜಿಲ್ಲಾಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳು ಜಿಲ್ಲೆಯ ಟಾಪರ್‌ಗಳಾಗಿ ಹೊರಹೊಮ್ಮಿದ್ದು, ಶಾಲೆಯ ಹೆಸರು ರಾಜ್ಯಮಟ್ಟದಲ್ಲಿಯೂ ಗುರುತಿಸಿಕೊಳ್ಳುವಂತಾಗಿದೆ. ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ವೇದಿಕೆ ಕಲ್ಪಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಶಾಲೆಯ ಅಭಿವೃದ್ಧಿಗೆ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದ ಸಹಕಾರವೂ ಮಹತ್ವದ್ದಾಗಿದೆ. ತಂಡದ ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡುವ ಹನುಮಶೆಟ್ಟಿ ಅವರು ಪ್ರತಿಯೊಬ್ಬ ಶಿಕ್ಷಕರನ್ನೂ ಪ್ರೋತ್ಸಾಹಿಸಿ ಶಾಲೆಯ ಸಾಧನೆಯಲ್ಲಿ ಪಾಲುದಾರರನ್ನಾಗಿ ಮಾಡಿದ್ದಾರೆ. ಇದೇ ಕಾರಣಕ್ಕೆ ಶಾಲೆ ಇಂದು ಜಿಲ್ಲೆಯಲ್ಲಿಯೇ ಮಾದರಿ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.



**ನಮ್ಮ ಪ್ರಾಚಾರ್ಯರಿಗೆ ರಾಜ್ಯಮಟ್ಟದ ಪ್ರಶಸ್ತಿ ದೊರೆತಿರುವುದು ಹೆಮ್ಮೆಯ ವಿಷಯ. ಅವರ ಮಾರ್ಗದರ್ಶನದಿಂದ ಶಾಲೆ ನಿರಂತರವಾಗಿ ಅತ್ಯುತ್ತಮ ಫಲಿತಾಂಶ ಪಡೆಯುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುತ್ತಿದೆ.**
**■ ಕಳಕೇಶ ಅರಕೇರಿ, ರವಿ ವಸತಿ ಶಾಲೆಯ ಶಿಕ್ಷಕ**

**ಯುವಸ್ಫೂರ್ತಿ ಸೇವಾ ಪ್ರಶಸ್ತಿ ಲಭಿಸಿರುವುದಕ್ಕೆ ಇಡೀ ಶಾಲೆಯ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಹಕಾರವೇ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ದೊರೆತಿರುವ ಈ ಗೌರವ ಸಂತಸ ತಂದಿದೆ ಎಂದರು.**
**■ ಬಿ.ಹನುಮಶೆಟ್ಟಿ, ಪ್ರಾಚಾರ್ಯ**

## ಹಿಪ್ ಜಾಯಿಂಟ್ ಬದಲಿಸಿ ಯುವಕನಿಗೆ ಹೊಸ ಬದುಕು ನೀಡಿದ ವೈದ್ಯರು

**ಕಲಬುರಗಿ:** ಲಕ್ಷಾಂತರ ಜನರಲ್ಲಿ ಒಬ್ಬರಿಗೆ ಮಾತ್ರ ಕಾಣಿಸಿಕೊಳ್ಳುವ ಅತ್ಯಂತ ಅಪರೂಪದ 'ಸ್ಪಾಂಡಿಲೋಎಪಿಫೈಸಿಯಲ್ ಡಿಸ್ಪ್ಲೇಸಿಯಾ' ಎಂಬ ಹಿಪ್ ಜಾಯಿಂಟ್ (ಸೊಂಟದ ಕೀಲು) ಕಾಯಿಲೆಯಿಂದ ಬಳಲುತ್ತಿದ್ದ ಯುವಕನಿಗೆ ನಗರದ ಆದಿತ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಹೊಸ ಜೀವನ ನೀಡಿದ್ದಾರೆ.

ಆಸ್ಪತ್ರೆಯ ನಿರ್ದೇಶಕ ಹಾಗೂ ಮೂಳೆ ರೋಗ ತಜ್ಞ ಡಾ.ಆದಿತ್ಯ ಕಾಜಾ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೋಗಿಯು ದ್ವಿಪಾರ್ಶ್ವ ಸಮಸ್ಯೆಯಿಂದಾಗಿ ತೀವ್ರ ನೋವು ಮತ್ತು ನಡೆಯಲಾಗದ ಸ್ಥಿತಿಯಲ್ಲಿದ್ದರು. ಈ ಕಾಯಿಲೆ 1 ರಿಂದ 2 ಲಕ್ಷ ಜನರಲ್ಲಿ ಒಬ್ಬರಿಗೆ ಬರುತ್ತದೆ. ಸ್ಥಳೀಯವಾಗಿ ಚಿಕಿತ್ಸೆ ಸಾಧ್ಯವಿಲ್ಲ ಎಂದು ಮುಂಬೈಗೆ ಹೋಗಲು ಹಲವರು ಸಲಹೆ ನೀಡಿದ್ದರು. ಆದರೆ, ನಮ್ಮ ವೈದ್ಯಕೀಯ ತಂಡವು ಇಂಗ್ಲೆಂಡ್‌ನ ಹಿರಿಯ ತಜ್ಞರೊಂದಿಗೆ ಸಮಾಲೋಚಿಸಿ ಇಲ್ಲೇ ಯಶಸ್ವಿಯಾಗಿ ಚಿಕಿತ್ಸೆ ನೀಡಿದೆ ಎಂದರು.

ಯುವಕನ ಎರಡೂ ಜಾಯಿಂಟ್‌ಗಳು ಹಾನಿಗೊಳಗಾಗಿದ್ದರಿಂದ, ಮೊದಲು ತೀವ್ರ ತೊಂದರೆ ಇದ್ದ ಎಡಭಾಗದ ಹಿಪ್ ಜಾಯಿಂಟ್‌ಗೆ ಅಕ್ಟೋಬರ್‌ನಲ್ಲಿ ಹಾಗೂ ಬಲಭಾಗದ ಜಾಯಿಂಟ್‌ಗೆ ಮಾರ್ಚ್‌ನಲ್ಲಿ ಯಶಸ್ವಿಯಾಗಿ 'ಟೋಟಲ್ ಹಿಪ್ ರಿಪ್ಲೇಸ್‌ಮೆಂಟ್' ಶಸ್ತ್ರಚಿಕಿತ್ಸೆ ನೆರವೇರಿಸಲಾಗಿದೆ. ಚೆನ್ನೈನಿಂದ ವಿಶೇಷ ಇಂಪ್ಲಾಂಟ್ ತರಿಸಿ ಈ ಸವಾಲಿನ ಶಸ್ತ್ರಚಿಕಿತ್ಸೆಯನ್ನು ಪೂರ್ಣಗೊಳಿಸಲಾಗಿದ್ದು, ಸದ್ಯ ರೋಗಿ ನೋವಿನಿಂದ ಮುಕ್ತರಾಗಿದ್ದಾರೆ ಎಂದು ವೈದ್ಯ ಆದಿತ್ಯ ತಿಳಿಸಿದರು.

ಎಂ.ಎಸ್.ಪದವಿ ಬಳಿಕ ಹೈದರಾಬಾದ್, ಮುಂಬೈ, ದಕ್ಷಿಣ ಕೊರಿಯಾ ಹಾಗೂ ಯುನೈಟೆಡ್ ಕಿಂಗ್‌ಡಮ್‌ನಲ್ಲಿ 5 ವರ್ಷ ಸೇವೆ ಸಲ್ಲಿಸಿ ಅಂತರರಾಷ್ಟ್ರೀಯ ಪರಿಣತಿ ಪಡೆದಿರುವ ಡಾ. ಆದಿತ್ಯ ಕಾಜಾ ಅವರು, ಈ ಭಾಗದ ಜನರಿಗೆ ಕೈಗೆಟುಕುವ ದರದಲ್ಲಿ ಅತ್ಯಾಧುನಿಕ ಚಿಕಿತ್ಸೆ ನೀಡುತ್ತಿದ್ದಾರೆ ಎಂದರು.

ತಜ್ಞ ವೈದ್ಯರಾದ ಡಾ.ಮೌನಿಕಾ ಬಿಂದು, ಡಾ.ಜಯಂತ್ ಕಾಜಾ, ಡಾ.ಪ್ರಿಯಾಂಕಾ ಕನ್ನಿ ಹಾಗೂ ಡಾ.ಅನಿಲ್ ಕಾಂಬಳೆ ಉಪಸ್ಥಿತರಿದ್ದರು.




**ಬಾಲ್ಯದಲ್ಲೇ ಲಕ್ಷಣ ಗುರುತಿಸಿದರೆ ಗಂಭೀರ ಕಾಯಿಲೆ ತಡೆಯಬಹುದು. ಮಕ್ಕಳಲ್ಲಿ ಸೊಂಟ ನೋವು, ಬೆನ್ನು ನೋವು, ಕೀಲು ಬಿಗಿತ, ಕಡಿಮೆ ಎತ್ತರ ಅಥವಾ ನಡೆಯುವ ಶೈಲಿಯಲ್ಲಿ ಬದಲಾವಣೆ ಕಂಡುಬಂದರೆ ಪೋಷಕರು ನಿರ್ಲಕ್ಷಿಸದೆ ತಕ್ಷಣ ಮೂಳೆ ತಜ್ಞರನ್ನು ಸಂಪರ್ಕಿಸಬೇಕು.**
**■ ಡಾ.ಆದಿತ್ಯ ಕಾಜಾ, ಮೂಳೆ ಮತ್ತು ಜಾಯಿಂಟ್ ರಿಪ್ಲೇಸ್ ಮೆಂಟ್ ತಜ್ಞ**

## ಕಿರುಸುದ್ದಿ

### ಅಧ್ಯಕ್ಷರಾಗಿ ಮಂಜುನಾಥ ಮರು ಆಯ್ಕೆ

**ಕೊಟ್ಟೂರು:** ಪಟ್ಟಣದ ಪ್ರವಾಸ ಮಂದಿರದಲ್ಲಿ ಚಲವಾದಿ ಮಹಾಸಭಾದ ಪದಾಧಿಕಾರ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಈ ಸಭೆಯಲ್ಲಿ ಪತ್ರಕರ್ತ ಡಿ.ಮಂಜುನಾಥ ಅವರನ್ನು ಚಲವಾದಿ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾಗಿ ಪುನರ್ ಆಯ್ಕೆ ಮಾಡಲಾಗಿದೆ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು. ಗೌರವಾಧ್ಯಕ್ಷರಾಗಿ ಸಿ.ಅಜ್ಜಪ್ಪ, ಉಪಾಧ್ಯಕ್ಷರಾಗಿ ವಾಮದೇವ ಅಲಬೂರು, ನಾಣಿಕೇರಿ ಕೊಟ್ರೇಶ, ನಿಂಗೇಶ್ ಉಜ್ಜಿನಿ, ಪ್ರಕಾಶ ಹನುಮನಹಳ್ಳಿ, ಸಿ.ಎಂ.ಮಂಜುನಾಥ್ ಕೊಟ್ಟೂರು. ಪ್ರಧಾನ ಕಾರ್ಯದರ್ಶಿ ಸಿ.ನಾಗೇಶ್, ಕಾರ್ಯದರ್ಶಿ ಸಾಲಿಮನಿ ಅಜ್ಜಯ್ಯ, ಸಿದ್ದೇಶ ಮಂಗಾಪುರ, ಸಂಘಟನಾ ಕಾರ್ಯದರ್ಶಿ, ನಾಗರಾಜ ಸಿ.ಅಂಬಳಿ, ಸಿ.ಡಿ.ಶಿವಕುಮಾರ್, ಕಾನೂನು ಸಲಹೆಗಾರರು ಚೌಡಪ್ಪ ಸಿ., ಸಂದೀಪ್ ಸಾಲಿಮನಿ, ಖಜಾಂಚಿ ಮೂಗಪ್ಪ ಸಿ., ಸಾಮಾಜಿಕ ಮಾಧ್ಯಮ ಸಲಹೆಗಾರರು ಸುಮನ್ ಸಿ.ಕೆ., ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಜಿ.ಹುಲಿಗೆಮ್ಮ, ಉಪಾಧ್ಯಕ್ಷೆ ಎಂ.ಶಶಿಕಲಾ ಉಪಸ್ಥಿತರಿದ್ದರು.

### ಬಿಜೆಪಿಯ ಸಮನ್ವಯ ಸಭೆ ಇಂದು

**ಹಗರಿಬೊಮ್ಮನಹಳ್ಳಿ:** ನಗರದ ಬಿಜೆಪಿ ಪಕ್ಷದ ಕೇಂದ್ರ ಕಛೇರಿಯಲ್ಲಿ ಮಹತ್ವದ ಸಮನ್ವಯ ಸಭೆ ಜೂ.15ರಂದು ಮಧ್ಯಾಹ್ನ ನಡೆಯಲಿದೆ ಎಂದು ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ತಿಳಿಸಿದರು.



ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಈ ಸಮನ್ವಯ ಸಭೆಯಲ್ಲಿ ಎಸ್ ಐ ಆರ್ ಪಕ್ಷ ಸಂಘಟನೆ ಇನ್ನಿತರ ವಿಷಯ ಕುರಿತಂತೆ ಚರ್ಚೆ ಆಗಲಿವೆ. ಈ ಸಭೆಯಲ್ಲಿ ಬಿಜೆಪಿ ಪಕ್ಷದ ಜಿಲ್ಲಾ ಸಹ-ಪ್ರಭಾರಿ ಚನ್ನಬಸವನಗೌಡ್ರ, ಒಬಿಸಿ ರಾಜ್ಯ ಉಪಾಧ್ಯಕ್ಷ ಐಯ್ಯಳ್ಳಿ ತಿಮ್ಮಪ್ಪ,ಜಿಲ್ಲಾ ಅಧ್ಯಕ್ಷ ಸಂಜೀವ್ ರಡ್ಡಿ, ಜಿಲ್ಲಾ ಉಪಾಧ್ಯಕ್ಷ ಬಲ್ಲಾಹುಣಸಿ ರಾಮಣ್ಣ, ಜಿಲ್ಲಾ ಕಾರ್ಯದರ್ಶಿ ಕೃಷ್ಣನಾಯ್ಕ, ಮಂಡಲದ ಅಧ್ಯಕ್ಷ ಬೆಣಕಲ್ ಪ್ರಕಾಶ್ ಪಕ್ಷದ ಹಿರಿಯರು ಯುವಕರು ಪಕ್ಷದ ಇತರ ಪ್ರಮುಖರು ಭಾಗವಹಿಸಲಿದ್ದಾರೆ.

### ಹವಾಮಾನ ಬದಲಾವಣೆ ಕುರಿತು ಅಧಿಕಾರಿಗಳಿಗೆ ತರಬೇತಿ



**ವಿಜಯನಗರ:** ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ), ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಜಂಟಿ ಸಹಯೋಗದಲ್ಲಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗಾಗಿ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕುರಿತು ಕ್ರಿಯಾ ಯೋಜನೆ ತರಬೇತಿ ಕಾರ್ಯಾಗಾರ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಪಂನ ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ ಜೆ.ಎಂ. ಮಾತನಾಡಿ, ಅಧಿಕಾರಿಗಳು ಈ ತರಬೇತಿಯ ಪೂರ್ಣ ಪ್ರಯೋಜನವನ್ನು ಪಡೆದು, ಹವಾಮಾನ ಬದಲಾವಣೆಯ ತಡೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಜನಸಾಮಾನ್ಯರ ಮಟ್ಟಕ್ಕೆ ಕೊಂಡೊಯ್ಯಬೇಕು ಎಂದು ತಿಳಿಸಿದರು. ಎಂಪ್ರಿ ಸಂಸ್ಥೆಯ ಸಂಶೋಧನಾ ವಿಜ್ಞಾನಿ ಡಾ.ಶೃತಿ ಬಿ.ವಿ. ಅವರು 2025–2030ರ ಅವಧಿಗೆ ವಿವಿಧ ಇಲಾಖೆಗಳು ನಿಗದಿಪಡಿಸಿಕೊಂಡಿರುವ ಕಾರ್ಯಕ್ಷಮತೆ ಸೂಚಕಗಳು, ಕಾರ್ಯತಂತ್ರಗಳು ಹಾಗೂ ಜಿಲ್ಲೆಯ ಮಾಲಿನ್ಯ ಕಾರಕಗಳ ದತ್ತಾಂಶಗಳ ಕುರಿತು ಸುದೀರ್ಘ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಎಸಿಐಡಬ್ಲ್ಯೂಆರ್ ಎಂ ಬೆಂಗಳೂರು ಸಂಸ್ಥೆಯ ಸಂಶೋಧನಾ ವಿಜ್ಞಾನಿ ದೀಪರಾಣಿ, ಎನ್‌ಆರ್‌ಡಿಎಂಎಸ್ ಕೇಂದ್ರದ ಅಧಿಕಾರಿ ಶರಣಪ್ಪ ಅಪ್ಪಣ್ಣನವರ್, ಎಂಪ್ರಿ ಸಂಸ್ಥೆಯ ರುಚಿತಾಶ್ರೀ ಮತ್ತು ರಾಘವೇಂದ್ರ ಎನ್. ಉಪಸ್ಥಿತರಿದ್ದರು.

### ಅರ್ಜಿ ಆಹ್ವಾನ

**ವಿಜಯನಗರ:** ಶಾಲಾ ಶಿಕ್ಷಣ ಇಲಾಖೆಯ 2026–27ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಸಮನ್ವಯ ಶಿಕ್ಷಣ ಕಾರ್ಯ ಚಟುವಟಿಕೆಗಳ ಅನುಷ್ಠಾನಕ್ಕಾಗಿ ತಾಲ್ಲೂಕುಗಳಲ್ಲಿ ಖಾಲಿ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದಲ್ಲಿ ವಿಶೇಷ ಸಂಪನ್ಮೂಲ ಶಿಕ್ಷಕರ ತಾತ್ಕಾಲಿಕ ನೇಮಕಾತಿಗಾಗಿ ನೇರಗುತ್ತಿಗೆಯಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪೂರ್ವ ಪ್ರಾಥಮಿಕಶಾಲಾ ವಿಭಾಗ 1ರಿಂದ 5ನೇ ತರಗತಿ ಹಾಗೂ ಪ್ರೌಢಶಾಲಾ ವಿಭಾಗ 6ರಿಂದ 8ನೇ ತರಗತಿ ಮತ್ತು 9ರಿಂದ 12ನೇ ತರಗತಿಗೆ ಬೋಧಿಸಲು ವಿಶೇಷ ಶಿಕ್ಷಕರು ಅರ್ಜಿ ಸಲ್ಲಿಸಬಹುದು. ಅರ್ಹ ಅಭ್ಯರ್ಥಿಗಳು ಜೂ.19ರೊಳಗಾಗಿ ಸಮಗ್ರ ಶಿಕ್ಷಣ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಹಾಗೂ ಉಪನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಕೊಟ್ಟೂರು: ಪಟ್ಟಣದ ಪ್ರವಾಸ ಮಂದಿರದಲ್ಲಿ ಚಲವಾದಿ ಮಹಾಸಭಾದ ಪದಾಧಿಕಾರ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಈ ಸಭೆಯಲ್ಲಿ ಪತ್ರಕರ್ತ ಡಿ.ಮಂಜುನಾಥ ಅವರನ್ನು ಚಲವಾದಿ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾಗಿ ಪುನರ್ ಆಯ್ಕೆ ಮಾಡಲಾಗಿದೆ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

## ಪತ್ರಕರ್ತ ಹೊನ್ನುರಸ್ವಾಮಿಗೆ 'ನಿರ್ಭೀತ ವರದಿಗಾರ ರತ್ನ' ಪ್ರಶಸ್ತಿ

**ಬಳ್ಳಾರಿ:** ನಗರದ ಖಾಸಗಿ ಹೋಟೆಲ್‌ನಲ್ಲಿ ಕನ್ನಡ ಮಾಧ್ಯಮದ ವತಿಯಿಂದ ಭಾನುವಾರ ಆಯೋಜಿಸಿದ್ದ ವಾರ್ಷಿಕೋತ್ಸವ ಹಾಗೂ ಸಾಧಕರ ಸನ್ಮಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಗಣ್ಯರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಪಾದಕ ಹೇಮಂತ್ ರಾಜ್ ಅಚ್ಚುಕಟ್ಟಾಗಿ ನಿರ್ವಹಿಸಿ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಮೂಲಕ ಗಮನಸೆಳೆದರು. ಪತ್ರಕರ್ತ ಹೊನ್ನುರಸ್ವಾಮಿ ಕೆ.ಟಿ. ಅವರಿಗೆ ಪ್ರತಿಷ್ಠಿತ 'ನಿರ್ಭೀತ ವರದಿಗಾರ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಸಿದ್ಧಲಿಂಗ ಮಹಾಸ್ವಾಮಿಜೀ, ಮರಿಕೊಟ್ಟೂರು ದೇವರು, ಜಗದ್ಗುರು ಕೊಟ್ಟೂರು ಸ್ವಾಮಿ ಅವರು ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮಕ್ಕೆ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಜಿ.ಕೆ.ಸ್ವಾಮಿ ಫೌಂಡೇಶನ್ ಸಂಸ್ಥಾಪಕ ಜಿ.ಕೆ.ಸ್ವಾಮಿ ಉದ್ಘಾಟಿಸಿದರು. ತಾಪಂ ಇಒ ಶ್ರೀಧರ್ ಭಾರೀಕರ್, ಮಾಜಿ ಮೇಯರ್, ಹಾಲಿ ಪಾಲಿಕೆ ಸದಸ್ಯೆ ಎಂ.ರಾಜೇಶ್ವರಿ ಸುಬ್ಬಾರಾಯುಡು, ಪತ್ರಕರ್ತ ಅರುಣ್ ಭೂಪಾಲ್, ಕೃಷ್ಣ ಮೋಹನ್ ಶೆಟ್ಟಿ, ಸಂಗನಕಲ್ಲು ವಿಜಯ್, ಸಿದ್ದೇಶ್, ಈರಣ್ಣಗೌಡ, ಇಶಾಕ್, ಧನಂಜಯ, ಎಂ.ಜಿ.ಕನಕ ಸೇರಿದಂತೆ ಪತ್ರಕರ್ತರು, ಗಣ್ಯರು ಉಪಸ್ಥಿತರಿದ್ದರು.



ಬಳ್ಳಾರಿ: ನಗರದ ಖಾಸಗಿ ಹೋಟೆಲ್‌ನಲ್ಲಿ ಕನ್ನಡ ಮಾಧ್ಯಮದ ವತಿಯಿಂದ ಭಾನುವಾರ ಆಯೋಜಿಸಿದ್ದ ವಾರ್ಷಿಕೋತ್ಸವ ಹಾಗೂ ಸಾಧಕರ ಸನ್ಮಾನ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಗಣ್ಯರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ವಿಶೇಷ ಯೋಗ ಶಿಬಿರ | ರೂಪೇಶ್‌ಕುಮಾರ್ ಅಭಿಮತ

# ದೈಹಿಕ ಆರೋಗ್ಯಕ್ಕೆ ಯೋಗಭ್ಯಾಸ ಅಗತ್ಯ

**ವಿಜಯನಗರ:** ಪ್ರತಿದಿನ ಕನಿಷ್ಠ ಒಂದು ಗಂಟೆಯನ್ನು ನಾವು ಯೋಗ, ಧ್ಯಾನ, ನಡಿಗೆಯಂತಹ ದೈಹಿಕ, ಮಾನಸಿಕ ಆರೋಗ್ಯಕ್ಕಾಗಿ ಮೀಸಲಿಡಬೇಕು. ಈ ಹಿಂದೆ ಉದ್ಯಾನಗಳಿಗೆ ಹೋಗುವವರೇ ಇರಲಿಲ್ಲ, ನಗರಸಭೆ ಉದ್ಯಾನಗಳ ಬಗ್ಗೆ ಕಾಳಜಿ ವಹಿಸಿದ ಬಳಿಕ ಇಂದು ಜನರು ಉದ್ಯಾನಗಳತ್ತ ಬರುತ್ತಿದ್ದಾರೆ. ಎಷ್ಟೇ ಒತ್ತಡ ಇದ್ದರೂ ನಮ್ಮ ಆರೋಗ್ಯದ ಸಲುವಾಗಿ ನಾವು ಯೋಗದಂತಹ ಚಟುವಟಿಕೆಗಳಲ್ಲಿ ತೊಡಗಲೇಬೇಕು ಎಂದು ರೂಪೇಶ್‌ಕುಮಾರ್ ಹೇಳಿದರು.

ಫ್ರೀಡಂ ಪಾರ್ಕ್‌ನ ಹಿಂಭಾಗ ಸೂರ್ಯ ನಮಸ್ಕಾರ ಭಂಗಿಯ ಕಂಚಿನ ಪ್ರತಿಮೆಗಳನ್ನು ಒಳಗೊಂಡ ಉದ್ಯಾನ ಸಜ್ಜಾಗಿದ್ದು, ಭಾನುವಾರ ಅದರಲ್ಲಿ ಪತಂಜಲಿ ಯೋಗ ಸಮಿತಿಯ ಗದಗ ಮತ್ತು ವಿಜಯನಗರ ಜಿಲ್ಲಾ ಉಸ್ತುವಾರಿ ಡಾ.ಎಸ್.ಬಿ.ಹಂದ್ರಾಳ ಅವರ ವಿಶೇಷ ಯೋಗ ಶಿಬಿರ ನಡೆದ ವೇಳೆ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಹೊಸಪೇಟೆಯನ್ನು ಗ್ರೀನ್ ಸಿಟಿಯನ್ನಾಗಿಸುವ ಪ್ರಯತ್ನ ನಿರಂತರವಾಗಿ ನಡೆದಿದೆ. ಅದರ ಭಾಗವಾಗಿ ಫ್ರೀಡಂ ಪಾರ್ಕ್ ಸೇರಿದಂತೆ ನಗರದ ವಿವಿಧ ಉದ್ಯಾನಗಳನ್ನು ನಗರಸಭೆಯಿಂದ ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಈ ಪೈಕಿ ಅನಂತ್ ಜೋಶಿ ಅವರ ನೇತೃತ್ವದಲ್ಲಿ ಫ್ರೀಡಂ ಪಾರ್ಕ್ ಉತ್ತಮವಾಗಿ ನಿರ್ವಹಣೆಯಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



**ಹೊಸ ಪರಿಸರ ಉತ್ಸಾಹ**

**ಸೂರ್ಯನಮಸ್ಕಾರದ ಭಂಗಿಯ 12 ಪ್ರತಿಮೆಗಳ ನಡುವಿನ ಇಂಟರ್‌ಲಾಕ್ ಅಳವಡಿಸಿದ ಸ್ಥಳದಲ್ಲಿ ಡಾ.ಹಂದ್ರಾಳ ಮಾರ್ಗದರ್ಶನದಲ್ಲಿ 200ಕ್ಕೂ ಅಧಿಕ ಮಂದಿ ಏಕಕಾಲದಲ್ಲಿ ನಡೆಸಿಕೊಟ್ಟ ಯೋಗ ಅದ್ಭುತ ದೃಶ್ಯಕಾವ್ಯ ಬರೆಯಿತು. ಇಲ್ಲಿ ಜೂನ್ 22ರಿಂದ ನಿರಂತರ ಯೋಗ ಕಕ್ಷೆ ನಡೆಯಲಿದೆ. ಇಲ್ಲಿ ವಾಕಿಂಗ್ ಪಥವೂ ಇದ್ದು, ಮುಕ್ತ ಜಿಮ್, ಸುಸಜ್ಜಿತ ಶೌಚಾಲಯ ಸಹ ಇದೆ.**

**ಪ್ರೊಟೋಕಾಲ್ ಯೋಗ:** ಇದಕ್ಕೆ ಮೊದಲು ಡಾ.ಎಸ್.ಬಿ.ಹಂದ್ರಾಳ್ ಅವರು ಜೂ.21ರಂದು ನಡೆಯುವ 12ನೇ ವಿಶ್ವ ಯೋಗ ದಿನದಂದು ಮಾಡಲು ಆಯುಷ್ ಇಲಾಖೆ ಸಿದ್ಧಪಡಿಸಿರುವ ಪ್ರೊಟೋಕಾಲ್ ಯೋಗದ ತರಬೇತಿ ನೀಡಿದರು. ಜತೆಗೆ ಚಂದ್ರಭೇದನ ಪ್ರಾಣಾಯಾಮ ಮಾಡುವ ವಿಧಾನ ತಿಳಿಸಿ, ಅದರ ಮಹತ್ವ ಹಾಗೂ ಇತರ ಹಲವು ಉಪಯುಕ್ತ ಯೋಗಾಸನ, ಪ್ರಾಣಾಯಾಮಗಳ ಮಾಹಿತಿ ನೀಡಿದರು.

ಪತಂಜಲಿ ಯೋಗ ಸಮಿತಿಯ ಜಿಲ್ಲಾ ಪ್ರಭಾರಿ ಪ್ರೊ.ಎಫ್.ಟಿ.ಹಳ್ಳಿಕೇರಿ, ಬಳ್ಳಾರಿ ಜಿಲ್ಲಾ ಪ್ರಭಾರಿ ರಾಜೇಶ್ ಕಾರ್ವಾ, ಯೋಗ ಸಾಧಕರಾದ ಶ್ರೀಧರ್, ಶ್ರೀನಿವಾಸ ಮಂಚಿಕಟ್ಟಿ, ವೆಂಕಟೇಶ್ ವಾಸಿ, ಕಟ್ಟಾ ನಂಜಪ್ಪ, ಪ್ರಹ್ಲಾದ್ ಭೂಪಾಳ್, ಶ್ರೀರಾಮ್, ಅಶೋಕ ಚಿತ್ರಗಾರ್, ಶಿವಮೂರ್ತಿ, ಕಳಕಪ್ಪ, ರಾಮಚಂದ್ರ ಕಂಬದ, ಇತರರು ಇದ್ದರು. ಪಾರ್ಕ್‌ನ ಉಸ್ತುವಾರಿ ಅನಂತ ಜೋಶಿ ಪ್ರಾಸ್ತಾವಿಕ ಮಾತನಾಡಿ, ಉದ್ಯಾನ ನಿರ್ಮಿಸಿಕೊಟ್ಟ ನಗರಸಭೆಗೆ ಕೃತಜ್ಞತೆ ಸಲ್ಲಿಸಿದರು.

## ಗಂಗಾಮತ ನೌಕರರ ಸೇವಾ ಸಂಘದಿಂದ ಪ್ರತಿಭಾ ಪುರಸ್ಕಾರ

# ಸಾಧನೆಯ ಹಾದಿ ಸುಗಮವಲ್ಲ: ಶ್ರೀಗಳು

**ಸಿರುಗುಪ್ಪ:** ಸಾಧನೆಯ ಹಾದಿ ಸುಗಮವಲ್ಲ, ಸಾಧನೆಯ ಹಾದಿ ಯಾವತ್ತೂ ಸುಲಭವಾಗಿರುವುದಿಲ್ಲ. ಅದಕ್ಕೆ ಅಪಾರವಾದ ಪರಿಶ್ರಮ, ಛಲ ಹಾಗೂ ನಿರಂತರ ಪ್ರಯತ್ನ ಅಗತ್ಯವಿರುತ್ತದೆ ಎಂದು ಗುರುಬಸವ ಮಠದ ಬಸವಭೂಷಣ ಸ್ವಾಮೀಜಿ ಹೇಳಿದರು.

ನಗರದ ದೇಶನೂರು ರಸ್ತೆಯಲ್ಲಿನ ಗಂಗೋತ್ರಿ ಕಲ್ಯಾಣ ಮಂಟಪದಲ್ಲಿ ತಾಲೂಕಿನ ಗಂಗಾಮತ ನೌಕರರ ಸೇವಾ ಸಂಘದಿಂದ ಭಾನುವಾರ ಆಯೋಜಿಸಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಪುರಸ್ಕಾರವು ಕೇವಲ ನಿಮ್ಮ ಅಂಕಗಳಿಗೆ ಸಿಕ್ಕ ಗೌರವವಲ್ಲ, ಬದಲಾಗಿ ನಿಮ್ಮಲ್ಲಿರುವ ಪ್ರತಿಭೆ ಮತ್ತು ಶ್ರದ್ಧೆಗೆ ಸಂದಿರುವ ಮನ್ನಣೆ. ಈ ಗೌರವವು ನಿಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಲಿ. ಯಶಸ್ಸು ಎನ್ನುವುದು ನಿಂತ ನೀರಲ್ಲ, ಅದು ನಿರಂತರ ಪ್ರಕ್ರಿಯೆ. ಇಂದು ನೀವು ಪಡೆದ ಈ ಯಶಸ್ಸು ನಿಮ್ಮ ಮುಂದಿನ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿಯಾಗಲಿ. ನಿಮ್ಮ ಈ ಸಾಧನೆಗೆ ಬೆನ್ನೆಲುಬಾಗಿ ನಿಂತಿರುವ ಹೆತ್ತವರು ಮತ್ತು ಶಿಕ್ಷಕರ ಸನ್ಮಾರ್ಗದಲ್ಲಿ ನಡೆಯುವಂತೆ ಸಲಹೆ ನೀಡಿದರು.

ಬಸವ ಬಳದ ಬಸವರಾಜಪ್ಪ ಶರಣರು,ಜಿಲ್ಲಾ ಪಂಚಾಯತ್ ಅಧಿಕಾರಿ ರವಿಕುಮಾರ್, ಉಪನ್ಯಾಸಕ ಬಿ.ಹರೀಶ್, ಶಿಕ್ಷಕರಾದ ಹುಸೇನಪ್ಪ, ಟಿ.ಶಾರದ ಮಾತನಾಡಿದರು.

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತಹೆಚ್ಚು ಅಂಕಗಳಿಸಿದ ಗಂಗಾಮತ ಸಮುದಾಯದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.

ಗಂಗಾಮತ ನೌಕರರ ಸೇವಾ ಸಂಘದ ತಾಲೂಕು ಅಧ್ಯಕ್ಷ ಪಿ.ಟಿ.ಮಲ್ಲಿಕಾರ್ಜುನ, ಗೌರವಾಧ್ಯಕ್ಷ ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಬಿ.ರಾಘವೇಂದ್ರ, ನಗರ ಘಟಕಾಧ್ಯಕ್ಷ ಎಸ್. ರಾಘವೇಂದ್ರ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಡ್ಡೇರು ಸಿದ್ದಯ್ಯ, ನಿವೃತ್ತ ಶಿಕ್ಷಕ ವೆಂಕಟೇಶ, ನಿರ್ದೇಶಕ ಜಿ.ಈರಣ್ಣ ವಿ ನಾಗರಾಜ್, ಭಾಗವಹಿಸಿದ್ದರು.



## ಅಧಿಕ ಮಾಸ: ವಿಶೇಷ ಪೂಜೆ

**ಕುರುಗೋಡು:** ಪ್ರತಿ ಮೂರು ವರ್ಷಗಳಿಗೊಮ್ಮೆ ಬರುವ ಅಧಿಕ ಮಾಸವನ್ನು ನೆಚ್ಚಿನ ತಿಂಗಳು ಎಂದು ಕರೆಯಲಾಗುತ್ತದೆ ಎಂದು ಹಂಪಿ ಸಾವಿರ ದೇವರಮಠದ ಶ್ರೀವಾಮದೇವಾ ಮಹಾಂತ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಸಮೀಪದ ಎಮ್ಮಿಗನೂರು ಗ್ರಾಮದ ಗುರು ಲಿಂಗೈಕ್ಯ ಮಹಾಂತ ಸ್ವಾಮೀಜಿ ಕತೃ ಗದ್ದಿಗೆ ಪೂಜೆ ಸಲ್ಲಿಸಿ ಮಾತನಾಡಿ, ಅಧಿಕ ಮಾಸದಲ್ಲಿ ಜಪ. ಅನುಷ್ಠಾನ ಮಾಡುವು ಮುಖಾಂತ ಲೋಕ ವಿಶ್ವಶಾಂತಿ ಇವರೆಲ್ಲವೂ ಮಾಡುವುದರಿಂದ ಪ್ರಾರ್ಥಿಸುವ ಶುಭಗಳಿಗೆ ನಾಡಿನ ತುಂಬೆಲ್ಲಾ ತಪೋ ಅನುಷ್ಠಾನ. ಪೂಜೆ ಪುನಸ್ಕಾರ ದೇವರ ದರ್ಶನ. ದೇವಸ್ಥಾನದಲ್ಲಿ ಧಾನ. ಧರ್ಮ ಮಾಡುವುದರಿಂದ ಪರಂಪರೆ ಬೆಳೆದು ಬಂದಿದೆ ಎಂದರು. ಈ ವೇಳೆ ವಿವಿಧೆಡೆಯ ಗ್ರಾಮದ ಭಕ್ತರು ಇದ್ದರು.

# ಉಚಿತ ಆರೋಗ್ಯ ತಪಾಸಣೆ ಶಿಬಿರ



**ಸಿರುಗುಪ್ಪ:** ಉಚಿತ ಆರೋಗ್ಯ ತಪಾಸಣೆಯ ಶಿಬಿರಗಳು ಆರ್ಥಿಕ ವೆಚ್ಚದ ಒತ್ತಡದಲ್ಲಿನ ಕುಟುಂಬಗಳಿಗೆ ವರದಾನವಾಗಿದೆ ಎಂದು ಆದಿತ್ಯ ಹೃದಯಾಲಯ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ಡಾ.ಬಿ.ಜಯರಾಮರೆಡ್ಡಿ ಹೇಳಿದರು.

ನಗರದ ಬಳ್ಳಾರಿ ರಸ್ತೆಯ ಹೀರಾ ಬೈಕ್ ಶೋರೂಂ ಹತ್ತಿರದ ಆದಿತ್ಯ ಹೃದಯಾಲಯ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆಯಲ್ಲಿ ಬೆಂಗಳೂರಿನ ಸಪ್ತಗಿರಿ ಆಸ್ಪತ್ತೆಯ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ಕುಟುಂಬದ ಸದಸ್ಯರು, ವೃದ್ಧರು, ಚಿಕ್ಕ ಮಕ್ಕಳು ಆಗಮಿಸಿದರು.

ಶಿಬಿರದಲ್ಲಿ ಸುಮಾರು 200 ಕ್ಕೂ ಅಧಿಕ ಜನರಿಗೆ ಹೃದಯರೋಗ, ನರರೋಗ, ಕ್ಯಾನ್ಸರ್, ಮೂತ್ರಪಿಂಡದಲ್ಲಿ ಕಲ್ಲು ಹಾಗೂ ಸಾಮಾನ್ಯ ಕಾಯಿಲೆಗಳ ತಪಾಸಣೆ ನಡೆಸಿ ಮಾತ್ರೆಗಳು ಮತ್ತು ಔಷಧಿಗಳು ವಿತರಿಸಿದರು. ಸಮತೋಲಿತ ಆಹಾರ, ಒತ್ತಡವನ್ನು ನಿರ್ವಹಿಸುವುದು ಮತ್ತು ನಿಯಮಿತ ತಪಾಸಣೆ ಮಾಡಿಸಿಕೊಳ್ಳುವ ಮಾಹಿತಿ ವೈದ್ಯರು ನೀಡಿದರು.

ಹೃದಯ ರೋಗ ತಜ್ಞ ಡಾ.ನಿಖಿಲ್, ಮೂತ್ರಪಿಂಡ ತಜ್ಞ ಡಾ.ವಿಕ್ರಮ, ನರರೋಗ ತಜ್ಞ ಡಾ.ಸಚಿನ್, ಸಪ್ತಗಿರಿ ಆಸ್ಪತ್ರೆಯ ಶಿಬಿರ ವ್ಯವಸ್ಥಾಪಕ ಅಭಿಲಾಷ ಭಾಗವಹಿಸಿದರು.



ಕುರುಗೋಡು: ಸಮೀಪದ ಶಿರಿಗೇರಿ ಗ್ರಾಮದ ಪೊಲೀಸ್ ಠಾಣೆ ಆವರಣದಲ್ಲಿ ಮೊಹರಂ ಹಬ್ಬ ಆಚರಣೆ ಶಾಂತಿ ಸಭೆ ಪಿಎಸ್‌ಐ ವೈ.ಶಶಿಧರ ನೇತೃತ್ವದಲ್ಲಿ ಜರುಗಿತು.

# ಗುಣಮಟ್ಟದ ಕಾಮಗಾರಿಗೆ ಒತ್ತು: ಸಂಸದ ಈ.ತುಕಾರಾಂ

**ವಿಜಯನಗರ:** ಯಾವುದೇ ಕಾಮಗಾರಿಯಾಗಿರಲಿ ಅದು ಗುಣಮಟ್ಟದ ಕಾಮಗಾರಿ ಹಾಗೂ ಪಾರದರ್ಶಕತೆಗೆ ಒತ್ತು ನೀಡುವ ಮೂಲಕ ಕಾಮಗಾರಿಗಳನ್ನು ನಡೆಸುವುದು ನನ್ನ ಉದ್ದೇಶ ಎಂದು ಬಳ್ಳಾರಿ ಲೋಕಸಭಾ ಸದಸ್ಯ ಈ.ತುಕಾರಾಂ ಹೇಳಿದರು.

ಮರಿಯಮ್ಮನಹಳ್ಳಿ ಸಮೀಪದ ಡಣಾಪುರ ಗ್ರಾಮದ ಬಳಿಯ ನಿರ್ಮಾಣ ಹಂತದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ, ಸರ್ವಿಸ್ ರಸ್ತೆಯು ಇತ್ತೀಚೆಗೆ ಕುಸಿದ ಸ್ಥಳಕ್ಕೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಆಲೂರು ರಸ್ತೆ, ಬ್ರಿಡ್ಜ್, ಅಂಡರ್ ಪಾಸ್, 7 ಕೋಟಿಯ ಪುನರ್ ನಿರ್ಮಾಣ ಕಾಮಗಾರಿ, ಸರ್ವೀಸ್ ರಸ್ತೆ ಸೇರಿ ಸುಮಾರು 54 ಕೋಟಿ,ರೂ. ಗಳ ಅನುದಾನದ ಈ ಕಾಮಗಾರಿ ಮೊದಲ ಬಾರಿಗೆ ವಿಜಯನಗರ ಜಿಲ್ಲೆಗೆ ತಂದಿದ್ದು, ಈ ಕಾಮಗಾರಿ ನನ್ನ ಕನಸಿನ ಯೋಜನೆಯಾಗಿದೆ ಎಂದರು.

ಕಾಮಗಾರಿಯಲ್ಲಿ ಯಾವುದೇ ಲೋಪವಾಗಲು ನಾನು ಬಿಡುವುದಿಲ್ಲ, ಮುಖ್ಯ ರಸ್ತೆಗೂ ಸರ್ವಿಸ್ ರಸ್ತೆಗೆ ವ್ಯತ್ಯಾಸ ಇರುತ್ತದೆ. ಮುಖ್ಯರಸ್ತೆಯ ಮೇಲೆ ಭಾರಿ ತೂಕದ ವಾಹನಗಳು ಸಂಚರಿಸಬಹುದು, ಆದರೆ ಸರ್ವಿಸ್ ರಸ್ತೆಗೆ ಅತಿಭಾರದ ವಾಹನಗಳು ಸಂಚರಿಸುವಷ್ಟು ಸಾಂದ್ರತೆ ಇರುವುದಿಲ್ಲ. ಮುಖ್ಯರಸ್ತೆಯ ನಿರ್ಮಾಣದ ಹಂತದಲ್ಲಿರುವುದರಿಂದ, ಸರ್ವಿಸ್ ರಸ್ತೆಗೆ ವಾಹನಗಳ ಸಂಚಾರಕ್ಕೆ ಅನುವು ಮಾಡಿದ್ದರಿಂದ, ಭಾರಿ ತೂಕದ ಲಾರಿ ಹರಿದು ಸರ್ವೀಸ್ ರಸ್ತೆ ಕುಸಿದಿದೆ. ರಸ್ತೆ ಕಾಮಗಾರಿ ಗುಣಮಟ್ಟದಿಂದ ನಡೆಯಲಿ ಎಂಬ ಉದ್ದೇಶದಿಂದ ಡಣಾಪುರ ಗ್ರಾಮದ ಬಳಿ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಪರಿಶೀಲನೆ ನಡೆಸಲಾಗಿದೆ ಎಂದು ವಿವರಿಸಿದರು.



# ವಿಜಯನಗರ ಶ್ರೀಕೃಷ್ಣದೇವರಾಯ ವಿವಿಯಲ್ಲಿ ಫುಟ್‌ಬಾಲ್ ಕ್ರೀಡಾಕೂಟ

**ಬಳ್ಳಾರಿ:** ಜಾಗತಿಕ ಕ್ರೀಡಾಕೂಟವಾದ 'ಫೀಫಾ'ದ ಆಯೋಜನೆ, ಸಂಘಟನೆ, ನಿಯಮಗಳು ಪ್ರತಿ ಕ್ರೀಡಾಪಟುವಿಗೆ ನೈಜ ಅನುಭವ ಹಾಗೂ ಜೀವನಪಾಠ ಹೇಳಿಕೊಡುತ್ತವೆ ಎಂದು ವಿವಿಯ ಕುಲಸಚಿವ ಪ್ರೊ.ವಿ.ಲೋಕೇಶ್ ಹೇಳಿದರು.

ನಗರದ ಹೊರವಲಯದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ವತಿಯಿಂದ ವಿಶ್ವವಿದ್ಯಾಲಯದಲ್ಲಿ 'ಫಿಫಾ ವಿಶ್ವಕಪ್ 2026' ರ ನಿಮಿತ್ತ ಶನಿವಾರ ಆಯೋಜಿಸಿದ್ದ ವಿಭಾಗೀಯ ಪುಟ್ಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಗುಂತಕಲ್ ರೈಲ್ವೆ ವಿಭಾಗದ ಹಿರಿಯ ತಾಂತ್ರಿಕರು ಹಾಗೂ ಪುಟ್ಬಾಲ್ ಕ್ರೀಡಾಪಟು ಆಗಿರುವ ಚಂದ್ರಮೌಳಿ ಅವರು ಭಾಗವಹಿಸಿ ಮಾತನಾಡಿ, ಕ್ರೀಡೆಯನ್ನು ಪ್ರತಿಯೊಬ್ಬರು ಧನಾತ್ಮಕವಾಗಿ ಸ್ವೀಕರಿಸಬೇಕು ಹಾಗೂ ಕ್ರೀಡಾ ನಿಯಮಗಳನ್ನು ಪಾಲಿಸುವುದರ ಮೂಲಕ ಕ್ರೀಡಾಸ್ಫೂರ್ತಿಯನ್ನು ಮೆರೆಯಬೇಕು ಎಂದರು. ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಸ್ಫೂರ್ತಿ ಕೆ.ಜಿ. ಅವರು ಮಾತನಾಡಿ, ನಿರಂತರವಾಗಿ ಕ್ರೀಡೆಯನ್ನು ಆಡುವುದರಿಂದ ವ್ಯಕ್ತಿತ್ವದಲ್ಲಿ ಪರಿಪೂರ್ಣತೆ ಕಾಣಬಹುದು ಹಾಗೂ ಉತ್ತಮ ತರಬೇತಿ ಪಡೆಯುವುದರ ಮೂಲಕ ಕ್ರೀಡಾ ಸಾಧನೆ ಮಾಡಬಹುದು ಎಂದರು.



ವಿಭಾಗದ ಮುಖ್ಯಸ್ಥ ಡಾ.ಸಂಪತ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಡಾ.ಶಶಿಧರ ಕೆಲ್ಲೂರ ಸ್ವಾಗಿತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು, ರಾಜೇಶ್ ವಂದಿಸಿದರು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಎಂ.ಪಿ.ಇಡಿ. ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಫುಟ್‌ಬಾಲ್ ಕ್ರೀಡಾಕೂಟದಲ್ಲಿ ಅಭಿನವ ಬಿಂದ್ರಾ ತಂಡದವರು ಚಾಂಪಿಯನ್ ಆಗಿ ಟ್ರೋಫಿ ಸ್ವೀಕರಿಸಿದರು.

# ಸಾಹಿತ್ಯದಿಂದ ಸಾಮಾಜಿಕ ಅರಿವು: ಸುರೇಶ

**ಹೂವಿನಹಡಗಲಿ:** ಸಾಮಾಜಿಕ ಸೌಹಾರ್ದತೆ ಅರಿವು ಚಿಂತನೆ ಕೃತಿಗಳಿಂದ ಹೊರಹೊಮ್ಮಬೇಕು ಎಂದು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಸುರೇಶ ಅಂಗಡಿ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಸೊಪ್ಪಿನ ಕಾಳಮ್ಮ ಬಡಾವಣೆಯ ಶ್ರೀಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ಟಿಎಂಆರ್ ಪಬ್ಲಿಕೇಶನ್ ವತಿಯಿಂದ ಹಿರಿಯ ಲೇಖಕರಾದ ಕರಿವೀರನಗೌಡ ಪಾಟೀಲ್ ಅವರ 'ಸುತ್ತ ಮುತ್ತ' ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು.



ಸುತ್ತ ಮುತ್ತ ಕೃತಿಯಲ್ಲಿ ತಾಲೂಕಿನ ಸಾಂಸ್ಕೃತಿಕ ಇತಿಹಾಸ ಗ್ರಾಮೀಣ ಜನರ ಬದುಕು ನಡೆದು ಬಂದ ಹಾದಿ ಅನಾವರಣಗೊಂಡಿದೆ. ಹಿಂದಿನ ಕಾಲದಲ್ಲಿ ಹಬ್ಬ ಜಾತ್ರೆಗಳಲ್ಲಿ ನಡೆಯುತ್ತಿದ್ದ ವಿವಿಧ ಗ್ರಾಮೀಣ ಸೊಗಡಿನ ಆಟೋಟಗಳು ಕುರಿತು ಸಮಗ್ರ ಮಾಹಿತಿ ನೀಡಿದ್ದಾರೆ ಎಂದು ಹೇಳಿದರು. ಲಗ್ನದ ತಯಾರಿ, ಹೂ ಪತ್ರಿ, ಮುದೇನೂರು ಶಾಸನಗಳು ಹಂಪೆಯ ವಿಶೇಷ, ಸಸ್ಯಗಳು, ಹೂವಿನಹಡಗಲಿ ತಾಲೂಕಿನ 113 ಗ್ರಾಮಗಳ ಹೆಸರು, ಹಣ್ಣುಗಳು, ಮರೆಯಾಗುತ್ತಿರುವ ಗ್ರಾಮೀಣ ಆಟಗಳು ಹೀಗೆ ವೈವಿಧ್ಯಮಯ ವಿಷಯಗಳ ಬಗ್ಗೆ ಲೇಖಕರು ಮಾಹಿತಿ ನೀಡಿದ್ದಾರೆ ಎಂದು ಬಣ್ಣಿಸಿದರು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳನ್ನು ತಲುಪಿಸುವ ಮೂಲಕ ಕನ್ನಡ ಉಳಿಸುವ ಬೆಳೆಸುವ ಕೆಲಸ ನಿರಂತರವಾಗಿ ಆಗಬೇಕು ಎಂದು ಹೇಳಿದರು.

ತಾಲೂಕು ಕಸಾಪ ಅಧ್ಯಕ್ಷ ಟಿ.ಪಿ.ವೀರೇಂದ್ರ ಮಾತನಾಡಿ, ನಾಡಿನ ನೆಲದ ಮಹತ್ವ ದಾಖಲಿಸುವ ವಿಶೇಷ ಕಾರ್ಯ ಸುತ್ತ ಮುತ್ತ ಪುಸ್ತಕದಿಂದ ಆಗಿದೆ. ಶಾಲಾ, ಕಾಲೇಜುಗಳಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹೆಚ್ಚು ಆಯೋಜಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಲೇಖಕ ಕರಿವೀರನಗೌಡ ಪಾಟೀಲ ಅವರು ಒಂಬತ್ತು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು. ಲೇಖಕ ಕರಿವೀರನಗೌಡ ಪಾಟೀಲ ತಮ್ಮ ಕೃತಿ ರಚನೆಯ ಅನುಭವವನ್ನು ಹಂಚಿಕೊಂಡರು. ಸಾಹಿತಿಗಳಾದ ಎಂಪಿಎಂ ಕೊಟ್ರಯ್ಯ, ಶಂಕರ್ ಬೆಟಗೇರಿ, ಎಲ್.ಖಾದರ್ ಬಾಷಾ ಶೋಭಾ ಮಲ್ಕಿಒಡೆಯರ್ ಮಾತನಾಡಿದರು. ಟಿಎಂಆರ್ ಪಬ್ಲಿಕೇಶನ್ ಪ್ರಕಾಶಕರು ಸಾಹಿತಿ ತೋ ಮ ಶಂಕ್ರಯ್ಯ ಅಧ್ಯಕ್ಷತೆ ವಹಿಸಿ ತಾಲೂಕಿನ ಸಾಂಸ್ಕೃತಿಕ ಇತಿಹಾಸ ಸಾಹಿತ್ಯ ನಾಟಕ ನೃತ್ಯ ಕಲೆ ಪ್ರಕಾರಗಳನ್ನು ದಾಖಲಿಸುವ ಪ್ರಯತ್ನ ನಮ್ಮ ಪ್ರಕಾಶನದ ಮುಖ್ಯ ಕೆಲಸ ಎಂದು ತಿಳಿಸಿದರು.

ವಿಶ್ವನಾಥ್ ಪಾಟೀಲ, ನಂದೀಶ್, ನಾಗರಾಜ್ ಮಲ್ಕಿಒಡೆಯರ್ ನಿರ್ವಹಿಸಿದರು. ವಿವಿಧ ಸಂಘ ಸಂಸ್ಥೆಗಳ ಪರವಾಗಿ ಲೇಖಕರನ್ನು ಗೌರವಿಸಲಾಯಿತು. ಸೊಪ್ಪಿನ ಕಾಳಮ್ಮ ಬಡಾವಣೆಯ ಹಿರಿಯರು ಮಹಿಳೆಯರು ಯುವಕರು ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

# ಮುನ್ನೆಚ್ಚರಿಕೆಯಿಂದ ಕ್ಯಾನ್ಸರ್ ಗುಣಪಡಿಸಲು ಸಾಧ್ಯ

**ಕುರುಗೋಡು:** ಕ್ಯಾನ್ಸರ್ ಇದೆ ಎಂಬುದು ಗೊತ್ತಾದ ತಕ್ಷಣ ಬದುಕಿನ ಬಗ್ಗೆ ನಿರಾಶರಾಗುವ ಅಗತ್ಯವಿಸಲ್ಲ. ಸರಿಯಾದಸಮಯದಲ್ಲಿಚಿಕಿತ್ಸೆಪಡೆದರೆ ಕ್ಯಾನ್ಸರ್‌ನಿಂದ ಗುಣಮುಖರಾಗಲು ಸಾಧ್ಯವಿದೆ ಅದು ಬದುಕಿನ ಅಂತ್ಯವಲ್ಲ ಮುನ್ನೆಚ್ಚರಿಕೆಯಿಂದ ಗುಣಪಡಿಸಲು ಸಾಧ್ಯವಿದೆ ಎಂದು ಕರ್ನಾಟಕ ಕ್ಯಾನ್ಸರ್ ಥೆರಪಿ ರಿಸರ್ಚ್ ಇನ್ಸ್ಟಿಟ್ಯೂಟ್ ನವನಗರ ಹುಬ್ಬಳ್ಳಿ ರೇಡಿಯಷನ್ ಕ್ಯಾನ್ಸರ್ ಅಂಕಲಜಿಸ್ಟ ತಜ್ಞ ವೈದ್ಯಾಧಿಕಾರಿ ಸಾಯಿಕುಮಾರಿ ತಿಳಿಸಿದರು.

ಪಟ್ಟಣದ ಆರೋಗ್ಯ ಕೇಂದ್ರದಲ್ಲಿ ಭಾರತ ಸರ್ಕಾರ ಕರ್ನಾಟಕ ಸರ್ಕಾರ,ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ ಜೆ.ಎಸ್.ಡಬ್ಲ್ಯೂ, ಫೌಂಡೇಶನ್, ಭಾರತೀಯ ಕ್ಯಾನ್ಸರ್ ಸೊಸೈಟಿ,ಪ್ರಾಜೆಕ್ಟ್,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಳ್ಳಾರಿ,ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಕುರುಗೋಡು, ಸಮುದಾಯ ಆರೋಗ್ಯ ಕೇಂದ್ರ ಇವರುಗಳಸಹಯೋಗದಲ್ಲಿ ಬಾಯಿ, ಸ್ತನ, ಗರ್ಭಕಂಠ ಕ್ಯಾನ್ಸರ್ ತರಬೇತಿ, ಹಾಗೂ ಆರೋಗ್ಯ ಅರಿವು ಮತ್ತು ತಡೆಯುವ ಮುಂಜಾಗ್ರತ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ಬಾಯಿ, ಸ್ತನ, ಗರ್ಭಕಂಠ ಕ್ಯಾನ್ಸರ್ ತರಬೇತಿ, ಹಾಗೂ ಆರೋಗ್ಯ ಅರಿವು ಮತ್ತು ತಡೆಯುವ ಮುಂಜಾಗ್ರತ ಬಗ್ಗೆ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು.

ನಂತರ ಅರಿವಳಿಕೆ ತಜ್ಞರು, ಹಿರಿಯ ಮತ್ತು ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಹಿರಿಯ ಮತ್ತು ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು, ಆಪ್ತಸಮಾಲೋಚಕರು ಅವರಿಗೆ ರೇಡಿಯೇಷನ್ ಅಂಕಾಲಜಿಸ್ಟ್ ಕರ್ನಾಟಕ ಕ್ಯಾನ್ಸರ್ ಥೆರಪಿ ಮತ್ತು ರಿಸರ್ಚ್ ಇನ್ಸ್ಟಿಟ್ಯೂಟ್ ನವನಗರ ಹುಬ್ಬಳ್ಳಿಯ ಡಾಕ್ಟರ್ ಸಾಯಿಕುಮಾರಿ ರವರು ಸುಧೀರ್ಘವಾಗಿ ಕ್ಯಾನ್ಸರ್ ಎಂದರೇನು ಕ್ಯಾನ್ಸರ್ ತಡೆಗಟ್ಟಲು ಎಚ್.ಪಿ.ವಿ.ವ್ಯಾಕ್ಸಿನ್, ಮಹತ್ವ ಬಗ್ಗೆ, ಕ್ಯಾನ್ಸರ್ ತಡೆಗಟ್ಟಲು ಅಗತ್ಯ ಸಲಹೆ ಸೂಚನೆಗಳು ಬಗ್ಗೆ, ಕೆಲವು ಚಟುವಟಿಕೆಗಳು ಕೈಗೊಳ್ಳುವ ಮೂಲಕ ತರಬೇತಿ ನೀಡಿದರು.

ಅರವಳಿಕೆ ತಜ್ಞ ಡಾ.ಪವನ್‌ಕುಮಾರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕೆ.ಮಂಜುನಾಥ ಪಂಪಾಪತಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಬಳ್ಳಾರಿಯ ಕಾರ್ಯಕ್ರಮ ಸಂಯೋಜಕರು ಹಾಗೂ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರ ನಮ್ಮ ಕ್ಲಿನಿಕ್‌ಗಳಿಂದ ಬಂದ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು, ಆಪ್ತಸಮಾಲೋಚಕರು ಖುದ್ದು ಹಾಜರಿದ್ದು ತರಬೇತಿಯನ್ನು ಪಡೆದುಕೊಂಡರು.